ಕೊಟ್ಟೂರು

ಶ್ರೀ ಗುರುಬಸವೇಶ್ವರ ಚರಿತ್ರೆ



PCS
ಇವರ ಪ್ರಕಟನ

ಪಿ. ಸಿ. ಶಾಬಾದಿಮಠ ಬುಕ್ ಡಿಪೊ
ಸ್ಟೇಶನ್ ರೋಡ್ -- ಗದಗ

|| ಶ್ರೀ ಕೊಟ್ಟೂರ ಬಸವೇಶ್ವರ ಪ್ರಸನ್ ||

ಕೊಟ್ಟೂರ

ಶ್ರೀಗುರು ಬಸವೇಶ್ವರರ ಚರಿತ್ರೆ

(ಪವಾಡಗಳು ಸಹಿತ)

ಸಂಗ್ರಹಕಾರರು :

ವೀರಪ್ಪ ಸಿದ್ಧಪ್ಪ ಸಾಗರ

ಪ್ರಕಾಶಕರು :

ಮೆ|| ಪಿ. ಸಿ. ಶಾಬಾದಿಮಠ ಬುಕ್-ಡಿಪೊ,
ಗದಗ.

1985

ಪ್ರಕಾಶಕರು :
ಮೆ|| ಪಿ. ಸಿ. ಶಾಬಾದಿಮಠ
ಬುಕ್-ಡಿಪೊ, ಗದಗ.

ಮುದ್ರಕರು :
ಚಂದ್ರಶೇಖರ್ ಪ್ರಿಂಟಿಂಗ್ ಪ್ರೆಸ್,
ಗದಗ.

ಮುನ್ನುಡಿ

ಪುಣ್ಯಚರಿತ ಶ್ರೀಗುರು ಕೊಟ್ಟೂರು ಬಸವೇಶ್ವರರ ಪಾವನ ಚರಿತ್ರೆಯ ಈ ಕಿರು ಹೊತ್ತಿಗೆಯನ್ನು ಸಜ್ಜನ ಓದುಗರಿಗೆ ಅರ್ಪಿಸಲು ನನಗೆ ತುಂಬಾ ಸಂತಸವೆನಿಸುತ್ತದೆ.

ಲೋಕದಲ್ಲಿ ಅನ್ಯಾಯ, ಅಧರ್ಮಗಳು ಹೆಚ್ಚಿ ಮಾನವತೆಗೆ ಸಂಚಕಾರ ಬಂದಾಗ ಸದ್ಧರ್ಮ, ಸಜ್ಜನರ ರಕ್ಷಣೆಗೆ, ಉದ್ಧಾರಕ್ಕೆ ಭಗವಂತನ ಅವತಾರವಾಗುತ್ತದೆ. ಅದರಂತೆ ಭೂಮಿಯಲ್ಲಿ ವಿಶ್ವಧರ್ಮವೆನಿಪ ಶ್ರೀ ಮದ್ವೀರಶೈವ ಧರ್ಮಕ್ಕೆ ಅಧರ್ಮದ ಅಂಧಃಕಾರ ಮುಸುಕಿದಾಗ ಶ್ರೀ ಕೊಟ್ಟೂರು ಬಸವೇಶ್ವರರ ಅವತಾರದಿಂದ ಶ್ರೀ ಶಿವನು ಅನ್ಯಾಯ, ಅಧರ್ಮ, ಅತ್ಯಾಚಾರಗಳನ್ನು ತೊಡೆದುಹಾಕಿ, ಸದ್ಧರ್ಮವಾದ ವೀರಶೈವ ಧರ್ಮವನ್ನು ಪುನಃ ಜಾಜ್ವಲ್ಯಮಾನವಾಗಿ ಬೆಳಗುವಂತೆ ಮಾಡುತ್ತಾನೆ.

ಇಂಥ ಪುಣ್ಯಪವಾಡ ಚರಿತೆಯನ್ನು ಓದುಗರು ನನ್ನ ಇತರ ಕೃತಿಗಳನ್ನು ಸ್ವಾಗತಿಸಿದಂತೆ ಈ ಕೃತಿಯನ್ನೂ ಸ್ವಾಗತಿಸುವರೆಂದು ನನ್ನ ಆಶೆ ಈ ಕೃತಿಯಿಂದ ಸ್ವಲ್ಪಾದರೂ ಧರ್ಮಕಾರ್ಯ ಮಾಡಿದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ಈ ಕೃತಿಗಾಗಿ ಆಧರಿಸಿದ ಶ್ರೀಗುರು ಕೊಟ್ಟೂರು ಬಸವೇಶ್ವರರ ಪುರಾಣಕೃರ್ತಗಳಿಗೆ ನನ್ನ ಕೃತಜ್ಞತೆಗಳು. ಅದರಂತೆ ಈ ಕೃತಿ ಪ್ರಕಾಶಗೊಳ್ಳಲು ಕಾರಣಕರ್ತರಾದ **ಮೆ|| ಪಿ. ಸಿ. ಶಾಬಾದಿಮಠ ಬುಕ್‌-ಡಿಪೋ,** ಇವರಿಗೂ ನನ್ನ ಅನಂತ ವಂದನೆಗಳು,

ತಮ್ಮ

ವೀರಪ್ಪ ಸಾಗರ.

ನಮ್ಮ ಪ್ರಕಟನೆಯ ಹೊಸ ಪುಸ್ತಕಗಳು

ಕಲಬುರ್ಗಿ ಶರಣಬಸವೇಶ್ವರರ ಚರಿತ್ರೆ	೫—೦೦
ಗರಗದ ಶ್ರೀ ಮಡಿವಾಳೇಶ್ವರ ಚರಿತ್ರೆ	೫—೦೦
ಮುರುಗೋಡ ಶ್ರೀ ಮಹಾಂತಸ್ವಾಮಿಗಳ ಚರಿತ್ರೆ	೫—೦೦
ನವಲಗುಂದ ನಾಗಲಿಂಗ ಸ್ವಾಮಿಗಳ ಚರಿತ್ರೆ	೮—೦೦
ಶರಣರ ಮತ್ತು ದಾಸರ ಸಾಹಿತ್ಯ ದರ್ಪಣ	೩—೫೦
ಶ್ರೀಕೃಷ್ಣ ಬೋಧಾಮೃತಸಾರ	೬—೦೦
ಪಾಕವಿಧಾನ ಶಾಸ್ತ್ರ	೩—೦೦
ವಚನರೂಪ ರಾಮಾಯಣ	೧೨—೦೦
ಶ್ರೀ ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ	೧೪—೦೦
ಸುಲಭ ಜಾತಕ ಫಲರತ್ನ	೨೦—೦೦
ವೀರಶೈವ ದಶರತ್ನ	೧೫—೦೦
ಸಟೀಕಾ ಸರ್ವಜ್ಞ ಮೂರ್ತಿ ವಚನಗಳು	೧೦—೦೦
ಸಟೀಕಾ ಶ್ರೀ ದೇವಿ ಮಹಾತ್ಮೆಯು	೨೦—೦೦
ಪುರಂದರದಾಸರ ಪದಗಳು (ದೊಡ್ಡದು)	೧೦—೦೦
ಕನ್ನಡ-ಹಿಂದಿ ಸ್ವಯಂ ಶಿಕ್ಷಕ	೮—೦೦
ಹಸ್ತ ಸಾಮುದ್ರಿಕ	೧೪—೦೦

ಪ್ರಕಾಶಕರು :

ಮೆ|| ಪಿ. ಪಿ ಶಾಬಾದಿಮಠ ಬುಕ್-ಡಿಪೊ, ಗದಗ.

॥ ಶ್ರೀ ಗುರು ॥

ಶ್ರೀ ಗುರು ಕೊಟ್ಟೂರ ಬಸವೇಶ್ವರ ಚರಿತ್ರೆ

ಸ್ತುತಿ

ಪರಶಿವನೋಲಗದ ಸಕಲ ಗಣವರರ
ಪರಿಚಯು ಪೇಳ ಒಯಸುವ ಶಿಶು
ವೀರ ತಾಂ ಕುಲದೈವ ಶಿದ್ಧಲಿಂಗನಡಿಗಳಲಿ ಪೊಡೆಮೊಡುತೆ

ಶರಣ ಕುಲಮಣಿ ಬಸವಲಿಂಗ ಕವಿ
ವರ ತಮ್ಮ ಕೃತ ಷಟ್ಪದಿ ಪುರಾಣ
ಗುರು ಕೊಟ್ಟೂರ ಬಸವೇಶ್ವರರ ನುತಿಸುತೆ

ವರ ಚಾರಿತ್ರವ ಸವಿದು ಪದ್ಯ ಸಾಹಿತ್ಯವನೆ
ಬರೆಯುಬಯುಸಿದೆ ಗದ್ಯರೂಪದಿ ಅಲ್ಪಮತಿಯು
ಸರಿಯನಿಪ ಮತಿ ನೀಡಿರೈ ನಮನಗಳ ಅರ್ಪಿಸುವೆ

ಗುರುದೇವ ಕುರುಡಿಗೆಯ ಹಿರಿಯ ಮಠದೊಡೆಯಲೆ
ಸರರ ಕನ್ನಡ ಚನ್ನುಡಿಯ ಮುಖ್ಯಾಧ್ಯಾಪಕರೆ
ವರ ಪುರಾಣ ಸಂಪಾದನೆ ಕರುಣಿಸಿದ ಪದತಲದಿ ನಮಿಸುವೆ

ವಿರಕ್ತ ಮಠದೀಶ ರುದ್ರಸ್ವಾಮಿ ಕರ್ಜಗಿಯಪ್ಪರು
ವೀರ ವಿರತಿ ಸಾಹಿತ್ಯ ಸುರಭಿತೇಜ ಮೃತ್ಯುಂಜಯ್ಯಪ್ಪರು
ಕರುಣೆಯಲಿ ಹರಿಸಿರೈ ತಮ್ಮಾಶೀರ್ವಚನ ಬಯುಸುವೆ

ಮುರುಗೋಡ ಮಹಾಂತೇಶರು ಮುಳಗುಂದ ಮಹಾಂತಪ್ಪರು
ಗರಗ ಮಡಿವಾಳೇಶರು ಹಾಳಕೇರಿ ಅನ್ನದಾನ ಸ್ವಾಮಿಗಳು
ಶರಣ ಕುಲವರ ಶರಣಬಸವೇಶ ಯಶವನೀಡಿರೆಂಬೆ

ವೀರಭದ್ರ ವಿಘ್ನೇಷ ಷಣ್ಮುಖಸ್ವಾಮಿ ಶಿವ ಬಳಗ
ವರಸಿದ್ಧರಾಮೇಶ ಚೆನ್ನಬಸವಣ್ಣ ಮೋಳಗಿಅಣ್ಣ
ಮಾರಯ್ಯ ಅಪ್ಪಣ್ಣ ಶರಣರ ಶುಭಾಶೀರ್ವಾದ ಬಯಸುವೆ

ನಿರಂಜನ ಮೂರ್ತಿ ಪ್ರಭುದೇವ ಜಗದಣ್ಣ ಬಸವಣ್ಣ
ವೈರಾಗ್ಯ ನಿಧಿ ಅಕ್ಕಮಹಾದೇವಿ ನೀಲಮ್ಮನಾಗಮ್ಮ
ಪುರಾಣತನರೆನಿಸಿದೆಲ್ಲ ಶರಣ ಆಶೀರ್ವಾದ ಬಯಸುವೆ.

ವರುಪುರುಷ ಸಿದ್ಧಲಿಂಗೇಶ ಕುಲದೈವ ಸಂಗಮೇಶ
ವೀರೇಶ ನಮ್ಮ ಕುಲದೇವ ಕರುಣಿ
ಬರೆಯ ಬಯಸಿದಿ ಕೃತಿಗೆ ಕರುಣೆಯಲಿ ಹರಿಸಿರೆಂಬೆ

ಗುರುಮೂರ್ತಿ ಪುಟ್ಟ ರಾಜಯೋಗೀಂದ್ರ ಕವಿತಿಲಕ ಮಹಾಂತೇಶಗೆ
ಗುರುವರ್ಯ ಶ್ರೀ ಕಂತ ಶಾಸ್ತ್ರಿಯಪ್ಪರೆ ಶಬ್ದ ಸಾಹಿತ್ಯ ಸಿಂಹ
ಗುರು ಕರುಣಾಮೂರ್ತಿ ಕಂದಗಲ್ಲ ಹನುಮಂತಾಚಾರ್ಯಗೆ

ಹರಸಿನಲಿ ತಾವೆಲ್ಲ ಹರಿಸಿದ ಕಾರಣ ಅಲ್ಪಮತಿ
ವೀರ ನಾ ಸರಸ ಹರುಷದಲ್ಲಿ ಬರೆಯ ಬಯಸಿದೆ
ಗುರು ಕೊಟ್ಟೂರ ಬಸವೇಶ್ವರ ಗದ್ಯ ಚರಿತೆಯನು

— —--- —

ಶ್ರೀ ಗುರು ಪ್ರಸನ್

ಶ್ರೀ ಗುರು ಕೊಟ್ಟೂರ ಬಸವೇಶ್ವರ ಚರಿತ್ರೆ

೧ ನೇ ಸಂಧಿ

ಶಿವನ ಸನ್ನಿಧಿಗೆ ನಾರದನ ಆಗಮನ ಮತ್ತು ಭೂಮಿಗೆ ನಂದೀಶನ ಬೀಳ್ಕೊಡುಗೆ

ನವರತ್ನ ಖಚಿತವಾದ ಕಂಬಗಳಿಂದ ಕೂಡಿದ ಕೈಲಾಸ ಸಭಾಮಂಟಪದ ಮಧ್ಯ ಭಾಗದಲ್ಲಿ ಮುತ್ತು ರತ್ನ ವಜ್ರ ವೈಡೂರ್ಯ ಗಳಿಂದ ಅಲಂಕೃತವಾದ ಸಿಂಹಾಸನವಿದ್ದು ಅದರ ಮೇಲೆ ಶಿವ ಮಹಾ ದೇವ ಮುಕ್ಕಣ್ಣ ಹರನು ಮಂಡಿಸಿದ್ದಾನೆ ಎಡ ತೊಡೆಯ ಮೇಲೆ ಗಿರಿರಾಜ ಕುವರಿ ಗೌರೀಮಾತೆ ಮುಂಭಾಗದ ಎಡಬಲಗಳಲ್ಲಿ ಕುಮಾರ ಸ್ವಾಮಿ, ವಿಘ್ನೇಶ್ವರ, ವೀರಭದ್ರರು, ಮತ್ತಿತರ ಆಸನಗಳಲ್ಲಿ ಹರಿ, ಬ್ರಹ್ಮಾದಿ ಅಖಿಲ ದೇವಾನು ದೇವತೆಗಳೂ, ಯಕ್ಷಕಿನ್ನರ ಕಿಂಪುರುಷರೂ, ಅಷ್ಟದಿಕ್ಪಾಲಕ ಮಹಾಶಯರೂ, ನವಗ್ರುಹಗಳು, ಕಶ್ಯಪ, ಗೌತಮ, ಅತ್ರಿ ಭಾರಧ್ವಜರಾದಿಯಾಗಿ ಹಲವಾರು ತಪಸ್ವಿಗಳೂ,ಸಪ್ತ ಋಷಿಗಳ ಸಮೂಹವೂ ಸಪ್ತಮಾತೃಕೆಯರೂ ಸಾಲ್ಗೊಂಡು ನಿಂತಿರುವರು. ಅಲ್ಲದೇ ದೇವೇಂದ್ರಾದಿ ಮೂವತ್ತುಮೂರು ಕೋಟಿ ದೇವತೆ ಗಳ ಬಳಗವು, ಮರುದ್ಗಣರೂ ರುದ್ರಗಣರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತು ಕೈಲಾಸನಾಥನ ಕೈಲಾಸ ಸದನವು ಬಹು ರಮ್ಯ ಸುರಮ್ಯ ರೀತಿ ಯಲ್ಲಿ ಅಲಂಕೃತವಾಗಿತ್ತು. ಗಂಧರ್ವ ಬಳಗದವರು, ಯಕ್ಷರು ಛತ್ರ ಚಾಮರ ಗಳನ್ನು ಪಿಡಿದು ಶಿವನ ಸೇವಾ ಕಾರ್ಯವನ್ನು ನಿಷ್ಠೆಯಿಂದ, ನೇಮದಿಂದ, ಗೈಯುತಲಿದ್ದರು. ಅದರಲ್ಲಿ ರಾತ್ರಿಯ ಕಾವಲುಗಾರರೆಂದು ಗೊತ್ತುಪಡಿಸಿದ ಚರರು ಕೈದೀವಟಿಗೆಯಿಂದ ಪ್ರಕಾಶವನ್ನು ಉಜ್ವಲಗೊಳಿಸಿ, ಶಿವಸಭೆಯು ಶೋಭಾಯಮಾನವಾಗುವಂತೆ ಕಾರ್ಯ ಪ್ರವರ್ತರಾಗಿದ್ದರು. ಭೃಂಗಿ ದೇವನು ಅಪ್ಸರ ಸ್ತ್ರೀಯರೂ ಶಿವನ ಸಭಾ ಭುವನದ ಬಯಲು ಪ್ರದೇಶದಲ್ಲಿ ಶಿವಶಂಕರನ ಸಂಪ್ರೀತಿಗೋಸ್ಕರ ನಾಟ್ಯ ಮಾಡುತ್ತ ನಟರಾಜನ ಮನಸ್ಸನ್ನು ತಣಿಸುತ್ತಿದ್ದರು. ಹೀಗಿರುವ ಸಭೆಗೆ ಮತ್ತಷ್ಟು ಶೋಭೆಯನ್ನುವಂತೆ,

ಮಹಾದೇವನ ಮುಂಭಾಗದಲ್ಲಿ ಗಣಾಧೀಶ್ವರರು ಕುಳಿತಿದ್ದರು. ಶಿವನು ಮಾತ್ರ ಸೃಷ್ಟಿಯಲ್ಲಿ ಪ್ರತಿದಿನ ಹುಟ್ಟಿ ಸತ್ತು ಶಿವತತ್ವ ಮರೆತು ಜೀವನದ ಅಧಃಪತನದತ್ತ ಸಾಗಿರುವ ಮಾನವರ ಯೋಗಕ್ಷೇಮ ಚಿಂತನೆಯಲ್ಲಿ ಯೋಗ ನಿದ್ರೆಯಲ್ಲಿ ಕಣ್ಮುಚ್ಚಿ ಕುಳಿತುಕೊಂಡಿದ್ದಾನೆ.

ಈ ಸಮಯದಲ್ಲಿ ನಂದೀಶ್ವರನು ತನ್ನ ಕರ್ತವ್ಯದಂತೆ ಶಿವನ ಚಿತ್ತವನ್ನು ತಿಳಿದು ಸಭಾ ಮಂಡಳಿಯನ್ನು ಸಂಜ್ಞೆಯಿಂದ ಶಾಂತಪಡಿಸುತ್ತಿದ್ದನು. ಆಗ ಜಗತ್ತಿನ ಸುದ್ದಿಯನ್ನು ಹೊತ್ತುಕೊಂಡು ತಿರುಗಾಡುವ ನಾರದ ಮುನೀಂದ್ರನು ಶಿವನ ಒಡ್ಡೋಲಗಕ್ಕೆ ಬರುವವನಾದನು. ಆ ನಾರದರ ಆಗಿನ ಶಿವನ ಮೇಲಿನ ಭಕ್ತಿ ವಿಶ್ವಾಸ ಶ್ರದ್ಧೆಗಳು ವರ್ಣಿಸುವಂತಹವುಗಳು. ಕೊರಳ್ಲಿ ತುಳಸಿಯ ಮಾಲೆಯನ್ನು ಧರಿಸಿ ಕೈಯಲ್ಲಿ ಪಿಡಿದ ವೀಣೆಯನ್ನು ನುಡಿಸುತ್ತ ಶಿವಧ್ಯಾನದಲ್ಲಿ ತಲ್ಲೀನನಾಗಿ ಶಿವ ಸಭೆಯನ್ನು ಪ್ರವೇಶಿಸಿ ಶಿವನೇಸಾಕ್ಷಾತ ಪರಬ್ರಹ್ಮ ಸ್ವರೂಪನೇ ಸತ್ತ್ ಚಿತ್ತ ಆನಂದಮೂರ್ತಿಯೇ ಸೃಷ್ಟಿ, ಸ್ಥಿತಿ, ಲಯ ಕರ್ತನೇ ಧರ್ಮೋದ್ಧಾರಕ ತಂದೆಯೇ, ಭಕ್ತ ವತ್ಸಲ, ಭಕ್ತ ಪಾಲಕ, ಭಕ್ತ ಪ್ರೇಮಿ ಮಹಾದೇವನೆ, ವಿಶ್ವೇಶನೆ, ವಿಶ್ವ ವಿಶ್ವ ಪಾಲಕನೆ, ಗಂಗಾಧರನೆ, ಗೌರಿ ಪತಿಯೆ, ಶಂಕರನೆ, ಭಕ್ತ ಕಿಂಕರನೆ, ದಯಾಸಾಗರ ಧರ್ಮ ಮೂರ್ತಿ, ಧರುಣಿ ಪಾಲಕನೆ, ಜಟಾಧಾರಿ ಜಗತ್ಪಾಲಕ ಪಿತನೆ, ಸರ್ವಾಂತರ್ಯಾಮಿ ಸರ್ವೇಶನೆ, ಶಿವ ಮಹಾದೇವಾ ಮುಕ್ಕಣ್ಣ ಎಂದು ಶಿವನ ಸ್ತುತಿಯಲ್ಲಿ ನಿಡಿದಾದ ಉಸಿರು ಬಿಡುತ್ತ ಶಿವನ ಪಾದಕ್ಕೆ ನಮಸ್ಕರಿಸಿ ನಿಂತುಕೊಂಡನು.

ಆಗ ಶಿವನು ಯೋಗ ನಿದ್ರೆಯಿಂದ ಎಚ್ಚತ್ತವನಾಗಿ ನಾರದನ ಸ್ತುತಿಗೆ ಮಾರುಹೋಗಿ ಮಾತನಾಡಿಸುತ್ತ ಏನಯ್ಯ ನಾರದ ಮುನೀಂದ್ರಾ ನಿನ್ನ ಸಂಚಾರವು ಯಾವ ಯಾವ ದೇಶಗಳಲ್ಲಿ ಆಯಿತು. ಮತ್ತು ಅಲ್ಲಲ್ಲಿ ಏನೇನು ವಿಶೇಷವನ್ನು ಕಂಡು ಬಂದಿರುವಿ ಹೊಸ ಸಮಾಚಾರವೇನಾದರೂ ಇರುವದೇನು ಎಂದು ಕೇಳಿದನು. ಆಗ ನಾರದನು ಶಿವನಿಗೆ ಕರಜೋಡಿಸಿ ಶಿವಾ ಮಹಾದೇವಾ ಸರ್ವಜ್ಞರಾದ ತಮಗರಿಯದ ವಿಷಯ ಉಂಟೆ, ಆದರೂ ಸಂಚಾರಿ ಎನಿಸಿಕೊಂಡಿರುವ ನನ್ನ ಕರ್ತವ್ಯ ಕರ್ಮದಂತೆ, ಕಂಡದ್ದನ್ನು ಕಥಿಸ ಬಯಸುವೆನು. ಮನ್ನಿಸುವದಾಗಬೇಕು ದೇವಾ. ಈರೇಳು ಲೋಕಗಳನ್ನು

ಸಂಚರಿಸಿ ಭೂಲೋಕದಲ್ಲಿ ಬಂನು ನೋಡಿದಾಗ ಅಲ್ಲಿಯ ಮಾನವರ ಮೌಢ್ಯ ತನ ಕಂಡು ಮನ ಮಿಡುಕಿತು. ಹಿಂದೊಮ್ಮೆ ತಾವು ಶೈವ ಮತೋದ್ಧಾರಕ್ಕಾಗಿ ನಂದೀಶ್ವರನನ್ನು ಬಸವನೆಂಬ ನಾಮದಿಂದ ಭೂಮಿಯ ಉದ್ಧಾರಕ್ಕೆ ಕಳುಹಿಸಿದ್ದಿರಿ. ಆಗ ಬಸವೇಶನು ಅಲ್ಲಿ ಈಶ್ವರ ಭಕ್ತಿಯನ್ನು ಪ್ರಚುರಗೊಳಿಸಿ ತನಗೊಪ್ಪಿಸಿದ ಕರ್ತವ್ಯದಂತೆ ಶೈವ ಮತೋದ್ಧಾರ ಗೈದು ಕರ್ನಾಟಕದ ವೀರಶೈವ ಜನಾಂಗದವರನ್ನು ಧರ್ಮ ಜಾಗ್ರತರನ್ನಾಗಿ ಮಾಡಿ ತಿರುಗಿ ತಮ್ಮ ಅಗಲಿಕೆಯ ಅರುವಾಗಿ ಮಾತೆಯನ್ನು ಕಳೆದುಕೊಂಡ ಕರುವಿನಂದದಿ ಕೈಲಾಸಕ್ಕೋಡಿ ಬಂದನು.

ಅಂದಿನಿಂದ ಮತ್ತೆ ಇಂದಿನವರೆಗೆ ಆ ಶಿವಭಕ್ತರು ತಂದೆಯನ್ನಗಲಿದ ಮಕ್ಕಳಂತೆ, ಪರದೇಶಿಗಳಾಗಿ ದೀನರಾಗಿರುವರು. ಶಿವ ತತ್ವದಲ್ಲಿ ಶಿವಭಕ್ತಿಯನ್ನು ಶಿವಕಾರುಣ್ಯದ ಮೂಲ ಮಹತಿಯನ್ನೇ ಮರೆತು ಮೂಢರಾಗಿ ದಟ್ಟ ದರಿದ್ರರಾಗಿದ್ದಾರೆ. ಧರ್ಮದ ಹಂಬಲ ನಶಿಸಿ ಅನಾಚಾರ, ಅತ್ಯಾಚಾರಗಳತ್ತ ಮನವದು ಸಾಗಿ ಮ್ಲೇಂಜರ ದುಷ್ಟ ಬೋಧೆಯಿಂದ ಕಳವು ಕೊಲೆ, ಸುಲಿಗೆ ಶಿಶುಹತ್ಯೆ, ಗೋಹತ್ಯೆ ಪರಸ್ತ್ರೀಯರ ಮಾನಹಾನಿ ಭೂಸುರರನೇಕರ ಧರ್ಮ ಶ್ರೇಷ್ಠತೆಯ ಉಪಟಳ ಹೆಚ್ಚಾಗಿ ಶಿವಧರ್ಮದ ತೆಗಳಿಕೆಗೆ, ಶಿವದೇವಾಲಯಗಳನ್ನು ನಾಶಪಡಿಸುವ ಕಾರ್ಯಗಳು ಎಡಬಿಡದೆ ಸಾಗಿರುವದನ್ನು ಕಣ್ಣಾರೆ ಕಂಡು ಮನವು ಭೇದಗೊಂಡು ನಿಜ ಸಂಗತಿಯನ್ನು ಶಿವಸನ್ನಿಧಿಯಲ್ಲಿ ಅರಿಕೆ ಮಾಡಿ ಕೊಳ್ಳಲು ಕೈಲಾಸನಾಥನ ಸನ್ನಿಧಾನಕ್ಕೆ ಬರಬೇಕಾಯಿತು ಎಂದು ತನ್ನ ಆತ್ಮದುಸಿರನ್ನು ನಿವೇದಿಸಿಕೊಂಡನು.

ಆಗ ಶಿವನು ಬಸವೇಶನ ಮಹಿಮೆಯದು ಅವರ್ಣನೀಯ. ಬಸವನೆಂಬ ಈ ಮೂರಕ್ಷರಗಳನ್ನು ಉಚ್ಚರಿಸುವವರಿಗೆ ಷಡಕ್ಷರ ಮನವು ಸಿದ್ಧಿಸುವದು ತನ್ಮೂಲಕ ಚತುರ್ವಿಧ ಮುಕ್ತಿ ಅತುಳ ಸಂಪತ್ತು ಸೌಖ್ಯಾನಂದ ಸಾಮ್ರಾಜ್ಯವೆ ಕೈ ಸೇರುವದರಲ್ಲಿ ಸಂದೇಹವಿಲ್ಲ. ಬಸವನ ನೆನೆಯುವವರ ಇಷ್ಟಾರ್ಥ ಸಿದ್ಧಿಯಾಗಿ ಅವರ ಹೃದಯದಲ್ಲಿ ನಾನೂ ಸದಾ ವಾಸಗೈಯುವೆನು. ಆತನಿಂದಲೆ ನನ್ನ ಭಕ್ತರ ಉದ್ಧಾರ, ಭಕ್ತಿಯ ವಿಸ್ತಾರ, ಭಕ್ತರ ವಿಜಯ, ಭಕ್ತಿಯ ಸ್ಥಳವನ್ನು ಗುರುತಿಸುವದರಲ್ಲಿ ಬಸವನು ನನಗಿಂತಲೂ ಮುಂದೆ ಎಂದು

ಶಿವನು ಹೆಮ್ಮೆಯಿಂದ ನಂದೀಶ್ವರನ ಮೇಲಿರುವ ತನ್ನ ಅಭಿಮಾನವನ್ನು ವ್ಯಕ್ತ
ಪಡಿಸಹತ್ತಿದನು. ಅಲ್ಲದೇ ಬಸವನ ವಾಸಸ್ಥಾನವೇ ನನ್ನ ಹೃದಯ
ಎನ್ನುತ್ತ ಹೃದಯ ಬಿಚ್ಚಿ ಬಸವನು ತನ್ನ ಹೃದಯ ಮಂದಿರದಲ್ಲಿ ವಾಸವಾಗಿ
ರುವದನ್ನು ಸಕಲ ಗಣರು ಕಾಣುವಂತೆ ಕಾರ್ಯಗೈದನು

ಮತ್ತು ಆತನನ್ನು ಕರೆದು ಭಕ್ತಿಯೆಂಬ ಸತಿಯನ್ನು ಅಂಕಿತದಲ್ಲಿಟ್ಟು
ಆಳುವ ಸಮರ್ಥಶಾಲಿಗಳು ಈ ಲೋಕದಲ್ಲಿ ನಿನ್ನ ಹೊರತು ಅನ್ಯರು ದೊರ
ಕರು ಎಂದು ಹೊಗಳುತ್ತ ಬಸವರಾಜ ಈ ಮೊದಲೊಂದು ಸಾರೆ ನೀನು
ಭೂಲೋಕಕ್ಕೆ ಹೋಗಿ ಭಕ್ತ ಮಾಹೇಶ್ವರ ಬಳಗವನ್ನು ರಕ್ಷಿಸಿ ಪರಮತವನ್ನು
ಪರಿಭವಿಸಿ ಶಿವಮತ, ಶಿವತತ್ವ, ಶಿವಧರ್ಮಗಳ ಉದ್ಧಾರಗೈದೆ. ಶರಣರ
ಚಿತ್ತವೆಂಬ ಭೂಮಿಯಲ್ಲಿ ಭಕ್ತಿ ಕಲ್ಪವೃಕ್ಷದ ಬೀಜವನ್ನು ಬಿತ್ತಿ ಸುಜ್ಞಾನದ
ನೀರನೆರೆದೆ. ಜ್ಞಾನ ಸಂಪತ್ತಿಯಿಂದ ಆ ಬೀಜವದು ಅಂಕುರಿಸಿ ಮೊಳಕೆ
ಯೊಡೆದು ಮಹಾಮರವೆನಿಸಿ ಫಲಭರಿತವಾಯಿತು. ಆಗ ವಿರಕ್ತರು ಆ
ಫಲಗಳನ್ನು ಭುಂಜಿಸಿ ಕೈಲಾಸಕ್ಕೆ ಬಂದರು. ಈಗ ಮತ್ತೆ ಆ ನನ್ನ ಭಕ್ತ
ರನ್ನು ರಕ್ಷಿಸುವ ಭಾರ ನಿನ್ನದಯ್ಯಾ.

ಹಿಂದೆ ನಾನು ಪ್ರಭುವಾದೆ, ನೀನು ಭಕ್ತಿ ಭಂಡಾರಿಯಾಗಿ ಭೂಲೋಕ
ವಾಸಕ್ಕೆ ತೆರಳಿದ್ದೆವು. ಆದರೆ ಈ ಸಾರೆ ಹಾಗಲ್ಲ ಎರಡೂ ಒಂದೇ ಎಂಬ
ಭಾವನೆಯ ದೇಶಿಕ ಭಾವದಲ್ಲಿ ನೀನು ಇಳೆಗೆ ಬಾ. ಇದನ್ನು ನೀನು
ಒಪ್ಪಲೇಬೇಕು. ಭಕ್ತಿ ಜ್ಞಾನ ವೈರಾಗ್ಯಗಳು ಬೆಳೆಯಬೇಕಾಗಿದೆ. ಭುವಿಯ
ಜನರಿಗೆ ನಿನ್ನಿಂದ ಶಿವಲೀಲಾ ವಿಶೇಷ ತಿಳಿಯಬೇಕಾಗಿದೆ ಎಂದು ಆನಂದದ
ಅತಿರೇಖದಲ್ಲಿ ಮಹಾದೇವನು ಬಸವನನ್ನು ಅಪ್ಪಿಕೊಂಡು ಮಗುವಿನೋ
ಪಾದಿಯಲ್ಲಿ ಮುದ್ದಾಡಿದನು. ಆಗ ಬಸವರಾಜನು ಈಶ್ವರನ ಅಪ್ಪುಗೆಯಿಂದ
ಬಿಡುಗಡೆ ಹೊಂದಿ ಶಿವನ ಪಾದಗಳಿಗೆ ನಮಸ್ಕರಿಸುತ್ತ ದೇವಾ ಮಹಾದೇವಾ
ನನ್ನ ತನು ಮನ ಮಾನ ಪ್ರಾಣ ಸಕಲ ಸಂಪತ್ತು ಎಲ್ಲವೂ ನೀನೇ. ಇದಕ್ಕೆ
ಬೇರೆ ಉದಾಹರಣೆ ಏನಿದೆ? ಇಂತಿರಲು ಶಿವಲೋಕ ಮರ್ತ್ಯಲೋಕ ಎಂಬ
ಭೇದಭಾವ ಎನಗಿಲ್ಲ. ಎಲ್ಲೆಲ್ಲಿಯೂ ತಮ್ಮ ಪಾದಗಳನ್ನು ನಂಬಿದ ನನಗೆ ಭಯ
ವೆಂಬ ಶಬ್ದವೇ ಗೊತ್ತಿಲ್ಲ. ಶಿವಶರಣರು ಮತ್ತು ಶಿವಭಕ್ತಿ ಸಂಪನ್ನರ

ಸೇವಾಭಾಗ್ಯವೆ ನನ್ನ ಪ್ರಾಣ ಸ್ವರೂಪ. ತಮ್ಮ ನುಡಿ ಶಿರಸಾವಂದ್ಯ, ಅನುಗ್ರಹಿಸಬೇಕೆಂದು ಮತ್ತೊಮ್ಮೆ ನಮಸ್ಕರಿಸಿದನು.

ಆಗ ಶಿವನು ವೃಷಭೇಂದ್ರನ ಭಕ್ತಿಗೆ ಮೆಚ್ಚಿ ಬಸವಾ, ನೀನು ಇಳೆಗೆ ತೆರಳಿದ ಮೇಲೆ ನಾನಿಲ್ಲಿರಲು ಸಾಧ್ಯವೇ ಭಕ್ತಿಯೊಡನೆ ಮುಕ್ತಿ ಇರುವಂತೆ ನಾನಾದರೂ ಸದಾ ನಿನ್ನೊಡನೆಯೇ ಇರುವೆನು, ಗುರುವಾಗಿ ನಿನ್ನ ಬರುವ ನಿರೀಕ್ಷಣೆಯಲ್ಲಿ ಭೂಲೋಕದಲ್ಲಿ ವಾಸಗೈಯುವೆನು ಎಂದು ಅಭಯವಚನವಿತ್ತು ಇಚ್ಛಿತ ಗಣದೊಡನೆ ನಂದಿಯನ್ನು ಭೂಲೋಕಕ್ಕೆ ಬೀಳ್ಕೊಟ್ಟನು.

---

೨ ನೇ ಸಂಧಿ

ಶಿವನು ಸರಸೀಪುರದಲ್ಲಿ ಗುರುಬಸವರಾಜನಾಗಿ ಬಸವೇಶ್ವರನಿಗೆ ಘನಲಿಂಗ ಚಕ್ರವರ್ತಿ ಪಟ್ಟಾಭಿಷೇಕ ಮಾಡಿದ್ದು.

ಸರಸೀಪುರವೆಂಬುದು ಕರ್ನಾಟಕದ ಮಧ್ಯದಲ್ಲಿ ಶಿವಭಕ್ತಿಯ ತವರುಮನೆಯಂತೆ ಶೋಭಿಸುವದು. ಶಂಕರನು ಬಸವೇಶ್ವರನಿಗೆ ವಚನ ಕೊಟ್ಟಂತೆ ಆತನ ಬೆನ್ನ ಹಿಂದೆಯೇ ಬಂದು ಆ ಪಟ್ಟಣದಲ್ಲಿ ನೆಲೆಸಿ ಗುರುರೂಪದಲ್ಲಿ ವಿರಾಜಿಸುತ್ತಿದ್ದನು. ಇಂದ್ರನ ಅಮರಾವತಿಯನ್ನು ಅಲ್ಲಗಳೆಯುವ ರೀತಿಯಲ್ಲಿ ಸರಸೀಪುರ ಸುಮನೋಹರವಾಗಿ ಕಂಗೊಳಿಸುತ್ತಿತ್ತು, ವಿವಿಧ ವಿದ್ವಜ್ಜನರು, ವೇದಾಗಮತಜ್ಞರು, ಭಕ್ತಿ ವೈಭವದಿಂದ ಮೆರೆಯುತಿರ್ಪ ಭಕ್ತ ಬಳಗವು ಪರಶಿವನೆ ಗುರುವಾಗಿ ಭಕ್ತರೇ ಮಕ್ಕಳು ಅಣ್ಣತಮ್ಮರೆ ಶಿಷ್ಯರಾಗಿ, ಶಿವಶರಣೆರಾಗಿ ಶಿವಬಾಲಿಕೆಯರು, ರಾಣಿವಾಸದ ಬಳಗವಾಗಿ ಪೌರ ಪರಿವಾರವೆಲ್ಲವೂ ದೇವತೆಗಳಂತೆಯೂ ಹುಟ್ಟಿ ಬೆಳೆದ ಗಿಡಮರಗಳೆಲ್ಲವೂ ಕಲ್ಪವೃಕ್ಷವಾಗಿ ಕಾರ್ಯ ಮಾಡುತ್ತಿದ್ದವು. ಪ್ರತಿಯೊಂದು ಜಲನಿಧಿಯು ತೀರ್ಥ ಸಮಾನವೆನಿಸಿ ಶಂಕರನ ಕೈಲಾಸವನ್ನು ಮೆರೆಯುವಂತೆ ಆ ಸರಸೀಪುರವು ಕಂಗೊಳಿಸುತ್ತಿತ್ತು.

ಶಂಕರನಾದರೂ ತನ್ನ ಹೃದಯುವಾಸಿ ನಂದೀಶ್ವರನನ್ನು ಭೂಮಿಗೆ
ಹಿಸಿ ತಾನು ಶಿಷ್ಯವಿರಹದಲ್ಲಿ ಕೊರಗಬಾರದೆಂದು ಮುಂದಾಗಿ ಬಂದು
ಸೀಪುರದಲ್ಲಿ ಗುರುರೂಪದಲ್ಲಿ ವಿರಾಜಿಸುತ್ತಿದ್ದನು.

ಇತ್ತ ಬಸವೇಶ್ವರನು ಶಿವನ ಅಪ್ಪಣೆಯ ಪ್ರಕಾರ ಕೈಲಾಸದಿಂದ ಇಳಿ
ಿದ ಕ್ಷಣದಲ್ಲಿ ಹಲವಾರು ಶಿವಭಕ್ತ ಸಂಪನ್ನರಿಗೆ ಸುಸ್ವಪ್ನಗಳು ಕಂಡು
ದೀಶ್ವರನ ಆಗಮನವು ಆನಂದವನ್ನುಂಟು ಮಾಡಿತು. ಸಂತಸದ ಸಾಗ
ವಲ್ಲಿ ಈಜಾಡಿ ಭಕ್ತರು ಆನಂದಿಸಿದರು. ಅದರಂತೆ ಶಿವಭಕ್ತಿಯ ತಿರುಳ
ಯದ ಅನೇಕ ಮೂಢರಿಗೆ ಸಂತೋಷದ ಸೆಲೆಯೊಂಬುದೆ ಬತ್ತಿ ಒಣ
ಮ್ಮೆಯಿಂದ ಹಾರಾಡುವ ಹಾರವರಂತೂ ಕಂಗಾಲಗೆಟ್ಟವರಾದರು.

ಇಳೆಯಲ್ಲಿ ಇಳಿದ ಬಸವರಾಜನು ಶಿವನ ಮಂಗಲಕರ ಆಭರಣಗಳೆನಿ
ಸಿದೆ ರುದ್ರಾಕ್ಷಿ, ಭಸ್ಮಗಳನ್ನು ಧರಿಸಿ ಯತಿರಾಜನ ಶೋಭೆಯಲ್ಲಿ ಪೂರ್ಣ
ಚಂದ್ರಮನ ಕಳೆಯಲ್ಲಿ ಶಿವಭಕ್ತಿಯ ಭಂಡಾರವನ್ನು ಪರಿಪೂರ್ಣ ಹೊತ್ತು
ಭೂಮಿಯಲ್ಲಿ ಅವತರಿಸಿ ಗುರು ಕಾರುಣ್ಯವನ್ನು ಅಪೇಕ್ಷಿಸಿ ತಾಯಿಯನ್ನು
ಕಳೆದುಕೊಂಡು ಕರು ತಾಯಿಯ ಹಂಬಲದಲ್ಲಿ ಹಲುಬುತ್ತ ಹೊರಡುವಂತೆ
ಒಂದೇ ಸವನೆ ಶಿವನೆ ಶಂಕರನೆ ಕರುಣಾಮೂರ್ತಿ ಗುರುರೂಪಿಯನ್ನಯ್ಯನೆ
ಎಂದು ಸರಸೀಪುರದತ್ತ ಹೊರಟು ಬಂದನು. ಪುರದ ಸಮೀಪದಲ್ಲಿ ಬರುತ್ತಿ
ರುವಾಗ ನಂದೀಶನಿಗೆ ಗುರುವಿನ ಇರುವು ಅರುವಾಯಿತು. ಆಗ ಕೇಳುವದೇನು
ಹಂಸರಾಜನು ಮಾನಸ ಸರೋವರವನ್ನು ಕಂಡು ಆನಂದದಿಂದಲೂ ಬೃಂಗವು
ಪುಷ್ಪ ಪರಾಗವನ್ನು ಗುರುತಿಸಿದ ಸಂತೋಷದಿಂದಲೂ ಎಳೆ ಮಾವು ಕಂಡ
ಗಿಳಿ ಕೋಗಿಲೆಗಳ ಸಂತಸದಲ್ಲಿಯೂ ಹೆತ್ತಮ್ಮನಿರುವು ತಿಳಿದ ಮಗುವಿನಂದದಿ
ಶರಣಸಂಗವನ್ನು ಬಯಸುವ ಶಂಕರ ಭಕ್ತನಂತೆ ಸರಸೀಪುರವನ್ನು ಸಮೀಪಿ
ಸಿದನು. ತಮ್ಮ ಜ್ಞಾನ ಚಕ್ಷುಗಳಿಂದ ಆತನ ಬರುವನ್ನು ಅರಿತ ಗುರು
ಬಸವರಾಜದೇಶಿಕರು ಶಿಷ್ಯರನೇಕರನ್ನು ಕರೆದು ಅವರ ಸಮ್ಮುಖದಲ್ಲಿ
ಬಸವೇಶನ ಮಹತಿಯನ್ನು ಹೊಗಳುತ್ತ ನಂದೀಶನನ್ನು ಸಕಲ ಮಾನ
ಸನ್ಮಾನಗಳಿಂದ ಸನ್ಮಾನಿಸಿ ಇದಿರ್ಗೊಂಡು ಕರೆದುಕೊಂಡು ಬನ್ನಿರೆಂದು
ಅಪ್ಪಣೆಮಾಡಿದರು.

ಗುರುಗಳ ಅಪ್ಪಣೆಯಂತೆ ಸಕಲ ಶಿಷ್ಯ ಬಳಗವು ವಿವಿಧ ಮಂಗಳವಾದ್ಯ ಮೇಳದೊಡನೆ ನೃತ್ಯ ಗಾಯನ ಭಜನೆಯ ಮೇಳದವರನ್ನು ಕೂಡಿಸಿ ಪೌರ ಪರಿವಾರದೊಡನೆ ಗುರು ನಾಮಸ್ಮರಣೆಯಲ್ಲಿ ಸಾಗಿರಲು ಎದುರಾಗಿ ಬ ುವ ಬಸವೇಶ್ವರರನ್ನು ಕಂಡು ಅತೀ ಸಂತೋಷದಿಂದಲೂ ಭಕ್ತಿ ವಿಶ್ವಾಸಗಳಿಂದಲೂ ಸಾಷ್ಟಾಂಗ ನಮಸ್ಕಾರಗೈದು ಹಲವು ರೀತಿಯಿಂದ ಸ್ತುತಿಸಿ ಉಚಿತ ಮರ್ಯಾದೆ ಮಾಡಿ ಗುರು ಸನ್ನಿಧಿಗೆ ಕರೆದುಕೊಂಡು ಬಂದರು.

ಆಗ ಬಸವೇಶ್ವರನು ಎದುರು ಸಿಂಹಾಸನದಲ್ಲಿ ಮಂಡಿಸಿರುವ ಗುರುವನ್ನು ಗುರ್ತಿಸಿ ಪರತರ ಪರಂಜ್ಯೋತಿಯ ರೂಪದಲ್ಲಿ ವಿರಾಜಿಸುವ ಶಂಕರನಂತೆ ತೋರುವ ಗುರು ಬಸವರಾಜ ದೇಶಿಕರನ್ನು ಕಂಡು ಭಕ್ತಿ ಪರವಶತೆಯಲ್ಲಿ ಆನಂದ ಬಾಷ್ಪಗಳು ಚಿಮ್ಮಿ ಸಾಷ್ಟಾಂಗ ನಮಸ್ಕಾರಗೈದು ಕರಜೋಡಿಸಿ ನಿಶ್ಚಲಭಕ್ತಿಯಿಂದ ಗುರು ಮೂರ್ತಿ ಶಿವನೆ ಭಕ್ತಹೃದಯವಾಸನೆ ಭವಿ ಸಂಗವನ್ನು ಧಿಕ್ಕರಿಸಿದವನೆ ಗುರುವಾದಿ ಅಷ್ಟಾವರ್ಣಮೂರ್ತಿ ಗುರು ಬಸವರಾಜಪಾಹಿ ಎಂದು ಅಷ್ಟೋತ್ತರ ಮಂತ್ರಗಳಿಂದ ಸ್ತುತಿಸಹತ್ತಿದನು

ಆಗ ಗುರು ಬಸವರಾಜದೇಶಿಕರು ಕರುಣೆಯಿಂದ ಬರಸೆಳೆದಪ್ಪಿ ಕಂದಯ್ಯ ಎನ್ನ ಕಂದ ಬಾರಯ್ಯ ಬಾ ಎಂದು ಮಗ್ಗುಲಲ್ಲಿ ಕೂಡ್ರಿಸಿ ಕೊಂಡು ಶಿವತತ್ವದ ಬೀಜವನ್ನು ಬಸವನ ಹೃದ್ಭೂಮಿಯಲ್ಲಿ ಬಿತ್ತಿ ತನ್ನ ಸರ್ವಕಳೆಯನ್ನು ಆತನಲ್ಲಿ ಅಂಕುರಿಸುವಂತೆ ಬೋಧೆಗೈದು ಭಸ್ಮಲೇಪಿತ ಹಸ್ತದಿಂದ ಸರ್ವಾಂಗವನ್ನು ಬಳಸಿ ಹಿರಿಸಿನಿಂದ ಹರಸಿ ಆಶೀರ್ವದಿಸಿದರು.

ಆಗ ಭಕ್ತ ಮಾಹೇಶ್ವರ ಬಳಗವು ಆನಂದದಿಂದ ಜಯಜಯಕಾರ ಗೈಯಲು ಗುರು ಬಸವರಾಜ ದೇಶಿಕರು ವೃಷಭೇಂದ್ರನಿಗೆ ಘನಲಿಂಗ ಚಕ್ರವರ್ತಿ ಪಟ್ಟಾಭಿಷೇಕ ಜರುಗಿಸಿ ಸಂತೋಷಗೊಂಡರು.

ವೃಷಭೇಂದ್ರನಿಗೆ ಘನಲಿಂಗ ಚಕ್ರವರ್ತಿ ಪಟ್ಟಾಭಿಷೇಕ ಮಾಡಿದ ಬಳಿಕ ಗುರು ಬಸವರಾಜ ದೇಶಿಕರು ಸರ್ವಧರ್ಮ ತತ್ವದ ತಿರುಳನ್ನು ಬಸವೇಶ್ವರನಿಗೆ ಅತೀ ಶೀಘ್ರದಲ್ಲಿ ಕರುಣಿಸಿ ಶಿವಲೀಲಾ ಶ್ರವಣದ ಪುಣ್ಯ ಕಾರ್ಯದಲ್ಲಿ ಅವನನ್ನೇ ಮುಖ್ಯರನ್ನಾಗಿಸಿ ತಮ್ಮ ಹೆಸರಾದ ಗುರು ಬಸವ ರಾಜ ಎಂದು ನಾಮಕರಣಗೈದು ತಾವು ನಿಶ್ಚಿಂತೆಯಿಂದ ಯೋಗನಿದ್ರೆಯಲ್ಲಿ ಉಳಿಯುವ ಮನಸ್ಸು ಮಾಡಿದರು.

ವೃಷಭೇಂದ್ರನು ಗುರುವಿನ ಗದ್ದುಗೆಯಲ್ಲಿ ವಿರಾಜಮಾನನಾಗಲು ನೇಮದಂತೆ ಪದ್ಧತಿಗನುಸಾರವಾಗಿ ಹಲವಾರು ರಾಜ ಮಹಾರಾಜರೂ ಪುರ ಪ್ರಮುಖರೂ ತಮ್ಮ ಭಕ್ತಿಯ ಹಿರಿ ಗುರುತಾಗಿ ಅತುಲ ಕಾಣಿಕೆಯನ್ನಿತ್ತು ಸೇವಾ ಭಾಗಿಗಳಾದರು. ಅತ್ಯಾನಂದದಿಂದ ಗಣಾರಾಧನೆಯನ್ನು ಜರುಗಿಸಿ ಪುಣ್ಯಭಾಗಿಗಳಾದರು. ಕಂಡಲ್ಲಿ ಕೇಳಿದಲ್ಲಿ ದೇಶದಿಕ್ಕುಗಳಲ್ಲಿ ಆನಂದವೇ ಆನಂದ. ಸಂತೋಷ ಶರಧಿಯೇ ಉಕ್ಕಿ ಹರಿಯುತಿರುವದೇನೋ ಎನ್ನುವ ತೆರದಿ ಸರಸೀಪುರವು ತೋರುತಿರ್ಪುದು.

ಬಸವರಾಜನ ಕೀರ್ತಿ ಪ್ರಭೆಗೆ ಸೂರ್ಯದೇವನು ನಾಚಿ ಮರೆಯಾದನು. ಮೇಘ ಮಂಡಲವು ಸ್ವಚ್ಛಂದ ಶುಭ್ರನಾಗಿ ಕಂಗೊಳಿಸುವದಾಯಿತು. ಅಮೃತ ಧಾರೆಯ ಬಿಂದುಗಳಾಗಿ ನಕ್ಷತ್ರಗಳು ಪುಷ್ಪಾಂಜಲಿಯನ್ನರ್ಪಿಸುವಂತೆ ಕಂಗೊಳಿಸಹತ್ತಿದವು. ಇಂತಿರ್ಪ ಸಮಯದಲ್ಲಿ ವೃಷಭೇಂದ್ರರಾಜನು ಶಿವ ಬಳಗದೊಡನೆ ವಿಧಾನೋಕ್ತವಾಗಿ ಇಷ್ಟಲಿಂಗ ಪೂಜೋತ್ಸವವನ್ನು ಜರುಗಿಸಿ ಶಿವಶೇಷ ಪ್ರಸಾದವನ್ನು ಸೇವಿಸಿ ಶಿವನ ಲೀಲೆಗಳನ್ನು ತಿಳಿಸುವದರಲ್ಲಿ ಮಗ್ನನಾದನು.

೩ ನೇ ಸಂಧಿ

ಗುರುಬಸವರಾಜನ ಸನ್ನಿಧಿಗೆ

ಕಪಟ ಭೂಸುರರ ಆಗಮನ ಹಾಗೂ ಗುರುವಿನ ಉಪದೇಶ

ಶಿವನ ಅಪ್ಪಣೆಯಂತೆ ವೀರಶೈವ ಮತವನ್ನು ಉದ್ಧಾರಗೊಳಿಸುವ ದಕ್ಕಾಗಿ ಭೂಮಿಗೆ ಬಂದ ಬಸವರಾಜನು ಗುರುಸ್ಥಾನವನ್ನು ಅಲಂಕರಿಸಿ ಗುರುಬಸವರಾಜ ದೇಶಿಕರ ಅಪ್ಪಣೆಯ ಪ್ರಕಾರ ಕೆಲವೇ ದಿನಗಳಲ್ಲಿ ಸರ್ವ ಗುಣ ಪಂಡಿತನಾಗಿ ಶಿವತತ್ವ ಶಿವಮತ ಶಿವಧರ್ಮೋದ್ಧಾರದ ತಿರುಳನ್ನ-ರಿತು ಶಿವಕೀರ್ತನೆಯಲ್ಲಿ, ಶಿವಕಥಾ ಗೋಷ್ಠಿಯಲ್ಲಿ ಆನಂದದಿಂದ ಕಾಲ ಕಳೆಯುತ್ತಿದ್ದನು.

ಹೀಗಿರಲು ಒಂದು ದಿನ ಬೆಳಗು ಮೂಡಿ ಸೂರ್ಯ ರಶ್ಮಿಗಳಿಂದ ಜಗವೆಲ್ಲ ಬೆಳಗುವ ಕಾಲದಲ್ಲಿ ಶಿವ ಮತ ತೇಜಸ್ವಿ ಗುರುಬಸವರಾಜೇಂದ್ರರು ಪ್ರಾತಃಕಾಲದ ನಿತ್ಯ ನೇಮಗಳನ್ನು ತೀರಿಸಿಕೊಂಡು ತಮ್ಮ ಉಚಿತಾಸನದ ಬಳಿಗೆ ಬರುವ ಸಮಯದಲ್ಲಿ ಮಂಗಳವಾದ್ಯಗಳು ಮೊಳಗಹತ್ತಿದ್ದವು. ಶಿವ ಭಜನೆಯ ಸುಸ್ವರವು ಜೋರಾಗಿ ಕೇಳಹತ್ತಿತು. ಶಿವ ಸಂಪ್ರೀಯ್ಯ ಗುರು ಬಸವರಾಜರು ಆನಂದದಿಂದ ಹರನಾಮ ಘೋಷಣೆಯನ್ನಾಲಿಸುತ್ತ ಸಭಾಪೀಠಕ್ಕೆ ಬಂದು ಸಿಂಹಾಸನವನ್ನಲಂಕರಿಸಿದರು.

ಆಗ ಶಿವಭಕ್ತರ ಆನಂದವನ್ನು ವರ್ಣಿಸುವದು ಅಸದಳವು. ಶಿಷ್ಯರೆನಿಸಿದ ಗಣಬಳಗವು ಸಂತಸದಿಂದ ಗುರುಗಳ ನಾಮಘೋಷಣೆಗೈದು ತಮಗಾಗಿ ದೊರೆತ ಅರುವಿನ ಕಣ್ಣು ಹರನ ಹಿರಿದಾದ ಹೊರೆಯನಿಪ ಭಕ್ತಪಾಲನೆ ವೀರಶೈವ ಧರ್ಮ ಪಾಲನೆಯ ಭಾರದೊಡನೆ ಭುವಿಯ ಶಿವಮತವನ್ನು ಉಜ್ಜಲಗೊಳಿಸಲು ಗುರುರೂಪದ್ಧಿಂದ ಮೂಡಿ ಬಂದ ಶಿವಸ್ವರೂಪಿ ಗುರು ಬಸವರಾಜ ಎಂದು ಹೆಮ್ಮೆಯಿಂದ ಹಾಡಿಹೊಗಳಿ ಅನಂದಗೊಂಡರು. ಭಕ್ತ ಸಮೂಹದ ಸಂತೋಷಕ್ಕಂತೂ ಅಳತೆ ಇಲ್ಲದಾಗಿತ್ತು. ಎಲ್ಲಿ ನೋಡಿದಲ್ಲಿ, ಕೇಳಿದಲ್ಲಿ ಗುರುಬಸವರಾಜರ ಗುಣಗಾಯನವೇ ಗಾಯನ, ಶಿವಮತಿಯರ ಆನಂದವೇ ಆನಂದ ಸರಸೀಪುರವೆಂಬುದು ಸಂತಸದ ಆಗರವಾಗಿತ್ತು.

ಇದೆಲ್ಲವನ್ನು ಕೇಳಿದ ನೋಡಿದ ಅನೇಕ ಹೊಟ್ಟೆಕಿಚ್ಚಿನ ಬ್ರಾಹ್ಮಣ ಪಂಡಿತರು ತಮಗಿರುವ ಸ್ಥಾನಮಾನಗಳಿಗೆ ಎಲ್ಲಿ ಕೊರತೆ ಬರುವದೋ ಏನೋ ಎಂಬ ಭಯದಿಂದಲೂ ಸಂಕುಚಿತ ಗುಣಧರ್ಮದಂತೆ ಮಾತ್ಸರ್ಯದ ಮಂಗಬುದ್ಧಿ ಉದ್ಭವಿಸಿ ತಮ್ಮ ಮತಾಭಿಮಾನಿಗಳಾದ ಇನ್ನೂ ಅನೇಕ ಕಪಟಭೂಸುರ ಬಳಗದವರೊಡನೆ ಅಸೂಯೆ ಮತ್ಸರ ಭಾವನೆಯಿಂದ ತುಂಬತುಳುಕುವ ಹೇಯ ಗುಣದ ಮನವನ್ನು ಹೊತ್ತುಕೊಂಡು ಗುರುಬಸವರಾಜರ ಮಠದತ್ತ ಸಾಗಿ ಬರುತ್ತ ತಮ್ಮ ತಮ್ಮಲ್ಲಿ ವಿಚಾರ ಮಾಡಿಕೊಳ್ಳಹತ್ತಿದರು.

ಅಲ್ಲಯ್ಯ ಹರೀಶ್ವರಭಟ್ಟರೇ ಎಲ್ಲಿಯವನೋ ಇವನಾವ ದರಿದ್ರ ಅನಾಥ ಅನಾಮಧೇಯನೋ ಈತನನ್ನು ಹಿಡಿದು ತಂದು ಗುರುಪಟ್ಟದಲ್ಲಿ ಕೂಡ್ರಿಸಿ ಮೋಜು ಮಾಡುವ ಈ ವೀರಶೈವರ ಹಗರಣವನ್ನು ನೋಡಿದಿರಾ, ಇಂತವರ

ಸೊಕ್ಕು ಅಡಗಿಸಲೇಬೇಕು. ಅಲ್ಲದೇ ನಮ್ಮಂಥ ಘನ ವಿದ್ವಾಂಸ ಪಂಡಿತ ಶಿರೋಮಣಿಗಳಾದ ಬ್ರಾಹ್ಮಣರು ಈ ಪುರದಲ್ಲಿ ಇರುತ್ತಿರುವದು ಗೊತ್ತಾಗ ಬಾರದೇ ? ಇದು ಪಂಡಿತರಿಗೆ ಶಾಸ್ತ್ರಿಗಳೆನಿಸಿದ ಪುರಾಣ ಪ್ರವಚನಕಾರರಿಗೆ ಅಪಮಾನವಲ್ಲವೇ ? ವೇದ ಶಾಸ್ತ್ರ ಪುರಾಣಗಳ ಗಂಧವಿಲ್ಲದ ಇವನೆಂತಹ ಗುರುವು, ಈ ದಿವಸ ಎರಡರಲ್ಲಿ ಒಂದು ತೀರ್ಮಾನವಾಗಿ ಈ ಗುರುವಿನ ಘನ ಪಾಂಡಿತ್ಯವನ್ನು ನ್ಯಾಯಬದ್ಧವಾಗಿ ತೂಗಿ ನೋಡುವ ನಿಸ್ಸೀಮ ವಿದ್ವಾಂಸ ರಾಗಿ ನಿಲ್ಲಬೇಕು. ಇಲ್ಲವಾದರೆ ಬರುಬರುತ್ತ ಈ ಊರಲ್ಲಿ ನಮ್ಮ ಬೇಳೆಬೇಯು ವದೇ ಕಠಿಣವಾದೀತು. ಇಂದು ಅವನ ಪರೀಕ್ಷೆಯಾಗಿ ಮಠವನ್ನಷ್ಟೆ ಅಲ್ಲಾ ಪ್ರಸಂಗ ಬಂದರೆ ಈ ಸರಸೀಪುರವನ್ನು ಬಿಡಿಸಿ ಕಳುಹಿಸಬೇಕು, ಎಂದು ವೀರ ಗಂಭೀರ ನುಡಿಗಳಿಂದ ಗರ್ವಾಂಧರೆನಿಸಿದ ಬ್ರಾಹ್ಮಣ ಬಳಗವು ಮಠ ವನ್ನು ಸಮೀಪಿಸಿದರು.

ಮಠದ ದ್ವಾರಪಾಲಕರು ಭೂಸುರರ ಗರ್ವಯುಕ್ತ ವಚನಗಳನ್ನು ಕೇಳಿ ಆಗಲೇ ಸಿಟ್ಟಿನಿಂದ ತಳಮಳಿಸಹತ್ತಿದರು. ಆದರೂ ಗುರುವಿನ ಆಜ್ಞಾನು ವರ್ತಿಗಳಾದ ಅವರು ಯಾವ ಪ್ರತೀಕಾರದ ನುಡಿಗಳನ್ನಾಡದೆ ತಮ್ಮ ಕರ್ತವ್ಯದ ಲ್ಲಿದ್ದರು. ಭೂಸುರರು ಮಠವನ್ನು ಸಮೀಪಿಸಿ ಬಾಯಿಗೆ ಬಂದಂತೆ ಶಿವ ನಿಂದೆಯ ನುಡಿಗಳನ್ನಾಡುತ್ತಿದ್ದರಲ್ಲದೆ ಗುರುವಿನ ಬಗ್ಗೆ ಸಲ್ಲದ ಶಬ್ದಗಳಿಂದ ತೆಗಳಹತ್ತಿದರು. ಇದು ದ್ವಾರಪಾಲಕರಿಗೆ ಕೇಳದಿರಲಿಲ್ಲ.

ಆಗ ಮಠದ ರಕ್ಷಕ ಬಳಗದವರಿಗೆ ಸಂತಾಪ ಉಕ್ಕಿಬಂದು ಗುರು ದರ್ಶನಕ್ಕೆ ಬರುವರೀತಿ ಇದಲ್ಲವೆಂದು ಈ ಭಂಡ ಬ್ರಾಹ್ಮಣರು ಯಾವದೋ ಕಾಪಟ್ಯದ ಸಂಚಿನಲ್ಲಿ ಸಾಗಿಬಂದವರು. ಕುಟಿಲ ಕಾರಸ್ಥಾನವೆಸಗಲು ಬಂದ ಇವರ ಕುಟಿಲತನವನ್ನು ದ್ವಾರದಲ್ಲಿಯೇ ಮುಗಿಸಬೇಕೆಂದು ಅವರಿಗೆ ಎದುರಾಗಿ ಮುನ್ನುಗ್ಗಿದರು. ಮತ್ತು ಆ ಚಾಂಡಾಲರು ಮಠದಲ್ಲಿ ಪ್ರವೇಶ ಮಾಡದಂತೆ ಅಡ್ಡೈಸಿದರು.

ಹಲಕೆಲವು ಬ್ರಾಹ್ಮಣರು ಗಣವರರ ಸಂತಾಪಯುಕ್ತ ಮುಖವನ್ನು ಕಂಡು ಅಂಜಿ ಹಿಂಜರೆದರಲ್ಲದೇ ಏಳುತ್ತ ಬೀಳುತ್ತ ಓಡಿದರು. ಅವರಲ್ಲಿ ಹಲಕೆಲವರು ಎಲ್ಲಿಲ್ಲದ ಧೈರ್ಯ ತಂದುಕೊಂಡು

ಮುನ್ನುಗ್ಗಿ ಬಂದರು. ಆಗ ಗಣವರರು ಸಿಟ್ಟಿನಲ್ಲಿ ಬೆಂಕಿಯಾಗಿ ಗರ್ಜನೆಯಲ್ಲಿ ಶಾರ್ದೂಲಸಮವೆನಿಸಿ ಸೆಣಸಾಟದಲ್ಲಿ ಸಿಂಹಸ್ವರೂಪ ರುದ್ರರಾಗಿ ಎಲವೆಲ್ಲವೋ ಅವಿವೇಕಿಗಳಾದ ಭೂಸುರರೆ. ಇದು ಗುರುವಿನ ದರ್ಶನಕ್ಕೆ ಬರುವ ರೀತಿಯೇ, ಪದ್ಧತಿಯೇ ನಿಲ್ಲಿರಿ ಮುಂದೆ ಮತ್ತೊಂದು ಹೆಜ್ಜೆ ಕಿತ್ತಿಟ್ಟರೆ ನಿಮ್ಮ ಪರಿಣಾಮ ಒಳಿತಾಗಲಿಕ್ಕಿಲ್ಲ ಶಿವನಿಂದೆಯನ್ನಾಡುವ ನಿಮ್ಮ ನಾಲಿಗೆಗಳನ್ನು ಸೀಳಿ ಚೆಲ್ಲಬೇಕಾದೀತು, ಎಂದು ರುದ್ರರೂಪದಲ್ಲಿ ಗರ್ಜಿಸಹತ್ತಿದರು. ಗಣವರರ ರುದ್ರರೂಪಕ್ಕೆ ಕೆಲವು ಬ್ರಾಹ್ಮಣರು ಭೂಮಿಯನ್ನು ಆಶ್ರಯಿಸಿ ಅಂಜಿ ಗದಗದ ನಡುಗಹತ್ತಿದರು. ಅದರಲ್ಲಿ ಭಂಡ ಲಂಡರೆನಿಸಿದವರು, ಗಟ್ಟಿಗತನದ ಎಟ್ಟೆಯಾದವರು ಮುಂದಾಗುತ್ತ ಧೈರ್ಯದಿಂದ ನಿಮ್ಮ ಗುರು ಎಂಥವನು ? ಅವನ ಪಾಂಡಿತ್ಯವೇನು ನಾವು ಪರೀಕ್ಷಿಸಬೇಕಾಗಿದೆ. ಅವನು ಯಾವ ಯಾವ ಶಾಸ್ತ್ರ, ಪುರಾಣ, ಪುಸ್ತಕ ಬಲ್ಲವನೋ ಅರಿಯಬೇಕಾಗಿದೆ, ಅಲ್ಲದೆ ನಾವು ವೀರಶೈವರು ನಮ್ಮ ಶಿವತತ್ವ ಶಿವಧರ್ಮಗಳೇ ಶ್ರೇಷ್ಠವೆಂಬ ಅಹಂಕಾರ ನಿಮ್ಮಲ್ಲಿ ತುಂಬಿದೆ. ಅಲ್ಲದೆ ಶಿವನಿಗೆ ಈ ನಿಮ್ಮ ಗುರುವೆನಿಸಿಬಂದ ಬಸವರಾಜನಿಗೆ ನಮ್ಮ ಭಕ್ತ ಬಳಗವ ಹೆಚ್ಚಿಸಬೇಕು, ನಮ್ಮ ಧರ್ಮವನ್ನು ಸುಧಾರಿಸಬೇಕು. ನಮ್ಮವರನ್ನು ಪಂಡಿತರನ್ನಾಗಿಸಬೇಕು ಎಂಬ ಬಲವಾದ ಆಶೆಯು ತುಂಬಿದೆ. ಅಂದಾಗ ಆ ಗರ್ವಕ್ಕೆ ತಕ್ಕಂತೆ ನಿಮ್ಮ ಗುರುವಿನ ಪಾಂಡಿತ್ಯ ಪರೀಕ್ಷೆಯಾಗಲೇಬೇಕು. ಎಂದು ಹರನನ್ನು, ಗುರುವನ್ನು ನಿಂದಿಸಿ ಮಾತನಾಡುವ ನಿಂದಕರಾಗಿ ಬಂದ ಬ್ರಾಹ್ಮಣರ ನುಡಿಗಳನ್ನು ಕೇಳಿದ ಗಣವರರು ಬರುಬರುತ್ತ ಕೆರಳಿದ ಹುಲಿಗಳಾಗಿ ರೊಚ್ಚಿನ ಹುಚ್ಚಿನಲ್ಲಿ ಕಿಚ್ಚಿನೋಪಾದಿಯಲ್ಲಿ ಈ ನಾಯಿ ಜಾತಿಯ ಕುನ್ನಿಗಳನ್ನು ಹಾಗೇ ಬಿಡಬಾರದೆಂದು ಮುಂದೆ ಸಾಗಿದರು. ಗಣಪುರುಷರ ಸಿಟ್ಟಿನಶೆಕೆಯಿಂದಲೂ ಶಿವನಿಂದೆಗೈದ ಅಪರಾಧದಿಂದಲೂ ಗುರುನಿಂದೆಯ ಅನೀತಿಯಿಂದಲೂ ದ್ವಿಜರ ಕಣ್ಣುಗಳೆಲ್ಲ ಇಂಗಿ ಜಗದ ಬೆಳಕನ್ನು ಕಾಣದಂತಾದವು. ಪ್ರಪಂಚದ ನಿತ್ಯ ನಿರ್ಮಲ ಬೆಳಕಿನಿಂದ ದೂರಾದ ಬ್ರಾಹ್ಮಣರು ಈಗ ಕಂಗಾಲರಾದರು.

ಆಗ ಕೆಲವರಿಗೆ ಸುಬುದ್ಧಿ ಸಂಚಾರವಾಯಿತು. ಪಶ್ಚಾತಾಪದ ತಂಪು ಆವರಿಸಿ ತಂದೇ ಗುರುವೆ, ಗುರು ಬಸವರಾಜಾ ಅಜ್ಞರಾಡಿದ

ತಪ್ಪಿನ ನುಡಿಗಳನ್ನು ಮನ್ನಿಸಿ ಕಾಪಾಡುವ ಮನಸ್ಸು ಮಾಡು ಎಂದು ಪರಿ ಪರಿಯಿಂದ ಪ್ರಾರ್ಥಿಸಹತ್ತಿದರು.

ಬಳಿಕ ಬ್ರಾಹ್ಮಣರ ಪ್ರಲಾಪವನ್ನು ಅರಿತ ಗುರುಬಸವರಾಜರು ತಮ್ಮ ಕರುಣಾದೃಷ್ಟಿಯನ್ನು ಬೀರಿ ಯಾವತ್ತು ದ್ವಿಜರನ್ನು ತಮ್ಮ ಸನ್ನಿಧಿಗೆ ಕರೆಯಿಸಿ ಕೊಂಡು ಕೃಪಾಕಟಾಕ್ಷದಿಂದ ಸರ್ವರನ್ನು ಕಂಡಾಕ್ಷಣವೇ ಭೂಸುರರ ಕಣ್ಣುಗಳು ಮೊದಲಿನಂತೆ ಪ್ರಪಂಚದ ಪ್ರತಿಯೊಂದು ವಸ್ತುಗಳನ್ನು ನೋಡು ವಂತಾದವು.

ಆ ಮೇಲೆ ಆ ಬ್ರಾಹ್ಮಣರು ಪಶ್ಚಾತ್ತಾಪದಿಂದ ಪರಿಶುದ್ಧರಾಗಿ ಶಾಂತ ಚಿತ್ತರಾಗಿ ಭಯ ಭಕ್ತಿ ವಿಶ್ವಾಸಗಳಿಂದ ಗುರುವಿಗೆ ನಮಸ್ಕರಿಸಿ, ಗುರುದೇವಾ ತಮ್ಮ ಬಗ್ಗೆ ಅವಿಶ್ವಾಸ ತಳೆದು ಮೂರ್ಖರಾದೆವು. ಮೂಢರಾದೆವು, ಶಿವನಿಂದೆ ಗೈದು ಪಾಪಿ ಚಂಡಾಲರೆನಿಸಿದೆವು. ಇಷ್ಟಾದರೂ ಆವ ತಪ್ಪನ್ನು ಮನ್ನಿಸಿ ನಮಗೆ ಪ್ರತಿ ದೃಷ್ಟಿಯನ್ನು ಕರುಣಿಸಿದ ತಮ್ಮ ಉಪಕಾರವನ್ನು ಅದೆಷ್ಟು ರೀತಿ ಕೊಂಡಾಡಿದರೂ ತೀರದು. ಕರುಣಾಳುಗಳು ನಮ್ಮೆಲ್ಲರ ತಪ್ಪನ್ನು ಮನ್ನಿಸುವ ಮನಸ್ಸು ಮಾಡಬೇಕೆಂದು ಪದೇ ಪದೇ ಬೇಡಿಕೊಳ್ಳಹತ್ತಿದರು.

ಬಳಿಕ ಗುರುಬಸವರಾಜರು ಹಸನ್ಮುಖದಿಂದ ನಸುನಗುತ್ತ ಬ್ರಾಹ್ಮಣ ಬಳಗವೇ ಅಂಜುವ ಕಾರಣವಿಲ್ಲ, ಅಳುಕುವ ಪ್ರಮೇಯವಿಲ್ಲ. ಶಾಂತರಾಗಿ ಕುಳಿತುಕೊಂಡು ನಮ್ಮಲ್ಲಿ ನಿಮಗಿರುವ ಕೆಲಸವೇನು ? ಯಾವ ಕಾರ್ಯ ಭಾರವನ್ನು ಹೊತ್ತುಕೊಂಡು ಬಂದಿರುವಿರಿ ನಮ್ಮಿಂದ ನಿಮಗಾಗಬೇಕಾಗಿರುವ ದೇನು ನಿಮಗೆ ಈ ಅವಸ್ಥೆ ಉಂಟಾಗಲು ಕಾರಣವೇನು ? ಅಂಜುವದೇಕೆ ಎಲ್ಲವನ್ನು ಸವಿಸ್ತಾರ ತಿಳುಹಿಸುವದಾಗಬೇಕು. ಇದೋ ಇದು ನಮ್ಮ ಅಭಯ ವಚನವೆಂದು ಸಮಾಧಾನಪಡಿಸಿ ಕುಳ್ಳಿರಿಸಿಕೊಂಡು ನಿರ್ಮಲ ವಚನಗಳಿಂದ ಬ್ರಾಹ್ಮಣರ ಮನಸ್ಸನ್ನು ಪರಿವರ್ತಿಸಿದರು.

ಅಷ್ಟರಲ್ಲಿ ಬ್ರಾಹ್ಮಣರ ಮುಂದಾಳು ಮುಂದಾಗಿ ನಾಚಿಕೆಯಿಂದ ತಲೆ ತಗ್ಗಿಸಿ ಕೈ ಕಟ್ಟಿ ನಿಂತುಕೊಂಡು ಗುರುದೇವಾ ಕುಟಿಲ ನೀತಿಯನ್ನು ಅನು ಸರಿಸಿ ಅವಿವೇಕಿತನದ ಕಾರಸ್ಥಾನವೆಸಗಬಯಸಿ ಬಂದದ್ದೇ ನಮಗೀ ಪ್ರಸಂಗ ತಂದದ್ದು ಅದನ್ನು ಮತ್ತೆ ಮತ್ತೆ ವಿವರಿಸಲು ನಾಚಿಕೆಯಾಗುತ್ತದೆ. ತಿರುಗಿ

ತಿಳಿಸುವಲ್ಲಿ ಅರ್ಥವಿಲ್ಲ. ಮೂಗು ಕೊಯ್ದ ಬದ್ದು ಸ್ವಚ್ಛ ನಿಚ್ಚಳ ಕಾಣುವಾಗ ಕನ್ನಡಿಯಲ್ಲಿ ನೋಡಿಕೊಂಡು ನಗೆಗೀಡಾದಂತಾಗಿದೆ ನಮ್ಮ ಪಾಡು. ಅಜ್ಞಾನ ದಿಂದ ಅವಿವೇಕಿಗಳಾಗಿ ಅಪರಾಧಗೈದವರು ನಾವು. ಸುಜ್ಞಾನದ ಬೆಳಕನ್ನಿತ್ತು ಪೊರೆಯಬೇಕಯ್ಯಾ ತಂದೆ ತಾವು ಎಂದು ಪರಿಪರಿಯ ಪ್ರಾರ್ಥನೆಯ ಗೈಯುವವ ರಾದರು.

ಆಗ ಗುರು ಬಸವರಾಜರು ಅಯ್ಯ ಭೂಸುರ ವರ್ಗವೆ ಬೆದರ ಬೇಡಿರಿ. ಎಲ್ಲವೂ ಶಿವ ಮಹಾದೇವನ ಇಚ್ಛೆ. ನಿಮ್ಮ ಮನದ ಸಂಶಯ ಅದೇನಿದೆಯೋ ಸ್ವಚ್ಛವಾಗಿ ತಿಳುಹಿಸಿದರೆ ಯೋಗ್ಯ ಸಲಹೆ ಸೂಚನೆಗಳನ್ನಿತ್ತು ನಿಮಗಿರುವ ಸಂಶಯವನ್ನು ದೂರೀಕರಿಸಲು ಸಾಧ್ಯವಿದೆ, ಕೇಳಿರಯ್ಯಾ ಎಂದು ಅಪ್ಪಣೆ ಯನ್ನು ನೀಡಿದರು.

ಬಳಿಕ ಬ್ರಾಹ್ಮಣರು ಎಲ್ಲಿಲ್ಲದ ಧೈರ್ಯ ತಂದುಕೊಂಡು ತಮಗಿರುವ ಮತಗಳ ತಾರತಮ್ಯ, ಹರಮತ, ಹರಿಮತ ಮತ್ತಿತರ ಮತಗಳ ಬಗ್ಗೆ ಹಾಗೂ ಹಲವಾರು ಪುರಾಣ ಪುಣ್ಯ ಕಥೆಗಳ ಬಗ್ಗೆ ಶಾಸ್ತ್ರವೇದ ಆಗಮಗಳ ಪರಿಚಯ ಅಂತೂ ತಮಗಿರುವ ಪ್ರತಿಯೊಂದು ಸಂಶಯಾಸ್ಪದ ವಿಷಯಗಳ ಪರಿಶೀಲನೆಯಾಗಬೇಕೆಂದೂ ಅವುಗಳನ್ನು ಸೂಕ್ಷ್ಮ ಚರ್ಚೆಯಲ್ಲಿ ಉದಾಹರಣೆಯೊಡನೆ ತಿಳುಹಿಸಬೇಕೆಂದೂ ಕೇಳಿಕೊಳ್ಳುವವರಾದರು. ಅದಕ್ಕೆ ಗುರುಬಸವರಾಜರು ತಮಗಿರುವ ಸಂಶಯವೇನಿದ್ದರೂ ಕೇಳಬಹುದೆಂದು ಅಪ್ಪಣೆ ಮಾಡಿದರು.

ಆಗ ಒಬ್ಬ ಬ್ರಾಹ್ಮಣನು ಕರಜೋಡಿಸುತ್ತ ಗುರುದೇವಾ ತಾವು ಹಾಗೂ ತಮ್ಮ ಮತದ ಅನೇಕ ಹಿರಿಯ ಶರಣರು, ಸತ್ಪುರುಷರು, ಶೂದ್ರಾದಿ ಹೀನ ಕುಲಜರಿಗೆ ಕೊಡುವ ಬೆಲೆಯನ್ನು ನಮ್ಮಂಥ ಶ್ರೇಷ್ಠ ಕುಲಜ ಬ್ರಾಹ್ಮಣ ರಿಗೆ ಏಕೆ ಕೊಡುವದಿಲ್ಲಾ ಎಂದು ಕೇಳಿದನು.

ಬಳಿಕ ಮತ್ತೊರ್ವ ಬ್ರಾಹ್ಮಣನು ಗುರುವರಾ ಸರಿಯಾದ ಸಮರ್ಪಕ ಉದಾಹರಣೆಯೊಡನೆ ನಮ್ಮ ಸಂಶಯ ನಿವಾರಿಸುವ ಕೃಪೆಯಾಗಬೇಕೆಂದನು.

ಅದರಂತೆ ಇನ್ನೊಬ್ಬನು ಶಿವನ ಲೀಲಾವಿಲಾಸವನ್ನು ತಿಳುಹಿಸುವ ಕೃಪೆಯಾಗಬೇಕಲ್ಲದೆ ಅದರ ಮರ್ಮವನ್ನು ಕಥಾರೂಪದಲ್ಲಿ ವಿವರಿಸುವ ಮನಸ್ಸು ಮಾಡಬೇಕೆಂದು ಬೇಡಿಕೊಂಡನು.

ಆಗ ಗುರುಬಸವರಾಜರು ನಸುನಕ್ಕು ಅಯ್ಯಾ ಭೂಸುರರೆ ಶಿವನ ಮಹಿಮೆ, ಆತನ ಲೀಲಾ ವಿನೋದ ವೈಖರಿಯನ್ನು ವರ್ಣಿಸುವದು ಸಾವಿರ ನಾಲಿಗೆಯುಳ್ಳ ಆದಿಶೇಷನಿಗೆ ಅಸಾಧ್ಯವೆನಿಸಿರುವಾಗ ನಮ್ಮಂಥವ ರಿಂದ ಸಾಧ್ಯವೆ? ಆದರೂ ಆ ಶಿವನ ಕರುಣೆಯಿಂದ ಸಾಧ್ಯವಾದಮಟ್ಟಿಗೆ ತಿಳುಹಿಸಲು ಪ್ರಯತ್ನಮಾಡುತ್ತೇವೆ. ದ್ವಿಜರೇ ಹರನ ಕರುಣೆ ಇರುವತನಕ ಕರಿ ಎದುರಾಗಿ ಇರಿಯ ಬಂದರೂ ಬೆದರದೀ ಮನವೆಂದು ಶರಣಸಾಹಿತಿಗಳನೇಕರು ತಮ್ಮ ವಚನದಲ್ಲಿ ಹಾಡಿ ತಿಳಿಸಿದ ಉದಾಹರಣೆ ಉಂಟು. ಶಿವನ ಕೃಪೆಗೆ ಪಾತ್ರರಾದವರಲ್ಲಿ ಅಂತ್ಯಜ, ಬ್ರಾಹ್ಮಣ ಇನ್ನಿತರ ಯಾವದೇ ಜಾತಿಯವನೆಂಬ ಭೇದಭಾವವಿಲ್ಲ. ಶಿವಕೃಪಾವಲ್ಲರಿಯ ಪುಷ್ಪವೆನಿಸಿ ಅರಳಿದ ಪ್ರತಿಯೋರ್ವ ಮಾನವನು ಶ್ರೇಷ್ಠನು. ಪೂಜ್ಯನು. ನಿಮಗಿನ್ನೂ ಜಾತಿಯ ಮತ್ಸರ ದೂರಾಗಿಲ್ಲ. ಜಾತಿ ಹೆಚ್ಚಳದ ಹುಚ್ಚಿನಲ್ಲಿ ಅಂಧರಾಗಿ ಕಣ್ಣು ಮುಚ್ಚಿದ್ದೀರಿ. ಅಂತೇ ಶಿವಪ್ರೇಮದಿಂದ ದೂರಾಗಿದ್ದೀರಿ ಎಂದು ಶಿವನ ಮಹಿಮೆಯನ್ನು ತಿಳುಹಿಸಹತ್ತಿದರು.

ಅಲ್ಲದೆ ಅಯ್ಯಾ ನೀವು ನಿತ್ಯ ಪಠಣಗೈವ ವೇದ ಶಿವಸ್ವರೂಪವಲ್ಲವೆ? ಬ್ರಹ್ಮಾಧಿಪತಿ ಶಿವನೆಂದು ಗೊತ್ತಿದ್ದರೂ ಆತನ ಊಳಿಗದ ಆಳುಗಳಾದ ದೇವತೆಗಳೆನಿಸಿದ ಹರಿ, ಬ್ರಹ್ಮ, ಇಂದ್ರ, ಚಂದ್ರ, ರವಿ, ಅಷ್ಟದಿಕ್ಪಾಲಕರು ಎಂದು ಸಿಕ್ಕ ಸಿಕ್ಕ ದೇವತೆಗಳನ್ನು ಪೂಜ್ಯದೇವರೆಂದು ಭಜಿಸಿ ಅರ್ಚಿಸಿ ವೇದಕ್ಕೆ ಅಪಚಾರಗೈದವರು ಖಂಡಿತವಾಗಿಯೂ ನೀಚರಾಗುವದುಂಟು.

ಆಗ ಓರ್ವ ಬ್ರಾಹ್ಮಣನು ಎದ್ದು ಕರಜೋಡಿಸಿ ಗುರುದೇವಾ ವೇದದ ಒಂದು ಭಾಗದಿಂದ ಬ್ರಹ್ಮ, ವಿಷ್ಣು, ಇಂದ್ರ, ವಾಯು ಅಗ್ನಿ ಮೊದಲಾದ ದೇವತೆಗಳಲ್ಲಿ ಬ್ರಹ್ಮತ್ವವನ್ನು ಕಾಣಬಹುದು ಎಂದು ಕೇಳಿರುವೆವು. ಅಂದಾಗ ಬ್ರಹ್ಮತ್ವವುಳ್ಳ ದೇವತೆಗಳನ್ನು ಪೂಜಿಸುವ ನಾವು ನೀಚರೆನಿಸುವದೆಂತು ಸಾಧ್ಯ? ಈ ಘನ ವಿಷಯವನ್ನು ಬಿಡಿಸಿ ಹೇಳುವದಾಗಬೇಕೆಂದನು.

ಆಗ ಗುರು ಬಸವರಾಜನು ನಸುನಕ್ಕನಾದರೂ ಹುಸಿಕೋಪದಿಂದ ಭೂಸುರೋತ್ತಮಾ ಜಗತ್ತಿನ ಸ್ಥಿತಿ. ಲಯ, ಉತ್ಪತ್ತಿಗಳಿಗೆ ಶಂಕರನೇ ಅಧಿ ಪತಿಯು. ಅವನ ಅಜ್ಞಾನುವರ್ತಿಗಳಾಗಿ ಉಳಿದ ದೇವತೆಗಳು ಅಂದರೆ

ಬ್ರಹ್ಮ ವಿಷ್ಣು ರುದ್ರರು. ಕ್ರಮಬದ್ಧವಾಗಿ ತಮಗೊಪ್ಪಿಸಿದ ಕರ್ತವ್ಯವೆಂದು ಕಾರ್ಯ ಮಾಡುತ್ತಾರೆ. ಈಶ್ವರನು ತ್ರಿಮೂರ್ತಿಗಳ ಪಿತ, ವಿಶ್ವದ ತಂದೆ. ಆದ್ದರಿಂದ ಇನ್ನುಳಿದ ಯಾವ ದೇವತೆಗಳಿಗೂ ಬ್ರಹ್ಮತ್ವ ದೊರೆಯಲಾರದು. ಈ ವಿಷಯವನ್ನು ಸವಿಸ್ತಾರವಾಗಿ ಕ್ರಮಬದ್ಧವಾಗಿ ತಿಳುವಳಿಕೆಯು ಉತ್ಪತ್ತಿಯಾಗುವಂತೆ ಅರಿಯಬೇಕೆಂಬ ಆಸೆ ನಿಮಗಿದ್ದರೆ ಬ್ರಹ್ಮೋತ್ತರಖಂಡ ಶಿವಪುರಾಣದಲ್ಲಿ ನೋಡಿಕೊಳ್ಳಬಹುದು. ವೇದಗಳಿಂದ ಸಂಪಾದಿಸಿದ ಹಲವು ಶ್ರುತಿಸೂಕ್ತಿಗಳು ಹೇಳುತ್ತವೆ. ಭಕ್ತಿಯಿಂದ ನಿಶ್ಚಲ ನಿರ್ಮಲ ಮನದಿಂದ ಮಹಾದೇವ, ಮುಕ್ಕಣ್ಣಾ, ಮಹೇಶ್ವರಾ ಶಿವನೆ ಹರನೆ ಗಂಗಾಧರನೆ ಎಂದು ಶಿವನ ನಾಮವನ್ನು ನುಡಿವ ಅಂತ್ಯಜ (ಹೊಲೆಯ) ನೊಡನೆ ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳಬೇಕು. ಪ್ರೀತಿಯಿಂದ ಆತನಲ್ಲಿ ಉಣ್ಣಬೇಕು. ಪ್ರೇಮದಿಂದ ವರ್ತಿಸಿ ಸ್ನೇಹ ಸಂಬಂಧ, ಶರೀರ ಸಂಬಂಧ ಬೆಳೆದರೂ ತಪ್ಪಿಲ್ಲ. ಪರಶಿವ ಪರಮಾತ್ಮನು ಭಕ್ತಿಯ ಬೆಂಬಲಿಗನಲ್ಲದೇ ಡಾಂಭಿಕ ಕುಕರ್ಮಿಗಳತ್ತ ಸುಳಿಯಲಾರನು. ಭಕ್ತಿಯೊಂದೇ ಶಿವನೊಲಿಸುವ ಸಾಧನ. ಶಿವನು ಭಕ್ತ ಪ್ರೇಮಿಯಾದ ಕಾರಣ ಮಾದರ ಚನ್ನಯ್ಯನೊಡನೆ ಊಟ ಮಾಡಿದನು. ಬೇಡರ ಕಣ್ಣಪ್ಪನ ಭಾವಿಕ ಪೂಜೆಯಿಂದ ತೃಪ್ತಿಹೊಂದಿದನು. ಚೋಳಿಯಕ್ಕನ ಮಿಕ್ಕ ಪ್ರಸಾದವನ್ನು ಸವಿದು ಸಂತಸಗೊಂಡನು. ಇದರಂತೆ ಇನ್ನು ಅನೇಕ ಶರಣ ಶರಣೆಯರ ಭಕ್ತಿಯ ಸೆಳವಿನಲ್ಲಿ ಸಿಲುಕಿ ಆಳಿಗಿಂತಲೂ ಕೀಳಾಗಿ ದುಡಿದು ಭಕ್ತಪಾಲಕ ಭಕ್ತಪ್ರೇಮಿ ಎಂಬ ಹೆಸರುಳಿಸಿಕೊಂಡಿದ್ದಾನೆ. ಶಿವಭಕ್ತಿಯ ಪ್ರಭಾವ ನಿಮ್ಮಂತಹ ಸಾಮಾನ್ಯ ಮಾನವರಿಗೆ ತಿಳಿಯಲಾರದು. ವಿಶ್ವಪತಿಯಾದ ಶಿವನು ಭಕ್ತರತಿಗೆ, ಅತಿ ಸುಲಭ ನಿಜಭಕ್ತಿಯನ್ನರಿಯದ ಮೂಢರಿಗೆ ಮಾತ್ರ ದುರ್ಲಭನು. ವೀರ ಶಿವಾಗಮಗಳಲ್ಲಿ ತಿಳಿಸಿದಂತೆ ಪರಮ ಪವಿತ್ರ ಆಚರಣೆಯಿಂದ ಲಿಂಗವೆ ಪ್ರಾಣವೆಂದು ತಿಳಿದಿರುವ ಶರಣರೆ ಶಿವನ ನಿಜಸ್ವರೂಪವೆಂದು ಅವರೊಡನೆ ಪ್ರೀತಿ ವಿಶ್ವಾಸಗಳಿಂದಲೂ ನಿರ್ವಂಚನೆ ನಿರ್ವಿಕಾರ ಮನೋಧರ್ಮದಿಂದಲೂ ನಡೆದುಕೊಂಡು ಸತ್ಯ ಧರ್ಮ ಅಹಿಂಸೆ ಪರಮತ ಪ್ರೀತಿ ಹಾಗು ಜನಾನುರಾಗ ಗಳಿಸಿ ಶಿವನ ಮೆಚ್ಚಿಗೆ ಪಡೆದು ಶಿವಮತದವರೊಡನೆ ಶಿವಧರ್ಮಾಚರಣೆಯಲ್ಲಿ ಶಿವತತ್ವ ಶಿವ ಧರ್ಮಗಳೇ ನಮ್ಮ ಉದ್ಧಾರದ ಮಾರ್ಗವೆಂದು ತಿಳಿದು ನಡೆದುಕೊಂಡಾಗ

ಶಿವನು ಸುಪ್ರಸನ್ನನಾಗುವದರಲ್ಲಿ ಸಂದೇಹವಿಲ್ಲವೆಂದು ಗುರುಬಸವರಾಜರು ಕೊನೆಯದಾಗಿ ಅಪ್ಪಣೆಯನ್ನು ಅನುಗ್ರಹಿಸಿ ಅಂದಿನ ಚರ್ಚೆಯನ್ನು ಮುಕ್ತಾಯಗೊಳಿಸಿದರು.

ಬಳಿಕ ಗುರುಗಳು ಆಲೋಚಿಸಿ ಬ್ರಾಹ್ಮಣರನು ಉದ್ದೇಶಿಸಿ ಅಯ್ಯಾ ನಿಮಗಿನ್ನು ಶಿವನ ಮಹಿಮೆ ಸಂಪೂರ್ಣ ತಿಳಿಯದೆಂದು ನಮಗೆ ಅರ್ಥವಾಗುತ್ತಿದೆ. ಕಾರಣ ನಾಳಿನಿಂದ ಶಿವನು ಸುಲಭವಾಗಿ ವಲಿದು ವಶನಾದ ಬಗ್ಗೆ ಹಲವು ರಾಜ ಮಹಾರಾಜರು, ಶರಣ ಶರಣೆಯರು, ಇನ್ನು ಅನೇಕ ಅಂಥ ಶ್ರದ್ಧಾಭಕ್ತರ ಕಥೆಗಳನ್ನು ತಿಳಿಸುತ್ತೇವೆ ಎಂದು ಅವರೆಲ್ಲರನ್ನು ಮಠದಿಂದ ಬೀಳ್ಕೊಟ್ಟರು. ಅಂದಿನ ಸಭೆ ಮುಕ್ತಾಯವಾಯಿತು

....

೪ ನೇ ಸಂಧಿ

ಶ್ರೀಗುರುಬಸವರಾಜರಿಂದ ಶಿವಕಥಾಗೋಷ್ಠಿ

ಗುರು ಬಸವರಾಜರು ಮರುದಿನ ಬೆಳಗಿನ ಜಾವದಲ್ಲಿ ನಿತ್ಯ ನೇಮಗಳನ್ನು ತೀರಿಸಿಕೊಂಡು ಶಿವಗಣವರರೊಡನೆ ಶಿವನ ಲೀಲಾ ವಿಲಾಸವನ್ನು ಕುರಿತು ಆನಂದದಿಂದ ಕಾಲ ಕಳೆಯುತ್ತಿರಲು ಬ್ರಾಹ್ಮಣ ಸಮೂಹವು ಗುರುಗಳ ಅಪ್ಪಣೆಯಂತೆ ಶಿವಭಕ್ತರ ಹಾಗು ಶಿವಶರಣರ ಕಥಾ ಶ್ರವಣದಿಂದ ಪುನೀತರಾಗ ಬಯಸಿ ಮಠಕ್ಕೆ ಬಂದು ಗುರುಬಸವರಾಜರಿಗೆ ಭಕ್ತಿ ಭಾವದಿಂದ ವಂದಿಸಿ ಕುಳಿತುಕೊಂಡರು.

ಆಗ ಗುರುವರ್ಯರು ಭೂಸುರೋತ್ತಮರನ್ನು ಉದ್ದೇಶಿಸಿ, ಅಯ್ಯಾ ಹಲವಾರು ಕಾರಣಗಳಿಂದೇನು ಪ್ರಯೋಜನವಯ್ಯಾ, ಮಹಾ ಮುನಿಗಳೆಂದು ಪ್ರಸಿದ್ಧರಾದ ದಧೀಚಿ, ಗೌತಮಾದಿಗಳು ನಿಮ್ಮ ವಂಶ ಪರಂಪರಾಗತವಾಗಿ ಶಿವಭಕ್ತಿ ನಿಮ್ಮಲ್ಲಿ ಹುಟ್ಟದಿರಲಿ, ನರಕ ವಾಸವು ನಿಮಗೆ ತಪ್ಪದಿರಲಿ ಎಂದು ಶಾಪಾಗ್ನಿಯನ್ನೇ ಅನುಗ್ರಹಿಸಿರುವಾಗ ಆ ಮುನಿವರರ ಶಾಪಾಗ್ನಿಯಲ್ಲಿ

ಬೆಂದು ಹೋಗುವದೇ ನಿಮಗಂಟಿಕೊಂಡ ಪೀಡೆ. ಅಂದಾಗ ಈಗೂಲ ನಿಮಗೆ ಶಿವಭಕ್ತಿ, ಹುಟ್ಟಲಾರದು. ಆ ಮಂಗಲ ಮೂರ್ತಿ ಶಿವನ ಕೃಪೆ ದೊರೆಯ ಲಾರದು ಎಂದು ನಿಶ್ಚಳವಾದ ಉತ್ತರ ನೀಡಿದರು.

ಆದರೂ ಬ್ರಾಹ್ಮಣರು, ಗುರುದೇವಾ ಶಂಕರನ ಪುಣ್ಯ ಸ್ವರೂಪದ ತಮ್ಮ ವಚನಾಮೃತ ಕೇಳಿದ ನಾವು ಪೂರ್ವಕರ್ಮದಿಂದ ಸ್ವಲ್ಪಮಟ್ಟಿಗಾದರು ಕಡೆಗಾಗಿಲ್ಲವೆ ? ಹಾಗು ಶಿವಭಕ್ತ ಸಂಪನ್ನರ ಚರಿತ್ರೆಗಳನ್ನು ಕೇಳುವಷ್ಟು ಯೋಗ್ಯತೆಯೂ ನಮ್ಮಲ್ಲಿ ಬಂದಿಲ್ಲವೆ ಎಂದು ಅಂಗಲಾಚಿ ಬೇಡಿಕೊಳ್ಳಹತ್ತಿದರು.

ಬಳಿಕ ಕರುಣಾಕರ ಮೂರ್ತಿ ಎನಿಸಿದ ಗುರುಬಸವರಾಜರು ಆ ಬ್ರಾಹ್ಮಣರ ಮೇಲೆ ಕರುಣೆದೋರಿ ಪರಶಿವನು ತನ್ನ ಭಕ್ತರಿಗೆ ಸುಲಭವಾಗಿ ದೊರೆಯುವ ಮಾರ್ಗವನ್ನು ಕಂಡುಕೊಂಡ ಭಕ್ತ ಶಿರೋಮಣಿಗಳ ಚರಿತೆ ಯನ್ನು ವಿವರಿಸಹತ್ತಿದರು.

....

— ೧ ನೇ ಕಥೆ —

ಚಂದ್ರಾವತಿ ನಗರದಲ್ಲಿ ಚಂದ್ರಚೂಡನೆಂಬ ರಾಜನಿದ್ದನು ಆತನ ಮಂತ್ರಿಯ ಮಕ್ಕಳು ಮದಾಂಧರು ದುರಾಚಾರಿಗಳು ಯೌವನ ಮದದಲ್ಲಿ ಮದೋನ್ಮತ್ತರಾಗಿ ಅನೇಕ ಹೀನ ಕಾರ್ಯಗಳನ್ನು ಮಾಡುತ್ತಿದ್ದರು. ತಂದೆಯ ಮಾತನ್ನಂತೂ ಒಂದು ಸಾರೆಯು ಕೇಳುತ್ತಿರಲಿಲ್ಲ. ಇದೆಲ್ಲವನ್ನು ಅರಿತ ವೇಲೆ ಧರ್ಮ ಪ್ರಿಯನಾದ ರಾಜನು ಸಚಿವ ಪುತ್ರರೀರ್ವರನ್ನು ಹಿಡಿದು ತರಿಸಿ ಸರಿಯಾದ ಶಿಕ್ಷೆ ಮಾಡಬೇಕೆಂದು ಸೇವಕರಿಗೆ ಆಜ್ಞೆಗೈದನು. ಅರಸರ ಆಜ್ಞೆಯನ್ನು ಅರಿತ ಮಂತ್ರಿ ಕುಮಾರರು ಚಂದ್ರಾವತಿ ಪಟ್ಟಣವನ್ನೇ ಬಿಟ್ಟು ಓಡಿ ಹೋದರು. ಊರು ಊರು ದೇಶ ಕೋಶಗಳನ್ನು ಸುತ್ತಿ ಅನ್ನಕ್ಕೆ ಗತಿಯಿಲ್ಲದೆ ಕಂಗಾಲ ಸ್ಥಿತಿಯಲ್ಲಿ ಮಾರ್ಗ ಕ್ರಮಣದಲ್ಲಿರಲು ಆ ದಾರಿಯಲ್ಲಿ ಓರ್ವ ಬ್ರಾಹ್ಮಣನು ಹೆಗಲ ಮೇಲೆ ಗಂಟು ಹೊತ್ತುಕೊಂಡು ಸಾಗಿರುವದನ್ನು ಕಂಡು, ಅದು ಬುತ್ತಿಯ ಗಂಟು ಎಂದು ಭಾವಿಸಿ ಹಸಿವೆಯ ಬಾಧೆಯನ್ನು ತಾಳಲಾರದೆ ಆ ಬ್ರಾಹ್ಮಣನನ್ನು ಕೊಂದು ಗಂಟು ತಕ್ಕೊಂಡು ಮುಂದೆ

ಒಂದು ಸರೋವರದ ಬಳಿಗೆ ಬಂದು ಬಿಚ್ಚಿ ನೋಡಲು ಅದು ಸುಣ್ಣದಿಂದ ಕಟ್ಟಿದ ಗಂಟು ಎಂದು ಕಂಡು ತಮ್ಮ ಹಣೆಬರಹವನ್ನು ಹಳಿಯುತ್ತ ಅದನ್ನು ಅಲ್ಲಿಯೇ ಚಲ್ಲಿ ಮುಂದೆ ಕಾಣುವ ಪಟ್ಟಣವನ್ನು ಹೊಕ್ಕು ಓರ್ವ ಶ್ರೀಮಂತನ ಮನೆಗೆ ಕನ್ನವಿಕ್ಕಿ ರಾಜಭಟರ ಕೈಗೆ ಸಿಕ್ಕುಬಿದ್ದರು. ರಾಜನು ತಕ್ಕ ಶಾಸನವೆಂದು ಅವರೀರ್ವರ ತಲೆ ಕಡಿಸಿದನು.

ಬಳಿಕ ಯಮಭಟರು ಅವರನ್ನು ಎಳೆದೊಯ್ಯುವಾಗ ಶಿವದೂತರು ಪ್ರತಿಭಟಿಸಿ ಈರ್ವರನ್ನು ಕೈಲಾಸಕ್ಕೆ ಒಯ್ಯತೊಡಗಿದರು. ಪಾಪಿಗಳಾದ ಇಂಥವರ ಬಗ್ಗೆ ಶಿವನು ಕರುಣೆತೋರಿದ ಕಾರಣವೇನೆಂದರೆ ಇವರು ಬ್ರಾಹ್ಮಣನಿಂದ ಅಪಹರಿಸಿ ಬಳಿಕ ದಾರಿಯಲ್ಲಿ ಚಲ್ಲಿ ಹೋದ ಸುಣ್ಣವನ್ನು ಮತ್ತೋರ್ವ ದಾರಿಹೋಕ ಪುಣ್ಯಾತ್ಮರು ಒಯ್ದು ಶಿವಾಲಯದ ಗೋಡೆಗಳಿಗೆ ಬಳಿದು (ಸಾರಿಸಿ) ಶಿವನ ಪ್ರೀತಿಗೆ ಪಾತ್ರರಾದರು. ಹೀಗೆ ದಾರಿಯಲ್ಲಿ ಚಲ್ಲಿ ಹೋದ ಅಲ್ಪ ಪುಣ್ಯದ ಫಲ ವಿಶೇಷಕ್ಕಾಗಿ ಶಂಕರನಿಗೆ ಅವರೀರ್ವರು ಪಾಪಿಗಳು ಸೇವೆ ಸಲ್ಲಿಸಿದಂತಾಗಿ ಆ ಸುಣ್ಣ ಬಳಿದ ಪುಣ್ಯದಲ್ಲಿ ಭಾಗ ದೊರೆತು ಶಿವನ ಅಪ್ಪಣೆಯಂತೆ ಶಿವದೂತರು ಯಮನಾಳುಗಳಿಗೆ ತಿಳುಹಿಸಿ ಮಂತ್ರಿ ಪುತ್ರರನ್ನು ಕೈಲಾಸಕ್ಕೆ ಒಯ್ದರು. ಆದ್ದರಿಂದ ಮೂಢ ಮನುಜರೇ ಶಿವನ ಮಹಿಮೆ ಎಂಬುದು ಅಗಾಧ, ಅಗಮ್ಯ ಎಂದು ತಿಳಿದು ವರ್ತಿಸುವವರಾಗಿರಿ ಎಂದು ಹೇಳಿದರು.

....

— ೨ ನೇ ಕಥೆ —

ಆ ಮೇಲೆ ಗುರು ಬಸವರಾಜರು ಬ್ರಾಹ್ಮಣರನ್ನು ಉದ್ದೇಶಿಸಿ, ಅಯ್ಯಾ ಭೂಸುರರೇ ನಿಮ್ಮ ಸಂಶಯ ನಿವಾರಣೆಗಾಗಿ ಇನ್ನೊಂದು ಕಥೆಯನ್ನು ಹೇಳುತ್ತೇವೆ ಕೇಳಿರಿ ಎಂದು ಶಿವಶಂಕರನು ಅತೀ ಸುಲಭ ರೀತಿಯಿಂದ ಒಲಿದ ಸತ್ಯಮೂರ್ತಿಯ ಕಥೆಯನ್ನು ಹೇಳಹತ್ತಿದರು.

ಹಿಂದಕ್ಕೆ ಮಾಯಾವಿ ಪುರದ ಅರಸು ಸತ್ಯಮೂರ್ತಿ ಎಂಬವನು ಸಾಧು ಸಜ್ಜನ, ಸತ್ಪುರುಷ, ಮುನಿಶ್ರೇಷ್ಠರನ್ನು ಕಂಡರೆ ಅತೀ ಆದರದಿಂದಲೂ,

ಅಭಿಮಾನದಿಂದಲೂ, ಭಕ್ತಿ ವಿಶ್ವಾಸಗಳಿಂದಲೂ ಆದರಿಸಿ ಉಪಚಾರಗೈಯು ತ್ತಿದ್ದನು. ಅವನಂತೆ ಆತನ ಮಗ ಭೀಮರಾಜನಾದರೂ ಅಷ್ಟೆ. ಹೀಗಿರಲು ಒಂದು ದಿವಸ ಮಾಯಾವಿ ಪುರದರಸನ ಅರಮನೆಗೆ ಗೌತಮರು ತಾವಾಗಿಯೇ ಚಿತ್ತೈಸಿದರು. ಆಗ ಅರಸನು ಮುನೀಂದ್ರನ ಆಗಮನದಿಂದ ಅತ್ಯಾನಂದ ಗೊಂಡು ಅವರನ್ನು ಸಕಲ ಮರ್ಯಾದೆಗಳಿಂದ ಸ್ವಾಗತಿಸಿ ಅರಮನೆಯಲ್ಲಿ ಕರೆದುಕೊಂಡು ಹೋಗಿ ತಂದೆ–ಮಗ ಈರ್ವರೂ ಪರಿಪರಿಯ ಉಪಚಾರ ಗಳಿಂದ ಉಪಚರಿಸಿ ಸಂತೋಷಗೊಳಿಸಿದರು.

ಬಳಿಕ ಅರಸುಕುಮಾರ ಭೀಮರಾಜನು ಮುನಿಗಳ ಸನ್ನಿಧಿಯಲ್ಲಿ ಕೈಜೋಡಿಸಿ ಗುರುವರಾ ಮಹಾದೇವನು ತನ್ನ ಭಕ್ತರಿಗೆ ಸುಲಭದಿಂದ ಮೋಕ್ಷವನ್ನು ಕರುಣಿಸುತ್ತಾನೆ ಎಂದು ವೇದಗಳು ಹೇಳುತ್ತವೆ. ಶಿವನ ಪ್ರೀತಿ ಸಂಪಾದನೆಗೆ ಹಾಗು ಆತನನ್ನು ಸೇವಿಸುವ ಪದ್ಧತಿಗೆ ಮತ್ತು ಮೋಕ್ಷ ದೊರೆಯುವ ಮಾರ್ಗ ತೋರಿಸುವಂತಹ ದೃಷ್ಟಾಂತಗಳು ತಮಗೆ ಗೊತ್ತಿರಲೇಬೇಕು. ಅವುಗಳನ್ನು ನಮಗಷ್ಟು ತಿಳಿಸಬೇಕೆಂದು ಗೌತಮರಲ್ಲಿ ಬಿನ್ನೈಸಿಕೊಳ್ಳಹತ್ತಿದನು.

ಆಗ ಗೌತಮ ಮಹರ್ಷಿಗಳು ಅಯ್ಯಾ ವಿಪ್ರನೇ ಮಾಧವ ಎಂಬ ಅರಸನು ಪಾಂಚಾಲ ಪುರವನ್ನು ಆಳುತ್ತಿದ್ದನು. ಆತನ ದೇಶವು ಸುಭಿಕ್ಷೆ ಯಿಂದ ಸಂತೋಷದಲ್ಲಿ ಲೋಲಾಡುತ್ತಿತ್ತು. ಮಹಾ ನೀತಿವಂತನಾದ, ಧರ್ಮವಂತನಾದ ಮಾಧವನ ದುರ್ದೈವವೆಂದರೆ ಅವನ ಮಗಳೇ ಕುಲ ಗೌರವವನ್ನು ಕಾಲಿನಿಂದ ಒದೆದ ಹೀನಗುಣದವಳಾಗಿದ್ದಳು. ಉಪಾಯು ಗಾಣದೇ ಅರಸನು ಮಗಳ ಅನೀತಿಯನ್ನು ಮರೆಮಾಡಿ ಹಸ್ತಿನಾಪುರದ ಅರಸನಿಗೆ ಮದುವೆಮಾಡಿ ಕೊಟ್ಟನು. ಮಾಧವರಾಯನ ಮಗಳು ಹೆಸರಿಗೆ ತಕ್ಕಂತೆ ಸುಂದರಿಯಾಗಿದ್ದಳು. ಅವಳ ರೂಪ ಗುಣ ಗಾಂಭೀರ್ಯಗಳೊಡನೆ ಅತಿ ಕಾಮುಕತನವು ವ್ಯಾಪ್ತಿ ಅವಳ ಇಡಿ ಜೀವನವೇ ಕಾಮಾಂಧಮಯ ವಾಗಿತ್ತು. ಹಿಂಗದ ಕಾಮತೃಪ್ತಿಗಾಗಿ ಹಲವಾರು ಜನ ವಿಟಪುರುಷರನ್ನು ಬೆರೆತು ರತಿಸುಖ ಹೊಂದಿದಾಗಲೇ ಅವಳ ಮನಸ್ಸಿಗೆ ಸಮಾಧಾನ. ಗಂಡ ನಿಂದ ತೃಪ್ತಿಸಿಗದ ಸುಂದರಿಯು ತನ್ನ ಮನದಾಸೆಯಂತೆ ವಿಟಪುರುಷನನ್ನು

ಆರಿಸಿಕೊಂಡು, ಗಂಡಸಿಗೆ ವಿಷಕೊಟ್ಟು ಕೊಂದು ಕುಲ-ಧರ್ಮವನ್ನು ಗಾಳಿಗೆ ತೂರಿ, ರೀತಿ ನೀತಿಗಳನ್ನು ಮೀರಿ ಜಾರೆಯಾಗಿ ವಿಟನೊಡಗೂಡಿ ತವರೂರಿಗೆ ಹೊರಟುಹೋದಳು.

ಆದರೆ ನೀತಿವಂತನೂ ಧರ್ಮವಂತನೂ ಎನಿಸಿದ ತಂದೆ ಮಾಧವನು ಅವಳನ್ನೂ ಅವಳ ವಿಟನನ್ನೂ ಪುರದಿಂದ ಹೊರಗೆ ಹಾಕಿಸಿದನು. ಆಗ ತುಂಬ ಗರ್ಭಿಣಿಯಾದ ಆ ಜಾರಹೆಣ್ಣು ಬೇರೊಂದು ಊರಲ್ಲಿ ಗರ್ಭಪತನ ಗೊಳಿಸಿಕೊಂಡು ಅತಿ ಕಾಮುಕತನದ ಪ್ರಭಾವಕ್ಕೊಳಗಾಗಿ ಮೊದಲಿದ್ದ ವಿಟಪುರುಷನಿಗೂ ವಿಷವ ಉಣಿಸಿ, ಭಾಸ ಎಂಬ ಮತ್ತೊಬ್ಬ ಪುರುಷನನ್ನು ಕೂಡಿಕೊಂಡಳು. ಈ ವಿಷಯ ಆ ಪುರದ ಅರಸನಿಗೆ ಗೊತ್ತಾಗಿ ಅವಳ ಮೂಗು ಕೊಯ್ಯಿಸಿ ಪುರದಿಂದ ಹೊರದಬ್ಬಲು ಭಟರಿಗೆ ಆಜ್ಞೆಗೈದನು. ಭಾಸನು ತನ್ನ ದೇಹದಾಹ ತೀರಿದ ಬಳಿಕ ಕೈಕೊಡುವ ವಿಚಾರದಲ್ಲಿರುವಾಗಲ್ಲೇ ಸುಂದರಿಗೆ ಭಾಸನ ಸಂಗವು ಸಾಕೆನಿಸಿ ಅವನಿಗೂ ವಿಷಕೊಟ್ಟು ದೊಡ್ಡದೊಂದು ಕಲ್ಲಿನಿಂದ ಅವನ ತಲೆ ಜಜ್ಜಿ ಕೊಂದು ಅಲ್ಲಿಂದ ಪಾರಾದಳು. ಬಳಿಕ ಅವಳ ವಿಕಾರ ಸೌಂದರ್ಯಕ್ಕೆ ತಕ್ಕಂತೆ ಮೊಂಡಗೈ ಒಂಟಗಾಲಿನ ಪುರುಷ ಸಿಂಹನೆಂಬುವನು ಜೊತೆಯಾದನು. ಒಂದು ದಿವಸ ಮೊಂಡನು ಯಥೇಚ್ಛವಾಗಿ ಕುಡಿದು ಬಂದು ಅಮಲಿನ ಆವೇಶದಲ್ಲಿ ಸುಂದರಿಯನ್ನು ಕರೆದು ಅವಳ ಸೂಕ್ಷ್ಮ ಶರೀರದ ಮೇಲೆ ಬಲವಾಗಿ ಒದ್ದು ಬಿಟ್ಟನು. ಅದರಿಂದ ಸುಂದರಿಯ ಪ್ರಾಣಪಕ್ಷಿಯು ಹಾರಿಹೋಯಿತು.

ಯಮನಾಳುಗಳು ಬಂದು ಅವಳನ್ನು ಒಯ್ದು ನರಕ ಬಾಧೆಯಿಂದ ಹಿಂಬಸಹತ್ತಿದರು. ಅವಳ ಪಾಪದ ಪ್ರಕರಣವನ್ನು ಕೇಳಿದ ಯಮಧರ್ಮನಂತೂ ಸಿಟ್ಟು ಬೆಂಕಿಯಲ್ಲಿ ಕುದಿಯುತ್ತಿದ್ದನು. ಹೀಗಿರುವಾಗ ಶಿವದೂತರು ಬಂದು ಶಿವನ ಸಂದೇಶವನ್ನು ಯಮರಾಯನಿಗೆ ತೋರಿಸಿ, ಪಾಪಿಯಾದ ಸುಂದರಿಯನ್ನು ಶಿವನ ಸನ್ನಿಧಾನಕ್ಕೆ ಒಯ್ದರು.

ಆಗ ಭೀಮರಾಜನು ಕರಜೋಡಿಸಿ, ಗುರುದೇವಾ ಅಷ್ಟೊಂದು ಕ್ರೂರ ಕರ್ಮಿಯಾದ ಅವಳಿಗೆ ಕೈಲಾಸಪದವಿ ದೊರೆತದ್ದು ಹೇಗೆ ಎಂದು ಕೇಳಿದನು.

ಅದಕ್ಕೆ ಗೌತಮರು ಅಯ್ಯಾ ಆ ಸ್ತ್ರೀಯಳು ವಿಟಪುರುಷನನ್ನು ಕೊಲ್ಲಲು ಉಪಯೋಗಿಸಿದ ಕಲ್ಲನ್ನು (ಶಿಲೆಯನ್ನು) ಯಾರೋ ಪುಣ್ಯವಂತರು ಒಯ್ದು ಶಿವದೇವಾಲಯದ ಗೋಡೆಗೆ ಹಾಕಿದರು. ಅಂತೇ ಶಿವನು ಅವಳನ್ನು ಕೈಲಾಸಕ್ಕೆ ತರಿಸಿ ರುದ್ರಕನ್ನಿಕೆಯರ ಸಾಲಿನಲ್ಲಿ ಸೇರಿಸಿದನು. ಶಿವನ ಮಹಿಮೆ ಹೀಗಿರಲು 'ನಿಜ ಭಕ್ತರಿಗೆ ಒಲಿದು ಮೋಕ್ಷಪದವಿಯನ್ನು ನೀಡಲಾರನೆ ಎಂದು ನಸುನಕ್ಕು ನುಡಿದರು.

……………

— ೩ ನೇ ಕಥೆ —

ಗುರುಬಸವರಾಜರು ಪುನಃ ಬ್ರಾಹ್ಮಣ ಸಮೂಹಕ್ಕೆ ಕಥೆಯನ್ನು ಹೇಳಹತ್ತಿದರು.

ಒಂದು ದಿನ ಸೌರಾಷ್ಟ್ರದ ಅರಸು ವಿಶುದ್ಧನು ಬೇಟೆಯ ಅಪೇಕ್ಷೆಯಿಂದ ಅರಣ್ಯದಲ್ಲಿ ಮೃಗಗಳ ಶೋಧ ಮಾಡುತ್ತ ಕಾಡಾರಣ್ಯವನ್ನು ಸೇರಿದನು. ಅಷ್ಟರಲ್ಲಿ ಒಂದು ಹೆಬ್ಬುಲಿಯು ಧಾವಿಸಿ ಬಂದು ಅವನ ಮೇಲೆ ಬಿದ್ದು ಕೊಂದು ತನ್ನ ರಕ್ತದಾಹದಿಂದ ತೃಪ್ತಿ ಹೊಂದಿ ಹೋಯಿತು. ಅರಸನ ಹೆಂಡತಿ ನಿರ್ಮಲಮತಿ ಮಹಾಪತಿವೃತೆ ಸುಗುಣೆ ಆಗ ಗರ್ಭಿಣೆಯಿದ್ದಳು

ಗಂಡನ ಮರಣದಿಂದ ಮಹಾರಾಣಿಯು ಧೃತಿಗೆಡದೆ ಧರ್ಮದಿಂದ ರಾಜ್ಯಪಾಲನೆ ಸಾಗಲೇಬೇಕೆಂದು ತನ್ನ ಆಪ್ತ ಸಚಿವರಾದಿಯಾಗಿ ಯಾವತ್ತು ಬಳಗವನ್ನು ಕೂಡಿಸಿ ಅವರೆಲ್ಲರ ಸಮಕ್ಷಮದಲ್ಲಿ ಕುಶಲಮತಿ ಮಂತ್ರಿವರ್ಯನು ಪಾಲಿಗೆ ರಾಜ್ಯದ ಪಾಲನೆಯ ಭಾರ ಒಪ್ಪಿಸಿ ತಾನು ನಿಶ್ಚಿಂತೆಯಿಂದಲೂ, ನಿಷ್ಠೆಯಿಂದ ಶಿವನತ್ತ ಮನಸ್ಸು ತಿರುಗಿಸಿ ಲಿಂಗಪೂಜಾದಿ ಕಾರ್ಯಗಳಲ್ಲಿ ನಿರತಳಾದಳು. ಆದರೆ ಮುಂದೆ ಕೆಲವು ಕಾಲ ಗತಿಸಲು ಸಚಿವನ ಮೇಲೆ ಸೇಡು ಸಾಧಿಸುತ್ತ ಹೊಂಚು ಹಾಕಿದ ಮದಾಂಧನೊಬ್ಬನು ಮಂತ್ರಿಯ ಕೊಲೆಗೈದು ತನ್ನ ತೀರಿಸಿಕೊಂಡು ಫರಾರಿಯಾದನು.

ಆಗ ಮಹಾರಾಣಿಗೆ ಭಯವು ಆವರಿಸಿ ಈ ಪಟ್ಟಣವನ್ನೆ ತೊರೆದು ಹೋಗುವದು ಒಳಿತು ಎಂದು ಭಾವಿಸಿ ತನ್ನ ತಂದೆಯ ಊರಿಗೆ ಬಂದು ಗಂಡು ಮಗುವಿಗೆ ಜನ್ಮಕೊಟ್ಟ ತಾಯಿ ಮಗ ಈರ್ವರು ಶಿವಧ್ಯಾನ ಶಿವಭಕ್ತಿ ಲಿಂಗಪೂಜಾದಿ ಕಾರ್ಯಗಳಲ್ಲಿ ಶಿವಶಂಕರನನ್ನೇ ನಂಬಿ ಸುಖದಿಂದ ಕಾಲ ಕಳೆಯ ಹತ್ತಿದರು. ರಾಣಿಯಂತೂ ಸಂಪೂರ್ಣ ಯೋಗಿನಿಯ ಮಾರ್ಗವನ್ನೆ ಅನುಸರಿಸಹತ್ತಿದಳು. ತಾಯಿಯ ಈ ವೈರಾಗ್ಯ ಲಿಂಗನಿಷ್ಠೆ ಮಗನಿಗೆ ಅಚ್ಚರಿಯನ್ನುಂಟು ಮಾಡಿತು. ಸೇವಕಿಯರನ್ನು ಕೇಳಲು ಸರ್ವ ವೃತ್ತಾಂತ ತಿಳಿದ ಬಳಿಕ ತಾಯಿಯ ಬಳಿಗೆ ಬಂದು ಅಮ್ಮಾ ನನ್ನ ಪಿತನಾರು ಆತನಿರುವ ತಾವು ತಿಳುಹಿಸುವೆಯಾ ಎಂದು ಕೇಳಹತ್ತಿದನು.

ಆಗ ನಿರ್ಮಲಮತಿಗೆ ಏನು ಹೇಳಬೇಕೊ ತಿಳಿಯದಾಗಿ ಎಲ್ಲವೂ ಶಿವನಿಗೆ ಗೊತ್ತು. ಕಂದಾ ಎಂದು ಶಿವನಲ್ಲಿ ಮೊರೆಯಿಟ್ಟು ಪ್ರಾರ್ಥಿಸಲು ಕರುಣಾಳು ಶಿವನು ಇಂದ್ರನನ್ನು ಕರೆದು ವಿಶುದ್ಧನನ್ನು ಸನ್ಮಾನಿಸಿ ಆತನನ್ನು ಸತಿ ಸುತರ ಬಳಿಗೆ ಕಳಿಸಬೇಕೆಂದು ಆಜ್ಞಾಪಿಸಿದನು. ಇಂದ್ರನಾದರೂ ಶಿವನ ಆಜ್ಞೆಯಂತೆ ವಿಶುದ್ಧನಿಗೆ ವಿಜಯ ಖಡ್ಗವನ್ನಿತ್ತು ಸತಿ ಸುತರ ಬಳಿಗೆ ಕಳುಹಿಸಿ ಕೊಟ್ಟನು. ಬಳಿಕ ಹೆಂಡತಿ ಮಗನೊಡನೆ, ಪ್ರಜಾಜನರೊಡನೆ ವಿಶುದ್ದರಾಯ ನೀತಿವಂತನು, ಧರ್ಮವಂತನು, ಪ್ರಜಾನುರಾಗಿಯೂ ಆಗಿ ಸುಖ ಸಂತೋಷದಲ್ಲಿ ರಾಜ್ಯವಾಳುತ್ತಿದ್ದನು.

ಹೀಗಿರುವಾಗ ಸಚಿವ ಶ್ರೇಷ್ಠನನ್ನು ಕೊಲೆ ಮಾಡಿದ ಕೊಲೆಗಾರನು ಅನಾಯಾಸವಾಗಿ ಪಹರೆಯಲ್ಲಿದ್ದ ತಳವಾರ ಗುಂಪಿನವರಿಗೆ ಕೈಗೆ ಸಿಕ್ಕನು. ಈತನಿಗೆ ಯಾವಾಗ ಶಿಕ್ಷೆಯಾದೀತು ಎಂದು ಪುರಜನರು ಎದುರು ನೋಡು ತ್ತಿದ್ದರು ಅರಸನು ಪ್ರಜಾಜನರ ಮನಶಾಂತಿಗಾಗಿ ಮೊದಲು ಅವನ ತಲೆ ಹೊಡೆಯಿಸಿದನು. ಕೂಡಲೇ ಶಿವದೂತರು ಬಂದು ಆತನನ್ನು ಕೈಲಾಸಕ್ಕೆ ಕರೆದುಕೊಂಡು ಹೋದರು.

ಆಗ ಅರಸು ಬಲು ಅಚ್ಚರಿಪಟ್ಟು ಅನಾಯಾಸವಾಗಿ ಬಂದ ಗಾರ್ಗ್ಯ ಮುನಿಗಳ ಪಾದಕ್ಕೆ ನಮಸ್ಕರಿಸಿ ಮುನಿವರ್ಯಾ ಕಳ್ಳನು, ಕೊಲೆಗಾರನು,

ಅನೀತಿ, ಅನಾಚಾರಿಯು ಆದ ಅವನಿಗೆ ಶಿವಪದವಿ ದೊರೆತುದೆಂತು ಎಂದು ಕೇಳಿದನು. ಆಗ ಮುನಿವರ್ಯನು ನಸುನಕ್ಕು ಅಯ್ಯಾ ಆ ಕಳ್ಳನ ಕೈಯಲ್ಲಿದ್ದ ಒಂದು ಬಿದಿರು ಶಿವಾಲಯದ ಜಂತಿಗೆ ಉಪಯೋಗವಾಗಿದೆ. ಅಷ್ಟು ಪುಣ್ಯವೆ ಅವನಿಗೆ ಕೈಲಾಸವನ್ನು ದೊರಕಿಸಿ ಕೊಟ್ಟಿರುವದು ಎಂದು ಹೇಳಿದರು. ಬಳಿಕ ಗಾರ್ಗ್ಯ ಮುನಿಗಳ ನುಡಿಯನ್ನು ಕೇಳಿದ ಅರಸನು ಹಲವು ಶಿವ ದೇವಾಲಯಗ-ಳನ್ನು ಕಟ್ಟಿಸಿ ಶಿವನ ಪ್ರೀತಿಗೆ ಪಾತ್ರನಾಗಿ ಮೋಕ್ಷ ಪದವಿಯನ್ನು ಪಡೆದನು.

ಕಥೆ ಮುಗಿದ ಬಳಿಕ ಗುರುಬಸವರಾಜರು ವಿಪ್ರರನ್ನು ಉದ್ದೇಶಿಸಿ ಅಯ್ಯಾ ಶಿವ ಮಹಾದೇವನ ಮಹಿಮೆ ಅಗಾಧವಾದದ್ದು, ಅಲ್ಪ ಮತಿಯಿಂದ ತಾಸಿಗೊಂದು ದೇವರ ಬೆನ್ನು ಬೀಳುವವರಿಗೆ ಆತನ ಲೀಲೆ ಅರಿಯುವದು ಕಠಿಣ ವೆಂಬುದನ್ನು ಮರೆಯ ಬೇಡಿರಿ. ಶಿವನ ಮಹಿಮೆಯನ್ನು ಬಿತ್ತರಿಸುವ ನೂರಾರು ಸಾವಿರಾರು ದೃಷ್ಟಾಂತಗಳುಂಟು ಎಂದರು.

— ೪ ನೇ ಕಥೆ —

ವೈಶಾಲ್ಯ ನಗರವನ್ನು ಕ್ರೂರಮತಿ ಎಂಬ ಅರಸನು ಆಳುತ್ತಿದ್ದನು. ಅರಸನು ಹೆಸರಿಗೆ ತಕ್ಕಂತೆ ಕ್ರೂರಕರ್ಮಿಯೇ ಆಗಿದ್ದನು. ಪಾಪಾಚರಣೆ ಆತನ ನಿತ್ಯ ಉದ್ಯೋಗ. ಅತಿಯಾದ ಕರಭಾರವನ್ನು ಹೇರಿ ಪ್ರಜರನ್ನು ಪೀಡಿಸಿ ನಿತ್ಯ ಅವರ ಗೋಳು ಹೊಯ್ಯುವ ಚಂಡಾಲ ಬುದ್ಧಿಯವನಾಗಿದ್ದನು. ಇಂತಹ ಕರ್ಮ ಚಾಂಡಾಲನ ರಾಜ್ಯದಲ್ಲಿ ಯಾವ ಸುಖ ಸಂತೋಷಕ್ಕಾಗಿ ಬಾಳಬೇಕೆಂದು ಹಲವು ಜನ ಪ್ರಜರು ಇದ್ದ ಆಸ್ತಿಪಾಸ್ತಿ ಬಿಟ್ಟು ಸತಿ-ಸುತರೊಡಗೂಡಿ ಪರ ರಾಜ್ಯದ ಆಶ್ರಯಕ್ಕೆ ಹೋದದ್ದು ಆಗಿತ್ತು. ಕಾಲ ಕರ್ಮದ ಆಳಿಕೆ ಎಲ್ಲಿಯವರೆಗೆ ಎನ್ನುವಂತೆ ಕ್ರೂರಮತಿಯ ಪಾಪಕ್ಕೆ ಪ್ರತಿಫಲವಾಗಿ ಅವನಿಗೆ ಪಾಂಡುರೋಗ ಅಂಟಿಕೊಂಡು ಬರು ಬರುತ್ತ ಜಾಡ್ಯದ ಉಪದ್ರ ಅತಿಯಾಗಿ ಅನ್ನಪಾನಾದಿಗಳು ಸಹ ದಕ್ಕದಂತೆ ಹಾಸಿಗೆ ಹಿಡಿದು ನರಳುತ್ತಿದ್ದನು. ಯಾರೂ ತನ್ನ ಹತ್ತಿರ ಸುಳಿಯದಿರಲು ಹಚ್ಚು ಹಿಡಿದು ಕೆಲವುಕಾಲ ಉಪವಾಸ ಸಹ ಕರೆಯುವ ಪ್ರಸಂಗ

ಪ್ರಾಪ್ತವಾಯಿತು. ಕ್ರೂರಮತಿಯ ಮಗನು ಮಾತ್ರ ಶಿವಭಕ್ತ ಸಂಪನ್ನನಾದ್ದರಿಂದ ಪಿತೃ ಭಕ್ತಿಯಲ್ಲಿ ತಂದೆಯ ಉಪಚಾರಕ್ಕೆ ಮರೆತಿರಲಿಲ್ಲ.

ಆದರೂ ಕೊನೆಗೊಮ್ಮೆ ಕ್ರೂರಮತಿ ರಾಜನು ಸಾವಿನ ದವಡೆಯಲ್ಲಿ ಸಿಲುಕಿದನು. ಆಗ ಯಮಭಟರು ಅವನ ಕರ್ಮಕ್ಕೆ ಸರಿಯಾಗಿ ಮದಾಂಧತೆಗೆ ಮತ್ತಿಷ್ಟು ಉಗ್ರವೆನಿಸುವ ಶಿಕ್ಷೆಗಳನ್ನು ನೀಡಲು ಮರೆಯಲಿಲ್ಲ. ನರಕಭಾಜನನಾದ ಕ್ರೂರಮತಿಗೆ ಯಮಭಟರು ಕೊಡುವ ಚಿತ್ರಹಿಂಸೆಯು ಕೇಳುವದಕ್ಕೂ ಭಯವೆನಿಸುವ ರೀತಿಯಲ್ಲಿ ಸಾಗಿತ್ತು. ಪಾಪದ ಮರ್ದನ ಪಾಪದಿಂದಲೇ ಸಾಧ್ಯ ಎನ್ನುವಂತೆ ಕ್ರೂರಮತಿಯ ಪಾಪಕ್ಕೆ ಸರಿಯಾದ ಪ್ರಾಯಶ್ಚಿತ್ತವೆನಿಸಿ ಅವರ ಶಿಕ್ಷೆಸಾಗಿತ್ತು.

ಇತ್ತ ಕ್ರೂರಮತಿಯ ಮಗ ಸುಮತಿಯು ಯಾವತ್ತು ಭೋಗ ಭಾಗ್ಯ ತಂದೆ-ತಾಯಿ ಎಲ್ಲವನ್ನು ಕಳೆದುಕೊಂಡರೂ ತನ್ನ ನಿತ್ಯ ನೇಮವಾದ ಶಿವನ ಸೇವೆಯನ್ನು ಮರೆಯಲಿಲ್ಲ ನಿರ್ಮಲ ಮನಸ್ಸಿನಿಂದ ಮಹಾದೇವನ ಒಲುಮೆಗಾಗಿ ಊರ ಹೊರಭಾಗದಲ್ಲಿ ಒಂದು ಗುಡಿಸಲ ಕಟ್ಟಿಕೊಂಡು ಮರಳು, ಮಣ್ಣು ಶೇಖರಿಸಿ ಲಿಂಗಮೂರ್ತಿಯನ್ನು ಪ್ರತಿಷ್ಠಾಪಿಸಿ, ಕಾಡು ಮಲ್ಲಿಗೆಯ ಹೂಗಳಿಂದಲೂ, ಭಾವಿಯ ನೀರಿನಿಂದಲೂ ಅಡವಿಯಲ್ಲಿ ಹುಡುಕಿ ತಂದ ಶ್ರೀಗಂಧ ಕಟ್ಟಿಗೆಯ ಧೂಪದಿಂದಲೂ ಶಿವನನ್ನು ಪೂಜಿಸುತ್ತಿದ್ದನು. ತಾ ಭುಂಜಿಸಲೆಂದು ಬೇಡಿತಂದ ಭಿಕ್ಷಾನ್ನವನ್ನೇ ಪರಮಾನ್ನ ಪ್ರಸಾದವೆಂದು ಶಿವಲಿಂಗಮೂರ್ತಿಯನ್ನು ಎಡಬಿಡದೇ ಮೂರಾವರ್ತಿ ಪೂಜಿಸುತ್ತ ದಾರಿಯಲ್ಲಿ ಹಾಯ್ದು ಹೋಗುವವರನ್ನೆಲ್ಲ ಕರೆದು ಪ್ರಸಾದ ಹಂಚುವ ನಿತ್ಯ ನೇಮದೊಡನೆ ಹಲವಾರು ಭಕ್ತ ಬಳಗವನ್ನು ಕೂಡಿಸಿಕೊಂಡು ಅದೇ ಹುಲ್ಲಿನ ಗುಡಿಸಲದಲ್ಲಿ ಶಿವಭಜನೆ, ಶಿವಕೀರ್ತನೆ, ಶಿವಮಹಿಮೆಯನ್ನು ನಿರೂಪಿಸುವ ಹಲವು ಕಥಾಗೋಷ್ಠಿಯು ಸಾಗುವ ವ್ಯವಸ್ಥೆ ಮಾಡಿಕೊಂಡಿದ್ದನು. ಅಲ್ಲದೇ ಶಿವನಲ್ಲಿ ನಿತ್ಯವೂ ದೇವಾ ನನ್ನ ಹೆತ್ತಪ್ಪನ ತಪ್ಪನ್ನು ಮನ್ನಿಸಿ ಅವನಿಗೆ ಸದ್ಗತಿಯನ್ನು ಕರುಣಿಸುವ ಕರುಣಾಳು ಎನಿಸಲಾರೆಯಾ ಎಂದು ಭಕ್ತಿ ವಿಶ್ವಾಸಗಳಿಂದ ಬೇಡಿಕೊಳ್ಳುತ್ತಿದ್ದನು.

ಬರುಬರುತ್ತ ಸುಮತಿಯ ಭಕ್ತಿ ಅದರೊಡನೆ ಬೇಡಿಕೆ ಬಲವಾಗಿ ಹರನು ಭಕ್ತ ಸುಮತಿಯ ಭಕ್ತಿಯ ಆಳದಲ್ಲಿ ಸಿಲುಕಿ ಆತನ ಪಿತ ಕ್ರೂರ ಮತಿಯನು, ನರಕದಿಂದ ಬಿಡುಗಡಿಸಿ ತಂದೆ ಮಗ ಈರ್ವರಿಗೂ ಮೋಕ್ಷವನ್ನು ಕರುಣಿಸಿ ಭಕ್ತಿಪಾಲಕ ಎನಿಸಿಕೊಂಡನು. ಅಯ್ಯಾ ಬ್ರಾಹ್ಮಣ ಸಮೂಹವೇ ತಂದೆಯ ಅಪರಾಧವನ್ನು ಮಗನ ಭಕ್ತಿ ನಿವಾರಿಸಿತು ಎಂಬ ವಿಷಯವಾಗಿ ಈ ಕಥೆ ಎಂಬುದು ತಮಗೆಲ್ಲರಿಗೂ ತಿಳಿದಿರಬೇಕು. ಒಟ್ಟಾರೆ ಕೈಲಾಸ ನಾಥನು ಭಕ್ತಪಾಲಕ ಎನ್ನುವದನ್ನು ಮರೆಯಬೇಡಿರಿ ಎಂದು ಹೇಳಿದರು.

— — — —

— ೫ ನೇ ಕಥೆ —

ಗುರುದೇವನೆಂಬ ಶೈವ ಬ್ರಾಹ್ಮಣನ ಮಗನಾದ ಮೃಗದೇವ ಎಂಬು ವವನು ಮಹಾ ಪಾಪಿಯಾಗಿದ್ದನು. ಕಳವುಮಾಡಿ ಜೀವಿಸುವದೇ ಅವನ ಕರ್ತವ್ಯವಾಗಿತ್ತು. ಒಂದು ದಿವಸ ಕನ್ನಹಾಕಿ ಕನ್ನಗಿಂಡಿಯಲ್ಲಿ ಕೈಇಡಲು ಒಳಗೆ ಮನೆಯವರಿಗೆ ಕನ್ನಹಾಕಿದ್ದು ತಿಳಿದು ಮುಂದಾಗಿಬಂದು ಕನ್ನಗಿಂಡಿ ಯಲ್ಲಿ ಸಾಗಿದ ಕೈಯನ್ನು ಕತ್ತರಿಸಿಬಿಟ್ಟರು. ಬಳಿಕ ಕಳವಿನಲ್ಲಿ ಕೈ ಕಳೆದು ಕೊಂಡ ಆತನು ಊರಲ್ಲಿ ಮುಖ ತೋರಿಸಲು ನಾಚಿ ಊರನ್ನೇ ಬಿಟ್ಟು ಬೇರೊಂದು ದೇಶಕ್ಕೆ ಹೋಗಿ ಅಲ್ಲಿಯೂ ಕಳುವು ಮಾಡುವದನ್ನು ಬಿಡಲಿಲ್ಲ.

ಆಗ ಅಲ್ಲಿಯ ಅರಸನಿಗೆ ಈತನ ಚೋರವೃತ್ತಿ ತಿಳಿದು ಸಿಟ್ಟು ಸಂತಾಪಗಳಿಂದ ಕೂಡಿದವನಾಗಿ ಮೃಗದೇವನನ್ನು ಹಿಡಿದು ತರಿಸಿ ಮನ ತಣಿಯುವಂತೆ ಚಿತ್ರಹಿಂಸೆಕೊಟ್ಟು ಬಳಿಕ ಕಾಲುಗಳನ್ನು ಕಡಿದು ಹಾಕಿಸಿ ದದು. ಮೊದಲೇ ಜರ್ಜರಿತವಾದ ದೇಹದಿಂದ ಆತನ ಪ್ರಾಣಪಕ್ಷಿಯು ಹಾರಿಹೋಯಿತು.

ಆಗ ಯಮಭಟರು ಆತನನ್ನು ತಮ್ಮ ಕರ್ತವ್ಯದಂತೆ ಯಮಧರ್ಮನ ಸನ್ನಿದಿಗೆ ತರಲು ಯಮರಾಯನು ಶಿವನ ಮಹಿಮೆಯನ್ನು ಅರಿತವನಾದ್ದ ರಿಂದ ಶಿವನಾಜ್ಞೆಯಂತೆ ಮೃಗದೇವನನ್ನು ತಿರುಗಿ ಭೂಮಿಗೆ ಕಳುಹಿಸಿದನು.

ಆಗ ಶಿವದೂತರು ಅವನನ್ನು ಕೈಲಾಸಕ್ಕೆ ಒಯ್ಯುತ್ತಿದ್ದರು. ಅದೇ ಸಮಯ ದಲ್ಲಿ ಓರ್ವ ಮುನಿವರನು ಇಂತಹ ಚೋರನಿಗೆ ಶಿವಪದವಿಯೇ ? ಎಂದು ಕೇಳಲು, ಆಗ ಶಿವದೂತರು ಮುನಿವರನೇ ಕೇಳು ಈ ಕಳ್ಳನು ಒಮ್ಮೆ ಬಾಳೆಯ ತೋಟದಲ್ಲಿ ಹೊಕ್ಕು ಬಾಳೆಗೊನೆಯನ್ನು ಕದ್ದು ಕಾವಲುಗಾರರ ಕೈಗೆ ಸಿಕ್ಕುಬೀಳಲು ಅವರು ರಾಜಸನ್ನಿಧಿಗೆ ಒಯ್ಯಲು ಆಗ ಅರಸನು ಈತನಿಗೆ ಯಾವ ಶಿಕ್ಷೆ ವಿಧಿಸಬೇಕೆಂದು ಪಂಡಿತರನ್ನು ಕೇಳಲು, ಪಂಡಿತರು ಕಳ್ಳನು ಕದ್ದು ತಂದ ಬಾಳೆಹಣ್ಣಿನಿಂದ ಪಂಚಾಮೃತವನ್ನು ಸಿದ್ಧಪಡಿಸಿ ಈಶ್ವರನಿಗೆ ಅಭಿಷೇಕವಾಗಬೇಕೆಂದು ಸಲಹೆ ಕೊಟ್ಟರು. ಅವರ ವಿಚಾರದಂತೆ ಅರಸನು ಅವನು ಕದ್ದು ತಂದಿರುವ ಬಾಳೆಹಣ್ಣಿನ ರಸಾಮೃತದಿಂದ ಪಾಟ ಕೇಶ್ವರನಿಗೆ ಅಭಿಷೇಕ ಮಾಡಿಸಿದನು. ಕಳ್ಳನು ಕದ್ದು ತಂದ ಹಣ್ಣು ಶಿವನ ಅಭಿಷೇಕಕ್ಕೆ ಉಪಯೋಗವಾದ ಕಾರಣದಿಂದ ಶಿವನು ಕಳ್ಳನ ಮೇಲೆ ಸಹ ಕರುಣೆಯುಳ್ಳವನಾಗಿ ಅಭಿಷೇಕ ಮಾಡಿಸಿದ ಅರಸನ ಪುಣ್ಯದಲ್ಲಿ ಭಾಗಕೊಟ್ಟು ಕೈಲಾಸ ಪದವಿಯನ್ನು ಅನುಗ್ರಹಿಸಿದನು.

— ೬ ನೆಯ ಕಥೆ —

ಮಗಧ ದೇಶದಲ್ಲಿ ಶಿವಪೂಜಾನಿಷ್ಠನಾದ ಓರ್ವ ವಿಪ್ರನಿದ್ದನು. ತದ್ವಿರುದ್ಧವಾಗಿ ಅವನ ಮಗ ದುರ್ಮತಿಯು ಅತೀ ದುಷ್ಟನು, ಕಾಮ ವಿಲಾಸಿಯು, ಪರಪೀಡಕನೂ ಎನಿಸಿ ಬಾಳಿಕೊಂಡಿದ್ದನು. ಈತನು ಒಂದು ದಿನ ತನ್ನ ಸೂಳೆಯನ್ನು ಕರೆದುಕೊಂಡು ಯಾರಿಗೂ ತಿಳಿಯದಂತೆ ಕಾವಲು ಗಾರರ ಕಣ್ಣು ತಪ್ಪಿಸಿ ಅರಸರ ಉದ್ಯಾನವನದಲ್ಲಿ ಸೇರಿ ರತಿಕೇಳಿಯಿಂದ ತೃಪ್ತರಾಗಿ ಮದನ ವಿಕಾರದಲ್ಲಿ ವಶರಾಗಿ ಅಲ್ಲಿದ್ದ ಸಂಪಿಗೆಯ ಹೂಗಳನ್ನು ಹರಿದು, ಹೂ ಬುಟ್ಟಿ ತುಂಬಿಕೊಂಡು ಚೇಷ್ಟೆ ಕುಚೇಷ್ಟೆಗಳಲ್ಲಿ ಮೈ ಮರೆತು ಹೂಗಳನ್ನು ಹಾದಿಯಲ್ಲಿ ಚೆಲ್ಲುತ್ತ ಹೋದರು. ಆ ಹಾದಿಯ ಮಗ್ಗುಲಲ್ಲಿ ಒಂದು ಈಶ್ವರ ಲಿಂಗವಿದ್ದು ಸಂಪಿಗೆಯ ಹೂಗಳು ಲಿಂಗಮೂರ್ತಿಗೆ ಅರ್ಪಿತ ವಾದವು.

ಹೀಗಾಗಿ ಲಿಂಗರೂಪಿ ಶಿವನು ಸಂಪಿಗೆಯ ಹೂವು ಅರ್ಪಿಸಿದ ಆತನ ಮೂಢ (ಅರಿಯದ) ಭಕ್ತಿಗೂ ಮೆಚ್ಚಿ ಸಂತುಷ್ಟನಾದನು. ಆದರೆ ಹೇಸಿಯ ಪಾಪ ಸನ್ಯಾಸಿಗೆ ಎನ್ನುವಂತೆ ಮರುದಿವಸ ಅರಸನು ಉದ್ಯಾನವನಕ್ಕೆ ಬಂದು ವನದಲ್ಲಿ ಸಂಪಿಗೆಯ ಹೂಗಳು ಸಿಕ್ಕಲ್ಲಿ ಸೂರೆಯಾಗುವದಲ್ಲದೇ ದಾರಿ ಯುದ್ದಕ್ಕೂ ಬಿದ್ದಿರುವದನ್ನು ಕಂಡು ಸಿಟ್ಟಿನಿಂದ ಕಾವಲುಗಾರನನ್ನು ಕರೆದು ಒಳಿತಾಗಿ ಛೀ ಹಾಕಿ ಆತನ ತಲೆ ತೆಗೆಯಿಸುವದಾಗಿ ಹೇಳಿದನು. ಆಗ ವಿನೋದ ಮೂರ್ತಿಯೆಂದು ಪ್ರಸಿದ್ಧನಾದ ಅರಸರ ನಮ್ರ ಸಚಿವ (ಸಲಹೆಗಾರ ಪಂಡಿತ) ನು ವಿನಯದಿಂದ ಅರಸರಿಗೆ ಕರಜೋಡಿಸಿ ಪ್ರಭೂ ಹೂಗಳನ್ನು ಹಾಳು ಮಾಡಿದ ಅಪರಾಧವು ಕಾವಲುಗಾರನದಲ್ಲ ಅಲ್ಲದೇ ಈ ವಿಷಯವನ್ನೆ ಈತನು ಅರಿಯನು. ಅದು ಹೇಗೆಂದರೆ ಬಹುತರ ರಾತ್ರಿ ಸಮಯದಲ್ಲಿ ದೇವತೆಗಳಿಂದ ಶಿವಲಿಂಗದ ಪೂಜೋತ್ಸವ ಜರುಗಿರಬೇಕೆಂದು ನನ್ನ ತರ್ಕ ಎಂದು ಕಾವಲುಗಾರನ ಪರವಾಗಿ ಮಾತನಾಡಿ ಅರಸನನ್ನು ಸಮಾಧಾನ ಪಡಿಸಿದನು. ಮತ್ತು ಕಾವಲುಗಾರನನ್ನು ಕರೆದು ಎಚ್ಚರಿಕೆಯಿಂದ ಕಾವಲು ಮಾಡಲು ತಿಳಿಸಿ ಹೋದರು.

ಮುಂದೆ ಕೆಲವು ದಿವಸಗಳು ಕಳೆದ ಮೇಲೆ ದುರ್ಮತಿಯು ತನ್ನ ಪ್ರೇಯಸಿಯನ್ನು ಕರೆದುಕೊಂಡು ಯಥೇಚ್ಛವಾಗಿ ಮದ್ಯಪಾನದಲ್ಲಿ ಮತ್ತನಾಗಿ ಸರಸ ವಿಲಾಸದಲ್ಲಿ ಕಣ್ಣು ಮುಚ್ಚಿ ಆ ದಿವಸವು ಸಂಪಿಗೆ ಹೂಗಳನ್ನು ಹರಿದು ಬಿಸಾಕುತ್ತ ತರ ತರದ ಆಭರಣಗಳನ್ನು ಸಿದ್ಧಗೊಳಿಸಿ ತೋಟದಲ್ಲಿದ್ದ ಶಿವಲಿಂಗ ಮೂರ್ತಿಗೆ ಅರ್ಪಿಸಿ ಆನಂದದಿಂದ ಕಾಲ ಕಳೆಯುತ್ತಿದ್ದರು. ಅಷ್ಟರಲ್ಲಿ ಗುಪ್ತವಾಗಿ ಅಡಗಿ ಕುಳಿತ ಕಾವಲುಗಾರನು ಮುಂದಾಗಿ ಈರ್ವರನ್ನು ಬಂಧಿಸಿ ಅರಸರ ಆಸ್ಥಾನಕ್ಕೆ ಒಯ್ದನು. ರಾಜನು ಅವರನ್ನು ಶೂಲಕ್ಕೇರಿಸಿ ಕೊಲ್ಲುವಂತೆ ಆಜ್ಞೆ ಮಾಡಿದನು.

ಆದರೆ ದುರ್ಮತಿಯು ಅದೆಷ್ಟೆ ದುಷ್ಟನಾಗಿದ್ದರೂ ವ್ಯಭಿಚಾರಿ ಎನಿಸಿದ್ದರೂ ಅರಿತೊ ಅರಿಯದಲೋ ತನ್ನ ಮನದ ತೃಪ್ತಿಗಾದರು, ವಿನೋದ ವಿಲಾಸ ವೈಖರಿಯಲ್ಲಿ ಲಿಂಗ ಲಿಂಗಮೂರ್ತಿ ಶಿವನಿಗೆ ಪೂಮಾಲೆ ಅರ್ಪಿಸಿ

ಸಂತೋಷಗೊಳಿಸಿದ್ದಕ್ಕಾಗಿ ಮಹಾದೇವನು ಸಂತುಷ್ಟನಾಗಿ ಆತನಿಗೂ ಆತನ ಪ್ರೇಯಸಿಗೂ ಮೋಕ್ಷ ಕೊಟ್ಟನು.

ಇದರಂತೆ ಪತ್ರಿ ಪುಷ್ಪಾದಿಗಳಿಂದ ಭಕ್ತಿ ಪೂರ್ವಕವಾಗಿ ಪೂಜಿಸುವ ಭಕ್ತರನ್ನು ಪೊರೆಯುವ ಪರಮಾತ್ಮನ ಮಹಿಮೆ ಅಗಾಧವೆಂದು ಹೇಳಿದ ಗುರುಬಸವರು ತಮ್ಮ ನೆಚ್ಚಿನ ಶಿಷ್ಯನಿಂದ ಸುಜ್ಞಾನಿ ದೇವನಿಗೆ ಶ್ವೇತನ ಕಥೆಯನ್ನು ಹೇಳಲು ತಿಳಿಸಿ ತಮ್ಮ ಲಿಂಗಾರ್ಚನೆ ಕರ್ತವ್ಯದತ್ತ ಸಾಗಿದರು.

ಸುಜ್ಞಾನಿದೇವನು ಶ್ವೇತನ ಕಥೆ ಹೇಳಿದ್ದು

— ೧ ನೇ ಕಥೆ —

ಗುರು ಬಸವರಾಜರ ಅಪ್ಪಣೆಯ ಪ್ರಕಾರ ಸುಜ್ಞಾನಿದೇವನು ವಿಪ್ರ ಮಹಾಶಯರನ್ನು ಕೂಡ್ರಿಸಿಕೊಂಡು ಶ್ವೇತನ ಕಥೆಯನ್ನು ಹೇಳಲು ಅಣಿಯಾದನು.

ಅಯ್ಯಾ ಭೂಸುರರೇ ಹಿಂದಕ್ಕೆ ಶ್ವೇತನೆಂಬವನು ಶಿವನಿ ಎಂಬ ಉಪಪತ್ನಿ (ಸೂಳೆ) ಯೊಡನೆ ಅತ್ಯಂತ ಪ್ರೀತಿ, ವಿಶ್ವಾಸ, ಅನುರಾಗಗಳಲ್ಲಿ ಪ್ರೇಮಪೂರ್ಣ ಜೀವನ ಸಾಗಿಸಿದ್ದನು. ಅವರೀರ್ವರ ಪ್ರೀತಿ, ಅನುರಾಗಗಳು ರತಿ-ಮನ್ಮಥರನ್ನು ನಾಚಿಸುವಂತೆ ಸಾಗಿತ್ತು. ಇಂದ್ರನ ಅಪ್ಸರೆಯರನ್ನು ಅಲ್ಲಗಳೆಯುವ ರೀತಿಯಲ್ಲಿ ಶಿವನಿಯನ್ನು ಸುರಸುಂದರಿಯ ಸಾಲಿನಲ್ಲಿ ಸಲುಹಿಕೊಂಡು ಬಂದಿದ್ದನು.

ಇದೇ ರೀತಿ ಕೆಲವುಕಾಲ ಗತಿಸಿ ಅವರ ವಿಲಾಸ ಭೋಗದ ಅವಧಿ ಮುಗಿದುಬಂತೋ ಏನೋ ಎನ್ನುವಂತೆ ಒಂದು ದಿವಸ ತನ್ನ ಪ್ರೇಯಸಿ ಶಿವನಿಯ ಪ್ರೀತಿಯ ಪುಷ್ಪ ಪಾರಿಜಾತ ಹೂವನ್ನು ಕೊಯ್ದುಕೊಂಡು ಬರುತ್ತಿದ್ದ ಶ್ವೇತನು ದೈವೀ ನಿರ್ಣಯದಂತೆ ಎಡವಿ ಬಿದ್ದು ತಕ್ಷಣ ಹೃದಯ ಕ್ರಿಯೆ ನಿಂತು ಪ್ರಾಣಪಕ್ಷಿ ಹಾರುವ ಸಮಯದಲ್ಲಿ ಮೂಢ ಪ್ರೀತಿಯಿಂದ

ಕೈಯೊಳು ಹಿಡಿದು ಪಾರಿಜಾತ ಪುಷ್ಪವನ್ನು ತೂರಿ, ಪುಷ್ಪವು ಶಿವನಿಗೆ (ಅಂದರೆ ತನ್ನ ಗಣಿಕೆಗೆ ಎನ್ನುವ ದೃಷ್ಟಿಯಲ್ಲಿ) ಮುಟ್ಟಲಿ ಎಂದು ನುಡಿದು ಪ್ರಾಣಬಿಟ್ಟನು.

ಅವನು ಶಿವನಿಗೆ ಮುಟ್ಟಲಿ ಎಂದು ನುಡಿದದ್ದಕ್ಕಾಗಿ ಮಹಾದೇವನು ಅತ್ಯಾನಂದಭರಿತನಾಗಿ ಆ ಹೂವನ್ನು ಸ್ವೀಕರಿಸಿದ್ದಲ್ಲದೇ ಆತನನ್ನು ಪ್ರೀತಿಯಿಂದ ಕೈಲಾಸಕ್ಕೆ ಕರೆಯಿಸಿಕೊಂಡು ಶ್ವೇತನಿಗೆ ಗಣಪದವಿಯನ್ನು ಅನುಗ್ರಹಿಸಿದನು.

ನೋಡಿದಿರಾ ಕೇಳಿದಿರಾ ವಿಪ್ರವರ್ಯರೇ ಶಿವನ ಕರುಣೆಯನ್ನು, ಚೇಷ್ಟೆ, ವಿನೋದ, ವಿಲಾಸಪೂರ್ಣವಾಗಿ ಪೂಜಿಸಿ, ಧ್ಯಾನಿಸಿದರೂ ಪ್ರಸನ್ನನಾಗುವದರಲ್ಲಿ ಸಂದೇಹವಿಲ್ಲ. ಆದರೆ ಶಂಕರನ ಮಹಿಮೆಯನ್ನು ಅರ್ಥ ಮಾಡಿಕೊಳ್ಳದ ಅವಿವೇಕಿಗಳಿಗೆ ಆತನ ಕೃಪೆ ದೊರೆಯುವದು ಕಠಿಣ.

— ೨ ನೇ ಕಥೆ —

ಸುಜ್ಞಾನಿದೇವನು ವೈಶ್ರವಣನ ಕಥೆಯನ್ನು ಹೇಳಹತ್ತಿದರು.

ಒಂದು ದಿವಸ ದೇವಾದಿದೇವನಾದ ಮಹಾದೇವನು ತೊಡೆಯಲ್ಲಿ ಪಾರ್ವತಿತಾಯಿಯನ್ನು ಜಡೆಯಲ್ಲಿ, ಗಂಗಾಮಾತೆಯನ್ನು ಮತ್ತು ಮಕ್ಕಳಾದ ಗಣಪತಿ, ಕುಮಾರಸ್ವಾಮಿಗಳನ್ನು ವಡಗೂಡಿ ಚರ್ಮದುಡಿಗೆಯಲ್ಲಿ ತ್ರಿಶೂಲ ಹಿಡಿದು ಡಮರುಗಧರನಾಗಿ ನಂದಿಯನ್ನೇರಿ ಸಾಗಿಬಂದು, ಭಕ್ತನಾದ ವೈಶ್ರವಣನಿಗೆ ದರ್ಶನಕೊಟ್ಟನು.

ಆಗ ವೈಶ್ರವಣನು ಶಿವನ ದರ್ಶನದಿಂದ ಪುನೀತನಾದೆನೆಂದು ಅತ್ಯಧಿಕ ಭಕ್ತಿಯಿಂದ ಸ್ತುತಿಗೈಯುವವನಾದನು. ಶಿವನಾದರೂ ಆತನ ಭಕ್ತಿಗೆ ಮೆಚ್ಚಿ ಸಂಪ್ರೀತಿಯಿಂದ ಅಪ್ಪಿಕೊಂಡು ಮುದ್ದಾಡಿದನಲ್ಲದೇ ಇಚ್ಛಿತ ವರವನ್ನು ಬೇಡಲು ಅಪ್ಪಣೆ ಮಾಡಿದನು. ಆದರೆ ಭಕ್ತ ವೈಶ್ರವಣನು ಬೇರಾವ ಆಸೆ ಆಕಾಂಕ್ಷೆಗಳಿಗೆ ಮಾರುಹೋಗದೇ ಮಹಾದೇವಾ, ಭಕ್ತ

ಪಾಲಕಾ ಬೇರಾವ ಸಂಪತ್ತು, ಭೋಗ–ಭಾಗ್ಯಗಳ ಇಚ್ಛೆ ಎನಗಿಲ್ಲ. ಆದರೆ ತಂದೆ ಸಕಲ ಜನ್ಮಗಳಲ್ಲಿಯೂ ತಮ್ಮ ಮರುವಾಗದಂತೆ ತಮ್ಮ ಪರವೆನ್ನ ಶಿರದಿ ಸದಾ ಇರಲೆಂದು ಬೇಡಿಕೊಳ್ಳುವೆನು ಎಂದು ಕರಜೋಡಿಸಿ ವಿನಯ ದಿಂದ ಪ್ರಾರ್ಥಿಸಹತ್ತಿದನು.

ಆಗಂತೂ ಮತ್ತಷ್ಟು ಸಂತೋಷಗೊಂಡು ಭಕ್ತಶಿಖಾಮಣಿ ವೈಶ್ರವಣಾ ನೀನು ಯಾವಾಗಲೂ ನನ್ನ ಪ್ರೀತಿಗೆ ಪಾತ್ರನು, ಅದಕ್ಕಾಗಿ ಇಂದಿನಿಂದ ನನ್ನ ಕೋಶಾಧಿಕಾರಿಯಾಗಿ ಅಳಕಾಪುರದಲ್ಲಿ ಸುಖವಾಗಿರೆಂದು ತಿಳುಹಿಸಿ, ಕೈಲಾಸ ಪತ್ತ ತೆರಳಲು ಸನ್ನದ್ಧನಾದನು.

ಆದರೆ ಭಕ್ತ ವೈಶ್ರವಣನು ಇಲ್ಲಿಯವರೆಗೆ ಶಿವನನ್ನು ಹೊರತಾಗಿ ಅನ್ಯದೇವರನ್ನು ಅರಿತವನಲ್ಲ. ಆದ್ದರಿಂದ ಶಿವನಪ್ಪುಗೆಯಲ್ಲಿ ಹಸನ್ಮುಖ ದಿಂದ ಕೂಡಿದವಳಾಗಿ ಕುಳಿತ ಮಾತಾ ಪಾರ್ವತಿಯನ್ನು ಕಂಡು........ಸ್ವಲ್ಪ ಸಂಶಯ ಭಾವತಳೆದು ಇವಳಾರು ತಂದೆ ಬಿಂಕ ಬಿಗುಮಾನದಲ್ಲಿ ತಮ್ಮ ತೊಡೆಯನೇರಿ ಸೆಡವಿನ ವೈಖರಿಯಲ್ಲಿ ಮಾರಹರನರಸಿಯಂತೆ ತೋರುವ ಮಾಯೆ ಎಂದು ಕೇಳಿದನು.

ಆಗ ವೈಶ್ರವಣನ ನುಡಿಯನ್ನು ಕೇಳಿದ ಗಿರಿಬಾಲೆಗೆ ಅದೆಲ್ಲಿಯ ಸಿಟ್ಟು ಸಾಗಿ ಬಂತೊ ಏನೋ ಈತನು ನನ್ನನ್ನು ಸಾಮಾನ್ಯನಾಗಿ ಕಂಡನಲ್ಲವೆ ಎಂದು ತಪ್ತ ಮನದಿಂದ ಎಲವೋ ತಾಮಸ ಸ್ವಭಾವದಿಂದ ನನ್ನನ್ನು ಅಲ್ಪಳಂತೆ ತಿಳಿದು ನುಡಿದ ನಿನ್ನ ಕಣ್ಣುಗಳು ಕಾಣದಾಗಲಿ ಎಂದು ತಟ್ಟನೆ ನುಡಿದು ಬಿಟ್ಟಳು. ಶಾಂಭವಿಯ ಶಾಪದಿಂದ ವೈಶ್ರವಣನ ಕಣ್ಣುಗಳು ಇಂಗಿ ಹೋಗುವಂತಾಯಿತು. ಬಳಿಕ ವೈಶ್ರವಣನು ಶಿವನನ್ನು ಕುರಿತು ಏನೀ ಪ್ರಸಂಗ ತಂದೆ, ನಾಗೈದ ಅಪರಾಧವೇನು ತಮ್ಮನ್ನು ಹಿಂದಿಟ್ಟು ತಮ್ಮ ಭಕ್ತನನ್ನು ಶಪಿಸಿ ಕಣ್ಣು ಕಳೆದ ದಿಟ್ಟದೇವತೆ ಇವರಾರು ತಿಳುಹಿಸ ಬಾರದೆ ಎಂದು ಬೇಡಿಕೊಳ್ಳಹತ್ತಿದನು.

ಆಗ ಶಿವನು ನಸುನಕ್ಕು ಭಕ್ತಶ್ರೇಷ್ಠನೆ ನನ್ನ ಅರ್ಧ ಶಕ್ತಿಯನ್ನು ತನ್ನ ಭಕ್ತಿಯ ಪಾಶದಿಂದ ಬಿಗಿದು ಕಟ್ಟಿ ನನ್ನ ಸರ್ವ ಕಾರ್ಯ ಕರ್ತವ್ಯಗಳಲ್ಲಿ ಪಾಲ್ಗೊಂಡು ಬಂದ ಪಾರ್ವತಿಯನ್ನೂ ಅರಿಯದಷ್ಟು ಅವಿವೇಕಿಯಾದೆ ಯಲ್ಲೊ. ನನ್ನ ಇಡೀ ಶರೀರ ಗುಣಧರ್ಮದಲ್ಲಿ ಪಾರ್ವತಿಯು ಸತಿಯಾಗಿ

ಸ್ವಾಮಿನಿ ಎನಿಸಿದ್ದಾಳೆ. ನೀನು ಅವಳನ್ನು ಸಾಮಾನ್ಯವಾಗಿ ಕಂಡದ್ದು ಒಂದು ದೃಷ್ಟಿಯಿಂದ ಅಪರಾಧವೇ ಸರಿ. ಆ ಅಪರಾಧಕ್ಕಾಗಿ ನೀನು ಅವಳಲ್ಲಿ ಕ್ಷಮೆ ಯಾಚಿಸದ ಹೊರತು ಗತ್ಯಂತರವಿಲ್ಲ. ನನ್ನನ್ನು ತಂದೆ ಎಂಬ ಭಕ್ತಿಯಿಂದ ಸೇವಿಸುವಂತೆ ಅವಳನ್ನು ತಾಯಿಯಂತೆ ಪೂಜಿಸುವ ಪಾವನ ಬುದ್ಧಿ ಸದಾ ಜಾಗ್ರತವಾಗಿರಲಿ ಎಂದು ತಿಳುಹಿಸಿದನು.

ಆಗ ವೈಶ್ರವಣನು ದೇವಾದಿದೇವಾ ನಾನು ಇಲ್ಲಿಯವರೆಗೆ ತಮ್ಮ ಹೊರತು ಅನ್ಯ ದೇವ ಮೂರ್ತಿಯನ್ನೇ ಕಂಡವನಲ್ಲ, ಹೀಗಿರಲು ನಾನೇನು ಮಾಡಲಿ. ಏನೇ ಆಗಲಿ, ಅನಾದಿ ರೂಪನೆ ನನ್ನ ನಿತ್ಯ ನೇಮವೆನಿಸಿದ ತಮ್ಮ ಸೇವೆಗೆ ಅಡ್ಡಿಯಾಗುವದು. ಅದಕ್ಕಾಗಿ ಇಂಗಿಹೋದ ದೃಷ್ಟಿಯನ್ನು ಅನುಗ್ರಹಿ ಸುವದಾಗಬೇಕೆಂದು ಬೇಡಿಕೊಳ್ಳಹತ್ತಿದನು.

ಆಗಲು ಶಿವನು ನಸುನಕ್ಕು, ಭಕ್ತಶ್ರೇಷ್ಠನೆ ಹೂವಿಸಿಂದ ಪರಿಮಳ ವೇನಾದರು ಬೇರೆ ಇರಬಹುದೇ, ಇವಳು ನನ್ನ ಅಂಗಾಂಗಗಳಲ್ಲಿ ಬೆರೆತ ಭಿನ್ನ ವಿಲ್ಲದಿರುವ ಶಿವೆ ಶಕ್ತಿ ಎಂಬುದನ್ನು ಈಗಾಗಲೇ ಮರೆತು ಬಿಟ್ಟೆಯಾ ? ಮೊದಲು ವಿಶ್ವಮಾತೆ ಎನಿಸಿದ ಗಿರಿಜೆಯಲ್ಲಿ ಕ್ಷಮೆ ಬೇಡಿಕೋ ಎಂದು ಉಪದೇಶ ಮಾಡಿದನು.

ಆಗ ಶಿವನ ಅಪ್ಪಣೆಯಂತೆ ಶಿವಶಕ್ತಿಯ ಅಡಿದಾವರೆಗಳಲ್ಲಿ ಪೊಡ ಮೊಟ್ಟು ಅನನ್ಯ ಭಕ್ತಿಯಿಂದ ಬೇಡಿಕೊಳ್ಳುವ ವೈಶ್ರವಣನ ಭಕ್ತಿ ಭಾವಕ್ಕೆ ಮೆಚ್ಚಿ ಪಾರ್ವತಿಯಾದರೂ ಭಕ್ತನ ಭಕ್ತಿ ಪಾಶದಲ್ಲಿ ಸಿಲುಕಿದಳು. ಎಡಬಿಡದೆ ಸಾಗಿರುವ ವೈಶ್ರವಣನ ಶಾಂಭವಿಯ ಸ್ತೋತ್ರ ಅನಂತವಾಗಿತ್ತು, ವರ್ಣಿಸು ವಂತಹದಾಗಿತ್ತು. ಅಂತೇ ಲೋಕ ಮಾತೆಯು ಕರುಣಾ ದೃಷ್ಟಿಯಿಂದ ನೋಡಿದಳೊಮ್ಮೆ ಶಿವಭಕ್ತ ಶಿಖಾಮಣಿ ವೈಶ್ರವಣನನ್ನು. ಅಗಜೆಯು ಕರುಣೆ ಯಿಂದ ಕಂದಾ ಅಂಜದಿರು ನಿನ್ನ ಶಿವಭಕ್ತಿಯ ಪ್ರಭಾವವನ್ನು ಪರಕಿಸುವ ದಕ್ಕಾಗಿ ಹೀಗೆ ಮಾಡಬೇಕಾಯಿತು. ಈಗ ನೋಡು ಪ್ರಕಾಶದಂತೆ ಹೊಳೆಯುವ ಕಣ್ಣುಗಳನ್ನು ಅನುಗ್ರಹಿಸಿದ್ದೇನೆ ಎಂದು ಪ್ರೀತಿ ವಾತ್ಸಲ್ಯ ಪೂರ್ಣ ಕರುಣೆಯಿಂದ ಇಂಗಿದ ಕಣ್ಣುಗಳ ಮೇಲೆ ಕೈಯಾಡಿಸಿದಳು.

ಆಗ ಪೂರ್ಣ ದೃಷ್ಟಿಯನ್ನು ಪಡೆದ ವೈಶ್ರವಣನು ಪಾರ್ವತಿ ಪರಮೇಶ್ವರರ ಪದಾಬ್ಜಗಳಿಗೆ ಭಕ್ತಿ ಪೂರ್ವಕ ವಂದಿಸಿ ಅವರ ಪರಿಪೂರ್ಣ ಆಶೀರ್ವಾದ ಪಡೆದು ತನ್ನ ಹಿತೈಷಿ ಆಪ್ತರನೇಕರೊಡನೆ ಶಿವನ ಸಖನೆಂಬ ನಾಮಧಾರಿಯಾಗಿ ಕೋಶಾಧಿಕಾರಿ ಎಂದು ಅಳಕಾಪುರಿಗೆ ಹೋದನು.

ಎಂದು ವೈಶ್ರವಣನ ಕಥೆಯನ್ನು ತಿಳುಹಿಸಿದ ಸುಜ್ಞಾನಿದೇವನು ಬ್ರಾಹ್ಮಣ ಸಮೂಹವನ್ನು ಕುರಿತು ಅಯ್ಯಾ ಇದರ ತಾತ್ಪರ್ಯ ಇಷ್ಟೇ ಭವ ಹರನಾದ ಶಿವನು ಭಕ್ತಿಯ ಆಳದಲ್ಲಿ ಸಿಲುಕಿದ ಮೇಲೆ ಅವನೆಷ್ಟು ಸುಲಭನು ಎಂದು ಗೊತ್ತಾಗುವದಲ್ಲದೇ ಭಕ್ತರ ಆಳಾಗಿ ದುಡಿದು ಅವರ ಇಷ್ಟಾರ್ಥವನ್ನು ಪೂರೈಸಿ ಮೋಕ್ಷ ಸುಖ ಸಂಪತ್ತು ಕರುಣಿಸುತ್ತಾನೆ ಎನ್ನುವದನ್ನು ಅವನ ಮಹಿಮೆಯನ್ನು ಕೇಳಿದ ನೀವೇ ಅರ್ಥ ಮಾಡಿಕೊಳ್ಳಿರಿ. ಒಟ್ಟಿನ ಮೇಲೆ ಶಿವಪಾದವಂ ನಂಬಿರ್ದ ಭಕ್ತಂಗೆ ಕೊರತೆ ಎಂಬುದಿಲ್ಲ ಕಾಣಿರಯ್ಯಾ ಎಂದು ನುಡಿದರು.

— ೩ ನೇ ಕಥೆ —

ಸೋಮಯಾಜಿ ಎಂಬ ಸದ್ಗೃಹಸ್ತನ ಮಗ ಸೋಮದತ್ತನ ಕಥೆ ಹೇಳುವ ದಕ್ಕಾಗಿ ಸುಜ್ಞಾನಿದೇವರು ಯಾವತ್ತು ಬ್ರಾಹ್ಮಣರನ್ನು ಮಠದ ಪಠಾಂಗಣ ದಲ್ಲಿ ಕೂಡ್ರಿಸಿಕೊಂಡಿದ್ದಾರೆ.

ಬಳಿಕ ಅಯ್ಯಾ ಭೂಸುರರೆ ಸೋಮಯಾಜಿಯ ಮಗನು ಧರ್ಮ ನೀತಿಗಳನ್ನು ಮರೆತು ದುಷ್ಕರ್ಮಗಳ ತವರು ಮನೆಯಾಗಿ ಹಿರಿಯರು ಹೆತ್ತವರು ಎಂಬುದನ್ನು ಮರೆತು ಅವಿವೇಕಿಗಳಲ್ಲಿ ಅತೀ ಅವಿವೇಕಿಯಾಗಿ ಬಾಳಿಕೊಂಡಿದ್ದನು. ಜೂಜು, ಕೊಲೆ, ಸುಲಿಗೆಗಳು ಅವನ ನಿತ್ಯ ವೃತ್ತಿ ಗಳಾಗಿದ್ದವು.

ಹೀಗಿರುವ ಸೋಮದತ್ತನು ಒಂದು ದಿವಸ ತಂದೆ ಮನೆಯಲ್ಲಿ ಇಲ್ಲದ ಸಮಯ ಸಾಧಿಸಿ ಆತನ ನವರತ್ನ ಖಚಿತವಾದ ಉಂಗುರವನ್ನು ಕಳವುಮಾಡಿ ಕೊಂಡು ಒಯ್ದು ಜೂಜಾಡಿ ಸೋತು ಸಪ್ಪೆ ಮೋರೆಯಿಂದ ಮನೆಯತ್ತ ಬರುತ್ತಿರುವಷ್ಟರಲ್ಲಿ ತಂದೆ ಸೋಮಯಾಜಿಯು ಮನೆಗೆ ಬಂದು ಪೆಟ್ಟಿಗೆಯಲ್ಲಿ ಉಂಗುರವಿಲ್ಲವೆಂದು ತಿಳಿದು ಸಿಟ್ಟು ಬೆಂಕಿಯಾಗಿ ಸಹಸ್ರಾರು ರೂಪಾಯಿ ಬೆಲೆ ಬಾಳುವ ಉಂಗುರವನ್ನು ಮಗನುಕದ್ದುಕೊಂಡು ಹೋಗಿರುವನಲ್ಲಾ ಎಂಬ ಸಂತಾಪ ಹೆಚ್ಚಿ ತಲೆಯೆತ್ತರದ ಬಡಿಗೆಯನ್ನು ಹಿಡಿದುಕೊಂಡು ಮಗನ ತಲೆಯೊಡೆದು ಕೊಲ್ಲಬೇಕೆಂದು ನಿಶ್ಚಯಿಸಿ ಅವನು ಬರುವದನ್ನೇ ಕಾಯುತ್ತ ಮನೆಯ ಬಾಗಿಲದಲ್ಲಿ ನಿಂತುಕೊಂಡಿದ್ದನು.

ಆಗ ಮನೆಗೆ ಬರುತ್ತಿದ್ದ ಸೋಮದತ್ತನು ಬಾಗಿಲ ಬಳಿಯಲ್ಲಿ ರುದ್ರ ರೂಪ ತಾಳಿ ನಿಂತುಕೊಂಡಿರುವ ತಂದೆಯ ಭೀಕರ ಮುಖವನ್ನು ದೂರ ದಿಂದಲೇ ಕಂಡು ಇನ್ನು ನನ್ನ ಪ್ರಾಣ ಉಳಿಯಲಾರದೆಂದು ತೀರ್ಮಾನಿಸಿ ನಿಂತ ಸ್ಥಳದಿಂದ ಹಿಂದು ಮುಂದಿನ ಯೋಚನೆಗೆ ಅವಕಾಶ ಕೊಡದೇ ಓಟ ಕೊಟ್ಟು ೪-೬ ಮೈಲು ದೂರದ ಗ್ರಾಮವನ್ನು ತಲುಪಿ ಅಲ್ಲಿ ಊರ ಹೊರ ವಲಯದಲ್ಲಿ ವಿರಾಜಮಾನವಾಗಿರುವ ಈಶ್ವರ ದೇವಾಲವನ್ನು ಹೊಕ್ಕನು. ಆಗ ಅವನ ಬುದ್ಧಿಗೆ ಅದೇನು ತಿಳಿಯಿತೋ ಏನೋ ಪಶ್ಚಾತ್ತಾಪಗೊಂಡವ ನಂತೆ ಈಶ್ವರ ಲಿಂಗವನ್ನು ಅಪ್ಪಿಕೊಂಡು ಶಿವನೇ ಶಂಕರನೇ ಮಹಾದೇವನೇ ಮಲ್ಲಿಕಾರ್ಜುನನೇ ಪರಂಧಾಮ ಪರಮೇಶ್ವರ ಪಾರ್ವತಿಪತಿಯೇ ರಕ್ಷಿಸು ರಕ್ಷಿಸು ಎಂದು ಬೇಡಿಕೊಳ್ಳುತ್ತ ಅಶ್ರುಧಾರೆಯಿಂದ ಅಭಿಷೇಕಗೈದು ಸಮೀಪದಲ್ಲಿಟ್ಟ ದೀವಿಗೆಯ ಬತ್ತಿಯ ಕುಡಿಗೆ ಮಂಕು ಬಂದು ನಂದಿ ಹೋಗುತ್ತಿರುವದನ್ನು ಕಂಡು ಲಗು ಬಗೆಯಿಂದ ತನ್ನ ಕೈಬೆರಳು ಸುಡಬಹುದು ಎಂಬುದರ ಕಡೆಗೆ ಲಕ್ಷ್ಯಕೊಡದೆ ಮಹಾದೇವನ ಮಂಗಲ ದೀಪವನ್ನು ಮುಂದೆ ಚಾಚಿ ಬೆಳಗಿಸಿ ಬೆಳಗಿನವರೆಗೆ ಶಿವನ ಧ್ಯಾನದಲ್ಲಿ ತಲ್ಲೀನನಾಗಿದ್ದನು. ಬೆಳಗು ಮುಂಜಾನೆ ನೋಡುತ್ತಾನೆ ಯಾರೋ ಭಕ್ತರು ಶಿವಾರ್ಪಿತವೆಂದು ನೈವೇದ್ಯವನ್ನು ಈಶ್ವರ ಲಿಂಗದ ಸಮ್ಮುಖದಲ್ಲಿ ಇಟ್ಟು ಹೋಗಿದ್ದರು. ೬-೮ ಮೈಲು ದಾರಿ ನಡೆದು ಬಂದು ಬೆಳಗಿನವರೆಗೆ ಜಾಗರಣೆಯಲ್ಲಿದ್ದ ಪ್ರಯುಕ್ತ ಅನ್ನಪ್ರಸಾದ ಕಂಡದ್ದಷ್ಟೆ ತಡ, ಮೊದಲೆ ಹಸಿವೆಯಿಂದ ಕೆಂಗೆಟ್ಟ ಅವನು ಗಬಗಬನೇ ಅನ್ನ ಪ್ರಸಾದ

ಪನ್ನುಂಡು ತೃಪ್ತನಾದನು. ಸೋಮದತ್ತನು ನೈವೇದ್ಯವನ್ನು ಉಂಡು ಮುಗಿಸಿದ ಕೆಲ ಸಮಯದ ಮೇಲೆ ಈಶ್ವರನ ಅರ್ಚಕನು [ಪೂಜಾರಿಯು] ಬಂದು ನೋಡುತ್ತಾನೆ ನೈವೇದ್ಯವಿಡುವ ಹರಿವಾಣವು ಬರಿದಾಗಿತ್ತು. ನಿತ್ಯವು ಉಳಿಯಬೇಕಾದ ಪಣತಿಯಲ್ಲಿದ್ದ ಎಣ್ಣೆ ಉರಿದು ತೀರಿ ಹೋಗಿದೆ. ಹೀಗಾಗಿ ತನ್ನ ಪಾಲಿನ ಅನ್ನ, ಎಣ್ಣೆ ಎಲ್ಲವನ್ನು ಹಾಳು ಮಾಡಿದವನು ಈತನೇ ಎಂದು ಅಲ್ಲಿಯೇ ಕುಳಿತ ಸೋಮದತ್ತನನ್ನು ಕೈಯೊಳಗಿನ ಬೆತ್ತದಿಂದ ತಲೆಗೆ ಪೆಟ್ಟು ತಾಕುವಂತೆ ಥಳಿಸಿದನು. ಪೂಜಾರಿಯ ಪೆಟ್ಟಿನಿಂದ ಸೋಮದತ್ತನು ತಕ್ಷಣದಲ್ಲಿ ಮರಣವನ್ನಪ್ಪಿದನು.

ಕೂಡಲೇ ಯಮನಾಳುಗಳು ತಮ್ಮ ಕರ್ತವ್ಯದಂತೆ ಸೋಮದತ್ತನನ್ನು ಯಮರಾಯನ ಬಳಿಗೆ ಒಯ್ದರು. ಅಲ್ಲದೇ ಚಿತ್ರಗುಪ್ತನು ಯಮಧರ್ಮನ ಸಮ್ಮುಖದಲ್ಲಿ ಕರಜೋಡಿಸಿ ನಿಂತು ಈ ಕುಕರ್ಮಿಯಾದ ಮಾನವನಿಗೆ ಕೊಡುವ ಶಿಕ್ಷೆ ಯಾವದು ಎಂದು ಕೇಳಿದನು.

ಅದಕ್ಕೆ ಯಮರಾಯನು ನಸುನಗುತ್ತ ಅಯ್ಯಾ ಚಿತ್ರಗುಪ್ತನೆ ಈತನಿಗೆ ಶಿಕ್ಷೆಯಾಗುವ ಬದಲು ಮೋಕ್ಷ ಸಿಗುವ ಪ್ರಸಂಗ ಉಂಟೆಂದು ಉಸುರಿದನು. ಆಗ ಚಿತ್ರಗುಪ್ತನು ಕಾರಣವನ್ನು ಕೇಳಲು ಈತನು ಶಿವಾಲಯದಲ್ಲಿ ಈಶ್ವರನ ಬಳಿಯಲ್ಲಿ ನಂದಿ ಹೋಗುತ್ತಿದ್ದ ದೀಪವನ್ನು ಉಳಿಸಿ ಪ್ರಕಾಶಗೊಳಿಸಿದ್ದು ಒಂದನೇ ಪುಣ್ಯ. ಶಿವಪ್ರಸಾದವನ್ನು ಇಚ್ಛೆ ಪಟ್ಟು ಸೇವಿಸಿದ್ದು ಎರಡನೇ ಪುಣ್ಯ. ಅಲ್ಲದೇ ಪರಮಾತ್ಮನ ಮೂರ್ತಿಯನ್ನು ಅಪ್ಪಿಕೊಂಡು ಪಶ್ಚಾತಾಪ ದಿಂದ ಕಣ್ಣೀರಿನ ಅಭಿಷೇಕಗೈದದ್ದು ಮೂರನೇ ಪುಣ್ಯ. ಹೀಗಾಗಿ ಇವನ ಮೊದಲಿನ ಪಾಪವೆಲ್ಲವು ನಶಿಸಿ ಪುಣ್ಯದ ಸ್ಥಿರಪಟ್ಟದೊರೆತು ಪರಶಿವನ ಪ್ರೀತಿಗೆ ಪಾತ್ರನಾಗಿದ್ದಾನೆ. ಅನಂತ ಪಾಪದ ರಾಶಿಯನ್ನು ನಾಶಗೊಳಿಸಿಕೊಂಡಿರುವ ಸೋಮದತ್ತನಿಗೆ ಭೂಲೋಕದಲ್ಲಿ ರಾಜಪದವಿ ದೊರೆಯಲೆಂದು ಶಿವನ ಆಜ್ಞೆ ಯಾಗಿದೆ ಎಂದು ಹೇಳಿ ಪರಮಾತ್ಮನ ಅಪ್ಪಣೆಯಂತೆ ಯಮರಾಯನು ಸೋಮದತ್ತನನ್ನು ತಿರುಗಿ ಭೂಮಿಗೆ ಕಳುಹಿಸಿದನು.

ಭೂಮಿಗೆ ಬಂದ ಸೋಮದತ್ತನು ಕಳಿಂಗ ದೇಶದ ಅರಸನ ಮಗನಾಗಿ ಹುಟ್ಟಿ ಶಿವಭಕ್ತ ಸಂಪನ್ನನಾಗಿ ನಿತ್ಯ ಲಿಂಗಪೂಜೆ ಈಶ್ವರ ಪೂಜೆಯಿಂದ

ತೃಪ್ತನಾಗಿ ಸಕಲ ವಿದ್ಯಾದಿಗಳಲ್ಲಿ ಬಲ್ಲಿದವನಾಗಿ ದಿನಾಲು ಇಪ್ಪತ್ತು ಸಾವಿರ ಕರ್ಪೂರ ದೀಪೋತ್ಸವದಿಂದ ಶಂಕರ ಲಿಂಗ ಮೂರ್ತಿಗೆ ಬೆಳಗುತ್ತಿದ್ದನು. ಪ್ರತಿ ಕಾರ್ತಿಕ ಮಾಸದಲ್ಲಿ ಕೋಟಿ ಸಂಖ್ಯೆಯಲ್ಲಿ ಕರ್ಪೂರ ದೀಪ ಬೆಳಗುವ ನೇಮದಲ್ಲಿ ಬಹುಕಾಲ ಬಾಳಿ ಮರಣವನ್ನಪ್ಪಿದನು ಎಂದು ಸೋಮ ದತ್ತನ ಘನ ಚರಿತ್ರೆಯನ್ನು ಹೇಳಿದ ಸುಜ್ಞಾನಿ ದೇವನು ನಿತ್ಯ ಕರ್ಮಗಳನ್ನು ಸಾಂಗಗೊಳಿಸಲು ಗುರುಬಸವರಾಜರ ಸೇವೆಗೆ ತೆರಳುತ್ತ ಬ್ರಾಹ್ಮಣ ಸಮೂಹಕ್ಕೆ ಬೆಳಗಿನ ಜಾವ ಮತ್ತೆ ಮಠಕ್ಕೆ ಬರಲು ತಿಳುಹಿಸಿ ಬೀಳ್ಕೊಟ್ಟನು.

— ೪ ನೇ ಕಥೆ —

ಸಾನಂದ ದೇಶದಲ್ಲಿ ಪಾಪ ಕರ್ಮಾಚರಣೆಯಲ್ಲಿ ಸಾಗಿದ ಸದಾಬಿಂದು ಎಂಬ ಶೂದ್ರನಾಯಕನಿದ್ದನು. ಬೇಸಾಯದೊಡನೆ ಅನೇಕ ಹೀನ ಕೃತಿಗಳೇ ಅವನ ನಿತ್ಯ ಉದ್ಯೋಗಗಳಾಗಿದ್ದವು. ಇಂತಹ ಚಂಡಾಲನ ಬಳಿಯಲ್ಲಿ ಅವನ ವ್ಯವಸಾಯಕ್ಕೆ ಸಹಾಯಕವಾಗಿ ಕೋಣ, ಕುರಿ, ಕೋಳಿ ಮುಂತಾದ ಪ್ರಾಣಿಗಳು ಜೋಪಾನವಾಗಿದ್ದವು. ಬರುಬರುತ್ತ ಕರ್ಮದ ಒತ್ತಡ ಹೆಚ್ಚಾಗಿ ಅವನ ಬಾಳಿನಲ್ಲಿ ಬೇಗುದಿಯನ್ನು ತಂದೊಡ್ಡಿದ ಬಿರುಗಾಳಿ ಬಲವಾಗಿ ಬೀಸಿ ಗಂಭೀರ ಪರಿಸ್ಥಿತಿಯನ್ನು ಎದುರಿಸುವ ಪ್ರಸಂಗ ಕೂಡಾ ಪ್ರಾಪ್ತವಾಯಿತು.

ಆಗ ಅನಿವಾರ್ಯವೆಂದು ತನ್ನ ಬಾಳಿನುದ್ದಕ್ಕೂ ಜೊತೆಯಾಗಿ ಬಂದ ಕೋಣವನ್ನು ಮಾರ ಬಯಸಿ ಹಲವಾರು ಪೇಟೆಗಳಿಗೆ ಒಯ್ದು ತೋರಿಸಿ ವಿಕ್ರಯದ ಬೆಲೆ ತಿಳಿಸಿ ಬೇಸತ್ತನು. ಕಾರಣವೇನಂದರೆ ಅವನ ಮಾರಾಟದ ಕೋಣವನ್ನು ಯಾವ ಪುಣ್ಯಾತ್ಮರೂ ಹತ್ತು ಕಾಸು ಸಹ ಕೊಟ್ಟು ಕೊಳ್ಳಲು ಸಿದ್ಧರಾಗಿ ಬರಲಿಲ್ಲ.

ಬಳಿಕ ಸಂತೆಯಿಂದ ಮರಳಿ ಬಂದ ಶೂದ್ರರಾಯನು ಕೋಣವನ್ನು ಗೂಟಕ್ಕೆ ಕಟ್ಟಿ ಹೊಟ್ಟೆಗೆ ಹಿಟ್ಟಿಲ್ಲದೇ ಕೃತ ಕರ್ಮದ ಪ್ರಾಯಶ್ಚಿತವೇನೋ

ಯನ್ನುವಂತೆ ಉಪವಾಸ ಬೀಳುವ ಪ್ರಸಂಗ ಪ್ರಾಪ್ತವಾಯಿತು. ಹೀಗೆ ಹಲವಾರು ದಿವಸ ಕಳೆದ ಬಳಿಕ ಒಂದು ದಿವಸ ಜೇಳು ಕಡಿದು ಶೂದ್ರ ಮಹಾರಾಯನು ಮರಣಕ್ಕೆ ತುತಾದನು.

ಬಳಿಕ ಶೂದ್ರನ ಕೋಣವು ಹಗ್ಗ ಹರಿದುಕೊಂಡು ಹುಲ್ಲು ನೀರುಗಳ ಆಸೆಯಿಂದ ಅಲೆಯುತ್ತ ಅತ್ಯಂತ ಶಿವಭಕ್ತರೊಬ್ಬರ ದಡ್ಡಿಯಲ್ಲಿ ಹೋಗಿ ಸೇರಿಕೊಂಡಿತು.

ಅತ್ತ ಸತ್ತ ಶೂದ್ರನ ಪಾಪಕರ್ಮದ ಫಲವೆಂದು ಯಮನಾಳುಗಳು ಪರಿಪರಿಯ ಚಿತ್ರ ಹಿಂಸೆಯಿಂದ ಶಿಕ್ಷಿಸ ಹತ್ತಿದರು. ಆ ಸಮಯದಲ್ಲಿ ಇತ್ತ ಕೋಣವು ಶಿವಭಕ್ತರ ದನಗಳ ಗುಂಪಿನಲ್ಲಿ ಹುಲ್ಲು ತಿಂದು ನೀರು ಕುಡಿದು ಸಂತೋಷದಿಂದ ಕಾಲ ಕಳೆಯುತ್ತಿರಲು ಒಂದು ದಿವಸ ಶಿವಭಕ್ತ ಶೆಟ್ಟರ ಆಳುಗಳು ಶೂದ್ರನ ಕೋಣವು ನಮ್ಮ ಕೋಣವೇ ಎಂದು ಭಾವಿಸಿ ತಮ್ಮ ಒಡೆಯ ಶೆಟ್ಟಿ ಕಟ್ಟಿಸುತ್ತಿದ್ದ ಶಿವದೇವಾಲಯದ ಕಲ್ಲು ಹೊರುತ್ತಿದ್ದ ಬಂಡಿಗೆ ಹೂಡಿ ಎಳೆಯಿಸಿದರು. ಇದರಿಂದ ತನ್ನ ಮಂದಿರದ ಕಲ್ಲು ಕಂಬ ಎಳೆದು ಶ್ರಮವಹಿಸಿದ ಕೋಣದ ಒಡೆಯ ಶೂದ್ರರಾಯನ ಮೇಲೆ ಸಹ ಪ್ರೀತಿ ತೋರಿಸಿ ನರಕದಲ್ಲಿದ್ದ ಆತನನ್ನು ಯಮನಿಂದ ಬಿಡುಗಡಿಸಿ ಕೈಲಾಸಕ್ಕೆ ಕರೆಯಿಸಿಕೊಂಡು ಅವನಿಗೆ ಅಮರ ಪದವಿಯನ್ನು ದಯಪಾಲಿಸಿದನು. ಇಂತಹ ಕರುಣಾಳು ಶಿವನ ಕರುಣೆ ದೊರೆಯಬೇಕಾದರೆ ಅದೆಷ್ಟು ಸುಲಭ ಎನ್ನುವದನ್ನು ನೀವೇ ತರ್ಕ ಮಾಡಿಕೊಳ್ಳಿರಿ. ಮೂಕ ಪ್ರಾಣಿಗಳ ಸೇವೆಯಲ್ಲಿ ಸಾಕಿದ ಒಡೆಯನನ್ನು ಉದ್ಧಾರಗೈದ ಉದ್ದಾಮ ಕರುಣಾಮೂರ್ತಿ ಶಿವನು ಅತೀ ಸುಲಭ ಎನ್ನುವದನ್ನು ಮರೆಯಬೇಡ ಎಂದು ಬ್ರಹ್ಮದೇವನು ತನ್ನ ಮಗ ನಾರದನಿಗೆ ತಿಳುಹಿಸಿದ್ದಾನೆ, ಅದನ್ನೇ ನಾರದನು ವಿಶ್ವಾಮಿತ್ರ ಮಹರ್ಷಿಗಳಿಗೆ ತಿಳಿಸಿದ್ದಾನೆ ಅದನ್ನೇ ಇಂದು ನಾವು ನಿಮಗೆ ತಿಳುಹಿಸಿ ಹೇಳಬೇಕಾಯಿತು ಎಂದು ಹೇಳಿ ಅಂದಿನ ಕಥಾಗೋಷ್ಠಿಗೆ ವಿರಾಮ ಕೊಟ್ಟರು.

————

— ೫ ನೇ ಕಥೆ —

ಮಹಾ ಮೇಧಾವಿಗಳಾದ ಬ್ರಾಹ್ಮಣಸಮೂಹವು. ಒಟ್ಟಾಗಿ ವಿರಾಟ ನಗರದರಸು ಶಿವ ದತ್ತನ ಕಥೆಯನ್ನು ಹೇಳುವದಾಗಿ ಗುರು ಬಸವರಾಜರ ಅಪ್ಪಣೆಯಾಗಿತ್ತು. ನಾವು ಆ ಕಥೆಯನ್ನು ಕೇಳ ಬಯಸಿದ್ದೇವೆ ಎಂದು ಸುಜ್ಞಾನಿದೇವರಲ್ಲಿ ಬಿನ್ನೈಸಿಕೊಳ್ಳಹತ್ತಿದರು.

ಆಗ ಸುಜ್ಞಾನಿ ದೇವನು ಅಯ್ಯಾ ಬ್ರಾಹ್ಮಣೋತ್ತಮರೆ ಶಿವದತ್ತನು ಸಚಿವ ಮತ್ತಿತರ ರಾಜ ಪರಿವಾರ ಪ್ರಜರಾದಿಗಳೆಲ್ಲರೊಡನೆ, ಸುಖದಿಂದ ರಾಜಭಾರ ಮಾಡಿಕೊಂಡಿದ್ದನು. ಇಂತಹ ಅರಸನಿಗೂ ಅವನ ಸಚಿವ ಶ್ರೇಷ್ಠನಿಗೂ ದೈವ ವಶಾತ್ ನೀಚರೆನಿಸಿದ ಮಕ್ಕಳು ಹುಟ್ಟಿದರು. ದುರ್ದೈವದಿಂದ ಅವರಿಬ್ಬರು ಮಕ್ಕಳು ಬರು ಬರುತ್ತ ದುರ್ಮದಾಂಧರೆನಿಸಿ ಚಂಡಾಲರಿಗಿಂತಲೂ ಚಂಡಾಲರ ಕಾರ್ಯಗೈಯುತ್ತ ಜನ, ದನ, ನಿರ್ಜನ ವಿಪಿನ ವಾಸಿಗಳಿಗೂ ಸಹ ಬೇಡಾದವರಾದರು.

ಇರ್ವರು ಮಕ್ಕಳ ಈ ನೀಚತನದಿಂದ ತಂದೆಗಳಿಬ್ಬರು ಬಲುಖೇದಗೊಂಡು ಶಿವ ಶಿವಾ ಧರ್ಮ ನೀತಿ ನ್ಯಾಯಗಳ ವಿರುದ್ಧ ವರ್ತಿಸುವ ಈ ನೀತಿ ಬಾಹಿರ ಮಕ್ಕಳು ಇದ್ದರೂ ಅಷ್ಟೇ, ಸತ್ತರೂ ಅಷ್ಟೇ. ಆದರೆ ಹಿಂಸೆ ಎಂಬ ಶಬ್ದಕ್ಕೆ ಅಂಜುವ ನಾವು ಇರ್ವರನ್ನ ಹಿಂಸಿಸಿ ಕೊಂದು ಕೊಲೆಪಾಲಕ ತಂದೆಗಳೆನಿಸಿಕೊಳ್ಳುವದಕ್ಕಿಂತಲೂ ಇವರನ್ನು ಊರು ಅಷ್ಟೇ ಅಲ್ಲಾ ನಮ್ಮ ನಾಡನ್ನೇ ಬಿಡಿಸಿ ಅಟ್ಟುವದು ಒಳ್ಳೇದೆಂದು ತೀರ್ಮಾನಿಸಿಕೊಂಡ ರಾಜ ಮಂತ್ರಿಗಳಿರ್ವರು ಭಟರನ್ನು ಕರೆಯಿಸಿ ಮಕ್ಕಳಾದ ಕರ್ಮಚಾಂಡಾಲರನ್ನು ಬಡಿದಟ್ಟಿ ಊರು ಬಿಡಿಸಿ ಬಿಡಿರೆಂದು ಆಜ್ಞಾಪಿಸಿದರು.

ರಾಜಾಜ್ಞೆಯಂತೆ ಭಟರು ರಾಜ ಪುತ್ರ ಮಂತ್ರಿಕುಮಾರ ಇರ್ವರನ್ನು ಪಟ್ಟಣದಿಂದ ದೂರ ಅಟ್ಟಿ ಬರುವ ಕಾರ್ಯ ಮಾಡಿ ತಂದೆಗಳಿರ್ವರಿಗೂ ಅವರು ಪಟ್ಟಣದಿಂದ ದೂರಾದ ವಿಷಯವನ್ನು ತಿಳಿಸಿ ಹೊರಟು ಹೋದರು. ಆಗ ಅರಸ, ಮಂತ್ರಿಗಳೀರ್ವರು ತಮ್ಮ ರಾಜ್ಯದಲ್ಲಿ ನೀಚರು ಇನ್ನಿಲ್ಲವಾದರೆಂದು ಸಂತಸದ ಉಸುರೆಳೆದರು.

ಅತ್ತ ಪಟ್ಟಣದಿಂದ ದೂರಾದ ಕುಮಾರ ಈರ್ವರು ಅಲ್ಲಿ ಇಲ್ಲಿ ಎಲ್ಲಿ ಬೇಕಲ್ಲಿ ಸುತ್ತಾಡಿ ಕೊನೆಗೆ ಕಾಮೇಂದ್ರ ಪುರಿಗೆ ಬಂದು ತಲುಪಿದರು. ಬಳಿಕ ವೃತ್ತಿಧರ್ಮ, ಸ್ವಭಾವ ಧರ್ಮದ ಪ್ರಕಾರ ಅಲ್ಲಿ ಓರ್ವ ಕೊಮುಟ ಶೆಟ್ಟಿಯ ಮನೆಗೆ ಕನ್ನಹಿಕ್ಕಿ ಒಳಗಡೆ ವಸ್ತು ಸಂಗ್ರಹ ಶೋಧಿಸಿದಾಗ ಆ ಮನೆಯಲ್ಲಿ ನೆಲ್ಲಕ್ಕಿ ಮಾತ್ರ ದೊರೆತವು. ಆಗ ಅನಿವಾರ್ಯವೆಂದು ಅಕ್ಕಿಯನ್ನು ತಮಗೆ ಸಾಧ್ಯವಾದಷ್ಟು ಕಟ್ಟಿಕೊಂಡು ಫರಾರಿಯಾದರು. ಮೂಟೆ ಕಟ್ಟಿ ಭಾರ ಹೊತ್ತು ಹೊರಟ ಈರ್ವರಿಗೂ ಭಾರ ಹೆಚ್ಚಾಗಿ ದಾರಿಯಲ್ಲಿ ಇಳಿಸಿಕೊಂಡು ಕುಳಿತರು.

ಒಳಿಕ ಕೆಲವು ಸಮಯದ ನಂತರ ಅದೇ ಹಾದಿಯಲ್ಲಿ ಓರ್ವ ವಿಪ್ರನು ಹೋಟು ಬಂದನು. ಈ ಕಳ್ಳ ಮಹಾಶಯರು ಭಾರವಾದ ತಮ್ಮ ಅಕ್ಕಿ ಮೂಟೆಗಳನ್ನು ಹೊರಿಸುವದಕ್ಕೆ ಆ ದಾರಿಕಾರ ವಿಪ್ರನಲ್ಲಿ ಕೇಳಿಕೊಂಡರು. ಇವರ ಬೇಡಿಕೆಯಂತೆ ಬ್ರಾಹ್ಮಣನು ಚೀಲಗಳನ್ನು ಅವರಿಗೆ ಹೊರಿಸುತ್ತ ನಾನು ಬಡವನು ನನಗಷ್ಟು ಅಕ್ಕಿಯನ್ನು ಕೊಟ್ಟು ಪುಣ್ಯಕಟ್ಟಿಕೊಳ್ಳುವವ ರಾಗಿರೆಂದು ಬೇಡಿಕೊಂಡನು.

ಆಗ ಮಂತ್ರಿ ಕುಮಾರ ಕಳ್ಳನು ಆಯ್ಯಾ ಅಪರಿಚಿತನೇ ನಾವು ಇಳಿಸು ವಾಗ ಇಲ್ಲಿ ಅಕ್ಕಿಯನ್ನು ಚಲ್ಲಿರುವದು ನಿನಗೆ ಕಾಣುತ್ತಿದೆಯಲ್ಲಾ, ಅವೂ ಸಾಕಷ್ಟುಬಿದ್ದಿವೆ. ಅವನ್ನೆಲ್ಲ ನೀನೇ ಒಯ್ಯುಬಹುದು ನಮಗೇನು ಬೇಡವೆಂದು ಬಿದ್ದ ಅಕ್ಕಿಯತ್ತ ಹೊರಳಿಸಹ ನೋಡದೆ ಹೊರಟು ಹೋದರು.

ಬಳಿಕ ಬ್ರಾಹ್ಮಣನು ಅಲ್ಲಿ ಬಿದ್ದ ಅಕ್ಕಿಯ ಕಾಳುಗಳನ್ನು ಪರಿಶ್ರಮ ಪಟ್ಟು ಆರಿಸಿಕೊಂಡು ಒಯ್ದು ಅನ್ನ ಬೇಯಿಸಿ ಲಿಂಗ ಮೂರ್ತಿಗೆ ಎಡೆಮಾಡಿ ಸುಪ್ರಸಾದವೆಂದು ಶಿವ ನಾಮಸ್ಮರಣೆಯಲ್ಲಿ ಊಟ ಮಾಡಿ ಸಂತೋಷ ಪಟ್ಟನು.

ಅತ್ತ ಕಳ್ಳರೆನಿಸಿದ ರಾಜಪುತ್ರ ಸಚಿವಕುಮಾರ ಈರ್ವರು ಕಳವು ಇನ್ನಿತರ ಹೀನ ಕಾರ್ಯಗಳಲ್ಲಿ ಮದವೇರಿ ಮನ ಬಂದಂತೆ ವರ್ತಿಸಿ ಓರ್ವ ಪಾತರದವಳ ಸಂಗದಲ್ಲಿ ಕೆಲದಿನ ಕಾಲ ಕಳೆದು ಕಾಲ ಕ್ರಮೇಣ ಅವರೀರ್ವ ರಲ್ಲಿ ಇರ್ಷೆ ಬೆಳೆದು ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ನಿರಾಶ್ರಿತ ಹೆಣವಾಗಿ ಸುಡಗಾಡದ ಸರಕಾದರು ಅವರೀರ್ವರ ಪ್ರಾಣವಿಲ್ಲದ ಮಾಂಸ

ಮಜ್ಜಾಸ್ತಿಗಳ ಪ್ರಾಣವಿಲ್ಲದ ಶರೀರಗಳು ನಾಯಿ, ನರಿ, ಹದ್ದು, ಕಾಗೆಗಳಿಗೆ ಆಹಾರವಾದವೇ ವಿನಃ ಹಿಡಿಮಣ್ಣು ಕಾಣಲಿಲ್ಲ, ಬೆಂಕಿಗೂ ಆಹುತಿಯಾಗ ಲಿಲ್ಲ. ಕರ್ಮಕ್ಕೆ ತಕ್ಕ ಪ್ರತಿಫಲವೇನೋ ಅನ್ನುವಂತಾಯಿತು.

ಆದರೆ ಅವರೀರ್ವರ ಜೀವಕಳೆಯನ್ನು ಶಿವನು ಆನಂದದಿಂದ ಕೈಲಾಸಕ್ಕೆ ಅಹ್ವಾನಿಸಲು ಶಿವದೂತರನ್ನು ಕಳುಹಿಸಿದನು. ಅಲ್ಲದೇ ಉಚಿತ ಮರ್ಯಾದೆ ಗಳಿಂದ ಕರೆತರಲು ಅಪ್ಪಣೆ ಮಾಡಿದನು. ಇದೆಲ್ಲವನ್ನು ನೋಡುತ್ತ ನಿಂತು ಕೊಂಡ ಇಂದ್ರನು ನಿಬ್ಬೆರಗಾದನಲ್ಲದೇ ಶಿವನ ಭಕ್ತವತ್ಸಲತೆಗೆ ಮೂಕ ಮೌನ ಆನಂದವನ್ನು ವ್ಯಕ್ತ ಪಡಿಸುತ್ತ ಅರಮನೆಗೆ ತೆರಳಿದನು.

ಆಗ ಅರಮನೆಯಲ್ಲಿ ನಂದೀಶ್ವರ ಯತಿಗಳು ಇಂದ್ರನ ಬರುವನ್ನು ಕಾಯ್ದುಕೊಂಡಿದ್ದರು. ಇಂದ್ರನು ಬರಲು, ತಡವಾದ ಕಾರಣ ಕೇಳಿದರು. ಅದಕ್ಕೆ ಇಂದ್ರನು ಶಿವಮಹಾದೇವನ ಸುಲಭ ಒಲುಮೆಗಾಗಿ ನಸುನಗುತ್ತ ಯತಿರಾಜಾ ಶಿವನ ಮಹಿಮೆಯನ್ನು ಕಾಣುವದಕ್ಕೆ ನಿಂತಿರಲು ತಡವಾಯಿ ತೆಂದು ಉತ್ತರ ಕೊಟ್ಟನು. ಅಲ್ಲದೇ ನಂದೀಶ್ವರ ಯತಿಗಳ ಅಪ್ಪಣೆಯ ಪ್ರಕಾರ ಕಳ್ಳರೆನಿಸಿದ, ಚಂಡಾಲರೆನಿಸಿದ, ನೀಚರಲ್ಲಿ ಅತೀ ನೀಚರೆನಿಸಿದ ಮಂತ್ರಿ ಪುತ್ರ ಹಾಗು ರಾಜಕುಮಾರರ ಕಥೆಯನು ಹೇಳಿ ಬ್ರಾಹ್ಮಣನ್ನು ಪ್ರಸಾದಕ್ಕಾಗಿ ಅಕ್ಕಿಯನ್ನು ಕೇಳಿದಾಗ ತಾವು ಕದ್ದು ತಂದ ಅಕ್ಕಿಯ ಸ್ವಲ್ಪ ಭಾಗ ಚಲ್ಲಿದ್ದನ್ನಾದರೂ ಶಿವಪ್ರಸಾದಕ್ಕೆ ಉಪಯೋಗವಾಗಲು ಬಿಟ್ಟುಕೊಟ್ಟ ಅಲ್ಪ ಪುಣ್ಯದ ಫಲ, ಪ್ರಸಾದ ಫಲ ಶಿವನ ಒಲುಮೆಗೆ ಕಾರಣವಾಗಿ ಅಂತಹ ನೀಚರಿಗೆ ಕೈಲಾಸ ಪದವಿ ದೊರೆಯುವಂತಾಯಿತು. ಆದರೆ ಮನಃಪೂರ್ವಕ ಬ್ರಾಹ್ಮಣರಿಗೆ, ಜಂಗಮ ಗಣಾರಾಧನೆಗೆ ಅನಾಥ ನಿರ್ಗತಿಕರಿಗೆ ಶಿವಪ್ರಸಾದ ರೂಪದಲ್ಲಿ ಅನ್ನ ಒದಗಿಸುವ ಪುಣ್ಯವಂತರಿಗೆ ಶಿವನು ಅದೆಷ್ಟು ಸುಲಭದಿಂದ ಮೋಕ್ಷ ಪದವಿಯನ್ನು ಕರುಣಿಸುತ್ತಾನೆ ಎಂದು ಆನಂದದ ಭರದಲ್ಲಿ ಇಂದ್ರನು ನಂದೀಶ್ವರ ಯತಿಗಳಿಗೆ ಹೇಳಿದನು. ನಾವು ಅದೇ ಸಂತೋಷದಿಂದ ಶಿವನು ಕರುಣಾಹೃದಯಿ ಭಕ್ತಪ್ರೇಮಿ ಎಂದು ಹೆಮ್ಮೆಯಿಂದ ಹೇಳುತ್ತೇವೆ ಎಂದರು.

————

— ೬ ನೇ ಕಥೆ —

ಪಟಿಂಗನು ಪಾಠ ಹೇಳುವ ಗುರುವಾಗಿದ್ದು

ಭಗವತಿ ಪುರದಲ್ಲಿ ಶಿವಭಕ್ತ ಶ್ರೀಧರಶೆಟ್ಟಿ ಎಂಬ ಶಿವಪೂಜಾನಿಷ್ಠ ಬ್ರಾಹ್ಮಣನೊಬ್ಬನು ನಾಲ್ಕು ಜನರಿಗೆ ಬೇಕಾದವನಾಗಿ ಬಾಳಿಕೊಂಡಿದ್ದನು. ಇಂತಹ ಸಂಪನ್ನ ಶೆಟ್ಟಿಯ ಹೊಟ್ಟೆಯಲ್ಲಿ ಕುಲ ಶೀಲಾದಿಗಳನ್ನು ಮರೆಯು ವಂತ ಕುಲಗೇಡಿ ಮಗನು ಹುಟ್ಟಿದ್ದನು. ಬೆಳೆದಂತೆ ಮಗನ ಹೀನ ವೃತ್ತಿಯೂ ಬೆಳೆಯತೊಡಗಿತು. ಇದರಿಂದ ಶ್ರೀಧರಶೆಟ್ಟಿಯು ಮಗನ ಉದ್ಧಾಮ ವೃತ್ತಿಗೆ ಬೇಸತ್ತು ಸಹಧರ್ಮಿಣಿಯೊಡನೆ ಯೋಚಿಸಿ ಮಗನಾದ ಚಿತ್ರನ ಪಟಿಂಗತನ ಅತೀಯಾಯಿತು. ಕಳ್ಳರ ಗುರುವಾಗಿ ವಂಚಕರ ಸಹವಾಸಿಯಾಗಿ ಮೆರೆಯ ಹತ್ತಿದ್ದಾನೆ ಎಂದು ತಿಳಿಸಿದನು.

ಆಗ ತಂದೆ–ತಾಯಿ ಈರ್ವರು ಒಂದು ತೀರ್ಮಾನಕ್ಕೆ ಬಂದು ಅವನನ್ನು ಮನೆ ಬಿಟ್ಟು ಊರನ್ನೇ ಬಿಡಿಸಿ ಕಳುಹಿಸಿ ನೆಮ್ಮದಿಯಿಂದ ಇರತೊಡಗಿದರು.

ಮುಂದೆ ಚಿತ್ರನು ಊರು ಬಿಟ್ಟು ತಾರ್ಕಿಕ ಪುರದಲ್ಲಿದ್ದುಕೊಂಡು ಸಮಯ ಸಾಧಿಸಿ ಸಂಕರ್ಷಣ ಎಂಬ ಧನಿಕ ಬ್ರಾಹ್ಮಣನ ಮನೆಯಲ್ಲಿ ಕಳವು ಮಾಡುತ್ತಿರುವಾಗಲೇ ಸಿಕ್ಕು ಬಿದ್ದನು. ಆಗ ಧನಿಕ ಬ್ರಾಹ್ಮಣನು ಚಿತ್ರನ ಮುಖದ ಮೇಲಿದ್ದ ಕರಿಯ ಬಟ್ಟೆಯನ್ನು ಬಿಚ್ಚುತ್ತ ಯಾರು ನೀನು ನಿನ್ನ ಊರು ಮನೆ ಮಾರು ಎಲ್ಲವನ್ನು ಸರಿಯಾಗಿ ಹೇಳಲೇಬೇಕೆಂದು ಹಠಹಿಡಿದ ನಲ್ಲದೇ ನಿಜ ಸಂಗತಿಯನ್ನು ಹೇಳಿ ಮುಂದೆ ಈ ರೀತಿ ಕಳ್ಳತನದಂತಹ ಹೀನ ವೃತ್ತಿಗಿಳಿಯುವದಿಲ್ಲ ಎಂದು ಶಿವಲಿಂಗದ ಮೇಲೆ ಆಣೆ ಇಟ್ಟು ವಚನ ಕೊಡು ಎಂದನು.

ಆದರೂ ಚಿತ್ರನು ಮರ್ಯಾದೆ ಹೋಗುವದೆಂಬ ಭಯದಲ್ಲಿ ನಿಜ ಹೇಳಲು ಹಿಂಜರೆಯುತ್ತಿರುವಾಗ ಸಂಕರ್ಷಣ ಧನಿಕನು ಶ್ರೀಧರಶೆಟ್ಟಿಯ ಮಗ ಚಿತ್ರನೆಂದು ಗುರ್ತು ಹಿಡಿದು ಒಳಿತಾಗಿ ಛೀ ಹಾಕುತ್ತ ಶ್ರೇಷ್ಠ ಬ್ರಾಹ್ಮಣ ವಂಶದಲ್ಲಿ ಹುಟ್ಟಿ ಈ ರೀತಿ ಕಳವು ಮಾಡಲು ನಾಚಿಕೆಯಾಗುವ ದಿಲ್ಲವೇ ? ಅವಿವೇಕಿ ಎಂದು ಬೈದು ಆದದ್ದು ಆಗಿ ಹೋಯಿತು ಇನ್ನಾದರೂ

ಒಳ್ಳೆದೋ ಕೆಟ್ಟದ್ದೋ, ನೀತಿಯೋ ಅನೀತಿಯೋ, ಧರ್ಮವೋ ಅಧರ್ಮವೋ ಅಂತೂ ಸ್ವಲ್ಪವುಟ್ಟಿಗಾದರೂ ಸಧಾಶಿವನ ಒಲುಮೆಗಾಗಿ ಹಂಬಲಿಸಿ ಶಿವನಿಂದ ದೊರೆಯುವ ಅತೀ ಸುಲಭವಾದ ಮೋಕ್ಷ ಮಾರ್ಗವನ್ನು ಹುಡುಕಿಕೊಳ್ಳುವದಕ್ಕೆ ಪ್ರಯತ್ನಿಸಬಾರದೆ ಎಂದು ತಿಳುವಳಿಕೆ ಹೇಳಿದನು. ಮತ್ತು ಅವನ ಮೂಢತನಕ್ಕೆ ಮರಮರನೇ ಮರುಗಿದನು.

ಆಗ ಚಿತ್ತನು ತಕ್ಕಮಟ್ಟಿಗೆ ಪಶ್ಚಾತ್ತಾಪಗೊಂಡವನಾಗಿ ಅಣ್ಣಾ ಶಿವನನ್ನು ಒಲಿಸಿಕೊಳ್ಳುವ ಮಾರ್ಗವನ್ನೇ ತಿಳಿಯದ ನಿನ್ನಿಂದ ಶಿವನನ್ನು ಪ್ರಸನ್ನೀಕರಿಸಿಕೊಳ್ಳಲು ಸಾಧ್ಯವೇ ? ಎಂದು ಮರು ಪ್ರಶ್ನೆ ಮಾಡಿದನು.

ಬಳಿಕ ಧನಿಕ ಶೆಟ್ಟಿಯು ಕೆಲವು ಸಮಯ ಯೋಚಿಸಿ ಅಯ್ಯಾ ಚಿತ್ತನೆ ನಿನ್ನ ಮನಸ್ಸನ್ನು ಅತೀ ತೀವ್ರವಾಗಿ ಆಕರ್ಷಿಸುವ ವಸ್ತು ಯಾವದು ? ನಿಜ ಹೇಳು ಯಾವದನ್ನೂ ಮರೆಮಾಚಬೇಡವೆಂದನು. ಅದಕ್ಕೆ ಚಿತ್ತನು ಅಣ್ಣಯ್ಯಾ ನನ್ನ ಮನಸ್ಸನ್ನು ಅತೀ ಶೀಘ್ರವಾಗಿ ಸೆರೆ ಹಿಡಿಯುವ ವಸ್ತು ಎಂದರೆ, ಸ್ತ್ರೀಯರ ಉನ್ನತ ವಿಶಾಲ ಕುಚಮರ್ದನ ಹಾಗು ಆ ಲಿಂಗನ ಎಂದ ಹೇಳಿದನು. ಆಗ ಧನಿಕನು ಮದದಲ್ಲಿ ನಸುನಕ್ಕು ಚಿತ್ತನೇ, ಆ ಯಾವ ಕುಚಗಳೇ ಲಿಂಗವೆಂದು ಭಾವಿಸಿ ಸದಾಕಾಲ ಅವುಗಳ ಧ್ಯಾನದಲ್ಲಿ ಕಾಲ ಕಳೆಯುವವನಾಗು. ಮನಸಾರೆ ಶಿವಲಿಂಗರೂಪವೆಂದು ತಿಳಿದುಕೊಂಡು ಬಾಳುವವನಾಗು ಖಂಡಿತ ನಿನಗೆ ಮೋಕ್ಷ ಸಿಗುವದೆಂದು ಹೇಳಿ ಅವನನ್ನು ಕಳುಹಿಸಿದನು.

ಮುಂದೆ ಕೆಲವು ದಿವಸದ ನಂತರ ಅವನ ಅಭಿಷ್ಟದಂತೆ ಉನ್ನತ ಕುಚದ ಸ್ತ್ರೀಯಳ ಸಂಗವಾಗಿ ಚಿತ್ತನು, ಆ ಹೆಣ್ಣಿನ ಕುಚಗಳೇ ಲಿಂಗವೆಂದು ಭಾವಿಸಿ ಸದಾ ಅವುಗಳ ಧ್ಯಾನದಲ್ಲಿ ಕಾಲ ಕಳೆಯಲು ಮರೆಯಲಿಲ್ಲ. ಬಳಿಕ ಕೆಲವು ದಿವಸದ ನಂತರ ಆ ಸ್ತ್ರೀಯು ಅವನಿಂದ ದೂರಾದರೂ ಆ ಕುಚ ಲಿಂಗಗಳ ಹಂಬಲ ದೂರಾಗಲಿಲ್ಲ. ಕೆಲವು ಕಾಲದ ಬಳಿಕ ಅಡವಿಯಲ್ಲಿ ಅದೇ ಧ್ಯಾನದಲ್ಲಿ ಮಲಗಿರಲು ವಿಪಿನವದು ಅಗ್ನಿಗಾಹುತಿಯಾಗಲು ಚಿತ್ತನು ಸಹ ಆ ಅಗ್ನಿ ನಾರಾಯಣನಿಗೆ ಆಹೂತಿಯಾಗುವ ಸಮಯದಲ್ಲಿ ತಾನು ಅಪೇಕ್ಷೆ

ಪಟ್ಟು ಮರ್ದಿಸಿ ಸ್ತ್ರೀಯಳ ಕುಚಗಳಲ್ಲಿ ಅತ್ಯಂತ ಭಕ್ತಿಪೂರಕ ವಿಶ್ವಾಸವಿಟ್ಟು ಲಿಂಗವೆಂದೆ ಭಾವಿಸಿ ಭಾವನಾಪರವಶತೆಯಲ್ಲಿ ತಾನು ಅಗ್ನಿಗೆ ಆಹೂತಿಯಾಗು ತ್ತೇನೆ, ಎನ್ನುವದರ ಕಡೆಗೆ ಸಹ ಲಕ್ಷ್ಯಗೊಡದೇ ಅದೇ ಧ್ಯಾನ, ಅದೇ ಭಕ್ತಿ ಯಿಂದಾಗಿ ಚಿತ್ತನು ಬೆಂಕಿಯ ಬಾಯಿಗೆ ತುತ್ತಾಗಿ ಮರಣವನ್ನಪ್ಪಿದನು.

ಬಳಿಕ ಯಮಭಟರು ಆತನನ್ನು ಯಮನ ಬಳಿಗೆ ತಂದು ನಿಲ್ಲಿಸಲು ಯಮನು ಚಿತ್ತನ ನೀಚ ಗುಣಗಳನ್ನು ತಿಳಿದವನಾದ ಪ್ರಯುಕ್ತ ಭಟರನ್ನು ಈ ಚಾಂಡಾಲ ಕುಲಗೇಡಿಯನ್ನು ಪರಿ ಪರಿಯ ಶಿಕ್ಷೆ ಕೊಟ್ಟು ಪಾಪಕ್ಕೆ ಸರಿಯಾದ ಕಠಿಣವಾದ ದಂಡನೆಯಾಗಬೇಕೆಂದು ಆಜ್ಞಾಪಿಸಿ ಹೊರಟಿರಲು, ಅಷ್ಟರಲ್ಲಿ ಚಿತ್ರಗುಪ್ತನು ಪಾಪ, ಪುಣ್ಯ, ಧರ್ಮಾ ಧರ್ಮಗಳ ಯಾದಿಯನ್ನು ತಯಾರಿಸಿಕೊಂಡು ಬರುತ್ತ ಯಮರಾಯನು ಚಿತ್ತನಿಗೆ ಶಿಕ್ಷೆ ನೀಡಿದ್ದನ್ನು ಕೇಳಿ ಪ್ರಭೋ ಈತನು ಅದೆಷ್ಟೋ ಪಾಪಗಳನ್ನು ಮಾಡಿರಬಹುದು, ಪಟಿಂಗ, ವಂಚಕರ ಗುರುವಾಗಿ ಅದೆಷ್ಟೋ ಮೋಸದ ಕಾರ್ಯಗಳನ್ನೆಸಗಿರುವದು ನಿಜ. ಆದರೆ ಅರಿತೋ ಅರಿಯದಲೋ ಶಿವಲಿಂಗ ಪೂಜಾಲೋಲನಾಗಿ ಲಿಂಗಪೂಜಾ ದುರಂಧರನಾಗಿದ್ದಾನೆ ಎಂದು ತಿಳುಹಿಸಿದನು.

ಆಗ ಯಮಧರ್ಮನು ಲಿಂಗಪೂಜಾಲೋಲ ಎನಿಸಿದ ಚಿತ್ತನನ್ನು ಶಿಕ್ಷಿಸಿ ಶಿವನ ಕೋಪಕ್ಕೆ ಗುರಿಯಾಗುವ ಪ್ರಸಂಗ ನನಗೆ ಪ್ರಾಪ್ತವಾಗದಿರದೆಂದು ಅತೀ ತೀವ್ರ ಅವನನ್ನು ತಿರುಗಿ ಭೂಮಿಗೆ ಕಳುಹಿಸಿದನು. ಭೂಮಿಗೆ ಬಂದ ಚಿತ್ತನು ಪಟಿಂಗರಿಗೂ; ಕಳ್ಳರಿಗೂ, ವಂಚಕರಿಗೂ, ಶಿವಲಿಂಗಪೂಜಾ ಮಹಿಮೆ ಯನ್ನು ಹೇಳುವ ಗುರುವಾಗಿ ಕೆಲವು ಕಾಲ ಬಾಳಿ ಶಿವಸಾಯುಜ್ಯ ಪದವಿ ಯನ್ನು ಪಡೆದನು. ಕೇಳಿದಿರಾ, ಬ್ರಾಹ್ಮಣೋತ್ತಮರೇ ಪಟಿಂಗ ಸಹ ಗುರುವೆನಿಸಿದ ಪರಿಯನ್ನು ಎಂದು ಹೇಳಿ ಅಂದಿನ ಕಥೆಯನ್ನು ಮುಗಿಸಿದರು.

— ೭ನೇ ಕಥೆ —

ಶಂಭು ಎಂಬ ಮಿತ್ರನ ಹೆಸರು ಪ್ರೀತಿಯಿಂದ ಕರೆಯಲು ಮೋಕ್ಷ ದೊರೆತದ್ದು

ಅಯ್ಯಾ ಭೂಸುರರೆ ಕೊನೆಯದಾಗಿ ನಿಮಗೆಲ್ಲರಿಗೂ ಆಶ್ಚರ್ಯ ಆನಂದಗಳನ್ನುಂಟು ಮಾಡುವ ಮತ್ತೊಂದು ಕಥೆಯನ್ನು ಹೇಳುತ್ತೇನೆ ಕೇಳಿರಿ. ಸೌರಾಷ್ಟ್ರ ಪುರದಲ್ಲಿ ಕೌಶಿಕ ಎಂಬ ಬ್ರಾಹ್ಮಣನು ಸರ್ವ ಸುಖಸಂಪತ್ತಿನಲ್ಲಿ ಬಾಳಿಕೊಂಡಿದ್ದನು. ಆದರೆ, ಅತೀ ಕಾಮುಕನಾದ ಆ ವಿಪ್ರನು ಓರ್ವ ಮಾದಗಿತ್ತಿಯ ಸಂಗದಲ್ಲಿ ವಿಲಾಸ ವೈಖರಿಯಲ್ಲಿ ಕಾಲ ಕಳೆಯುತ್ತಿದ್ದನು. ಆದರೆ ಆ ಮಾದಗಿತ್ತಿಯ ಗಂಡನು ವಿಪ್ರನ ಈ ಉಡಾಳತನವನ್ನು ಅರಿತು ಸಮಯ ಸಾಧಿಸಿ ಈತನ ಕೊಲೆ ಮಾಡದೆ ಬಿಡಬಾರದೆಂದು ತೀರ್ಮಾನಿಸಿ ಸಮಯವನ್ನು ಕಾಯುತ್ತಿರಲು, ಅದೆಷ್ಟೋ ದಿವಸಗಳು ಗತಿಸಿದವು.

ಬಳಿಕ ಒಂದು ದಿನ ಕೌಶಿಕನು ಮಾದಗಿತ್ತಿಯ ಮನೆಗೆ ಬರಬೇಕೆಂದು ತನ್ನ ಆಳಿನ ಸಂಗಡ ಹೇಳಿಕಳುಹಿಸಲು, ಇಂದು ರಾತ್ರಿ ಹೇಗೂ ಬ್ರಾಹ್ಮಣನು ನನ್ನ ಹೆಂಡತಿಯ ಬಳಿಗೆ ಬರುವದು ನಿಶ್ಚಿತವೆಂದು ತಿಳಿದು ಹೆಂಡತಿಯನು ಕರೆದು ಇಂದು ನಾನು ಪರಊರಿಗೆ ಹೋಗುತ್ತೇನೆ, ಇಂದೇ ತಿರುಗಿ ಬರುವದು ಆಗುವದಿಲ್ಲ. ಅಲ್ಲಿಯೇ ಉಳಿಯುತ್ತೇನೆ ಎಂದು ತಿಳಿಸಿ ಅವಳಿಗೂ ಮೋಸ ಮಾಡಿ ಕತ್ತಲೆಯ ಸಮಯದಲ್ಲಿ ಸಾವಕಾಶವಾಗಿ ಒಳಗೆ ಬಂದು ಹೆಂಡತಿಗೆ ಅರಿಯದಂತೆ ಅಟ್ಟದ ಮೇಲೆ ಅಡಗಿ ಕುಳಿತುಕೊಂಡನು.

ಬಳಿಕ ಕೆಲವು ಸಮಯದ ನಂತರ ಕೌಶಿಕನು ಹೇಳಿ ಕಳಿಸಿದಂತೆ ಒಳ್ಳೇ ಬರ್ಜರಿಯ ವಸ್ತ್ರಗಳಿಂದಲೂ ಸುಗಂಧ ದ್ರವ್ಯಗಳಿಂದಲೂ ಟಾಪ ಟೀಪ ಆಗಿ ಬಂದು ಮನೆ ಹೊಕ್ಕು ಮಾದಗಿತ್ತಿಯೊಡನೆ ಸುಖ–ಸಂತೋಷದಲ್ಲಿ ಕಣ್ಣು ಮುಚ್ಚಿರುವ ಸಮಯ ಸಾಧಿಸಿ ಮಾದಗಿತ್ತಿಯ ಗಂಡನು ಅಟ್ಟದಿಂದ ಇಳಿದು ಬಂದು ಸಿಟ್ಟಿನ ಭರದಲ್ಲಿ ಕೌಶಿಕನ ಶಿರವನ್ನು ಕತ್ತರಿಸಿ ಹಾಕಿ ತನ್ನ ಸೇಡನ್ನು ತೀರಿಸಿಕೊಂಡನು.

ಆಗ ಯಮ ಭಟರು ತಮ್ಮ ಕರ್ತವ್ಯದಂತೆ ಕೌಶಿಕನನ್ನು ಯಮ ಲೋಕಕ್ಕೆ ಒಯ್ಯಲು ಬಂದರು. ಅಷ್ಟರಲ್ಲಿ ಶಿವಗಣರು ಯಮಭಟರನ್ನು ತರುಬಿ ನಿಲ್ಲಿಸಿ ಅಯ್ಯಾ, ಯಮಭಟರೇ ಈ ಬ್ರಾಹ್ಮಣನು ಶಿವನ ಸೊತ್ತು ಈತನನ್ನು ನರಕಯಾತನೆಗೆ ಗುರಿ ಮಾಡುವದು ಉಚಿತವಲ್ಲವೆಂದು ಹೇಳಿ ಬ್ರಾಹ್ಮಣನನ್ನು ತಮ್ಮತ್ತ ಸೆಳೆದುಕೊಳ್ಳಲು ಮುಂದಾದರು. ಅಗ ಯಮ ನಾಳುಗಳು ಅದು ಹೇಗೆ ಸಾಧ್ಯ. ಈತನು ಅನಂತ ಪಾಪ ಕರ್ಮಗಳನ್ನು ಮಾಡಿರುವದಲ್ಲದೇ ಮಾಡಿಕೊಂಡ ಹೆಂಡತಿಗೆ ತಿಳಿಯದಂತೆ ಮಾದಗಿತ್ತಿಯ ಸಂಗ ಮಾಡಿ ಅವಳ ಜೀವನವನ್ನು ಹಾಳು ಮಾಡಿದ್ದಲ್ಲದೇ ಮನೆಮುರುಕುತನ ಡಂತಹ ಹೀನ ಕಾರ್ಯಮಾಡಿದ್ದಾನೆ ಎಂದು ಅವರು ಅಡ್ಡೈಸಿದರು.

ಅದಕ್ಕೆ ಶಿವಗಣರು ಅಯ್ಯಾ, ಅರಿಯದಲೇ ಶಂಭುವಿನ (ಅಂದರೆ ಶಿವನ) ನಾಮೋಚ್ಚಾರವು ಇವನ ಮುಖದಿಂದ ಪದೇ ಪದೇ ಹೊರಟು ಈತನ ಪಾಪ ವೆಲ್ಲ ನಾಶವಾಗಿದೆ ಎಂದು ತಿಳಿಯಿರಿ ಎಂದು ಹೇಳಿದರು. ಅಷ್ಟಕ್ಕೂ ಯಮ ನಾಳುಗಳು ಸುಮ್ಮನಾಗದೇ ಅದು ಹೇಗೆ ಎಂದು ಮರು ಪ್ರಶ್ನೆ ಮಾಡಲು ಶಿವಗಣರು ಈತನು ಗೆಳೆಯರೊಡನೆ ಆಟವಾಡುವ ಸಮಯದಲ್ಲಿ ತನ್ನ ಪ್ರೀಯ ಮಿತ್ರ ಶಂಭುಲಿಂಗನನ್ನು ಬಾರಿ ಬಾರಿಗೂ ಪ್ರೀತಿಯಿಂದ ಪ್ರೇಮದಿಂದ ವಿಶ್ವಾಸಪೂರ್ವಕವಾಗಿ ಶಂಭು, ಶಂಭುಲಿಂಗಾ ಎಂದು ಕರೆಯುತ್ತಿದ್ದ ಕಾರಣ ಶಿವ ನಾಮೋಚ್ಚಾರವು ತನ್ನ ತಾನೇ ನಿರಂತರವಾಗಿ ಸಾಗಿರುವದನ್ನು ಕಂಡು ಶಿವನು ಸಂಪ್ರೀತಿಯಿಂದ ಅವನ ಕರ್ಮವನ್ನೆಲ್ಲ ಕಳೆದು ಬಿಟ್ಟಿದ್ದಾನೆ ಎಂದು ಹೇಳಿದರು. ಅಂತೇ ಅವನಿಗೆ ಗಣ ಪದವಿ ದೊರತಿದೆ ಎಂದು ಕೈಲಾಸಕ್ಕೆ ಕರೆದುಕೊಂಡು ಹೋದರು. ಶಿವಗಣ ಸಾಲಿನಲ್ಲಿ ಅವನ ಹೆಸರುಳಿಯಿತು ಎಂದು ಹೇಳಿದರು. ಶಿವನಾಮೋಚ್ಚಾರದ ಮಹಿಮೆ ಹೀಗಿರುವಾಗ ನಿತ್ಯ ನಿರ್ಮಲ ಮನಸ್ಸಿನಿಂದ ಶಿವನಾಮೋಚ್ಚಾರಗೈದವರಿಗೆ ಶಿವನು ಅದೆಷ್ಟು ಸುಲಭವಾಗಿ ಒಲಿದು ಮೋಕ್ಷವನ್ನು ಕರುಣಿಸುತ್ತಾನೆ ಎನ್ನುವದನ್ನು ಅರಿತು ಕೊಳ್ಳಿರಿ ಎಂದು ಹೇಳಿದರು.

---

೫ ನೇ ಸಂಧಿ

ದೇವತೆಗಳು ಶಿವನನ್ನು ಪ್ರಸನ್ನಗೊಳಿಸಿದ ಕಥೆಗಳು

ಎಂದಿನಂತೆ ಗುರುಬಸವರಾಜರ ದರ್ಶನಾಶೀರ್ವಾದಗಳ ಅಪೇಕ್ಷೆಯಿಂದ ಹಲವಾರು ಪುರವಾಸಿ ಭಕ್ತರು ಹಾಗು ಬ್ರಾಹ್ಮಣ ಸಮೂಹವು ಬಂದು ಸೇರಿತು. ಅಂದಿನ ದಿವ್ಯವಾದ ಸಭೆಯಲ್ಲಿ ಗುರುಗಳು ತಮ್ಮ ನಿತ್ಯ ಕರ್ತವ್ಯ ಗಳನ್ನು ತೀರಿಸಿಕೊಂಡು ಬಂದು ಪೀಠದಲ್ಲಿ ಮಂಡಿಸಿದ್ದಾರೆ. ಶಿಷ್ಯರಾದ ಸುಜ್ಞಾನಿದೇವರು ಗುರುಬಸವರಾಜರ ಅಪ್ಪಣೆಯ ಪ್ರಕಾರ ಭೂಸುರರಿಗೆ ಶಿವನಲ್ಲಿ ಸುಲಭ ರೀತಿಯಿಂದ ಮೋಕ್ಷ ದೊರೆಯುವ ಅನೇಕ ಕಥೆಗಳನ್ನು ಹೇಳಿ ತಮ್ಮ ಕರ್ತವ್ಯ ಪೂರೈಸಿದ್ದಾರೆ.

ಇಂದಿನ ಕಥಾ ಗೋಷ್ಠಿಯು ಮತ್ತೆ ಗುರುಬಸವರಾಜರಿಂದೆ ಮುಂದು ವರೆಯಬೇಕೆಂದು ಭಕ್ತರ ಹಾಗೂ ಬ್ರಾಹ್ಮಣರ ಉತ್ಕೃಷ್ಟ ಅಭಿಲಾಷೆ, ಭಕ್ತರ ಅಭಿಲಾಷೆಯನ್ನು ಅಲ್ಲಗಳೆಯಬಾರದೆಂದು ಗುರುಬಸವರಾಜರು ಸಭೆಯನ್ನು ಉದ್ದೇಶಿಸಿ ಅಯ್ಯಾ ಭಕ್ತ ಶ್ರೇಷ್ಠರೇ, ಶಿವನ ಬಗ್ಗೆ ಅದೆಷ್ಟು ತರಹದ ದೃಷ್ಟಾಂತಗಳನ್ನು ಹೇಳಿದರೂ ಕಡಿಮೆ ಶಿವ ಮಹಾದೇವನ ಮಹಿಮೆ ಯನ್ನು ಅರಿಯುವದಕ್ಕಾಗಿ ನಾವು ನೀವುಗಳೆಲ್ಲರು ಮಾನವರಾಗಿ ಪ್ರಯತ್ನ ಪಟ್ಟಂತೆ ದೇವಾನುದೇವತೆಗಳೆಲ್ಲರೂ ಸ್ಥಾನ ಮಾನಗಳನ್ನು ಪಡೆದುಕೊಂಡು ಪರಮಾತ್ಮನಿಂದ ತಮಗೆ ಒಪ್ಪಿಸಲ್ಪಟ್ಟ ಕರ್ತವ್ಯ ಕರ್ಮ ಕಾರ್ಯಗಳನ್ನು ಪೂರೈಸುತ್ತಿದ್ದಾರೆ ಎನ್ನುವದನ್ನು ಈ ದಿವಸ ಅನೇಕ ಕಥೆಗಳಿಂದಲೂ, ಹಲವಾರು ದೃಷ್ಟಾಂತಗಳಿಂದಲಇ ತಮ್ಮೆಲ್ಲರ ಮನಸ್ಸು ಒಪ್ಪುವ ರೀತಿಯಲ್ಲಿ ಹೇಳ ಬಯಸಿದ್ದೇವೆ. ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ, ಅಷ್ಟದಿಕ್ಪಾಲಕ ರಾದಿಯಾಗಿ ಸರ್ವ ದೇವಾನುದೇವತೆಗಳು ಶಿವನನ್ನು ಪ್ರಸನ್ನೀಕರಿಸಿಕೊಳ್ಳಲು ಉಗ್ರವಾದ ತಪಸ್ಸುಗೈದು ಮಹಾದೇವನ ಪ್ರೀತಿಯನ್ನು ಸಂಪಾದಿಸಿ ಪ್ರತಿ ಯೋರ್ವನು ವರ ಪಡೆದು ತಮ್ಮ ತಮ್ಮ ಇಷ್ಟದಂತೆ ಸುಖ ಭೋಗ ಭಾಗ್ಯ ಗಳನ್ನು ಹೊಂದಿ ಸಂತೋಷದಿಂದ ತಮ್ಮ ಕರ್ತವ್ಯ ಪಾಲಿಸುತ್ತಿದ್ದಾರೆ ಎನ್ನುವದರ ಬಗ್ಗೆ ನಾವೀಗ ನಿಮಗೆ ಕಥೆ ಹೇಳಬೇಕಾಗಿದೆ. ಮೊದಲನೆಯ

ದಾಗಿ ಶಿವ–ಪಾರ್ವತಿಯರ ಒಲುಮೆಯಲ್ಲಿ ಪುತ್ರಪ್ರಾಪ್ತಿಗಾಗಿ ವಿಷ್ಣು ಕಾಶಿಯಲ್ಲಿ ತಪಸ್ಸು ಮಾಡಿದ ಕಥೆ ಹೇಳುತ್ತೇವೆ, ಕೇಳಿರಿ.

ವಿಷ್ಣುವು ಕಾಶಿಯಲ್ಲಿ ಶಿವನನ್ನು ಕುರಿತು ತಪಸ್ಸು ಗೈಯುತ್ತಿದ್ದವನು. ಹಮ್ಮಿನ ದಮ್ಮು ಮುಂದಾಗಿ ಮಾತೆ ಪಾರ್ವತಿಯನ್ನು ಮರೆತು ಶಿವನನ್ನು ಮಾತ್ರ ಪೂಜಿಸಿ ತಪಸ್ಸಿದ್ಧಿಯನ್ನು ಹೊಂದಿದನು. ಶಿವನು ವಿಷ್ಣುವಿನ ತಪಸ್ಸಿಗೆ ಮೆಚ್ಚಿ ಅಯ್ಯಾ ವಿಷ್ಣುವೇ ನಿನಗೆ ಕಂದರ್ಪ ಎಂಬ ಮಗನನ್ನು ಅನುಗ್ರಹಿಸಿದ್ದೇನೆ ಎಂದು ವರವಿತ್ತು ಬಯಲಾದನು. ಆಗ ವಿಷ್ಣುವಾದರೂ ಶಿವನ ವರದಿಂದ ಸಂತುಷ್ಟನಾಗಿ ಶಿವನನ್ನು ಅನನ್ಯ ಭಕ್ತಿಯಲ್ಲಿ ಕೊಂಡಾಡುತ್ತ ಹೊರಟು ಹೋದನು.

ಆದರೆ ಪಾರ್ವತಿಯು ತನ್ನನ್ನು ಧ್ಯಾನಿಸದ ವಿಷ್ಣುವಿನ ಬಗ್ಗೆ ಸಿಟ್ಟಿ ಬೆಂಕಿಯಾದಳಲ್ಲದೇ ವಿಷ್ಣುವನ್ನು ಕರೆದು ನನ್ನ ಧ್ಯಾನ ಅರ್ಚನೆಯ ಮರುವಿನಲ್ಲಿ ಮಗುವನ್ನು ಪಡೆದುಕೊಂಡೆನೆಂದು ಹಿಗ್ಗ ಬೇಡ ನಿನ್ನ ಮಗನು ಉರಿವ ಕಣ್ಣಿನಿಂದ ಮರಣ ಹೊಂದಲಿ ಎಂದು ಶಾಪವಿತ್ತಳು.

ಮುಂದೆ ಪಾರ್ವತಿಯ ಶಾಪವಾಣಿಯಂತೆ ಕಂದರ್ಪ (ಕಾಮದೇವನು) ಶಿವನ ಉರಿಗಣ್ಣಿಗಾಹುತಿಯಾಗಿ ಮರಣವನ್ನಪ್ಪಿದನು. ಆಗ ಕಮಲಾಕ್ಷನು ಪುನಃ ಶಿವನನ್ನು ಪ್ರಾರ್ಥಿಸಿ ನನ್ನ ಮಗನು ಚಿರಂಜೀವಿಯಾಗುವಂತೆ ಕರುಣೆ ದೋರಬೇಕೆಂದು ಬಿನ್ನೈಸಿಕೊಂಡನು. ಆಗ ಶಿವನು ಮುಗುಳು ನಗೆ ನಕ್ಕು ಕಮಲಾಕ್ಷಾ ನನ್ನ ಸತಿಯ ಸಿಟ್ಟು ಶಮನಗೊಳ್ಳುವಂತೆ ಅವಳನ್ನು ಪ್ರಸನ್ನೀಕರಿಸಿಕೊಳ್ಳಲು ಪ್ರಯತ್ನಿಸು ಎಂದು ಬೋಧ ಮಾಡಿದನು.

ಆಗ ಶಿವನ ಬೋಧೆಯ ಪ್ರಕಾರ ಅಗಜೆಯನ್ನು ಅನನ್ಯ ಭಕ್ತಿಯಿಂದ ಸ್ತುತಿಸಲು ಆಗ ಉಮಾದೇವಿಯು ವಿಷ್ಣುವಿನ ಭಕ್ತಿಗೆ ಮೆಚ್ಚಿ ಶೃಂಗಾರಲೋಲ ಲೀಲಾ ವಿನೋದ ವಿಹಾರಿಯಾದ ಪುತ್ರನನ್ನು ಪಡೆ ಎಂದು ಆಶೀರ್ವದಿಸಿದಳಲ್ಲದೇ ಅವನು ಚಿರಂಜೀವಿಯಾಗಿ, ತೇಜಸ್ವಿಯಾಗಿ ಮದನೆಂಬ ಹೆಸರಿನಿಂದ ಜಗತ್ತಿನಲ್ಲಿ ಅವನ ಹೆಸರು ಅಜರಾಮರವೆನಿಸಲೆಂದು ಹರಿಸಿ ಬೀಳ್ಕೊಟ್ಟಳು.

ಅಂದಿನಿಂದ ಇಂದಿನವರೆಗೆ ಕಾಮದೇವನು ಚಿರಂಜೀವಿಯಾಗಿ ಸ್ಥಿರಜೀವಿ ಎನಿಸಿ ಸುಮನೋ ಲಿಂಗವನ್ನು ಭಜಿಸುತ್ತ ವೈಭವ ವಿಲಾಸ ಉಪನ್ಯಾಸಗಳಲ್ಲಿ ಕಾಲ ಕಳೆಯುತ್ತಿರುವನು.

ಒಟ್ಟಿನ ಮೇಲೆ ಬ್ರಾಹ್ಮಣ ಬಂಧುಗಳೇ ಕರ್ಮಿಗಳಾಗಿರಲಿ ಅಧರ್ಮ ಉಳ್ಳ ಅವಿವೇಕಿಯಾಗಿರಲಿ ಅನಂತ ಪಾಪಗಳ ಸರಮಾಲೆಯನ್ನೇ ಧರಿಸಿರಲಿ ಅಂಥಹ ಕರ್ಮಚಂಡಾಲನು ಕೂಡಾ ಶಿವನನ್ನು ವರಿಸಿಕೊಂಡವನಾದರೆ ಅವನಿಗೆ ಮೋಕ್ಷ ಪದವಿ ಖಂಡಿತವೆಂದು ತಿಳಿಯತಕ್ಕದ್ದು. ಶಿವನಷ್ಟು ಸುಲಭವಾದ ದೇವರು ಇನ್ನಾರಿದ್ದಾರೆ. ವಿಚಾರ ಮಾಡಿರಯ್ಯಾ ಎಂದು ತಿಳುವಳಿಕೆಯನ್ನುಂಟುಮಾಡಿದರು

ದೇವಾನು ದೇವತೆಗಳು ಶಿವನಿಂದ ವರಪಡೆದ ದೃಷ್ಟಾಂತಗಳು

೧

ಬಳಿಕ ಗುರು ಬಸವರಾಜರು ಅಯ್ಯಾ ದೇವತೆಗಳು ಸಂಪದ್ಭರಿತ ರಾದ ಬಗ್ಗೆ ಹಲವು ದೃಷ್ಟಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇವೆ. ಕೇಳಿರೆಂದರು.

ಕಾಮದೇವನ ಪಿತನಾದ ಕಮಲಾಕ್ಷನು (ವಿಷ್ಣು) ಕಾಶಿಯಲ್ಲಿ ಪದ ಶಿವ ವಿಶ್ವನಾಥನನ್ನು ಕುರಿತು ತಪಸ್ಸನ್ನಾಚರಿಸಿ ಶಿವನನ್ನು ಸುಲಭದಲ್ಲಿ ಒಲಿಸಿಕೊಂಡು ವೈಕುಂಠದ ಅಧಿಪತಿ ಎನಿಸಿದನಲ್ಲದೇ ಜಗದ ಜೀವಗಳ ನ್ನೆಲ್ಲ ನೆಚ್ಚಿದ ಹೆಚ್ಚಿನವಳೆನಿಸಿದ ಲಕ್ಷ್ಮೀದೇವಿಯಪತಿಯಾಗಿ ವಾಹನಕ್ಕೆ ಗರುಡ, ಗದೆ, ಪಾಂಚಜನ್ಯಗಳನ್ನು ಪಡೆದುಕೊಂಡು ಸುಖ ಸಂತೋಷ ದಿಂದ ಇಂದ್ರ ನೀಲಗಂಗದ ಅರ್ಚನೆಯಲ್ಲಿ ನಿರತನಾಗಿರುವನು.

೨

ಲೋಕ ಸಂಚಾರಿ ನಾರದನ ತಂದೆ ಬ್ರಹ್ಮದೇವನು ಶಿವನನ್ನು ಕುರಿತು ವಾರಣಾಸಿಯಲ್ಲಿ ಅತ್ಯುಗ್ರವಾದ ತಪಸ್ಸನ್ನುಗೈಯಲು, ಬ್ರಹ್ಮದೇವನ ತಪಸ್ಸಿಗೆ ಮೆಚ್ಚಿದ ಶಂಕರನು ತನ್ನನಿತ್ಯಸ್ವರೂಪವಾದ ಓಂಕಾರಲಿಂಗವನ್ನು ಪಾತಾಳ ದಿಂದಲುದ್ಭವಿಸಿ ಭೂಮಿಯನ್ನು ಬಗೆದು ಅಮರಕಂಟಕವೆಂಬ ಕ್ಷೇತ್ರದಲ್ಲಿ ನಾಲ್ಕು ತೋಳು ಮೂರು ಪಾದ ಏಳು ಕೈಗಳುಳ್ಳ ವಿರಾಟಸ್ವರೂಪದಲ್ಲಿ ಪ್ರಕಟ ನಾದನು. ಆಗ ಪ್ರಕಟನಾದ ಮಂಗಲ ಮೂರ್ತಿಯನ್ನು ಕಂಡು ಬ್ರಹ್ಮ

ದೇವನು ಭಯ ಭಕ್ತಿ ನಯವಿನಯಗಳಿಂದ ಕರಜೋಡಿಸಿ ಸ್ತುತಿಗೈಯಲು ಭಕ್ತವತ್ಸಲನಾದ ಮಹಾದೇವನು ಬ್ರಹ್ಮದೇವನ ನಿಶ್ಚಲ ಭಕ್ತಿಗೆ ವಲಿದು ಆತನಿಗೆ ತನ್ನ ನಿಜ ಸ್ವರೂಪವನ್ನು ತೋರಿಸಿ, ಅವನ ಇಚ್ಛೆಯಂತೆ ಸೃಷ್ಟಿ ನಿರ್ಮಾಣ ಕಾರ್ಯದೊಡನೆ, ವಿದ್ಯಾದೇವಿ ಶಾರದೆಯನ್ನು, ವಾಹನಕ್ಕೆ ಹಂಸನನ್ನು ದಯಪಾಲಿಸಿ ಸೃಷ್ಟಿಯ ವಡೆಯನಾಗಿರುವಂತೆ, ಆಶೀರ್ವದಿಸಿ ದನು. ಬ್ರಹ್ಮನು ಶಿವನಪ್ಪಣೆಯ ಪ್ರಕಾರ ಸತ್ಯಲೋಕದ ಒಡೆಯನಾದನು ಶಿವನಿಗೆ ತಿಳುಹಿಸದೆ ಯಾವ ಕಾರ್ಯವನ್ನೂ ಮಾಡದೆ ಸದಾ ಶಿವನ ಅಪ್ಪ ಣೆಯನ್ನು ಕಾಯ್ದು ಕಾರ್ಯಮಾಡುತ್ತಾನೆ.

೩

ಅಮರಾವತಿಯ ಅರಸು ಇಂದ್ರದೇವನು, ಶಿವನಸಾಕ್ಷಾತ್ಕಾರಕ್ಕಾಗಿ ಶ್ರೀಗಿರಿಯಲ್ಲಿ ತಪವನ್ನು ಗೈದು ಶಿವನ ಕರುಣೆಯಲ್ಲಿ ಕಾಮಧೇನು, ಕಲ್ಪ ವೃಕ್ಷ, ಐರಾವತ, ಚಿಂತಾಮಣಿಗಳನ್ನು ಪಡೆದುಕೊಂಡನಲ್ಲದೇ, ದೇವತೆಗಳ ಒಡೆಯನಾಗಿ ಅಮರಾವತಿಯನ್ನು ಪಡೆದು, ಸಕಲ ಭೋಗ ಭಾಗ್ಯದೈಸಿರಿ ಯೊಡನೆ ಅಪ್ಸರೆಯರ ಅರಸನಾಗಿ ಆನಂದದಲ್ಲಿ ಕಾಲ ಕಳೆಯುತ್ತಿರುವನು.

೪

ಅಗ್ನಿದೇವನು ಮಹಾದೇವನನ್ನು ಕುರಿತು ಅರುಣಾದ್ರಿಯಲ್ಲಿ ತಪಗೈದು ಸ್ವಹಾ ಎಂಬ ಸತಿಯನ್ನು ಶಕ್ತ್ಯಾಯುಧವನ್ನು ತೇಜೋವತ ಪಟ್ಟಣವನ್ನು ಪಡೆದುಕೊಂಡು ಶಿವನ ಕರುಣೆಯಲ್ಲಿ ಬಾಳಿಕೊಂಡಿರುವನು.

೫

ನಿರುತ ಎಂಬವನು ಶಿವನನ್ನು ಮೆಚ್ಚಿಸಲು ಗೋಕರ್ಣದಲ್ಲಿ ಉಗ್ರ ತಪಸ್ಸನ್ನು ಮಾಡಿ ಶಿವಸ್ವರೂಪವಾದ ಮಹಾಲಲಿ ಲಿಂಗದಿಂದ ಖಡ್ಗಾಯುಧ ವನ್ನು ಸಂಪಾದಿಸಿದನಲ್ಲದೆ ನರವಾಹನವನ್ನು ಪಡೆದುಕೊಂಡನು.

೬

ಜಂಬೂವನದಲ್ಲಿ ತಪಗೈದ ವರುಣದೇವನು ಶಿವನ ಸಾಕ್ಷಾತ್ಕಾರದಿಂದ ಮೊಸಳೆಯ ವಾಹನದೊಡನೆ ಕಮಲಾವತಿ ನಗರವನ್ನು ಪಡೆದುಕೊಂಡನು.

ಆದರಂತೆ ವಾಯು ದೇವನು ಕಾಳಹಸ್ತಿಯಲ್ಲಿ ತಪವನ್ನು ಗೈದು ಮೃಗ ವಾಹನದೊಡನೆ ಗಂಧವತಿ ನಗರದೊಡೆಯನಾದನು.

೭

ಕುಬೇರನು ಶಿವನೊಲುಮೆಯನ್ನು ಪಡೆಯುವದಕ್ಕಾಗಿ ಇಂದ್ರದೇವನ ಸಲಹೆಯಂತೆ ವಟಾರಣ್ಯದಲ್ಲಿ ತಪಸ್ಸುಮಾಡಿ ಶಿವನ ಪ್ರೀತಿಗೆ ಪಾತ್ರನಾಗಿ ಪುಷ್ಪಕವಿಮಾನವನ್ನು ಪಡೆದು ಅಷ್ಟದಿಕ್ಪಾಲಕರ ಒಡೆತನವನ್ನು ಸಂಪಾದಿಸಿ ಯಾವತ್ತರಿಗೂ ಶಿವರು ಶುಲಭದಲ್ಲಿ ವಲಿಯುವ ಮಾರ್ಗವನ್ನು ತೋರಿಸಿ ದನು.

೮

ಕ್ರೂರ ಕರ್ಮಿಗಳ ತಿಕ್ಕಾಟದಲ್ಲಿ ತೊಳಲಾಡಿ ಬೇಸತ್ತ ಯಮಧರ್ಮ ರಾಯನು ಚಿತ್ರಗುಪ್ತ ಇನ್ನಿತರ ಕೆಲವರಿಗೆ ನರಕದ ಹಿರಿತನವನ್ನು ಒಪ್ಪಿಸಿ ಕೇದಾರ ಕ್ಷೇತ್ರದಲ್ಲಿ ಬಂದು ಕೇದಾರೇಶ್ವರಲಿಂಗದ ಅರ್ಚನೆಮಾಡಿ ನಾ ದೈವ ಪಾಪ ಕರ್ಮದಿಂದ ಮುಕ್ತನಾಗುವ ಮಾರ್ಗವನ್ನು ಕರುಣಿಸಬೇಕೆಂದು ಪರಶಿವ ಮೂರ್ತಿಯನ್ನು ಧ್ಯಾನಿಸುತ್ತ ಕೆಲವು ಕಾಲ ಕಳೆಯಲು ಪರ ಶಿವನು ಯಮರಾಯನ ಭಕ್ತಿಗೆ ಮೆಚ್ಚಿ ಕೇದಾರಲಿಂಗ ಮುಖದಿಂದ ಉದ್ಭ ವಿಸಿ ಅವನ ಇಚ್ಛೆಯಂತೆ ವಾಹನಕ್ಕಾಗಿ ಕೋಣವನ್ನು ಉಲುಂಬಲೆಯುಂಬ ಸತಿ ಶಿರೋಮಣಿಯನ್ನು ನರಕದ ಸಂಪೂರ್ಣ ಅಧಿಕಾರವನ್ನು ಅನುಗ್ರಹಿಸಿ ದನು.

೯

ಅಯ್ಯಾ ಬ್ರಾಹ್ಮಣ ಸಮೂಹವೆ ಅಖಿಋಷಿಗಳು ಸತತವಾಗಿ ಶಿವ ಮಹಾದೇವ ಮಹೇಶ್ವರನ ಪ್ರೀತಿಗಾಗಿ ಮೂರು ವರುಷ ಉಗ್ರವಾದ ತಪ ಸ್ಸನ್ನು ಗೈಯುತ್ತಿರಲು, ಕಣ್ಣಿನಿಂದ ಪುಟದೇಳುವ ದಿವ್ಯ ಕಾಂತಿಯ ಹೊಳ ಪಿಗೆ (ತೇಜಸ್ಸಿಗೆ) ಹರಿಬ್ರಹ್ಮ ಇನ್ನಿತರ ದೇವತೆಗಳ, ಸ್ತ್ರೀಯರು ದಿಕ್ಪಾಲ ಕರಸತಿಯರು ಆ ತೇಜಸ್ಸಿಗೆ ಅಂಜಿದರು. ಬರು ಬರುತ್ತ ಆ ತೇಜಬಿಂದು ಮಂಡಲಾಕೃತಿ ಯಾಗಿ ನಿಲ್ಲಲು ಬ್ರಹ್ಮದೇವನು ಅದನ್ನು ಒಯ್ದು ಜೋಪಾನ

ಗೈಯಲು ಶಾಂತ ರೂಪದ ಆ ಬಿಂದು ಚಂದ್ರ ಸ್ವರೂಪವನ್ನು ತಾಳಿತು. ಬಳಿಕ ದೊಡ್ಡವನಾದ ಚಂದ್ರನು ಸೋಮನಾಥಲಿಂಗವನ್ನು ಭಕ್ತಿಯಿಂದ ಅರ್ಚಿಸಿ ಮೂವತ್ತು ಅಶ್ವನವರುಷಗಳ ಪರಿಯಂತ ಪ್ರದಕ್ಷಿಣೆಯಿಂದ ಶಿವನ ಒಲುಮೆಯನ್ನು ಸಂಪಾದಿಸಿದನು. ಆಗ ಶಿವನು ಚಂದ್ರನ ಭಕ್ತಿಗೆ ಮೆಚ್ಚಿ ರೋಹಿಣಿಯನ್ನು ರಾತ್ರಿಯ ಸಂಪೂರ್ಣ ಅಧಿಕಾರವನ್ನು ಅನುಗ್ರಹಿಸಿದನು.

೧೦

ಶಿವನೊಲುಮೆಯ ಸಾಕ್ಷಾತ್ಕಾರಕ್ಕಾಗಿ ಕಾಂಚಿ ಕ್ಷೇತ್ರದಲ್ಲಿ ಸೂರ್ಯದೇವನು ತಪಸ್ಸು ಮಾಡಿ ಈಶ್ವರನನ್ನು ಮೆಚ್ಚಿಸಿ ಅನಂತಕಾಲ ಮೇರು ಪರ್ವತದ ಪ್ರದಕ್ಷಣೆ ತನ್ನಿರುವಿಕೆಗಾಗಿ ಮಂತ್ರ ಮಂದಿರ ಸತಿ ಶಿರೋಮಣಿ ಛಾಯಾಂಗನೆಯನ್ನು ಸಪ್ತ ತುರಗಗಳ ಒಡೆಯನಾಗಿ ಹಗಲಿನ ಸಂಪೂರ್ಣ ಹಕ್ಕನ್ನು ಸಂಪಾದಿಸಿಕೊಂಡನು.

ಬಳಿಕ ಗುರು ಬಸವರಾಜನು ಅಯ್ಯಾ ಭೂ ಸುರ ವರ್ಗವೆ ನಿತ್ಯ ನಿರ್ಮಲ ಸತ್ಯ ಸಾಕಾರ ಮೂರ್ತಿಯಾದ ಶಿವನ ಒಲುಮೆಗಾಗಿ ಶ್ರಮಿಸಿ ಆತನ ಕರುಣೆಯಲ್ಲಿ ಮನುಜರು ದೇವತೆಗಳು, ಪಶು-ಪಕ್ಷಿಗಳು ಸಹಿತ ಮೋಕ್ಷ ಸುಖವನ್ನು ಪಡೆದುಕೊಂಡಿರುವ ಉದಾಹರಣೆಗೆ ಕೊರತೆಯನ್ನುಪದಿಲ್ಲ. ಕೊನೆಯದಾಗಿ ಮಹಾ ಐಶ್ವರ್ಯವನ್ನು, ಬೇಡಿದ ಸುಖ ಸಂಪತ್ತನ್ನು ಅನುಗ್ರಹಿಸಲು ಶಿವನೊಬ್ಬನೇ ಸಮರ್ಥನು. ಅವನೊಬ್ಬನೇ ಮಹಾ ದಾನಿಯು. ಅವನನ್ನು ಭಕ್ತಿಯಿಂದ ಭಜಿಸದಿರುವವನೇ ಪುಣ್ಯಹೀನನು. ಪಾಪಿಗಳಲ್ಲಿ ಅತಿ ಪಾಪಾತ್ಮನು. ಇಷ್ಟೇ ಏಕೆ ಹರಿ, ಬ್ರಹ್ಮ, ಇಂದ್ರ, ಸೂರ್ಯ, ಅಗ್ನಿ, ವಾಯು, ಯಾವತ್ತೂ ದೇವತೆಗಳ ದೇವದಾನವ ಮುನೀಂದ್ರರು, ದೈತ್ಯರಾದಿ ಬಂಗಾರ, ಬೆಳ್ಳಿ, ಲೋಹ, ಮುತ್ತುರತ್ನಗಳಲ್ಲಿ ಲಿಂಗಗಳನ್ನು ಸಿದ್ಧಿಪಡಿಸಿ, ಧರಿಸಿಕೊಂಡು ಅಂತರಂಗದ ಅಪೇಕ್ಷೆಯಿಂದಲೂ ಬಹಿರಂಗದ ತೋರಿಕೆಗಾಗಿಯೂ ಅಂತು ಲಿಂಗಮೂರ್ತಿಗಳನ್ನು ಅರ್ಚಿಸಿ ಮುಕ್ತಿಯ ಮಾರ್ಗವನ್ನು ಕಂಡುಕೊಂಡಿದ್ದಾರೆ.

ಒಟ್ಟಾರೆ ಶಿವಲಿಂಗ ಮೂರ್ತಿಯನ್ನು ಪೂಜಿಸುವ ಮಾನವನು ಇಹ ಪರಗಳೆರಡಕ್ಕೂ ದೂರಾಗುವದರಲ್ಲಿ ಸಂದೇಹವಿಲ್ಲ. ಎಂದು ಶ್ರೀಗುರು ಬಸವ ರಾಜರು ನಿರೂಪಿಸಿ ಅಂದಿನ ಸಭೆಯನ್ನೂ ವಿಸರ್ಜಿಸಿದರು.

೬. ನೇ ಸಂಧಿ

ಗುರುಬಸವರಾಜರಿಂದ ಶಿಷ್ಯ ಸುಜ್ಞಾನಿದೇವನಿಗೆ ಉಪದೇಶ

ಬಳಿಕ ಮರುದಿವಸ ಮುಂಜಾವಿನ ಸೂರ್ಯೋದಯದ ಸಮಯದಲ್ಲಿ ಗುರುಬಸವರಾಜರು ಶಿಷ್ಯನಾದ ಸುಜ್ಞಾನಿದೇವನೊಡನೆ ಶಿವಯೋಗ ಸಾಧನೆಯ ಬಗ್ಗೆ ಮಾರ್ಮಿಕವಾದ ವಿಷಯವನ್ನು ಬಿಡಿಸಿ ಹೇಳಿ ತಮ್ಮ ಮುಂದಿನ ಅಧಿಕಾರಿಯಾಗಬೇಕಿದ್ದ ಆತನಿಗೆ ಶಿವತತ್ವ ವೀರಶೈವ ವಿಚಾರ ಪದ್ಧತಿಯ ತಿಳುವಳಿಕೆಯನ್ನು ಬೋಧಿಸಿ ಶಿವನಸಾಕ್ಷಾತ್ಕಾರದತ್ತ ಮನಸ್ಸು ಜಾಗ್ರತವಾಗಿರಬೇಕೆಂದು ಎಚ್ಚರಿಕೆಯ ನುಡಿಯನ್ನು ನುಡಿದರು.

ಅಷ್ಟರಲ್ಲಿ ಭೂಸುರ ಬಳಗವು ಮಠಕ್ಕೆ ಬಂದು ಗುರುಬಸವರಾಜರಿಗೆ ನಯವಿನಯದಿಂದ ಸೌಜನ್ಯತೆಯಲ್ಲಿ ನಮಸ್ಕರಿಸಿ ಅವರ ಅಪ್ಪಣೆಯಂತೆ ಮಠದ ಪಠಾಂಗಣದ ಮಧ್ಯ ಭಾಗದಲ್ಲಿ ಕುಳಿತುಕೊಂಡು ಬಳಿಕ ಗುರು ಪ್ರಭುವರಾ ನಾವುಗಳು ಇಂದು ತಮ್ಮ ಅಡಿದಾವರೆಗಳಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪಿಸಬೇಕೆಂದು ತೀರ್ಮಾನಿಸಿಕೊಂಡು ಬಂದಿರುತ್ತೇವೆ. ತಮ್ಮ ಅಪ್ಪಣೆಯಾದರೆ ತಿಳಿಸ ಬಯಸುವೆವು ಎಂದು ವನಯದಿಂದ ಕರ ಜೋಡಿಸಿದರು.

ಆಗ ಗುರುಬಸವರಾಜರು ನಸುನಗುತ್ತ ಅಯ್ಯಾ ಬ್ರಾಹ್ಮಣರೇ ನಿಮಗಿರುವ ಸಂಶಯ ಯಾವದು, ಯಾವ ಸಂಕೋಚವಿಲ್ಲದೆ ಸಮಾಧಾನ ದಿಂದ ಕೇಳಬಹುದು. ಭಯದ ಲವಲೇಶವು ನಿಮ್ಮಲ್ಲಿ ಸುಳಿಯದಿರಲಿ. ಶಿವನ ಮಹಾ ಮಹಿಮೆಯ ಬಗ್ಗೆ ಅಭಿಮಾನ ತೋರಿ ಆದರದಿಂದ ಅವನಲ್ಲಿ ವಿಶ್ವಾಸವಿಟ್ಟಿರುವ ನೀವು ನಮ್ಮ ಅಭಿಮಾನ ಬಂಧುಗಳಂತೆ ಭಾವಿಸುತ್ತೇವೆ ಎಂದು ಅವರ ಮನಸ್ಸು ಮತ್ತಷ್ಟು ಹಗುರಾಗುವ ರೀತಿಯಲ್ಲಿ ಅಪ್ಪಣೆ ಮಾಡಿದರು.

ದವರಿಗಾಗುವ ಯಮಧರ್ಮ ಶಿಕ್ಷೆಯನ್ನಷ್ಟು ಕೇಳಿರಿ ಎಂದು ಗುರುಬಸವ ರಾಜರು ಅಂದರು.

— ೧ ನೇ ಕಥೆ —

ವೀರಗ್ರಾಹಕನ ಕಥೆ

ವೀರಗ್ರಾಹಕ ರಾಜನ ಕಥೆಯನ್ನು ಹೇಳಹತ್ತಿದರು—

ಕಳಿಂಗ ದೇಶದ ಅರಸು ವೀರಗ್ರಾಹಕನು ಓಲಗದಲ್ಲಿ ಮಂಡಿಸಿ ಸಚಿವ ಸಾಪತಿ ಇತರ ಅಧಿಕಾರಿ ವರ್ಗದೊಡನೆ ರಾಜ್ಯದ ಅನೇಕ ವಿಷಯಗಳನ್ನು ಕುರಿತು ಆಲೋಚಿಸುತ್ತಿದ್ದನು. ಅದೇ ಸಮಯದಲ್ಲಿ ಕುಕರ್ಮಿಯಾದ ವಂಚಕನಾದ ಯಜ್ಞೇಶನೆಂಬ ಬ್ರಾಹ್ಮಣನು ಸಯವಂಚಕ ಬುದ್ಧಿಯನ್ನು ಉಪಯೋಗಿಸುತ್ತ ಪ್ರಭೋ ಇದು ಸೋಮೇಶಲಿಂಗದ ಪ್ರಸಾದ ಕಾಣಿಕೆ ಇದನ್ನು ತಮಗರ್ಪಿಸಲು ತಂದಿದ್ದೇನೆಂದು ನಟನಯ ವಿನಯ ತೋರಿಸಿ ಪೂಮಾಲೆ ಅರ್ಪಿಸಿದನು. ಅದನ್ನು ನಂಬಿದ ರಾಜನು ಲಿಂಗದ ಪ್ರಸಾದವೆಂದು ತಿಳಿಸಿ ಧರಿಸಿ ಬ್ರಾಹ್ಮಣನಿಗೆ ತಕ್ಕ ಸನ್ಮಾನವೆಂದು ಹಣ ವಸ್ತ್ರ ಇನ್ನಿತರ ಸಾಹಿತ್ಯಗಳನ್ನು ಅರ್ಪಿಸುವಷ್ಟರಲಿ ಸೋಮನಾಥ ದೇವರ ಅರ್ಚನು ಬಂದು ಮಹಾರಾಜ ಈತನು ಕಳ್ಳತನದಿಂದ ಈ ಪೂಮಾಲೆಯನ್ನು ಅಪಹರಿಸಿ ತಂದಿದ್ದಾನೆ, ಸಭ್ಯನಂತೆ ವರ್ತಿಸುತ್ತ ಹೂಮಾಲೆಯೊಡನೆ ಲಿಂಗದ ಯಜ್ಞೋಪವೀತವನ್ನು ನಮಗೆ ತಿಳಿಯದಂತೆ ಅಪಹರಿಸಿಕೊಂಡು ಬಂದಿದ್ದಾನೆ ಎಂದು ಯಜ್ಞೇಶನ ಬಗ್ಗೆ ದೂರು ಕೊಟ್ಟನು.

ಆಗ ಕಳ್ಳತನ ಮಾಡಿದ್ದು ಅಲ್ಲಿದೆ ಪಾಪ ಪೂಜಾರಿಯನ್ನು ಹೊಡೆಬಡೆ ಮಾಡಿ ಬೆದರಿಸುವಷ್ಟು ಪುಂಡನಾಗಿ ನಿಂತ ಕಳ್ಳ ಬ್ರಾಹ್ಮಣನ ಉದ್ಧಟತನಕ್ಕೆ ರಾಜ ಗುರುಗಳೆನಿಸಿದ ಶಾಂತಮೂರ್ತಿಗಳ ಅಯ್ಯೋ ಎಂದು ಮರುಗಿದರಲ್ಲದೇ ಅರಸ ಎನಿಸಿದ ವೀರಗ್ರಾಹಕನು ಯಜ್ಞೇಶನ ಈ ಉದ್ಧತಟತನಕ್ಕೆ ಶಿಕ್ಷೆ ಕೊಡುವ ಮಾತಿರಲು ಪೂಜಾರಿಯ ದುರಾವಸ್ಥೆಗೆ ಮರುಗಿ ಕಳ್ಳನಿಗೆ ಬುದ್ಧಿಯನ್ನು ಹೇಳಬಾರದೆ ಎಂದರು. ಭಳಿಕ ತಮ್ಮಲ್ಲಿ ತಾವೇ ಸಮಾಧಾನ ತಂದುಕೊಂಡು ಜಗದ ನೀತಿಯೇ ಸಾಗಿರುವದೆಂದ ಮೇಲೆ ಈ

ಒಬ್ಬ ರಾಜನ ಪ್ರಸಂಗವೇನು ಹಿರಿದಲ್ಲ. ತನಗೆ ಕಳವು ಮಾಡಿ ತಂದು ಕೊಟ್ಟ ವಸ್ತು ಬೆಲೆ ಬಾಳುವಂತಹದು ಲಾಭವಾದದ್ದೆಂದು ಆ ಕಳ್ಳನು ಅರಸನ ದೃಷ್ಟಿಯಲ್ಲಿ ಮಾನ್ಯನಾಗಿದ್ದಾನೆ ಇದರಂತೆ, ಹಿಂದೆ ಆಗಿ ಹೋದ ಇದೇ ಪ್ರಕಾರದ ಪ್ರಸಂಗವನ್ನು ಈ ನಮ್ಮ ಅರಸನಿಗೆ ತಿಳುಹಿಸಿ ಶಿವನ ಸೊತ್ತನ್ನು ಎತ್ತಿ ಹಾಕುವವರ ಹಾಗು ಅದನ್ನು ಬಚ್ಚಿಟ್ಟು ಪ್ರೋತ್ಸಾಹ ಕೊಟ್ಟ ವರ ಗತಿ ಯಾವ ಸ್ಥಿತಿಗೆ ಮುಟ್ಟುವದು ಮತ್ತು ಯಮಬಾಧೆ ತಪ್ಪಿದ್ದಲ್ಲ ವೆಂದು ವೀರಗ್ರಾಹಕನಿಗೆ ಕುಂಟರ ದೇಶದ ವಸುರಾಜ ಹಾಗೂ ಅವನ ಮಗನಿಗಾದ ಗತಿಯನ್ನು ವಿವರಿಸಲು ಸಿದ್ಧರಾದರು.

ಒಮ್ಮೆ ವಸುರಾಜನ ಮಗನು ಶಿವದೇವಾಲಯದಲ್ಲಿ ಲಿಂಗಮೂರ್ತಿಯ ಎದುರಿಗಿರುವ ನಾಣ್ಯವನ್ನು ಆಸೆಪಟ್ಟು ಎತ್ತಿಕೊಂಡು ಒಂದನಲ್ಲದೆ ಅದನ್ನು ಬೊಕ್ಕಸದ ಹಣದಲ್ಲಿ ಸೇರಿಸಿದನು.

ಬಳಿಕ ಹಿಂದಿನಿಂದ ಪೂಜಾರಿಯು ಬಂದು ತಮ್ಮ ಮಗನು ಲಿಂಗ ಮೂರ್ತಿಯ ಸಮ್ಮುಖದಲ್ಲಿದ್ದ ನಾಣ್ಯ ತಂದಿದ್ದಾನೆ, ಕೊಡಿಸುವದಾಗ ಬೇಕೆಂದು ಅರಸನಲ್ಲಿ ದೂರು ಕೊಟ್ಟನು. ಆಗ ವಸುರಾಜನು ಅಯ್ಯಾ ಪೂಜಾರಿ ನಿಮ್ಮ ಈಶ್ವರ ದೆವರಿಗೆ ಇದೊಂದು ಹಣ ಹೋದರೆ ಆಗುವ ನಷ್ಟವೇನು ? ಇರಲಿ ಹೋಗು ಎಂದು ಗದ್ದರಿಸಿ, ಭಟರನ್ನು ಕರೆದು ಈತನನ್ನು ಹೊರಗೆ ಹಾಕಿರೆಂದು ಆಜ್ಞೆ ಮಾಡಿದನು.

ಆಗ ಪೂಜಕನು ಪರಿಪರಿಯಿಂದ ಅರಸನಿಗೆ ಬುದ್ಧಿಯನ್ನು ಹೇಳುತ್ತ ದೇವರ ದುಡ್ಡು ಅಪಹರಿಸಿದವರಿಗೆ ಎಂದೂ ಕ್ಷೇಮವಾಗದು. ಇದರಿಂದ ನಿಮಗೆ ಕೇಡು ತಪ್ಪಿದ್ದಲ್ಲವೆಂದು ಹೇಳಿದನು. ಆದರೂ ಆ ರಾಜನು ಅದಾವ ದನ್ನೂ ಲಕ್ಷಕ್ಕೆ ತಾರದೆ ಅವನನ್ನು ಬೆದರಿಸಿ ಹೊರಗಟ್ಟಿದನು. ಬಳಿಕ ಕ್ಷಣ ಕಳೆಯುವಷ್ಟರಲ್ಲಿ ಅರಸನ ಅರಮನೆಗೆ ಬೆಂಕಿ ಹತ್ತಿ ಸರ್ವನಾಶ ವಾಯಿತಲ್ಲದೆ ಎಲ್ಲರೂ ಬೆಂಕಿಯಲ್ಲಿ ಬೆಂದು ಹೋದರು. ಯಮನಿಂದ ಅವನಿಗೆ ಅನಂತ ಯಾತನೆ ಪಡುವಂತಾಯಿತು. ಆದಕಾರಣ ಶಿವನ ಸೊತ್ತು ಅಪಹರಿಸಿ ಉಳಿದವರಿಲ್ಲ. ವಿಚಾರ ಮಾಡಿರೆಂದು ರಾಜಗುರು ಗಳು ದೃಷ್ಟಾಂತ ಕೊಟ್ಟು ಶಿವತತ್ವೋಪದೇಶ ಮಾಡಿದರು.

ಆಗ ಗುರುಗಳ ಮಾತನ್ನು ನಂಬಿ ಶಿವಧರ್ಮವನ್ನು ಪಾಲಿಸುವ ನಿಷ್ಠೆಯಿಂದ ವೀರಗ್ರಾಹಕನ ಮಗನು ಕಳುವು ಮಾಡಿದ ಬ್ರಾಹ್ಮಣನಿಗೆ ಕಠಿಣ ಶಿಕ್ಷೆ ಕೊಡುವಂತೆ ಆಜ್ಞಾಪಿಸಿದನಲ್ಲದೇ ಮಹಾದೇವನ ನಿಜ ಭಕ್ತನಾಗಿ ಬಾಳುವವನಾದನು. ಅಷ್ಟಾದರೂ ಶಿವನ ಆಜ್ಞೆಯಂತೆ ವೀರಗ್ರಾಹಕ ಅರಸನನ್ನು ಹಾಗೂ ಕಳವು ಮಾಡಿದ ಯಜ್ಞೇಶ ಬ್ರಾಹ್ಮಣನನ್ನು ಯಮಧರ್ಮನು ನರಕಯಾತನೆ ಕೊಟ್ಟು ದಂಡಿಸಿದನು. ಅಯ್ಯಾ ಭೂಸುರರೆ ಕಥೆಯ ತಾತ್ಪರ್ಯ ಇಷ್ಟೇ ಶಿವನ ಸೊತ್ತು ಅಪಹರಿಸಿದವರು ಶಿವದ್ರೋಹಿಗಳಾಗುವರಲ್ಲದೇ ಅವರ ಪಕ್ಷ ವಹಿಸಿದವರೂ ಶಿವದ್ರೋಹಿಗಳು ಅವರಿಗೂ ಕೇಡು ಬಿಟ್ಟದ್ದಲ್ಲ, ಅಂತೇ ಕಳವು ಮಾಡಿದ ಯಜ್ಞೇಶ ಬ್ರಾಹ್ಮಣನಿಗೂ ಅವನ ಕಳ್ಳತನಕ್ಕೆ ಪ್ರೋತ್ಸಾಹ ಕೊಟ್ಟು ಪೂಮಾಲೆಯನ್ನು ಅಪಹರಿಸಿದ ವೀರಗ್ರಾಹಕನಿಗೂ ಯಮನ ದಂಡನೆಯಾಯಿತು, ಶಿವನ ಸೊತ್ತು ಎತ್ತಿ ಹಾಕುವದು ಘನ ಅಪರಾಧವೆಂದು ಬುದ್ಧಿ ಹೇಳಿದ ರಾಜನ ಮಗನಿಗೂ. ರಾಜಗುರುಗಳಿಗೂ ಹಾಗೂ ಪೂಜಕನಿಗೂ ಶಿವನಿಂದ ಮೋಕ್ಷ ಪದವಿ ದೊರೆಯಿತು, ಎಂದು ಗುರು ಬಸವರಾಜರು ಬ್ರಾಹ್ಮಣ ಸಮೂಹಕ್ಕೆ ತಿಳಿಸಿ ಹೇಳಿದರು

— ೨ ನೇ ಕಥೆ —

ಕೀಲಕೇಂದ್ರರಾಜನ ಕಥೆ

ಅಯ್ಯಾ ಬ್ರಾಹ್ಮಣರೇ ಕೇಳಿರಿ. ಕೀಲಕೇಂದ್ರ ಎಂಬ ರಾಜನು ರಾಜಗಿರಿ ಎಂಬ ನಗರವನ್ನು ಸತ್ಯನ್ಯಾಯ ನಿಷ್ಠೆಯಲ್ಲಿ ಆಳುತ್ತಿದ್ದನು. ಅವನ ಆಳಿಕೆಯಲ್ಲಿ ಪಜರಿಗೆ ನ್ಯಾಯದಾನದೊಡನೆ ಸಕಲ ಸುಖ ಸಂಪದವು ದೊರೆತ್ತ ಆನಂದದಿಂದ ಕಾಲ ಕಳೆಯುತ್ತಿದ್ದರು. ಅರಸನ ಹೆಂಡತಿ ರತ್ನವತಿಯಾದರೂ ಶಿವಭಕ್ತೆ ಶಿವಧರ್ಮಪ್ರೇಮಿ ಪ್ರಜರನು ಮಕ್ಕಳಂತೆ ಕಾಣುವ ವಾತ್ಸಲ್ಯದ ಖಣಿಯಾಗಿದ್ದಳು. ಇಂತಹ ಪತಿಪತ್ನಿಗಳ ಹೊಟ್ಟೆಯಿಂದ ವೀರಜಿತು, ಸೂರಜಿತು, ಪೂರಜಿತು, ಪಾಪಜಿತು, ಎಂದು ನಾಲ್ಕು ಜನ ಗಂಡು ಮಕ್ಕಳು ಅನಂತ ಸುಖದಲ್ಲಿ ಬಾಳಿಕೊಂಡಿದ್ದರು.

ಹೀಗಿರಲು ರಾಣಿ ರತ್ನವತಿಗೆ ಶಿವರಾತ್ರಿಯ ವ್ರತಾಚರಣೆಯ ಹಂಬಲ ಉಂಟಾಗಿ ಕಿರಿಯ ಮಗ ಪಾಪಜಿತನನ್ನು ಕರೆದುಕೊಂಡು ಗೋಕರ್ಣ ಮಹಾಬಲೇಶ್ವರನ ಸನ್ನಿಧಾನಕ್ಕೆ ಹೋಗಿ ಆರು ತಿಂಗಳ ಪರಿಯಂತರ ಭಕ್ತಿಯಿಂದ ಶಿವಪೂಜೋತ್ಸವಗಳಲ್ಲಿ ಮಹಾದೇವನ ಒಲುಮೆ ದೊರೆಯ್ಯುವಂತೆ ಅನನ್ಯ ರೀತಿಯಿಂದ ಬೇಡಿಕೊಂಡಳು.

ಬಳಿಕ ತನ್ನ ಪಟ್ಟಣಕ್ಕೆ ಬಂದು ಸುಖದಿಂದ ಕಾಲ ಕಳೆಯುತ್ತಿರಲು, ಒಂದು ದಿನ ನೀಲಕಂಠೇಶ್ವರ ಲಿಂಗದ ಪೂಜಕನು ರಾಜ ಸಭೆಗೆ ಬಂದು ಅಯ್ಯೋ ಶಿವದ್ರೋಹ ಶಿವನಿಗೆ ಮಹಾದ್ರೋಹ ಎಂದು ಕೂಗಾಡ ಹತ್ತಿದನಲ್ಲದೆ ಶಿವಧರ್ಮ ಅಳಿಯುವಂತೆ ನಿಮ್ಮ ಮಗ ವೀರಜೀತು ಶಿವ ಮಂದಿರದ ಇಟ್ಟಿಗೆಯನ್ನು ಒಯ್ವನು ಎಂದು ಹೇಳಿದನಲ್ಲದೆ ಇದು ಶಿವ ದ್ರೋಹವೆಂದು ಸಾರಹತ್ತಿದನು.

ಆಗ ಅರಸು ಮಗನ ಸೇವಕನಾದ ಬಾರವಿಯನ್ನು ಕರದು ಮಗನಿಗೆ ವಳಿತಾಗಿ ಛೀ ಹಾಕುವಂತೆ ಹೇಳಿದನು ಆಗ ಬಾರವಿಯು ಅರಸು ಕುವರನಿಗೆ ಹೇಳುವದು ನನ್ನಿಂದ ಸಾಧ್ಯವಿಲ್ಲವೆಂದು ತಪ್ಪಿಸಿಕೊಂಡು ಬಿಟ್ಟನು. ಬಳಿಕ ಶಿವದ್ರೋಹದಿಂದ ನನ್ನ ಪೂಜಾರಿಯಲ್ಲಿ ಅಪಚಾರವಾಯಿತಲ್ಲಾ ಎಂದು ಪೂಜಕ ವೀರ ವೃತನು ಈ ಪಾಪಾಚರಣೆಯನ್ನು ನೋಡಬಾರದೆಂದು ಇಚ್ಛೆಪಟ್ಟು ಪ್ರಾಣ ಕಳೆದುಕೊಂಡನು.

ಮತ್ತೊಂದು ದಿನ ಅರಸನ ಎರಡನೇ ಮಗ ಸೂರಜೀತು ವೀರಭದ್ರ ದೇವರ ಗುಡಿಯ ಪ್ರಾಕಾರದಲ್ಲಿ ಬೆಳೆದು ನಿಂತ ಬಾಳೆಯ ಕಂಬವನ್ನು ಕಡಿದು ಯಜ್ಞ ಕಂಬವನ್ನಾಗಿ ಮಾಡಿದನು. ಆಗ ಪೂಜಾರಿ ವೀರಮಾರ್ತಂಡನು ಅರಸನು ಕುವರನ ಅವಿವೇಕತನಕ್ಕೆ ಬುದ್ಧಿ ಹೇಳಿಸಲು ಸೂರಜೀತನ ಆಪ್ತ ಗೆಳೆಯ ಹಾಗೂ ಅವನ ಸೇವಕನಾಗಿದ್ದ ಶಶಕನನ್ನು ಕಂಡು ನಿಮ್ಮ ದೊರೆ ಪುತ್ರನ ಈ ಕಾರ್ಯವನ್ನು ಖಂಡಿಸಬೇಕಲ್ಲದೆ ಇದು ಶಿವದ್ರೋಹ ವೆನಿಸುವದು ಎಂದು ಹೇಳಿ ಕಳುಹಿಸಿದನು. ಆದರೆ ಶಂಕರನು ಅರಸರ ಮಕ್ಕಳಿಗೆ ನಾವೇನು ಹೇಳುವದು. ಅವರು ಮಾಡಿದ್ದೆ ಮಾನ್ಯ ಎಂದು ಹಾರಿಸಿಬಿಟ್ಟನು. ಇದರಿಂದ ವೀರ ಮಾರ್ತಂಡ ಪೂಜಾರಿಯು ಶಿವದ್ರೋಹ

ವನ್ನು ಕಣ್ಣಿನಿಂದ ನೋಡಬಾರದು, ಕಿವಿಯಿಂದ ಕೇಳಬಾರದು ಎಂದು ಶಿವನಾಸ್ಮರಣೆಯಲ್ಲಿ ಪ್ರಾಣನೀಗಿದನು. ಅದರಂತೆ ಮತ್ತೊಂದು ದಿವಸ ಮೂರನೆಯ ಮಗ ಪೂರಜೀತು ಶಿವಮಂದಿರದ ಹೂದೋಟವನ್ನು ಹೊಕ್ಕು ಅನ್ಯಾಯವಾಗಿ ಕೆಲವು ಹೂಗಳನ್ನು ಹಾಳು ಮಾಡಿದನಲ್ಲದೆ ತನಗಿಷ್ಟ ಬಂದ ಹೂಗಳನ್ನೂ ಮೂಸಿ ಮುಡಿದು ಆನಂದಿಸಿದನು. ಆಗ ಶಿವಮಂದಿರದ ಪೂಜಕ ವಿಕ್ರಮನು ಅಯ್ಯ ದೊರೆಯಮಕ್ಕಳಾದ ತಾವು ಶಿವನ ಸೊತ್ತನ್ನು ನಾಶಮಾಡುವದು ಉಚಿತವೆ ಎಂದು ಬುದ್ಧಿ ಹೇಳಿದಾಗ ರಾಜಕುಮಾರನು ಅವನ ಮಾತನ್ನು ಅಲಕ್ಷ್ಯಮಾಡಿ ಹೂವಿನೊಂದಿಗೆ ಹೊರಟು ಹೋದನು ಬಳಿಕ ಸುದ್ದಿಯನ್ನು ಅವನ ಸೇವೆಯಲ್ಲಿದ್ದ ಕ್ರತಕನಿಗೆ ತಿಳಿಸಿದರೆ, ಅವ ನಾದರೂ ಅಪಹಾಸ್ಯದ ನುಡಿಗಳಿಂದ ಪೂಜಾರಿಯನ್ನು ತೆಗಳಿದನೆ ವಿನಃ ದೊರೆ ಮಗನಿಗಾಗಲಿ ದೊರೆಗಳಿಗಾಗಲಿ ತಿಳಿಸುವ ಮಾತು ಆಡಲಿಲ್ಲ. ಅದರಿಂದ ಮನನೊಂದ ಪೂಜಕ ವಿಕ್ರಮ ಕೇಸರಿಯು ಇಂತಹ ಪಾಪದ ಪ್ರಕರಣವನ್ನು ಕೇಳುವದು ಕಾಣುವದು ಮಹಾ ಪಾಪವೆಂದು ಅಸುನೀಗಿ ದನು. ಇದೆಲ್ಲ ವಿಷಯವನ್ನು ಅರಿಯದ ಕೀಲಕೇಂದ್ರ ಮಹಾರಾಜನಿಗೆ ಸಕಲ ವಿಷಯವು ತಿಳಿದು ಸಿಡಿಲು ಬಡಿದ ಆಘಾತವಾಯಿತು. ಮನವದು ಕುದಿಯಹತ್ತಿತು. ಕಿಡಿಕಾರುವ ಕಣ್ಣುಗಳಿಂದ ಕೂಡಿದವನಾಗಿ ಭೂಮಿ ಯಲ್ಲಿ ಇಂತಹ ಪಾಪಾಂಧರಿಗೆ ಸರಿಯಾದ ಶಿಕ್ಷೆಯಂದರೆ ದೇಹಾಂತ ಪ್ರಾಯ ಶ್ಚಿತವೆಂದು ತನ್ನ ಮಕ್ಕಳನ್ನು ಪರಿಹಾಸ್ಯ ಮಾಡಿದ ಸೇವಕರನ್ನು ಕರೆ ಯಿಸಿ ಶಿವದ್ರೋಹವೆಸಗಿದ ಪಾಪಿಗಳವರು ಇವರು ನನ್ನ ದೇಶದಲ್ಲಿ ಇರ ಕೂಡದೆಂದು ತೀರ್ಮಾನಿಸಿದನು.

ಆದರೆ ಪತ್ನಿಯಾದ ರತ್ನವತಿಯು ಕರಳುಮೋಹಕ್ಕೊಳಗಾಗಿ ಮಕ್ಕಳನ್ನೂ ದೇಶಬಿಟ್ಟು ಹೊರಗೆ ಹಾಕುವದೆ ಎಂದು ಮರುಗಿದಳು. ಅದಕ್ಕೆ ರಾಜನು ಮರುಳೇ ಶಿವದ್ರೋಹಗೈದ ಪಾಪಿಗಳು ಶಿವನ ಸೊತ್ತನ್ನು ಅಪಹರಿಸಿ ಉಪಯೋಗಿಸಿಕೊಂಡ ನೀಚರು ಯಾರೇ ಇರಲಿ ತಂದೆ-ತಾಯಿ ಅಣ್ಣ-ತಮ್ಮ ಮಡದಿ-ಮಕ್ಕಳು ಎಂಬ ಮಮಕಾರ ಮೋಹ ಮಾಲೆಯಲ್ಲಿ ಸಿಲುಕಿ ಸುಮ್ಮನೆ ಬಿಟ್ಟರೆ ಆ ಪಾಪ ನಮ್ಮನ್ನು ಬಿಡಲಾರದು. ಇಷ್ಟೇ ಏಕೆ ಶಿವದ್ರೋಹ ಗೈದವರು ಯಾರೇ ಇದ್ದರೂ ಅಂಥವರನ್ನು ತಕ್ಷಣ ಕೊಲ್ಲುವಂತಹ ನರ

ಹತ್ಯ ದೋಷಕ್ಕೆ ಗುರಿಯಾಗಬಾರದೆಂದು ದೇಶಬಿಟ್ಟು ಅಟ್ಟ ಬಯಸಿದ್ದೇನೆ ಎಂದು ಹೆಂಡತಿಗೆ ಸಮಾಧಾನ ಹೇಳಿ ಮಕ್ಕಳನ್ನೂ ಅವರ ಸೇವಕರನ್ನೂ ದೇಶಬಿಟ್ಟು ಕಳುಹಿಸಿದನು.

ದೇಶದಿಂದ ದೂರಾದ ರಾಜಕುಮಾರರು ಹಾಗೂ ಅವರ ಸೇವಕರು ಹೊಟ್ಟೆಗೆ ಅನ್ನವಿಲ್ಲದೆ ಮೈಗೆ ಬಟ್ಟೆಯಿಲ್ಲದೇ ಅನಂತ ಯಾತನೆಗಳನ್ನು ಅನುಭವಿಸಿ ಕೊನೆಗೊಂದು ದಿನ ನಿರಾಶ್ರಿತ ಹೆಣವಾಗಿ ಪ್ರಾಣನೀಗಿದರು.

ಇತ್ತ ಕೀಲಕೇಂದ್ರ ರಾಜನು ಮಕ್ಕಳು ಮಾಡಿದ ಅಪರಾಧ ಕ್ಷಾಲನೆಗಾಗಿ ಶಿವಲಿಂಗಕ್ಕೆ ರತ್ನಖಚಿತವಾದ ಆಭರಣಾದಿಗಳನ್ನು ಮಾಡಿಸಿ ಕೊಟ್ಟಿದ್ದಲ್ಲದೆ ಕಾಲ ಕಾಲಕ್ಕೆ ಆಯಾ ಶಿವದೇವಾಲಯದ ಪೂಜಕರ ವಂಶಸ್ಥರಿಗೆ ದಾನದತ್ತಗಳೆಂದು ಭೂಮಿಸೀಮಿಗಳ ಉಂಬಳಿಇತ್ತು ಬಳಿಕ ಶಿವಲಿಂಗ ಸಮ್ಮುಖದಲ್ಲಿ ಭಯಭಕ್ತಿಯಿಂದ ಕೆರಜೋಡಿಸಿ ದೇವಾ ಮಹಾದೇವಾ ಮಕ್ಕಳು ಮಾಡಿದ ಘನಘೋರ ಅಪರಾಧದಿಂದ ನಿನ್ನ ಪೂಜಕ ಶರಣರು ಮರಣವನ್ನಪ್ಪಿದರಲ್ಲದೆ, ಆದರೆ ಈಗ ಆ ಪಾಪ ಪರಿಯಾರ್ಚನೆಗಾಗಿ ನಾನು ನನ್ನ ಹೆಂಡತಿ ಇರುವ ಒಬ್ಬ ಮಗನೊಡನೆ ನಿನ್ನ ಪಾದಸನ್ನಿಧಿಗೆ ಬರುತ್ತೇನೆ. ಆದ ಅಪರಾಧ ಮನ್ನಿಸಿ ನಿನ್ನ ಪದತಲದಲ್ಲಿ ಸ್ಥಳಕೊಡು ಎಂದು ಬೇಡಿಕೊಳ್ಳುತ್ತ ಶಿವಲಿಂಗ ಸಮ್ಮುಖದಲ್ಲಿ ಅಗ್ನಿ ಕುಂಡವನ್ನು ನಿರ್ಮಿಸಲು ತಿಳಿಸಿದನು. ಬಳಿಕ ಮಡದಿ ಮಗ ಪಾಪಜೀತುನೊಡನೆ ಶಿವನಾಮಃಸ್ಮರಣೆಗೈಯುತ್ತ ಅಗ್ನಿಕುಂಡಕ್ಕೆ ಪ್ರದಕ್ಷಣೆಗೈದು ಅಗ್ನಿಯಲ್ಲಿ ಹಾರಿಕೊಂಡನು. ಆದರೆ ಆತನ ನಿಷ್ಟೆ ಭಕ್ತಿಯ ಫಲವಾಗಿ ಶಿವನ ಅಪ್ಪಣೆಯಂತೆ ಅಗ್ನಿದೇವನು ಜಲದೇವನಂತೆ ಪನ್ನಿರತೆರದಿ ಥಣ್ಣಗಾದನು ಮತ್ತು ಶಿವದ್ರೋಹಗೈದು ಪಾಪಿಗಳನ್ನು ನೋಡದೆ ಅಸು ನೀಗಿದ. ವೀರವ್ರತ, ವೀರಮಾರ್ತಂಡ ವೀರಕೇಸರಿ ಪೂಜಕರು ಅರಸನ ಎದುರು ನಿಜರೂಪದಲ್ಲಿ ಕಾಣಿಸಿಕೊಂಡರು.

ಆಗ ರಾಜನು ಅವರನ್ನು ಕಂಡು ಶಿವನ ಮಹಿಮೆಯನ್ನು ಕೊಂಡಾಡುತ್ತ ಅವರ ಸ್ತುತಿಗೈಯುವವನಾದನು. ಆಗ ಆ ಪೂಜಕ ಮಹಾಶಯರು ಅರಸನನ್ನು ಉದ್ದೇಶಿಸಿ ಅಯ್ಯಾ ರಾಜೇಂದ್ರಾ ನಿನ್ನಲ್ಲಿರುವ ನಿಷ್ಠೆ

ಶಿವಭಕ್ತಿ ಯಂಬ ಅಮೃತ ಧಾರೆ ಸುರಿದ ಅಗ್ನಿಕುಂಡವಿದು ಪನ್ನೀರ ರಾಶಿಯಾಯಿತು. ನಿನ್ನ ಧ್ಯಾನ ನಿಷ್ಠಾಭಕ್ತಿಯಿಂದ ಶಿವಶಂಕರನು ಸಂಪ್ರೀತ ನಾಗಿದ್ದಾನೆ. ಎನ್ನುವಷ್ಟರಲ್ಲಿ ಶಿವನು ಪ್ರತ್ಯಕ್ಷನಾಗಿ ಕೀಲಕೇಂದ್ರರಾಜನ ಭಕ್ತಿಯನ್ನು ಕೊಂಡಾಡಿ ತನ್ನೊಡನೆ ಕೈಲಾಸಕ್ಕೆ ಕರೆದುಕೊಂಡು ಹೋದ ನಲ್ಲದೆ ಗಣ ಪದವಿಯನ್ನಿತ್ತು ಕೊಟ್ಟಿರುವದಾಗಿ ಶಿವಪುರಾಣದಲ್ಲಿ ನಂದಿ ಲಿಂಗನು ಹೇಳಿರುವ ದೃಷ್ಟಾಂತವನ್ನೇ ನಾವು ನಿಮಗಿಲ್ಲಿ ತಿಳಿಸಬೇಕಾಯಿ ತೆಂದು ಗುರುಬಸವರಾಜರು ಅಂದಿನ ಕಥಾಗೋಷ್ಠಿಯನ್ನು ಸಮಾಪ್ತಗೊಳಿ ಸಿದರು.

ಮತ್ತೆ ಮರುದಿನ ದಿನಮಣಿಯ ದಿವ್ಯ ಕಾಂತಿಯು ಭೂಮಂಡಲವನ್ನು ಬೆಳಗುವಷ್ಟರಲ್ಲಿ ಗುರುಬಸವರಾಜರು ಶಿವಸ್ತುತಿ ಶಿವತತ್ವ ಘೋಷಗಳೊಡನೆ ನಿತ್ಯಕರ್ಮಾದಿಗಳನ್ನು ಮುಗಿಸಿಕೊಂಡು ತಮ್ಮ ಗುರು ಸಾರ್ವಭೌಮರಿಂದ ದೊರೆತ ಘನ ಚಕ್ರವರ್ತಿ ಪೀಠಕ್ಕೆ ಪೊದಮೊಟ್ಟು ಶಿಷ್ಯಬಳಗವನ್ನು ಕೂಡ್ರಿಸಿಕೊಂಡು ಶಿವಧರ್ಮಪಾಲನೆಯ ಬೋಧಗೈಯುತ್ತ ಮರಿದೇವರಾದ ಸುಜ್ಞಾನಿ ದೇವರನ್ನು ಕರೆದು, ಇಷ್ಟರಲ್ಲಿ ಬ್ರಾಹ್ಮಣ ಬಳಗ ಬರಬಹುದು ಇಂದಿನ ಕಥಾಗೋಷ್ಠಿಯು ನಿನ್ನಿಂದ ನಡೆಯಬೇಕೆಂದು ಗೌಳದೇಶದ ಗೌಳಾ ಪುರ ಗೌಳೇಶ್ವರಲಿಂಗದ ಪೂಜಕ ವಾಮದೇವನ ಕಥೆಯನ್ನು ಹೇಳಲು ಅಪ್ಪಣೆ ಮಾಡಿ ತಾವು ಶಿವಪೂಜಾತೋಲರಾಗಲು ಲಿಂಗಪೂಜಾ ಸಂಭ್ರಮ ದಲ್ಲಿ ತನಿಯಲು ಹೋದರು.

ಬಳಿಕ ಕೆಲವು ಕಾಲದ ವರೆಗೆ ಉಳಿದ ಶಿಷ್ಯ ಬಳಗದೊಡನೆ ಮರಿ ದೇವರೆನಿಸಿದ ಸುಜ್ಞಾನದೇವರು ಶಿವತತ್ವಸಾರ ಶಿವಧರ್ಮ ಬೋಧಾಮೃತ ವೀರಶೈವ ತತ್ವ ದರ್ಪಣ ವೀರಶೈವಾಚಾರ ಪದ್ಧತಿ ವೀರಶೈವರು ಆಚರಿಸ ಬೇಕಾದ ಕರ್ತವ್ಯ ಶಿವನ ಸುಪ್ರೀಯತೆಯಲ್ಲಿ ದೊರೆಯುವ ಮೋಕ್ಷಫಲ ವಿವರಣೆ ಹೀಗೆ ಅನೇಕ ವಿಷಯಗಳ ಬಗ್ಗೆ ಗುರುಗಳ ಮುಖಾಂತರ ತಾವು ಅರಿತ ಸಕಲವನ್ನು ನಿವೇದಿಸಿದರು.

ಅಷ್ಟರಲ್ಲಿ ಬ್ರಾಹ್ಮಣ ಬಳಗವು ಶಿವಮಹಾದೇವ ಮುಕ್ಕಣ್ಣನ ಮಹಿಮೆಯನ್ನು ಅರಿಯಲು ಆತುರಗೊಂಡು ಗುರುಬಸವರಾಜರ ಮಠಕ್ಕೆ

ಬಂದು ಎಂದಿನಂತೆ ಗುರುಗಳ ಪೀಠಕ್ಕೆ ನಯ ವಿನಯ ಶ್ರದ್ಧಾ ಭಕ್ತಿಯಿಂದ ಮಣಿದು ನಮಸ್ಕರಿಸಿ ಯಾವತ್ತೂ ಶಿವಗಣಬಳಗದವರಿಗೆ ವಂದಿಸಿ ನಮ್ರ ನುಡಿಗಳಿಂದ ಸುಜ್ಞಾನಿದೇವರತ್ತ ಕರಜೋಡಿಸಿ ಗುರುಗಳ ಇರುವದನ್ನೂ ಅರಿಯ ಬಯಸುತ್ತೇವೆ. ಎನ್ನುವಷ್ಟರಲ್ಲಿ ಸುಜ್ಞಾನಿಗಳು ಅಯ್ಯಾ ಭೂ-ಸುರೋತ್ತಮರೇ ಇಂದಿನ ಕಥಾಗೋಷ್ಠಿಯು ನಮ್ಮಿಂದ ಸಾಂಗವಾಗ ಬೇಕೆಂದು ಗುರುಗಳ ಅಪ್ಪಣೆಯಾಗಿದೆ ಕಾರಣ ಶಾಂತಚಿತ್ತದಿಂದ ಗೌಳ ಲಿಂಗೇಶ್ವರ ಅರ್ಚಕನ ಕಥೆಹೇಳುತ್ತೇವೆ ಕೇಳಿರೆಂದರು.

ಗೌಳಲಿಂಗೇಶ್ವರ ಪೂಜಕ ವಾಮದೇವನ ಕಥೆ

ಅಯ್ಯಾ ಬ್ರಾಹ್ಮಣರೆ ಗೌಳಪುರದಲ್ಲಿ ಗೌಳಲಿಂಗೇಶ್ವರನ ದೇವಸ್ಥಾನವು ಒಳ್ಳೆ ಪ್ರಸಿದ್ಧವಾಗಿರುವದಲ್ಲದೆ ಜಾಗ್ರತ ಸ್ಥಳವೆಂದು ಪ್ರತೀತಿಯುಂಟು. ಅಲ್ಲಿ ಗೌಳಲಿಂಗೇಶ್ವರನ ಅರ್ಚಕ [ಪೂಜಕ] ನೆಂದು ವಾಮದೇವನೆಂಬುವ ವನು ಅವನು ಗೌಳಲಿಂಗೇಶ್ವರ ಪೂಜೆಯಲ್ಲಿ ನಿಷ್ಠೆ ನೇಮಗಳಲ್ಲಿ ಒಂದು ದಿನವೂ ತಪ್ಪಿದವನಲ್ಲ ಆಗ ಆ ಪುರದ ಧನಿಕನಾದ ವಜ್ರಪಾಲನು ದೇವಾ ಲಯದ ವರೆಗೆ ಬಂದು ಪೂಜಕ ವಾಮದೇವನನ್ನು ಕಂಡು ಅಲ್ಲಿ ದೇವಾಲಯದ ಗರ್ಭಗುಡಿಯಲ್ಲಿ ಅಂತರ್ಗೋಡೆ ಕಟ್ಟಲೆಂದು ತಂದಿಟ್ಟ ಇಟ್ಟಂಗಿಗಳನ್ನು ನಮ್ಮ ಸೂರ್ಯ ಮಂದಿರಕ್ಕೆ ಕೊಡಬೇಕೆಂದು ಕೇಳಿದನಲ್ಲದೆ ಅವುಗಳ ಬೆಲೆ ಎಷ್ಟಾದರೂ ಕೊಡಬಲ್ಲೆನು ಎಂದು ದರ್ಪದ ನುಡಿಗಳನ್ನಾಡಿದನು.

ಆಗ ಪೂಜಕ ವಾಮದೇವನುಸಿಟ್ಟಿನಿಂದ ಕುದಿಯುತ್ತ ಏನಯ್ಯಾ ಅರಗಿನಗೊಂಬೆಗೆಂದಾದರು ಉರಿಯು ಆಭರಣ ತೊಡಿಸುವ ಹಂಬಲ ಮಾಡು ವದೆ ? ಅಜ್ಞಾನದಿಂದ ಅವಿವೇಕಿಗಳಂತೆ ಶಿವ ಸೊತ್ತಿಗೆ ಬೆಲೆ ಕಟ್ಟಬಂದಿರುವ ನಿಮ್ಮ ಸೊಕ್ಕು ಧನಮದದಿಂದ ಕೂಡಿರುವದಲ್ಲವೇ ಇಟ್ಟಂಗಿಗಳನ್ನು ಕೊಡು ವದಕ್ಕೆ ನಿರಾಕರಿಸಿದ್ದಲ್ಲದೆ ಶಿವನ ಸೊತ್ತಿಗೆ ಸ್ವರ್ಗ ಸಮಾನವಾಗಿದೆಂಟ ಮಾತನಾಡಿದನು.

ಆದರೂ ವಜ್ರಪಾಲ ಧನಿಕನು ಅತಿಯಾಗಿ ಪೀಡಿಸುತ್ತ ಹೇಳಯ್ಯಾ ನೀನು ಹೇಳಿದ ಬೆಲೆ ಕೊಡುತ್ತೇವೆ. ನಮ್ಮ ಕುಲದೇವರಾದ ಸೂರ್ಯ

ಜೀವನ ವೇದಿಕೆ ಮಾಡಿಸಬೇಕಾಗಿದೆ ಎಂದನು ಆಗ ವಾಮದೇವನು ಮತ್ತಷ್ಟು ಸಿಟ್ಟಿನಿಂದ ಮೂಢಾ, ದೇವ ಮಹಾದೇವ ಮುಕ್ಕಣ್ಣನ ಸೊತ್ತು ಗಳೆನಿಸಿದ ಇಟ್ಟಂಗಿಗಳು ಸಾಮಾನ್ಯ ದೇವತೆಗಳಿಗೆ ಸಲ್ಲುವದು ಅನುಚಿತವು ಐಶ್ವರ್ಯ ಮದದಲ್ಲಿ ಪ್ರಳಯಾಗ್ನಿಯಂತಿರುವ ಶಿವಸಂಪತ್ತು ಕೊಳ್ಳುವ ಅಭಿಲಾಷೆ ಮಾಡುವದೆ. ಸುಮ್ಮನೆ ಹೋಗೆಂದು ಮತ್ತಷ್ಟು ಹಿಯಾಳಿಸಿ ಕಳುಹಿಸಿ ದನು.

ಬಳಿಕ ವಾಮದೇವನಿಂದ ಅವಮಾನಗೊಂಡ ವಜ್ರಪಾಲನು ತನ್ನ ಮಿತ್ರ ಭಾರವಿ ಎಂಬ ವೈದ್ಯರಾಜನಿಗೆ ತನಗಾದ ಅಪಮಾನ ಸಂಗತಿಯನ್ನು ತಿಳಿಸಲು ಆಗ ವೈದ್ಯನು ತಾನೇ ವಾಮದೇವನ ವರೆಗೆ ಬಂದು, ದರ್ಪದಿಂದ ಇಟ್ಟಂಗಿಯನ್ನು ಕೇಳಿದನು. ಆದರೆ ಅವನಿಗೂ ಅದೇ ಉತ್ತರ ಅದೇ ಅಮಾನ ದೊರೆತವು.

ಬಳಿಕ ವೈದ್ಯ ಸೇಡಿನ ಜ್ವಾಲೆಯಿಂದ ಉರಿಯುತ್ತ ಹೇಗಾದರೂ ಮಾಡಿ ಪೂಜಕನ ಮೇಲೆ ಸೇಡು ತೀರಿಸಿಕೊಳ್ಳುವ ಸಂಚಿನಲ್ಲಿ ಅರಸರ ಪಟ್ಟ ದಾನೆಗೆ ರೋಗ ಬರುವ ಮುದ್ದು ಕೊಟ್ಟು ಆನೆಯ ರೋಗ ನಿವಾರಣೆಗೆ ಶಿವಾಲಯದಲ್ಲಿರುವ ಇಟ್ಟಂಗಿಗಳನ್ನು ಕಾಯಿಸಿ ಅದರ ಕಾವಿನಿಂದ ಪಟ್ಟ ದಾನೆಯ ಮೈ ಕಾಯಿಸಿ ವಾರ ಪರಿಯಂತರ ಉಪಚಾರವಾಗಬೇಕೆಂದು ಹೇಳಿದನು.

ಆಗ ಅಧಿಕಾರ ಮದದಿಂದ ಸೇವಕರಿಂದ ಗೌಳಲಿಂಗೇಶ್ವರ ದೇವಸ್ಥಾನ ದಲ್ಲಿದ್ದ ಯಾವತ್ತೂ ಇಟ್ಟಂಗಿಯರಾಶಿಯನ್ನು ತರಿಸಿ ವೈದ್ಯನ ಹೇಳಿಕೆ ಯಂತೆ ಕಾಯಿಸಿ ಆನೆಯ ಮೈಗೆ ಹಚ್ಚಲು ಶಿವಶಂಕರನ ಮಹಿಮೆಯಿಂದ ಕರಿರಾಯನಿಗೆ ಹೆಚ್ಚಿನ ವೇದನೆ ಉದ್ಭವಿಸಿ ತಕ್ಷಣದಲ್ಲಿ ಮರಣವನ್ನಪ್ಪಿತು. ಬಳಿಕ ಆನೆ ಸತ್ತ ರೀತಿಯು ಅರಸನಿಗೆ ಆಶ್ಚರ್ಯವನ್ನುಂಟುಮಾಡಿತು. ಆಗ ಹಲವು ಜನ ಪಂಡಿತರನ್ನು ವಿಚಾರ ಮಾಡುತ್ತಿರುವಾಗ ವಾಮದೇವನು ಆಸ್ಥಾನದ ವರೆಗೆ ಬಂದು ನಡೆದು ಹೋದ ಕಥೆಯನ್ನು ಸವಿಸ್ತಾರ ನಿವೇದಿಸಿ ದನು. ಆಗ ರಾಜನು ವೈದ್ಯ, ವೈಶ್ಯ ಧನಿಕರನ್ನು ಹಿಡಿದು ತರಿಸಲು ಮಂತ್ರಿಗೆ ತಿಳಿಸಿದರೆ, ಅವನು ಅವರಿಗೆ ಸೂರ್ಯ ದೇವನ ಬೆಂಬಲವುಂಟು

ನಿಮ್ಮಿತ್ತದಾಗದೆಂದು ನುಸುಳಿಕೊಂಡು ವೈದ್ಯನಿಗೆ ಹಾಗೂ ಧನಿಕನಿಗೆ ಸಹಾಯ ಮಾಡಿದ ಮಂತ್ರಿ ಮಾವುತರಾದಿಯಾಗಿ ನಾಲ್ಕು ಜನರ ಶಿರಚ್ಛೇದ ಮಾಡಿದ ಬಳಿಕ ೧೦೧ ಬಂಗಾರದ ಇಟ್ಟಂಗಿಗಳನ್ನು ಮಾಡಿಸಿ ಗೌಳಲಿಂಗೇಶ್ವರ ದೇವ ಸ್ಥಾನಕ್ಕೆ ಅರ್ಪಿಸಿದನು.

ಆಗ ಶಿವನು ಸಂಪ್ರೀತನಾಗಿ ರಾಜನನ್ನು ಪೂಜಕ ವಾಮದೇವನನ್ನು ಕೈಲಾಸಕ್ಕೆ ಒಯ್ದನು. ಇತ್ತ ವೈದ್ಯ ವೇಶ್ಯ ಮಂತ್ರಿ ಮಾವುತರು ಯಮರಾ ಯನ ನರಕದಾಳಾದರು ಎಂದು ಹೇಳಿದರು.

---

೭ ನೇ ಸಂಧಿ

ದೇವದಾಸಿಯನ್ನು ಅಪಹರಿಸಿದ ಕಥೆ

ಶ್ರೀ ಗುರು ಬಸವರಾಜರ ಶಿವಕಥಾಗೋಷ್ಠಿಯನ್ನು ಕೇಳುವ ಹಂಬಲ ದಲ್ಲಿ ಬ್ರಾಹ್ಮಣ ಸಮೂಹದೊಡನೆ ಪರ ಊರಿನಿಂದ ಅನೇಕ ಭಕ್ತರು ಬಂದು ಒಂದೊಂದು ದಿವಸ ಸರಸೀ ಪುರದ ಮಠದಲ್ಲಿ ಉಳಿದು ಗುರು ಬಸವರಾಜರ ದಾಸೋಹ ಪ್ರಸಾದವನ್ನುಂಡು ಗುರುಗಳ ಅಮರ ವಾಣಿಯಿಂದ ಚಿಮ್ಮಿ ಬರುವ ಶಿವನ ಒಲುಮೆ, ಸಿಟ್ಟು, ಸುಪ್ರಸನ್ನನಾಗುವ ಬಗೆ, ಕೋಪದಿಂದ ದೊರೆಯುವ ಯಮರಾಯನ ದಂಡನೆ ಎಲ್ಲವನ್ನೂ ಕೇಳುವ ಕುತೂಹಲದಿಂದ ಭಕ್ತರು, ಬ್ರಾಹ್ಮಣರು, ಶಿಷ್ಯವೃಂದವು ಮಠದಲ್ಲಿ ಸದಾ ಸಾವಿರ ಸಂಖ್ಯೆಯಲ್ಲಿ ಕೂಡಿರುತ್ತಿತ್ತು. ಗುರುಗಳಾದವರು ಪ್ರಸನ್ನ ವದನರಾಗಿ ಅವರು ಅಪೇಕ್ಷೆ ಪಡುವ ಶಿವಲೀಲೆಯನ್ನು ಬೋಧಿಸಿ ಎಲ್ಲರನ್ನು ಸಮಾಧಾನಗೊಳಿಸುವ ಸಂಪ್ರದಾಯವನ್ನುಂಟುಮಾಡಿದ್ದರು.

ಇಂದು ನರಹರಿ ಭಟ್ಟರ ಹಿರಿಯ ಮಗ, ಶಂಕರಭಟ್ಟನು ಕೂಡಿದ ಭಕ್ತಜನ ಸಮೂಹದಿಂದ ಎದ್ದು ಕರಜೋಡಿಸಿ ಶಿವನಾಜ್ಞೆಯನ್ನು ಮೀರಿ ವರ್ತಿಸಿ ಶಿಕ್ಷೆಗೊಳಗಾದವರ ಚರಿತ್ರೆಯನ್ನು ನಿರೂಪಿಸಬೇಕೆಂದು ಕೇಳಿ ಕೊಂಡನು.

ಆಗ ಗುರುಬಸವರಾಜರು ಅಯ್ಯಾ, ಕಾಶ್ಮೀರದೇಶದಲ್ಲಿ ಸಿದ್ಧಾಪುರವೆಂಬ ಗ್ರಾಮವಿತ್ತು. ಅಲ್ಲಿ ಸಿದ್ದಲಿಂಗ ದೇವಾಲಯವು ಬುನಾದಿ ಇಂದಲೂ ಪ್ರಸಿದ್ಧವಾದದ್ದು. ಅಂತೆ ಸಿದ್ಧಾಪುರದ ಜನರೆಲ್ಲರು ಸಿದ್ಧಲಿಂಗನ ಭಕ್ತರು ಅರ್ಚನೆ ಉತ್ಸವ ಕಾರ್ತಿಕ ಯಾವತ್ತು ಕಾರ್ಯಕ್ರಮಗಳು ಸಿದ್ಧಲಿಂಗನಿಗಾಗಿ ಮೀಸಲು. ಜಾತಿ, ಮತ, ಪಂಥಗಳ ಗೊಂದಲವಿಲ್ಲದೆ ಕಸಲರು ಸಿದ್ಧಲಿಂಗನ ಭಕ್ತರಾಗಿ ನಿತ್ಯ ನಿರ್ಮಲಮನಸ್ಸಿನಿಂದ ಪೂಜಿಸುತ್ತಿದ್ದರು.

ಆದರೆ ಆ ಊರಲ್ಲಿ ಸುಧಾಮನೆಂಬುವನು ಮಾತ್ರ ಕಾಳಿಕಾಂಬೆಯ ಭಕ್ತನಾಗಿದ್ದನು. ತನ್ನ ಮಗನ ಮದುವೆಯ ಸಮಯದಲ್ಲಿ ಇಡೀ ಪುರವಾಸಿಗಳಿಗೆಲ್ಲರಿಗೂ ಊಟಕ್ಕೆ ಆಮಂತ್ರಣ ಕೊಟ್ಟು ಕರೆಯಿಸಿದನು. ಅಂದಿನ ಆಮಂತ್ರಣದ ಊಟಕ್ಕೆ ಸಿದ್ಧಲಿಂಗನ ಅರ್ಚನೆಯ ಕಾಲಕ್ಕೆ ನೃತ್ಯಗೈವ ಪಾತರದವಳು ಬಂದಿದ್ದಳು. ಸ್ವಾಮಿಯ ದಾಸಳಾದ ಅವಳ ಸೌಂದರ್ಯಕ್ಕೆ ಮಾರುಹೋದ ಸುದಾಮನು ಅವಳಿಗೆ ಹಣದಾಸೆ ತೋರಿಸಿ ಸಿದ್ಧಲಿಂಗನ ಸೇವೆಯಿಂದ ಬಿಡುಗಡಿಸಿ ತನ್ನ ಮನೆಯಲ್ಲಿಯೇ ಉಳಿಸಿಕೊಂಡನು.

ಆಗ ಸಿದ್ಧಲಿಂಗನ ಪೂಜಕನಿಗೆ ದಾಸಿಯ ವಿಷಯ, ತಿಳಿದು ಸುಧಾಮನ ಬಳಿಗೆ ಹೋಗಿ, ಜಗದ್ರಕ್ಷಕ ಶಿವನ ದಾಸಿಯನ್ನು ಕ್ಷುದ್ರ ಮಾನವ ನೀನು ಅಪೇಕ್ಷಿಸಿ ಸ್ವಾಮಿಯ ಸೇವೆಗೆ ಆತಂಕವನ್ನುಂಟು ಮಾಡುವದು ಒಳ್ಳೆಯದಲ್ಲವೆಂದು ಪರಿಪರಿಯಿಂದ ಹೇಳಿದನಲ್ಲದೇ, ಶಿವನ ಕೋಪಕ್ಕೆ ಒಳಗಾಗದಿರೆಂದು ಎಷ್ಟು ರೀತಿಯಿಂದ ಬೋಧಿಸಿದರು. ಸುಧಾಮನು ಧನಮದ, ಯೌವ್ವನಮದ, ಜನಬಲಮದಗಳ ಪ್ರಭಾವದಲ್ಲಿ ಪೂಜಕರ ಮಾತನ್ನು ತಿರಸ್ಕರಿಸಿ ದಾಸಿಯನ್ನು ಸಿದ್ಧಲಿಂಗನಸೇವೆಗೆ ಕಳುಹಲಿಲ್ಲ, ಆಗ ಪೂಜಕನು ರಾಜಾಸ್ಥಾನಕ್ಕೆದೂರನಿತ್ತು ಸಕಲ ವೃತ್ತಾಂತವನ್ನು ರಾಜನ ಬಳಿಯಲ್ಲಿ ನಿವೇದಿಸಿದನು.

ಆಗ ಶಿವಭಕ್ತನಾದ ಅರಸನು ತನ್ನ ಮಂತ್ರಿಯನ್ನು ಕರೆಯಿಸಿ, ಈಗಲೇ ಆ ಸುಧಾಮನ ಬಳಿಗೆ ಹೋಗಿ ದೇವದಾಸಿಯನ್ನು ಬಿಡುವಂತೆ ತಿಳಿಸುವದಲ್ಲದೆ ಇದು ಶಿವದ್ರೋಹವೆಂದು ಸರಿಯಾಗಿ ಛೀ ಹಾಕಿ ಬಾ ಎಂದು ಹೇಳಿದನು.

ಅದಕ್ಕೆ ಆ ಸಚಿವೇಂದ್ರನು ಅರಸರಲ್ಲಿ ಕರಜೋಡಿಸುತ್ತ ಆ ಸುಧಾಮನಿಗೆ ಕಾಳಿಮಾತೆ ಬಲವಿದೆ. ಅವನಿಗೆ ಬುದ್ಧಿ ಹೇಳುವದಾಗಲಿ, ಧುಡಿಸುವದಾಗಲಿ, ನನ್ನಿಂದ ಸಾಧ್ಯವಿಲ್ಲವೆಂದನು ಆಗ ಅರಸನು ಕ್ರೋಧ ಸಂತಪ್ತನಾಗಿ ಶಿವಧರ್ಮಕ್ಕೆ ಅಪಚಾರವೆಸಗಿದ ನೀಚನನ್ನು ಇಂದು ತುಂಡರಿಸಿ ಚಲ್ಲುತ್ತೇನೆ. ಎಲ್ಲವ್ರೇ ವೀರಭಟರಿ ಮುಂದಾಗಿರೆಂದು ಸಂಜ್ಞೆ ಮಾಡಲು ಅವರೆಲ್ಲರು ಸುಧಾಮನ ಮನೆಯವರೆಗೆ ಹೋಗಿ ವೈಶ್ಯ ಸುಧಾಮನನ್ನು ಎಳೆತರಲು ಸಿದ್ಧರಾಗಲು ಸುಧಾಮನು ಮಹಾಕಾಳಿಯ ಸಮ್ಮುಖದಲ್ಲಿ ಅನನ್ಯ ಭಕ್ತಿಯಿಂದ ಬೇಡಿಕೊಳ್ಳಲು, ಕಾಳಿಕಾಂಬೆಯು ಪ್ರತ್ಯಕ್ಷಳಾಗಿ, ಅಯ್ಯಾ ಭಕ್ತ ಶ್ರೇಷ್ಠನೇ ದೇವಾದಿದೇವ ಮಹಾದೇವ ಶಿವಶಂಕರನ ಸೇವೆಗೆ ಮೊಸಲಾದ ಆ ದಾಸಿಯನ್ನು ವಂಚಿಸಿ ಕರೆತಂದು ಅಪರಾಧಿಯಾಗಿರುವೆ ಮಹಾ ರುದ್ರ ರೂಪಿಯಾದ ಶಿವನ ಶಕ್ತಿ ಸಾಮರ್ಥ್ಯಗಳನ್ನರಿಯದೆ ಅವಿವೇಕಿಯಾಗಿರುವಿ ಶಿವನ ಆಜ್ಞೆಯನ್ನು ಮೀರುವದು ಹರಿಬ್ರಹ್ಮ ದೇವತೆಗಳಿಗೂ ಅಸಾಧ್ಯ ಅಂದಾಗ ನಾನು ಶಿವನ ಆಜ್ಞಾಧಾರಕಳು, ನಿನಗೆ ಶಿಕ್ಷೆ ತಪ್ಪಿದ್ದಲ್ಲ. ಅನುಭವಿಸು ಎಂದು ಕಾಳಿಕಾಂಬೆಯು ಅಂತರ್ದಾನವಾದಳು. ಬಳಿಕ ಶಿವನ ಪ್ರೇರಣೆಯ ಪ್ರಕಾರ ಸಂತಪ್ತನಾಗಿ ಕುದಿಯುತ್ತಿದ್ದ ಅರಸನು ಸುಧಾಮನನ್ನು ಮಂತ್ರಿಯನ್ನು ಹಿಡಿತರಿಸಿ ಶೂಲಕ್ಕೇರಿಸಿದನು. ಆಗ ಶಿವನು ರಾಜನ ಧರ್ಮನೀತಿಗೆ ಶಿವಧರ್ಮನಿಷ್ಠೆಗೆ ಮೆಚ್ಚಿ ಅವನಿಗೂ ಹಾಗೂ ಪೂಜಕನಿಗೂ ಶಿವಪದವಿಯನ್ನು ಕೊಟ್ಟನು. ಪಾಪಿಗಳೆನಿಸಿದ ಸುಧಾಮ ಮಂತ್ರಿಗಳು ಯಮಯಾತನೆಯಲ್ಲಿ ನರಕದಲ್ಲಿ ಕೊಳೆಯಹತ್ತಿದರು.

---

೮ ನೇ ಸಂಧಿ

ಚೋಳರಾಜ ಹಾಗೂ ನಂಬಿಯಕ್ಕರ ಕಥೆಗಳು

ಬಳಿಕ ಮರುದಿನದ ಸಭೆಯಲ್ಲಿ ನರಹರಿ ಭಟ್ಟನು ಮುಂದಾಗಿ ಗುರುದೇವಾ ಶಿವನಿಗೆ ದ್ರೋಹಗೈದ ಪಾಪಿಗಳನ್ನು ಕರುಣೆ, ಮಮಕಾರ

ವಾತ್ಸಲ್ಯಗಳ ಆಳದಲ್ಲಿ ಸಿಲುಕಿ ದಂಡಿಸದೇ ಬಿಟ್ಟವರು ಉಂಟೋ ? ಇಲ್ಲವೆ ದಂಡಿಸಿ ಶಿವನ ಪ್ರೀತಿಗೆ ಪಾತ್ರರಾದವರುಂಟೊ ? ಅರುಹಿ ಕೃತಾರ್ಥರನ್ನಾಗಿ ಮಾಡಬೇಕೆಂದು ಬಿನ್ನೈಸಿಕೊಂಡನು.

ಆಗ ನರಹರಿ ಪಂಡಿತ ಶಿರೋಮಣಿಯ ಮಾತಿಗೆ ನಸುನಗುತ್ತ ಗುರು ಬಸವರಾಜರು ಅಯ್ಯಾ ಪಂಡಿತಶಿಖಾಮಣಿಯೇ ಭೂಲೋಕ ವಾಸಗೈಯ ಬಂದು ಇಷ್ಟೆಲ್ಲ ಬಂಧು ಬಾಂಧವರೊಡನೆ ನಮ್ಮನ್ನು ವಾದಕ್ಕೆ ನಿಲ್ಲಿಸಿ ಜಯಪ್ರದನಾಗಬಯಸುವ ನಿನ್ನ ಹಂಬಲ ಸ್ತುತ್ಯವಾದದ್ದು, ಇದರಿಂದ ನಮಗೆ ಒಳ್ಳೇದೆಂದು ನಾವು ಸದಾ ಜಾಗ್ರತಿಯಿಂದ ಶಿವನಲ್ಲಿ ಬೇಡಿಕೊಳ್ಳುತ್ತೇವೆ. ಈಗ ನೀನು ನಮ್ಮ ಉತ್ಕೃಷ್ಟ ಬಯಸಿ ಶಿವಕಥಾವಳಿಯಲ್ಲಿ ಶಿವ ಮಹಿಮೆಯಿಂದ ಕೂಡಿದ ದೃಷ್ಟಾಂತಗಳನ್ನು ಕೇಳುತ್ತಿರುವದು ಆನಂದದ ವಿಷಯವೇ ಸರಿ ಅಂದ ಮೇಲೆ ಇಂತಹ ಶುಭ ಪ್ರಸಂಗವನ್ನು ಮಾನ್ಯ ಮಾಡುವದು ನಮ್ಮ ಕರ್ತವ್ಯ ಎಂದರು.

ಬಳಿಕ ಅಯ್ಯಾ ಭೂಸುರರೇ ಕೇಳಿರಿ, ಹಿಂದಕ್ಕೆ ಚೋಳರಾಜನು ಶಿವಭಕ್ತ ಸಂಪನ್ನನೆಂದು ಹೆಸರುವಾಸಿಯಾದಂತೆ ಶಿವನ ನಿಂದೆನುಡಿಗಳಾಗಲಿ ಶಿವನ ಸೊತ್ತು ಅಪಹರಿಸಿದ ಪ್ರಸಂಗವಾಗಲಿ ಅವನಿಗೆ ಕಂಡುಬಂದರೆ ಅವನು ಸಿಟ್ಟುಬೆಂಕಿಯಾಗುತ್ತಿದ್ದನು. ಈ ಅಪರಾಧಗಳನ್ನು ಮಾಡಿದವರು ಯಾರಿದ್ದರೂ ಅವರನ್ನು ಶಿಕ್ಷೆಗೆ ಗುರಿಮಾಡದೇ ಬಿಡುತ್ತಿದ್ದಿಲ್ಲ.

ಒಮ್ಮೆ ಚೋಳರಾಜನು ಶಿವಲಿಂಗ ಪೂಜೆಗೆಂದು ತರತರದ ಹೂಗಳನ್ನು ತಂದಿಟ್ಟು ಸ್ನಾನ ತೀರಿಸಿಕೊಂಡು ಬರುವಷ್ಟರಲ್ಲಿ ಆತನ ಹೆಂಡತಿಯು ಸುವಾಸನೆಯುಕ್ತವಾದ ಹೂವುಗಳನ್ನು ಆರಿಸಿಕೊಂಡು ಮೂಸಿನೋಡಿದ್ದಳು ಸ್ನಾನ ತೀರಿಸಿ ತಿರುಗಿ ಬಂದ ರಾಜನಿಗೆ ಹೆಂಡತಿಗೈದ ಅಪರಾಧ ತಿಳಿದು ಶಿವನಿಗರ್ಪಿತವಾಗಬೇಕಿದ್ದ ಹೂವುಗಳ ವಾಸನೆ ಹೀರಿ ಮೈಲಿಗೆ ಗೊಳಿಸಿದ ಹೆಂಡತಿಯ ಮೂಗನ್ನೇ ಕೊಯ್ದು ಶಿವಮಹಾದೇವನಿಗೆ ಬೇರೆ ಹೂಗಳನ್ನು ತಂದು ಮುಡಿಯಲ್ಲಿ ಅರ್ಚಿಸಿ ಅರ್ಪಿಸಿ ಆನಂದಗೊಂಡನು.

ಆಗ ಶಿವನು ಚೋಳರಾಜನ ನಿಷ್ಠಾಭಕ್ತಿಗೆ ಮೆಚ್ಚಿ ಅವನಿಗೆ ಮೋಕ್ಷ ಪದವಿಯನ್ನಿತ್ತನು.

ಅದರಂತೆ ಶಿರಿಯಾಳನ ಕಾಪಟ್ಯದಲ್ಲಿ ಶಿವಪ್ರಸಾದವೆಂದು ಸಿದ್ಧಪಡಿಸಿದ ಅನ್ನವನ್ನು ಅರಿಯದೇ, ಶಿರಿಯಾಳನ ವಂಚನೆಯು ಹೇಳಿಕೆಯಿಂದ ಊಟ ಮಾಡಿದ ಅಪರಾಧಕ್ಕೆ ನಂಬಿಯಕ್ಕನ ಶಿವಭಕ್ತಿಯ ರೋಷದಲ್ಲಿ ಆ ಶಿವಶರಣಿ ಮಗನ ಆಹುತಿಯಾಯಿತು. ಶಿವಧರ್ಮಿಗಳು ಅದೆಷ್ಟು ಸದ್ಗುಣ ಸಂಪನ್ನರೊ ಅಷ್ಟೇ ರೋಷದ ಕಿಚ್ಚು. ಶಿವನ ಮೇಲಿನ ಅಭಿಮಾನದ ಹುಚ್ಚು ಅವರಲ್ಲಿ ಅಡಗಿರುತ್ತದೆ ಅನ್ನುವದನ್ನು ಮರೆಯಬೇಡಿರಿ. ಇಂತಹ ಒಂದೇ ಎರಡೇ ಶಿವಧರ್ಮದ ಏಳ್ಗೆಗಾಗಿ ಭೂಮಿಯಲ್ಲಿ ಅವತರಿಸಿ ಶರಣ ಶರಣೆಯರು ಈಶ್ವರನ ಆಜ್ಞೆಯಂತೆ ಶಿವಮತೋದ್ಧಾರಕ್ಕಾಗಿ ಕಾರ್ಯ ಮಾಡುತ್ತಾರೆ. ಅವರ ಚರಿತ್ರೆ ವರ್ಣಿಸುವದು ಅಸಾಧ್ಯವಾದ ವಿಷಯ. ಪ್ರಸಂಗ ಬಿದ್ದರೆ ವೀರ ಗಣದವರ ರೋಷಕ್ಕೆ ಶಿವನೇ ಒಂದೊಂದು ಸಾರೆ ಅಂಜಿ ಭಯಪಟ್ಟ ಪ್ರಸಂಗಗಳು ಸಾಕಷ್ಟು ಗತಿಸಿಹೋದ ಉದಾಹರಣೆಗೆ ಕೊರತೆ ಇಲ್ಲ, ಇನ್ನು ಉಳಿದವರ ಪಾಡೇನು ?

ನರಹರಿಭಟ್ಟರೆ, ಪಂಡಿತರಾದ ತಾವು ಶಿವನ ಮಹಿಮೆಯ ಪ್ರಚಾರಕ್ಕಾಗಿಯೇ ಭೂಮಿಯಲ್ಲಿ ನಮ್ಮ ವಾಣಿಯಂತೆ ಅವತಾರವೆತ್ತಿದ ಲೋಕ ಸಂಚಾರಿ ಬ್ರಹ್ಮಮಾನಸ ಪುತ್ರ ನಾರದ ಮಹರ್ಷಿಗಳು ನಾವು ಎನ್ನುವದನ್ನು ಅದೆಷ್ಟು ದಿವಸ ಮರೆಮಾಚಲು ಪ್ರಯತ್ನಪಡುತ್ತಿರಿ. ಆಗಲಾಗಲಿ ಕರ್ತವ್ಯ ಕರ್ಮ ಮುಖ್ಯ ಅಲ್ಲದೇ ನಿಮ್ಮ ಕಾರ್ಯ ರಚನೆಯು ನಿಮ್ಮ ಮನಸ್ಸಿನಂತೆ ಸಾಗಲಿ ಎಂದು ನಗುನಗುತ್ತ ಅಂದಿನ ಸಭೆಯನ್ನು ಸಮಾಪ್ತಗೊಳಿಸಿ ತಾವು ಲಿಂಗಾರ್ಚನೆಗೆ ಹೊರಟುಹೋದರು.

೯ ನೇ ಸಂಧಿ

ಮಗ ದಾನ ಕೊಟ್ಟದ್ದು, ತಂದೆ ಕಸಿದುಕೊಳ್ಳುವ ಪ್ರಯತ್ನ

ಬಳಿಕ ನರಹರಿ ಭಟ್ಟನು, ಗುರುಸಾರ್ವಭೌಮ ಬಸವರಾಜರ ನುಡಿಗೆ ನಸು ಕಿರುನಗೆ ಬೀರುತ್ತ ಗುರುದೇವಾ ತಮಗರಿಯದ ವಿಷಯ ಉಂಟೆ. ಆದರೂ ಶಿವನಪ್ಪಣೆಯಂತೆ ತಮ್ಮ ಘನ ಮಹಿಮೆಯನ್ನು ಅಜ್ಞ ಜನತೆಗೆ ಗೊತ್ತಾಗುವಂತೆ ಕಾರ್ಯವೆಸಗಲು ವಿರುದ್ಧ ರೀತಿಯಲ್ಲಿ ಅರಿತು ಅರಿಯದ ಅವಿವೇಕತನದಿಂದ ವರ್ತಿಸಬೇಕಾಗಿದೆ, ಕ್ಷಮಿಸಬೇಕೆಂದು ಕರಜೋಡಿಸಿ, ಮತ್ತೊಂದು ದೃಷ್ಟಾಂತದ ಕಥೆಯನ್ನು ಹೇಳುವ ಕೃಪೆಯಾಗಬೇಕೆಂದನು.

ಆಗ ಗುರುಬಸವರಾಜರು ನಸುನಕ್ಕು ಆಗಲಿ ಎಂದು, ಮಗನು ದಾನ ಕೊಟ್ಟದ್ದು. ತಂದೆ ಕಸಿದುಕೊಳ್ಳುವ ಸಾಹಸದಿಂದ ತಂದೆ ಹಾಗು ಅವನ ಪ್ರಯತ್ನಕ್ಕೆ ಸಹಾಯ ಮಾಡಿದವರಿಗೆ ಉಂಟಾದ ಬಾಧೆಯನ್ನು ಹೇಳುತ್ತೇವೆ ಕೇಳಿರೆಂದರು.

ಭೂಚಕ್ರ ಪುರದಲ್ಲಿ ಸಮಿತ್ರ ಎಂಬ ಶಿವಭಕ್ತ ಸಂಪನ್ನ ಬ್ರಾಹ್ಮಣ ನಿದ್ದನು. ಆ ಶಿವಭಕ್ತನಿಗೆ ಅದೇಕೋ ಗೃಹಸ್ಥಾಶ್ರಮವನ್ನು ತೊರೆದು ಸನ್ಯಾಸಿಯಂತೆ ತಪಗೈದು ಶಿವ ಸಾಕ್ಷಾತ್ಕಾರಗಳಿಸುವ ಆಸೆ ಹುಟ್ಟಿತು. ಅದಕ್ಕಾಗಿ ಹರಿಹರೇಶ್ವರ ಲಿಂಗದ ಪೂಜಾರಿಗಳ ಬಳಿಗೆ ಬಂದು, ಅಪ್ಪಾ ಪೂಜಕನೆ ಶಿವಲಿಂಗದ ಹೆಸರಿನಲ್ಲಿ ನನ್ನದಾದ ಈ ಒಂದು ಭೂಮಿಯನ್ನು ಲಿಂಗಮೂರ್ತಿಯ ಹೆಸರಿನಲ್ಲಿ ಸಂತೋಷದಿಂದ ಅರ್ಪಿಸುವೆನು ತಾವು ಆನಂದ ದಿಂದ ಸ್ವೀಕರಿಸಬೇಕೆಂದು ಆದರದಿಂದ ಪೂಜಕನಿಗೆ ಹಾಗು ಹರಿಹರೇಶ ಲಿಂಗಮೂರ್ತಿಗೂ ನಮಸ್ಕರಿಸಿ, ತಪಸ್ಸಿಗಾಗಿ ಬದರಿಕಾಶ್ರಮಕ್ಕೆ ಹೊರಟು ಹೋದನು.

ಕೆಲವು ಕಾಲ ಕಳೆದ ಬಳಿಕ ಸಮಿತ್ರನ ತಂದೆಗೆ ಭೂಮಿಯೊಂದು ದಾನ ವಾಗಿ ಹೋಗಿರುವದು ತಿಳಿದು, ಪೂಜಕನ ಬಳಿಗೆ ಬಂದು ಬಾಯಿಗೆ ಬಂದಂತೆ ಮಾತನಾಡಿ ಹೊಲವನ್ನು ಕೊಡುವದು ಸಾಧ್ಯವಿಲ್ಲವೆಂದು ಖಂಡಿತವಾದ ನುಡಿಯಿಂದ ಮಗನನ್ನು ಸಹ ವಳಿತಾಗಿ ಹಳಿದು ಹೋದನು.

ಬಳಿಕ ಈ ವಿಷಯವು ಪುರದರಸನ ಬಳಿಗೆ ಮುಟ್ಟಿತು. ಆಗ ಅರಸನು ಸಮಿತ್ರನ ತಂದೆ ಶಿವದ್ರೋಹಗೈದ ಪಾಪಿ ಎಂಡ ಮೇಲೆ ಇವನು ನಮ್ಮ ರಾಜ್ಯ ದಲ್ಲಿ ಇರುವದೇ ಬೆಡುವೆಂದು ಪಟ್ಟಣದಿಂದ ಹೊರಗೆ ಹಾಕಿಸಿದನು.

ಆಗ ಅವನು ಮುಗದ ದೇಶದ ರಾಜನ ಬಳಿಗೆ ಬರುತ್ತಿರಲು, ಮುಗದ ದೇಶದ ಮಂತ್ರಿಯು ಮುಖ ಮಂಡಲದ ಛಾಯಾ ರೇಖೆಗಳ ಮೇಲಿಂದ ಸಮಿತ್ರನ ತಂದೆಯು ಶಿವದ್ರೋಹಿ ಎಂದು ತಿಳಿದು ರಾಜನಿಗೆ ಪ್ರಭೋ ಈ ಚಂಡಾಲನು ಶಿವದ್ರೋಹಿಯಾಗಿದ್ದಾನೆ ಎಂನು ಸಭೆಯಲ್ಲಿ ಕಾಲಿಡುವ ಮೊದಲೆ ತಿಳುಹಿಸಿದನು. ಅಲ್ಲದೇ ಶಿವದ್ರೋಹಿಗೆ ಸ್ಥಾನ ಕೊಡುವದು ಒಳ್ಳೆದಲ್ಲವೆಂದು ಹೇಳಿದನು. ಮತ್ತು ನಾವು ಕೇಡಿಗೆ ಆಮಂತ್ರಣ ಕೊಟ್ಟಂತಾ ಗುವದು ಶಿವದ್ರೋಹಿಯನ್ನು ಸನ್ಮಾನಿಸುವದೆಂದರೆ ಶಿವನ ಉರಿ ನೇತ್ರದ ಎದುರು ಎದೆಗೊಟ್ಟು ನಿಂತಂತೆ ಎಂದು ಶಿವತತ್ವ ಬೋಧಾಮೃತವ ಸುರಿಸಿದನು.

ಆದರೂ ರಾಜನಾದ ಮುಗದನು, ಸಚಿವ ಶ್ರೇಷ್ಠನ ಮಾತನ್ನು ಲಕ್ಷ್ಯಕ್ಕೆ ತಾರದೆ ಬ್ರಾಹ್ಮಣನನ್ನು ಆದರದಿಂದ ಸನ್ಮಾನಿಸಿ ಸಭೆಯಲ್ಲಿ ಕರೆದುಕೊಂಡನು. ಆಗ ಸಚಿವನು ಸಿಟ್ಟು ಸಂತಾಪಗಳ ಭರದಲ್ಲಿ ಕೈ ಕಠಾರಿಯಿಂದ ಈರ್ವರನ್ನೂ ಇರಿದು ಕೊಂದನು. ಇದರಿಂದ ಅವನನ್ನು ಶಿವಭಕ್ತರಾದವರು ಹೊಗಳಿದರು. ಆದರೆ ರಾಜ್ಯದ ಸೈನ್ಯವು ಅರಸನ ಮೇಲಿನ ಅಭಿಮಾನದಿಂದ ಮಂತ್ರಿಯನ್ನು ಕೊಲ್ಲಬೇಕೆಂದು ಮುತ್ತಿಗೆ ಹಾಕಿದರು. ಆದರೆ ಶಿವನ ಮಹಿಮೆಯಿಂದ ಕಗ್ಗತ್ತಲೆಯಲ್ಲಿ ತಮ್ಮಲ್ಲಿ ತಾವೆ ಬಡಿದಾಡಿ ಇಡೀ ಸೈನ್ಯವೇ ನಾಶವಾಯಿತು.

ಬಳಿಕ ಕೆಲವು ಸಮಯದ ನಂತರ ರಾಜನ ಮಗನಿಗೆ ಸರ್ವಸಂಗತಿ ತಿಳಿದು ಮಂತ್ರಿವರ್ಯನ ಬಳಿಗೆ ಬಂದು ನಯ ವಿನಯದಿಂದ ನಮಸ್ಕರಿಸಿ ತನ್ನ ತಂದೆಯಿಂದಾದ ತಪ್ಪನ್ನು ಮನ್ನಿಸಬೇಕೆಂದು ಭಯ ಭಕ್ತಿಯಿಂದ ಬೇಡಿಕೊಳ್ಳುಹತ್ತಿದನು,

ಆಗ, ಸಮಿತ್ರ ರಾಜಕುಮಾರನ ವಿನಯಶೀಲ ಸೌಜನ್ಯದಿಂದ ಸಚಿವನು ರಾಜಕುಮಾರನ ಸಮಿತ್ರನನ್ನು ಮನ್ನಿಸಿದನಲ್ಲದೆ ಈರ್ವರು, ಶಿವನ ಸ್ತುತಿ

ಗೈಯ್ಯಲು ಮಹಾದೇವನು ಸುಪ್ರೀಯನಾಗಿ ನಂದೀಶನಿಗೆ ಈರ್ವರನ್ನು ಕರೆತಂದು ಮೋಕ್ಷ ಪದವಿಯನ್ನು ಕರುಣಿಸುವಂತೆ ಅಪ್ಪಣೆ ಮಾಡಿದನು.

ಆಗ ಮಹಾದೇವನ ಮನದಾಸೆಯಂತೆ ನಂದೀಶನು ಮಂತ್ರಿಯನ್ನು ಹಾಗು ರಾಜಪುತ್ರ ಸಮಿತ್ರರನ್ನು, ಭೂಮಿಯನ್ನು ಶಿವನ ಹೆಸರಿನಲ್ಲಿ ದಾನ ಮಾಡಿ ತಪಗೈದ ಸಮಿತ್ರ ಎಂಬ ಬ್ರಾಹ್ಮಣನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿ ಗಣಪದವಿಯೊಡನೆ ನಿತ್ಯ ಮಂಗಲ ಮೂರ್ತಿ ಶಿವನ ಪದತಲದಿಂದ ಅಗಲದಂತಹ ಮೋಕ್ಷವನ್ನು ಕರುಣಿಸಿದರು.

ಅತ್ತ ತಂದೆ ಎನಿಸಿದ ಬ್ರಾಹ್ಮಣ ಹಾಗು ಮುಗದ ದೇಶದ ಅರಸನನ್ನು ನರಕದಲ್ಲಿ ತಳ್ಳಿ ಯಮಭಟರು ಪರಿ ಪರಿಯ ಹಿಂಸೆಯಿಂದ ಯಾತನೆ ಪಡಿಸಿದರು.

ಇದರ ತಾತ್ಪರ್ಯ ಇಷ್ಟೇ, ಪಾಪಕ್ಕೆ ಪಾಪಿಗಳಿಗೆ ಪ್ರೋತ್ಸಾಹ ಕೊಟ್ಟವರು ನಿಜ ಪಾಪಿಗಳಾಗುತ್ತಾರೆ. ಅಂಥವರ ಸಂಗಡ ಮಾತನಾಡುವದು ಮೃತ್ಯು ದೇವನಿಗೆ ಆಮಂತ್ರಣ ಕೊಟ್ಟಂತೆ, ಅಲ್ಲವೇ ನೀವೇ ವಿಚಾರ ಮಾಡಿ ಎಂದು ಹೇಳಿ ತಮ್ಮ ನಿತ್ಯ ಕರ್ಮಾದಿಗಳ ವೇಳೆಯಾದ್ದರಿಂದ ಗುರು ಬಸವರಾಜರು ಅಂದಿನ ಸಭೆಯನ್ನು ವಿಸರ್ಜಿಸಿ ಹೊರಟು ಹೋದರು

೧೦ ನೇ ಸಂಧಿ

ಶಿವಧರ್ಮಕ್ಕೆ ಅಸುಚಿಯಿಂದ ಅಪಚಾರ ಗೈದವರ ಕಥೆಯು

ಗುರು ಬಸವರಾಜರ ವೈಭವಪೂರ್ಣವಾದ ವಿಶಾಲ ಹೃದಯದಿಂದ ಚಿಮ್ಮಿಬಂದ ರಸವತ್ತಾದ ಕಥೆಯಿಂದ ನರಹರಿಭಟ್ಟರ ಅನುಯಾಯಿಗಳಿಗೆ ಎಲ್ಲಿಲ್ಲದ ಸಂತಸವಲ್ಲದೇ ಶಿವಭಕ್ತಿ ತನ್ನಿಂದ ತಾನೇ ಜಾಗ್ರತವಾಗಿ ನಿತ್ಯವು ಶಿವಮಹಾದೇವನ ನಾಮಸಂಕೀರ್ತನೆ ಹೊರಡುವ ಕಥೆಗಳನ್ನು ಕೇಳಬಯಿಸಿ ತಪ್ಪದೇ ಮಠಕ್ಕೆ ಬರಹತ್ತಿದರು.

ಅಲ್ಲದೆ, ಮುಂಜಾನೆ ಗುರುಗಳು ತಿಳಿಸಿದ ಕಥೆಯಲ್ಲಿ ಕೆಲವುಭಾಗ ಸಂಶಯದಲ್ಲಿ ಉಳಿಸಿಕೊಂಡಿದ್ದ ನರಹರಿಭಟ್ಟನು ತನ್ನ ಮನೆಯಲ್ಲಿ ಅಡಕ ವಾಗಿರುವ ಸಂಶಯ ನಿವಾರಣೆಗಾಗಿ ಸಾಯಂಕಾಲದ ಸಂಧ್ಯಾರಮಣಿಯ ಆನಂದಮಯ ಸುಸಮಯದಲ್ಲಿ ಗುರುಬಸವರಾಜರ ದರ್ಶನಾಶೀರ್ವಾದಕ್ಕಾಗಿ ತನ್ನ ಬಂಧುವರ್ಗದೊಡನೆ ಮಠಕ್ಕೆ ಬಂದನು.

ಅಷ್ಟರಲ್ಲಿ ಶಿಷ್ಯರಾದ ಸುಜ್ಞಾನಿದೇವರು ಹೊರಗೆ ಬಂದು ಗುರುಗಳು ಬರುತ್ತಿರುವದನ್ನು ತಿಳುಹಿಸಿ ತನ್ನ ನಿತ್ಯ ಕರ್ತವ್ಯದತ್ತ ಹೊರಟುಹೋದರು ಆಗ ಸ್ವಲ್ಪ ಸಮಯದ ನಂತರ ಗುರು ಬಸವರಾಜರು ಮಠದ ಪಠಾಂಗಣಕ್ಕೆ ಬ್ರಾಹ್ಮಣನ ಸಮೂಹಕ್ಕೂ ಇನ್ನುಳಿದ ಭಕ್ತಬಾಂಧವರಿಗೂ ದರ್ಶನಕೊಟ್ಟು ತಮ್ಮ ನಿತ್ಯ ಪೀಠದಲ್ಲಿ ಮಂಡಿಸಿ ಸಭೆಗೆ ಬಂದವರನ್ನು ಆನಂದ ದೃಷ್ಟಿಯಲ್ಲಿ ಕಂಡು ನಸುನಗುತ್ತ ತಮ್ಮ ಬಲಹಸ್ತದಿಂದ ಆಶೀರ್ವಾದ ಮಾಡಿದರು.

ಅಯ್ಯಾ ಭೂಸುರೋತ್ತಮರೆ, ನಿಮ್ಮ ಮನದಾಸೆಯಂತೆ ಈ ಹೊತ್ತು ಅತೀ ಚಮತ್ಕಾರವುಳ್ಳ ಕಥಾಭಾಗವನ್ನು ವಿವರಿಸಿ, ಬಳಿಕ ಶಿವಭಕ್ತರ ಶಿವದ್ರೋಹಿಗಳ ಪರಿಚಯವನ್ನು ತಿಳಿಸುವ ನಮ್ಮ ಕರ್ತವ್ಯಕ್ಕೆ ವಿರಾಮ ಕೊಡುತ್ತೇವೆ.

ಬಳಿಕ ಗುರುಗಳು— ವಿರಾಗಿಕ ಎಂಬ ಅರಸನು ಧರ್ಮಪರಾಯಣ ನಾಗಿ ಬಾಳಿಕೊಂಡಿದ್ದನು. ಅವನ ಮಗನಾದ ಸುಧಾತನು ಅನೇಕ ದೇಶಗಳನ್ನು ನೋಡಿಕೊಂಡು ಬರುವ ಅಭಿಲಾಷೆಯಿಂದ ಮಂತ್ರಿ, ಸೇನಾಪತಿ ಪುರೋಹಿತ ಸೇವಕ ಹೀಗೆ ರಾಜಬಳಗವನ್ನು ಕರೆದುಕೊಂಡು ದೇಶಪರ್ಯಟ ನಕ್ಕೆ ಹೊರಟು ಕೆಲವು ದಿವಸ ಮಾರ್ಗಕ್ರಮಣ ಗೈಯಲು ಮುಂದೆ ನರ್ಮದೆಯ ದಡಕ್ಕೆ ಬಂದು ವಿಶ್ರಾಂತಿಗೆಂದು ತಂಗಿರಲು ಗೌತಮ ಋಷಿಗಳು ಅನಾಯಾಸವಾಗಿ ಭೆಟ್ಟಿಯಾದರು. ಗೌತಮರು ತ್ರಿಕಾಲ ಜ್ಞಾನಿಗಳಾದ ಕಾರಣ ನೀವೆಲ್ಲರು ಎಲ್ಲಿಗೆ ಹೋಗುವಿರೆಂದು ಕೇಳಲು ರಾಜಪುತ್ರನು ನಾವು ಕಾಶಿ ವಿಶ್ವನಾಥನ ದರ್ಶನಕ್ಕೆ ಹೊರಟಿದ್ದೇವೆ ಎಂದು ನುಡಿದನು. ಆಗ ಗೌತಮರು ಅಯ್ಯಾ ಶಿವದ್ರೋಹಗೈದ ಕರ್ಮ ನಿಮ್ಮ ಬೆನ್ನು ಹತ್ತಿರುವಾಗ ನೀವು ಕಾಶಿಕ್ಷೇತ್ರದರ್ಶನ ಮಾಡುವದು ಮಹಾಪಾಪವು ಎಂದರು.

ಆಗ ಸುಘಾತನು ಅದು ಹೇಗೆ ಎಂದು ಮರು ಪ್ರಶ್ನೆ ಮಾಡಲು ಗೌತಮರು ಅಯ್ಯಾ ರಾಜಕುಮಾರನೆ ನೀನು ದೇಶ ಪರ್ಯಟನೆಯ ಕಾಲದಲ್ಲಿ ತಲೆಕೂದಲನ್ನು ಹಿಕ್ಕಿ ಶುದ್ದನಾಗದೇ ಶೌರೇಶ ಲಿಂಗದ ಪೂಜೆ ಮಾಡಿರುವೆ. ಅಲ್ಲದೆ ಮಂತ್ರಿಯಾದ ಈತನು ಹಿಂದು ಮುಂದಿನ ವಿಚಾರವಿಲ್ಲದೆ, ಋಷಿಗಳ ಆಶ್ರಮದಲ್ಲಿ ತಾಂಬೂಲವನ್ನೂ ಉಗುಳಿ ಋಷಿ ಆಶ್ರಮವನ್ನು ಯಂಜಲದಿಂದ ಅಶುದ್ಧಗೊಳಿಸಿದ ಪಾಪ ಬೆನ್ನುಹತ್ತಿದೆ ಹಾಗು ಬಿಕ್ಷಾವತಿ ಎಂಬ ಪುಣ್ಯ ಭಾವಿಯಲ್ಲಿ ಈ ಪುರೊಹಿತನು ಮಲವಿಸರ್ಜನೆಗೈದ ಮಾಡಿದ ಕಡು ಪಾಪಿಯು ಮತ್ತೆ ಈ ನಿಮ್ಮ ಸೇವಕನು ಶಿವನ ಸನ್ನಿಧಾನವೆನಿಸಿದ ಸ್ಥಳದಲ್ಲಿ ಸಂಬಳ ಒಗೆದು ಕಡುದ್ರೋಹಿಯಾಗಿರುವನು ಕಾರಣ ಸರ್ವ ಕಡೆಯಿಂದಲೂ ನಿಮ್ಮೆಲ್ಲರಿಗೂ ಶಿವದ್ರೋಹವು ಬೆನ್ನುಹತ್ತಿ ಮಹಾ ಪಾಪಿಗ ಳಾಗಿರುವಿರಿ. ಅದಕ್ಕಾಗಿ ದೈವ ನಿರ್ಣಯದಂತೆ ಇಂದಿನಸೂರ್ಯಾಸ್ತದೊಳಗಾಗಿ ನಿಮಗೆ ಮರಣ ಉಂಟು ಎಂದು ಹೇಳಿದರು.

ಇಷ್ಟಾದರೂ ರಾಜಕುಮಾರನಾಗಲಿ ತಿಳುವಳಿಕೆಯುಳ್ಳ ಮಂತ್ರಿಯಾಗಿ ಪಂಡಿತ ಎನಿಸಿದ ಪುರೋಹಿತನಾಗಲಿ ಈ ಪಾಪಪರಿಹಾರದ ಮಾರ್ಗವನ್ನು ತಿಳುಹಿಸಿರೆಂದು, ಗೌತಮರನ್ನು ಕೇಳದೇ ಮದಾಂಧ ಬುದ್ಧಿಯಿಂದ ಸೊಕ್ಕಿನ ಶಡವಿನಲ್ಲಿ ಗೌತಮ ಋಷಿಗಳ ಸತ್ಯ ನುಡಿಯತ್ತ ಗಮನ ಸಹ ಕೊಡದೆ ಮುನ್ನಡೆದರು. ಆಗ ಋಷಿಗಳು ನಿರುಪಾಯರಾಗಿ ತಮ್ಮ ನಿತ್ಯ ಕರ್ತವ್ಯಕ್ಕೆ ತೆರಳಿದರು.

ಮೂರ್ಖಂಗೆ ಬುದ್ಧಿಯನು ನೂರ್ಕಾಲ
ಹೇಳಿದರು ಬೊರ್ಗಲ್ ಮೇಲೆ ಮಳೆ ಸುರಿದಂತೆ ವ್ಯರ್ಥ

ಎಂಬ ಸರ್ವಜ್ಞನ ನುಡಿಯಂತೆ ಮೂರ್ಖನಾದ ರಾಜಪುತ್ರ ಸುಘಾತನು ಅವನ ಅನುಯಾಯಿಗಳು ನರ್ಮದೆಯಿಂದ ಮುಂದೆ ಸಾಗಲು ದಾರಿಯಲ್ಲಿ ಸುಘಾತನಿಗೆ ವಿಪರೀತ ತಲೆಶೂಲೆ ಪ್ರಾಪ್ತನಾಯಿತು. ಮಂತ್ರಿವರ್ಯನಿಗೆ ಸಾಲಿಗೆ ಬೇನೆ ಹುಟ್ಟಿ ಅನ್ನ ನೀರು ಕಟ್ಟಾದವು. ಮುಂದೆ ಸ್ವಲ್ಪ ದೂರ ಹೋಗುವಷ್ಟರಲ್ಲಿ ಪುರೋಹಿತನಿಗೆ ಘಟಸರ್ಪ ಕಚ್ಚಿ ಸಾವು ಸಮೀಪಿಸಿತು. ಬಳಿಕ ಸುಬುದ್ದಿಯು (ಸೇವಕ) ಬಾಯಿ ಮೂಗಿನಿಂದ ರಕ್ತ

ನೀಡಿದು ಗೌತಮರ ಸತ್ಯ ನುಡಿಯಂತೆ ಸಂಜೆಗತ್ತಲು ಆವರಿಸುವ ಮೊದಲೆ ನಾಲ್ವರು ಮರಣವನ್ನಪ್ಪಿದರು.

ಬಳಿಕ ತಮ್ಮ ಕರ್ತವ್ಯದಂತೆ ಯಮಭಟರು ನಾಲ್ವರನ್ನೂ ನರಕಕ್ಕೆ ಒಯ್ದು ಯಮರಾಯನ ಆಜ್ಞೆಯಂತೆ ಶಿವಧರ್ಮ ದ್ರೋಹಿಗಳಾದ ಇವರನ್ನು ತರ-ತರದ ಹಿಂಸೆಯಿಂದ ಶಿಕ್ಷಿಸ ಹತ್ತಿದರು. ರಾಜಪುತ್ರನ ಕಣ್ಣು ಮೂಗು ಬಾಯಿಗಳಲ್ಲಿ ತಾಮ್ರರಸವನ್ನು ಕಾಯಿಸಿ ಹಣಿಸಿದರು. ಮಂತ್ರಿಯ ಹಲ್ಲು ಮುರಿದು ಕಬ್ಬಿಣರಸ ಕಾಯಿಸಿ ಸುರುವಿದರು. ಪುರೋಹಿತನ ಹಲ್ಲು ಕಿತ್ತು ಮೂಗಿನ ಹೊಳ್ಳೆಗಳಲ್ಲಿ ಮಳೆ ಜಡಿದು ಭಂಗಿಸಿದರು. ಸೇವಕನನ್ನು ಕಾಯ್ದ ಸಳಿಗಳ ಬರೆ ಎಳೆದು ಘಾತಿಸಿದರು.

ಶಿವದ್ರೋಹ ಗೈದ ಮದಾಂಧರಿಗೆ ಇದಕ್ಕಿಂತಲೂ ಹೆಚ್ಚಿನ ಶಿಕ್ಷೆಯಾಗುವದರಲ್ಲಿ ಸಂಶಯವಿಲ್ಲ. ಶಿವಧರ್ಮ, ಶಿವತತ್ವ, ವೀರಶೈವ ಧರ್ಮದ ಹಾನಿಯಾಗುವದನ್ನು ಶಿವನೆಂದಿಗೂ ಸಹಿಸನು. ಶಿವನು ಭಕ್ತರ ಬಗ್ಗೆ ಎಷ್ಟುರೀತಿಯಿಂದ ಶುಲಭನಾಗಿ ವಲಿದು ಮೋಕ್ಷ ಪದವಿಯನ್ನು ಕರುಣಿಸಿದ ದೃಷ್ಟಾಂತಗಳಂತೆ ತನ್ನ ನಿಜಧರ್ಮಕ್ಕೆ ಹಾನಿಯನ್ನುಂಟುಮಾಡಿ ದ್ರೋಹಿಗಳನ್ನು ಅಷ್ಟೆ ಕ್ರೂರ ನಿರ್ದಯಿಯಾಗಿ ಶಿಕ್ಷೆನೀಡುತ್ತಾನೆ ಎಂಬುವದನ್ನು ಮರೆಯಬಾರದು.

ಅಲ್ಲದೆ ಮಹಾದೇವನು ಗುರು-ಲಿಂಗ ಜಂಗಮ ಈ ಮೂರು ಪುಣ್ಯ ಸ್ವರೂಪದಲ್ಲಿ ಪ್ರಕಾಶ ಮಾನನಾದ ಸಂಗತಿಯು ವೇದಾಗಮಗಳ ಆದಿಯಿಂದಲೂ ಅನೇಕ ಪುರಾಣ ಪುಣ್ಯ ಚರಿತ್ರೆಗಳ ಆಧಾರಗಳಿಂದ ತಿಳಿದ ಸಂಗತಿಯಾಗಿರುವದು. ಆದರೆ, ಗುರುವಿನೊಡನೆಯೂ ಲಿಂಗ ಸಂಗದಲ್ಲಿಯೂ ಜಂಗಮ ಮೂರ್ತಿಯ ಮಂಗಳ ವಾಣಿಯಂತೆಯೂ ಲಿಂಗ ರೂಪವೇ ಎಂದು ತಿಳಿದು ವರ್ತಿಸಬೇಕು. ಅವರ ಸೇವೆಯಿಂದ ಸಂತಸ ಪಡೆಯಬೇಕು. ಸದಾಚಾರ ಸಂಪನ್ನತೆಯ ಮೂಲ ಗುರಿಯಾದ ಗುರುಲಿಂಗಜಂಗಮ ಮೂರ್ತಿಗಳಲ್ಲಿ ಭಯ ಭಕ್ತಿಯಿಂದ ನಡೆದು ಕೊಳ್ಳುವದನ್ನು ಬಿಟ್ಟು ಅವರ ಸೊತ್ತು ಅಪಹರಿಸುವದಾಗಲಿ ಅವರವರ ಸ್ಥಾನಗಳಲ್ಲಿ ಅಸುಚಿಯಿಂದ ವರ್ತಿಸುವದಾಗಲಿ ಶಿವಧರ್ಮದ್ರೋಹ. ಅಂತಹ ದುರಾಚಾರಗಳಿಗೆ ನರಕಯಾತನೆ

ತಪ್ಪಿದ್ದಲ್ಲವೆಂದು ಸಕಲ ವೇದಗಳಿಂದಲೂ ಪುರಾಣಗಳಿಂದಲೂ ತಿಳಿದುಕೊಳ್ಳ ಬಹುದು.

ಶಿವನಿಂದೆ, ಶಿವಧರ್ಮದ್ರೋಹ, ಶಿವತತ್ವ ಖಂಡನೆ, ವೀರಶೈವಾಚಾರಕ್ಕೆ ಅಪಚಾರವಾದರೆ ಆಗುವ ಪಾಪಕ್ಕೆ ಪ್ರಾಯಶ್ಚಿತವನ್ನು ನೂರಾರು ವರುಷಗಳ ಪರಿಯಂತ ಹೇಳುತ್ತ ಹೋದರೂ, ಮುಗಿಯಲಾರದೆಂದು ಕೂರ್ಮ ಪುರಾಣ ದಿಂದ ತಿಳಿಯುವದು. ಅಂದ ಮೇಲೆ ಶಿವನಿಂದೆ ಶಿವಧರ್ಮದ್ರೋಹ ಸಾಮಾನ್ಯವೇ ನೀವೇ ವಿಚಾರ ಮಾಡಿರಿ ಎಂದು ಗುರುಬಸವರಾಜರು ಬ್ರಾಹ್ಮಣ ಸಮೂಹವನ್ನು ಉದ್ದೇಶಿಸಿ ನುಡಿಯುತ್ತ ತಮ್ಮ ನಿತ್ಯ ಕರ್ತವ್ಯಕ್ಕಾಗಿ ಅಂದಿನ ಸಭೆ ಮುಕ್ತಗೊಳಿಸಿದರು.

ಕೊಟ್ಟೂರ ಬಸವೇಶ್ವರ ಚಾರಿತ್ರ ಪುರಾಣದಿಂದ

ಸಾಕ್ಷಿಗಾಗಿ—ಯಃ ಸರ್ವಭೂತವಿನುತಂ | ವಿಶ್ವೇಶಂ ಭುವಿ ನಿಂದತಿ

ನತಸ್ಯ ನಿಷ್ಕೃ ತಿಶ್ಯಕ್ತ್ಯಾ ಕರ್ತಂ ವರ್ಷಶತೈರಪಿ

ಕಾವ್ಯ ಪುಟ ೧೨೭

---

೧೧ ನೇ ಸಂಧಿ

ಬ್ರಾಹ್ಮಣರು ಶೈವ ಧರ್ಮದಂತೆ ವರ್ತಿಸುವ ವಚನ ಕೊಟ್ಟದ್ದು

ಮುಂಜಾವಿನ ಮುಂಬೆಳಕು ಸೂರ್ಯದೇವನ ಕರುಣೆಯಿಂದ ಜಗವನ್ನು ಬೆಳಗ ಬಯಸಿ ಮುನ್ನುಗ್ಗುತ್ತಿರುವಾಗಲೇ ಗುರುದೇವರ ಅಪ್ಪಣೆಯ ಪ್ರಕಾರ, ಶಿಷ್ಯ ಸುಜ್ಞಾನಿದೇವನು ನಿತ್ಯಕರ್ಮಗಳನ್ನು ತೀರಿಸುತ್ತ ಉಳಿದ ವಟುವಿತ ವೃಂದದೊಡಗೂಡಿ ಮಠದ ಐಸಿರಿಯ ಅಂದಚಂದವೆಂಬ ಧೂಪ, ದೀಪ, ಮಂಗಲ ದ್ರವ್ಯಗಳ ಸುವಾಸನೆಯಿಂದ ಇಡೀ ಮಠವು ಘಮಘಮಿಸುವಂತಾ ಯಿತು. ಬರುಹೋಗುವ ಭಕ್ತರು ಗುರುಬಸವರಾಜರ ಪೀಠಕ್ಕೆ ಮಣಿದು ಕತೃ೯ಗದ್ದುಗೆಯ ಬಳಿಯಲ್ಲಿ ಕಾಯಿ, ಕರ್ಪುರ ಬೆಳಗಿ ಭಕ್ತಿ ನಿಲುವ

ತೋರಿಸಿ ಸಡಗರದಿಂದ ಧಿಮಿಧಿಮಿಸುವ ಮಠದ ಪಠಾಂಗಣದಲ್ಲಿ ವಟುಗಳು ಭಕ್ತ ಜನತೆಯು ಮನ್ಸನ ಆನಂದಕ್ಕೊ, ಗುರುಬಸವರಾಜರ ಮೇಲಿನ ಅನನ್ಯ ಭಕ್ತಿಯ ಹಿರಿಗುರುತಿಗೋ, ನಾಮಸಂಕೀರ್ತನೆಯುಳ್ಳ ಭಜನೆಯನ್ನು ತಾಳ ಲಯ ಬದ್ಧ ರೀತಿಯಲ್ಲಿಯೂ ಭಕ್ತಿಪರವಶತೆಯಲ್ಲಿಯೂ ನಿರ್ಮಲ ಬುದ್ಧಿ ಯಿಂದಲೂ ಗೈಯುತ್ತಿದ್ದರು.

ಬಸವಾ ಬಸವಾ ಶ್ರೀಗುರು ಬಸವಾ
ಬಸವಾ ಬಸವಾ ಭಕ್ತ ಬಸವಾ
ಶ್ರೀಗುರು ಬಸವಾ ಶ್ರೀಗುರು ಬಸವಾ
ಹರನ ವರದಿ ಭೂಮಿಯ ಬೆಳಗ ಬಂದ ಬಸವಾ
ಶರಣ ಸಂತತಿಯ ಪೊರೆಯ ಬಂದ ಬಸವಾ
ಗುರುವೇ ನೀ ಬಸವಾ, ಶರಣ ನೀ ಬಸವಾ
ವೀರಶೈವ ಧರ್ಮ ಪೊರೆಯ ಬಂದ ಗುರುಬಸವರಾಜಾ
ವೀರಮಾಹೇಶ್ವರ ಧರ್ಮಮೂರ್ತಿ ಶ್ರೀಗುರು ಬಸವಾ
ಮೋಕ್ಷ ಮಾರ್ಗವ ತೋರಿ, ಶಿವಧರ್ಮ ನೀತಿ ಸೂರಿ
ಸಾಕ್ಷಿಯಾಯಿತು ತಮ್ಮಿಂದ ಗುರುಬಸವರಾಜಾ
ಜಯ ಜಯ ಗುರುಬಸವರಾಜಾ
ಜಯವೆಂಬೆ ಶ್ರೀಗುರು ಬಸವರಾಜಾ.

ಬೆಳಗಿನ ಸ್ತುತಿಪಾಠವು ನಿತ್ಯ ಇದೇ ರೀತಿ ಸಾಗಿ, ಗುರುಬಸವರಾಜರ ಮನಸ್ಸನ್ನು ಭಕ್ತರಾದಿಯಾಗಿ ಯಾವತ್ತರು ಬಲುಬೇಗ ಆಕರ್ಷಿಸಿದರು ಸುಜ್ಞಾನಿದೇವರು ಶಿಷ್ಯತ್ವವು ಗುರುಗಳ ಮನಸ್ಸನ್ನು ಬಹುಬೇಗ ಸೆರೆ ಹಿಡಿಯಿತು. ಅಲ್ಲದೇ ತಮ್ಮ ಮುಂದಿನ ಉತ್ತರಾಧಿಕಾರಿಯೆಂದು ಈಗಾಗಲೇ ನಿಶ್ಚಯಿಸಿ ಬಿಟ್ಟಿದ್ದರು. ಅಂತೂ ಸರಸೀಪುರದ ಶ್ರೀಗುರು ಬಸವರಾಜ ದೇಸಿಕರ ಮಠದ ಮುಂದಿನ ಉತ್ತರಾಧಿಕಾರಿ ಗುರುಪೀಠವು ಸುಜ್ಞಾನಿ ದೇವನಿಗೆಂದು ಶ್ರೀಗುರು ಬಸವರಾಜರ ತೀರ್ಮಾನವಾಗಿತ್ತು.

ಭಕ್ತಬಳಗವು ನರಹರಿಭಟ್ಟರ ಅನುಯಾಯಿ ಬ್ರಾಹ್ಮಣ ವರ್ಗವು ಗುರುಗಳ ದರ್ಶನಕ್ಕಾಗಿ ಕಾದುನಿಂತಿರುವ ಸಮಯದಲ್ಲಿ ಗುರುಬಸವರಾಜರು

ಇಷ್ಟಲಿಂಗ ಪೂಜೆಯನ್ನು ತೀರಿಸಿಕೊಂಡು ಶಿವಕಳೆಯಿಂದೊಪ್ಪುವ ತೇಜಸ್ಸಿನಿಂದಲೂ ಶಿವಧರ್ಮ ದೀಕ್ಷಾಚಾರದಂತೆ ತ್ರಿಪುಂಡರ ಧರಿಸಿ ರುದ್ರಾಕ್ಷಿ ಮಾಲಾಂಕಿತರಾಗಿ, ಭಸ್ಮಬಳಿದ ಬಿಳಿಹೊಳೆವ ಶರೀರ ವರ್ಣದಲ್ಲಿ ಶಿವ ಮಹಾದೇವನೇ ಭೂಮಿಗಿಳಿದು ಬಂದೇನೋ ಎನ್ನುವ ತೆರದಿ, ಮೆಟ್ಟಿದ ಆವುಗೆಗಳ ಶಬ್ದಮಾಧುರ್ಯದೊಡನೆ ಸಭಾಸ್ಥಾನಕ್ಕೆ ಬಂದು ಯಾವತ್ತರಿಗೂ ಸ್ವಾಗತದ ಸಂಜ್ಞೆ ನೀಡಿ ತಮ್ಮ ಪೀಠವನ್ನು ಅಲಂಕರಿಸಿದರು.

ಆಗ ಭಕ್ತ ಸಮೂಹವು, ಬ್ರಾಹ್ಮಣ ಬಳಗವು, ಏಕ ಕಂಠದಿಂದ ಗುರು ಬಸವರಾಜ ಜಯ ಜಯವೆಂದು ಜಯಧ್ವನಿ ಮೊಳಗಿಸಿದರು. ಬಳಿಕ ನರಹರಿ ಭಟ್ಟನು ಮುಂದಾಗುತ್ತ ಕರಜೋಡಿಸಿ ಗುರುದೇವಾ ನಾವು ಆದೆಂಥ ಪುಣ್ಯಮಾಡಿ ಪುಟ್ಟಬಂದಿರುವೆವೋ ತಮ್ಮ ಶ್ರೀಮುಖದಿಂದ ಶೈವ ಧರ್ಮದ ಮಹತ್ವವನ್ನು ಅರಿಯುವ ಪುಣ್ಯ ನಮ್ಮದಾಯಿತು. ಮುಂಬರುವ ಯಮಬಾಧೆ ತಪ್ಪಿಸಿಕೊಳ್ಳುವ ರೀತಿ ತಿಳಿದು ನಮ್ಮ ಜನ್ಮ ಪಾವನವಾದವು. ಆದರೆ ಗುರುದೇವಾ, ನಾವು ಇಲ್ಲಿಯವರೆಗೆ ದುಷ್ಟದುರ್ಮದ ಅನ್ನ ಉಂಡ ಕಾರಣದಿಂದಲೂ, ಮೋಸ, ವಂಚನೆ ದುಷ್ಟ ಸಹವಾಸ ದೋಷ, ಹುಟ್ಟಿದ ರಕ್ತಗುಣ ದೋಷಗಳಿಂದ ಉಂಟಾಗುವ ನಮ್ಮಗಳ ಪಾಪ ನಿವಾರಣೆಗೆ ಹಾಗು ಶಿವಕೃಪೆಗೆ ಪಾತ್ರರಾಗುವ ದಾರಿಯನ್ನು ತೋರಿಸುವ ದೃಷ್ಟಾಂತ ಉಳ್ಳ ಕಥೆಯನ್ನು ಪೇಳುವ ಉಪಕಾರವಾಗಬೇಕೆಂದು ಪರಿಪರಿಯಿಂದ ಬೇಡಿಕೊಳ್ಳಹತ್ತಿದರಲ್ಲದೇ, ಇಂದಿನಿಂದ ಶೈವ ಧರ್ಮಾಚರಣೆಯಲ್ಲಿ ಬಾಳುವ ದಾರಿ ವಚನಕೊಟ್ಟರು.

---

೧೨. ನೇ ಸಂಧಿ

ಭದ್ರಾಶ್ವಕುವರನ ಚರಿತ್ರೆ ತಿಳಿಸಿದ್ದು

ಆಗ ಗುರುಬಸವರಾಜರು ನರಹರಿಭಟ್ಟರೇ, ಶೈವಧರ್ಮ ಪ್ರಿಯರಾದವರಿಗೆ ಭಯವೆಂಬ ಭಾವನೆಯೇ ಬರಬಾರದು ಬನ್ನಿ ಹೀಗೆ ಎಂದು ಸಮೀ

ಕೊಡ್ರಿಸಿಕೊಂಡು ಭಟ್ಟರೇ ! ಇವತ್ತು ಕೊನೆಯದಾಗಿ ಶಿವನು ಪಟಿಂಗನಾಗಿ ಪಾತರದವಳ ವಶದಲ್ಲಿ ಉಳಿದು ಭಕ್ತಿಯ ಬೆಳಕನ್ನು ಕಂಡ ಕಥೆಯನ್ನು ಹೇಳುತ್ತೇವೆ ಕೇಳಿರೆಂದರು.

ಭಟ್ಟರೇ, ಕಾಶ್ಮೀರ ದೇಶವನ್ನು ಆಳುತ್ತಿದ್ದ ಭದ್ರಾಶ್ವರಾಜನು ಪ್ರಜರನ್ನು ಪ್ರೀತಿಯಿಂದ ತಂದೆಯಂದದಿ ಜೋಪಾನ ಮಾಡುವ ಧರ್ಮಪಾಲನ ಾಗಿದ್ದನು. ನೀತಿವಂತನೂ, ನಿರ್ಮಲ ಗುಣವಂತನು ಎನಿಸಿ ಸುಖ ಂತೋಷದಿಂದ ಬಾಳಿಕೊಂಡಿದ್ದನು.

ಒಮ್ಮೆ, ಪರಾಶರ ಮುನಿವರನು ಭದ್ರಾಶ್ವನ ಆಸ್ಥಾನಕ್ಕೆ ಬರಲು, ವರನ್ನು ಭಕ್ತಿ ವಿಶ್ವಾಸಗಳಿಂದ ಆದರಿಸಿ, ಪೀಠದಲ್ಲಿ ಕುಳ್ಳಿರಿಸಿ ಸತ್ಕರಿಸಿದನು. ೀಕ ತನ್ನ ಮಗನ ವಿಚಿತ್ರ ವರ್ತನೆ, ಮಂತ್ರಿಕುಮಾರನ ಸ್ವಭಾವದಲ್ಲಿ ಣುವ ಅನೇಕ ಬದಲಾವಣೆಗಳು ತನಗೆ ಬಹಳ ವಿಚಿತ್ರವಾಗಿದೆ. ಇದರ ರಣವನ್ನರುಹಬೇಕೆಂದು ಕರಜೋಡಿಸಿ ಬೇಡಿಕೊಳ್ಳಹತ್ತಿದನು.

ಆಗ ಪರಾಶರ ಮುನಿಶ್ರೇಷ್ಠನು ಅಯ್ಯಾ ಭದ್ರಾಶ್ವನೇ, ನಿನ್ನ ಮಗ ರ್ನನು ಮಂತ್ರಿಮಗ ತಾರಕನು ಐಶ್ವರ್ಯವಂತರ ಮಕ್ಕಳಾಗಿದ್ದರೂ ಸ್ವಾಮಿ ರುಷ ಸನ್ಯಾಸಿಗಳಂತೆ ಭಸ್ಮ ರುದ್ರಾಕ್ಷಿಗಳನ್ನು ಅಭಿಮಾನದಿಂದಲೂ ಯಿಂದಲೂ ಧರಿಸಿ ಶಿವಲಿಂಗ ಪೂಜೆಯೆಂದರೆ ಅತ್ಯಂತ ಹೆಮ್ಮೆಪಟ್ಟು ಸುವರು. ಇದೇ ಅಲ್ಲದೇ ನೀನು ಕೇಳುವ ವಿಚಿತ್ರತೆಯ ಮರ್ಮವೆಂದರು ಭದ್ರಾಶ್ವನು ಹೌದೆಂದು ಉತ್ತರ ಕೊಟ್ಟು ನಮ್ರ ಭಾವದಲ್ಲಿ ಗಿದನು.

ಆಗ ಪರಾಶರ, ಯತಿವರನು ಬೆಲೆಯುಳ್ಳ ಮಣಿ ಮತ್ತು ರತ್ನಾಭರಣ ಬರದ ಉಡುಗೆಯಲ್ಲಿ ಇರಬೇಕಾದ ಅವರು ಈ ರೀತಿ ಇರುವದಕ್ಕೆ ಇಲ್ಲದಿಲ್ಲ ಕೇಳು ಎಂದು ಧರ್ಮ ಹಾಗು ತಾರಕರ ಪೂರ್ವ ಜನ್ಮ ತವನ್ನು ತಿಳಿಸಹತ್ತಿದ್ದರು. ಅಯ್ಯಾ ಭದ್ರಾಶ್ವನೇ, ಕಾಲಕಾಲ ಸಂಪತ್ತಿನ ಭೂಮಿಯೆನಿಸಿ ಧರ್ಮನಿಷ್ಠಾಗುಣವಂತರ ಬೀಡಾದ ಂಬ ಗ್ರಾಮ ವಿರುವದು. ಭೂಮಿ ಹಾಗೂ ನೀರಿನ ಗುಣದಂತೆ

ಅಲ್ಲಿ ಜನರು ಸತ್ಯಸಂಧರು, ಕೊಟ್ಟಮಾತಿಗೆ ತಪ್ಪದವರು ಆಗಿದ್ದರು. ಅಂತಹ ಗ್ರಾಮದಲ್ಲಿ ಮಹಾನಂದಿ ಎಂಬ ವೇಶ್ಯಾ ಸ್ತ್ರೀಯಳು ವಾಸಿಸುತ್ತಿದ್ದಳು. ಮನೋಹಾರಿಯಾದ ಮಹಾನಂದಿಯು ಗುಣದಲ್ಲಿ ಬೆಡಗು ಬಿನ್ನಾಣಗಳಲ್ಲಿ ಸೊಬಗು ಸಂಪತ್ತು, ನಯ ವಿನಯಗಳಲ್ಲಿ ಸುಶೀಲ ಸ್ವಭಾವದ ಖಣಿಯಾಗಿದ್ದಳು, ಮುತ್ತಿನ ಮಣಿಯಾಗಿದ್ದಳು. ನಿರ್ಮಲ ಮನಸದ ಅವಳು ಶಿವಭಕ್ತೆಯಾಗಿದ್ದಳೆಂದು ಹೇಳಿದರೆ ಅತಿಶಯೋಕ್ತಿ ಎನಿಸಲಾರದು. ಅವಳನ್ನು ಇಚ್ಛಿಸುವ ಪುರುಷರು ಸಹ ಶಿವಭಕ್ತರಾಗಿರಬೇಕು. ಸದಾಚಾರ ಸಂಪನ್ನರಾಗಿರಬೇಕು. ಅಲ್ಲದ ರೀತಿಯಿಂದ ವರ್ತಿಸುವ ಭವಿ ಮನುಜರನ್ನು ಕಣ್ಣೆತ್ತಿ ತಪ್ಪಿಕೂಡಾ ನೋಡಲಾರಳು. ಶಿವನಲ್ಲಿದ್ದ ಅವಳ ಅನನ್ಯ ಭಕ್ತಿಯು ಅವಳ ಬಾಳಿನಲ್ಲಿ ನಿಜ ಬೆಳಕನ್ನು ಚೆಲ್ಲಿ ನಿತ್ಯವೂ ಶಿವನಾಮಸ್ಮರಣೆಯಲ್ಲಿ, ಈಶ್ವರಪೂಜೆ, ಶರಣರ ಸೇವೆ. ಗುರು ಜಂಗಮರ ಪ್ರೀತಿ, ಅವರ ಆದರಾತಿಥ್ಯದಲ್ಲಿ ಕಾಲಕಳೆಯುತ್ತಿದ್ದಳು.

ಹೀಗಿರುವಾಗ ಅವಳ ಸದ್ದಾಚಾರ ಸಂಪನ್ನತೆಗೆ, ಶಿವಶಂಕರನು ಸ ಮೋಹಗೊಂಡು ಮಡದಿ ಎನಿಸಿದ ಪಾರ್ವತಿಗೆ ತಿಳಿಯದಂತೆ ಮನ್ಮಥರೂಪಿನ ಸುಂದರ, ಸುಕೋಮಲ ತರುಣ ವೇಷದಿಂದ ಮಹಾನಂದಿಯ ಮನೆಯುವ ಬಂದನು.

ವರ್ತಕನಂತೆ ವೇಷ ಪಲ್ಲಟಿಸಿ, ಶಿವಗಣರೆಲ್ಲರಿಗೂ ಮೋಸ ಮಾ ಒಬ್ಬನೆ ಜರದಂಚಿನ ದೋತರ, ಮುಕಮಲ್ಲಿನ ನಿಲುವಂಗಿ, ಮುತ್ತು, ಕಂ ಸರಗಳಿಂದ, ರತ್ನ ಕೆಚ್ಚಿದ ಕೈಕಡಗ ಧರಿಸಿ ಕೋಟ್ಯಾಧೀಶ್ವರನಂತೆ ಕಂಗೆ ಸುತ್ತ ಮಹಾನಂದಿಯನ್ನು ಕರೆದು ತಾನು ವಸತಿಗಾಗಿ ಬಂದವನೆ ತಿಳಿಸಿದನು. ಹರನ ಹಿರಿರೂಪಸಿರಿಯನ್ನು ಘಣಿಯಲ್ಲಿ ಕಂಗೊಳಿಪ ಭಸ್ಮ ಕಂಡು ಶಿವಭಕ್ತನೆಂದು ತಿಳಿದು ಅಭಿಮಾನದಿಂದ ಆದರಿಸಿ ಕರಪಿಡಿದು ಮನೆಯೊಳಗೆ ಕರೆದುಕೊಂಡು ಹೋಗಿ, ಮಣಿ ಮಂಚದ ಮೇಲೆ ಕು ಕುಶಲ ಮಾತಿನಿಂದ ಸಂತೋಷಗೊಳಿಸಹತ್ತಿದಳಲ್ಲದೇ ಮಹಾ ಮುಂಗೈಯಲ್ಲಿ ವಿರಾಜಿಸುತ್ತಿದ್ದ ರತ್ನದ ಕಡಗಗಳನ್ನು ತದೇಕ ದೃಷ್ಟಿ ನೋಡಹತ್ತಿದ್ದಳು.

ಆಗ ಮಾಯಾರಿಯು ಮೋಹ ಪರವಶತೆಯಲ್ಲಿ ಮಹಾನಂದಿಯು ಮನಸಾಳವನ್ನು ಗುರ್ತಿಸಿ ಮೋಹಗೊಳಿಸಿದ ಮಾಯಾಂಗನೆ ನಿಂವೇಶ್ಯ ಸುಂದರಿಯೇ ನಾರಿ ಕುಲಸ್ತ್ರೀಯ ತೆರದಿ ನಮ್ಮನ್ನು ಸಂತಸ ಪಡಿಸೇ ನೀಂ ಇಚ್ಛಿಸಿದ ವಸ್ತು ನಿನ್ನದೆಂದನಾ ವಿಟನಾಗಿ ಬಂದ ವೇಷಗಾರ ಶಿವನು. ಅಲ್ಲದೆ ಮನೆಯೊಳಗೆ ಪೊಕ್ಕು ನೋಡಲಲ್ಲಿ, ಕಟ್ಟಿರ್ದ ಹುಂಜವದು ಕೊರಳಲ್ಲಿ ರುದ್ರಾಕ್ಷಿಯಿಂದ ಒಪ್ಪತಿರ್ಪುದು. ಕುಣಿದು ನಲಿದು ನರ್ತಿಸುವ ಸಾಕಿರ್ದ ಮಂಗನ ಕೊರಳಿಗೆ ರುದ್ರಾಕ್ಷಿ, ಹಾಗು ಶಿವ ಪ್ರೇಮಿಸುವ ಕಾವಿ ಬಣ್ಣದ ವಸ್ತ್ರದುಡಿಗೆ ಉಟ್ಟು ವಿಟಗಾರ್ತಿಯರ ಮಧ್ಯ ಹಾಸ್ಯಮಯ ಕುಣಿತಗೈಯ್ಯು ವದನ್ನು ಕಂಡು ವೇಷಧಾರಿ ವಿಟ ಶಿವ ಬೆರಗಾದ. ವೇಶ್ಯಾ ಸ್ತ್ರೀಯಳ ಮನೆಯಲ್ಲಿ ಶಿವಧರ್ಮದ ಪ್ರಭಾವ ಬೀರುವ ಸಲಕರಣೆಗಳೇನಿದು ಎಂದು ಅಚ್ಚರಿಪಟ್ಟನು.

ಆಗ ಮಹಾನಂದಿಯಾದರೂ ಶಿವನ ಕೈಕಡಗ ಕಂಡು ಇಂಥ ಸುಂದರ ಬೆಲೆಯುಳ್ಳವಸ್ತು ಭೂಲೋಕದಲ್ಲಿರಲು ಸಾಧ್ಯವಿಲ್ಲ. ಇವು ದೇವಲೋಕದ ಒಡವೆಗಳೆಂದು ಭಾವಿಸಿದಳಲ್ಲದೇ, ಈ ವಿಟಗಾರ ನಿಜವಾಗಿಯು ದೇವಮಾನವ ನೆಂದು ತರ್ಕಿಸಿ ಮನದಲ್ಲಿಯೇ ಹಿಗ್ಗಿದಳು, ಅವನ್ನರಿತ ಶಿವನು, ಚಂದ್ರ ಕಲುವ ವದನ ಪ್ರಿಯೇ, ನಿನಗೆ ಈ ಕೈಕಡಗಗಳ ಮೇಲೆ ಆಸೆ ಅಲ್ಲವೇ ಹಾಗಿದ್ದರೆ ಬೆಲೆ ಕೊಡುವೆಯಾ ಎನ್ನಲು ಮಹಾನಂದಿಯು ಅಯ್ಯಾ, ಶೃಂಗಾರ ಪ್ರಿಯ ವಿಟಶಿರೋಮಣಿಯೇ ನಾವು ಹೇಳಿಕೇಳಿ ವೇಶ್ಯಾಸ್ತ್ರೀಯರು ನಮ್ಮ ಕುಲಾಚಾರದಂತೆ ನಮ್ಮನ್ನು ಆಶಿಸಿ ಬರುವ ವಿಪುಟರುಷರು ಕೇಳಿದಷ್ಟು ಹಣ ಕೊಟ್ಟು ಸಂತಸ ಪಟ್ಟು ಹೋಗುತ್ತಾರೆ. ಅವರು ಕೊಟ್ಟ ಋಣದ ಹಣಕ್ಕೆ ಒಂದು ರಾತ್ರಿ ಕುಲ ಸ್ತ್ರೀಯರಂತೆ ಅವರ ಸೇವೆ ಮಾಡಿ ಅವರ ಮನಾನಂದಗೊಳಿಸುವದು ನಮ್ಮ ಕರ್ತವ್ಯ ಹಾಗು ಧರ್ಮಸಮ್ಮತ ಅಂದಾಗ ಪ್ರೀಯ ಪುರುಷ ಸಿಂಹನೆ ತಾವು ನನಗೆ ಪ್ರೀಯವಾಗಿರುವ ಈ ಕಂಕಣಗಳನ್ನು ಹಣದ ಬದಲಾಗಿ ಕೊಟ್ಟು ನನ್ನಿಂದ ತೃಪ್ತಿ ಪಡಬೇಕೆಂದು ಹೇಳಿದಳು.

ಅದಕ್ಕೆ ವಿಟನಾದ ಶಿವನು ಅತೀ ಕಾಮುಕತನದ ಪ್ರದರ್ಶನಗೈಯ್ಯುತ್ತ ಪ್ರಿಯೆ, ನೀನು ನನ್ನದನ್ನೆಯಾಗಿ ಸತಿಯಳಂತೆ ಕುಲವಧುವಿನ ತೆರದಿ ತೃಪ್ತಿ

ಪಡಿಸುವದಾಗಿ ವಚನ ಕೊಟ್ಟರೆ ಈ ಕಂಕಣಗಳನ್ನು ಯಾವ ಅಭ್ಯಂತರವಿಲ್ಲ
ಕೊಡಲು ಸಿದ್ಧನಿರುವೆಂದು ಹೇಳಿದನು. ಆಗ ಮಹಾನಂದಿಯು, ಪ್ರಿಯ
ಪುರುಷ ಸಿಂಹನೇ ತಮ್ಮ ಮಾತಿಗೆ ಒಪ್ಪಿ ತಪ್ಪುವ ವೇಶ್ಯೆ ನಾನಲ್ಲ. ಆದರ
ಶಿವಸಾಕ್ಷಿಯಿಂದ ತಮ್ಮ ಧರ್ಮಪತ್ನಿಯ ತೆರದಿ ನಾನಾದರೂ ಮೂರು ದಿವಸ
ಗಳವರೆಗೆ ತಮ್ಮನ್ನು ತೃಪ್ತಿ ಪಡಿಸಿ ತಮ್ಮ ಸೇವೆ ಮಾಡುವೆನು. ನಾವು
ವಾರಾಂಗನೆಯರು (ಒಂದು ದಿವಸ ತೃಪ್ತಿಪಡಿಸುವ ಸ್ತ್ರೀ) ನಮ್ಮ ಕಾಲ
ಪದ್ಧತಿ ಒಂದೇ ದಿವಸ ಆದರೂ ಮೂರು ದಿವಸ ನಾನು ನಿಮ್ಮವಳು, ನಿಮ್ಮ
ಧರ್ಮಪತ್ನಿಯಂತೆ ಸುಖ ಪಡಿಸುತ್ತೇನೆ ಎಂದು ಹೇಳುವದಲ್ಲದೇ, ಮೂರು
ದಿವಸ ನಿಮ್ಮ ಪ್ರಾಣವೇ ನನ್ನ ಪ್ರಾಣ, ನಿಮ್ಮ ಧರ್ಮವೇ ನನ್ನ ಧರ್ಮ
ಎಂದು ತಿಳಿದು ನಡೆದು ಕೊಳ್ಳುತ್ತೇನೆ ಎಂದ ಒಪ್ಪಿ ವಚನ ಕೊಟ್ಟು, ವಿಟ
ಶಿವನಿಂದ ಕಂಕಣ (ಕೈಕಡಗ) ಪಡೆದುಕೊಂಡಳು.

ಬಳಿಕ ಶಿವನ (ವಿಟನ) ಇಚ್ಛೆಯಂತೆ ಅಪ್ಪುಗೆ, ಚುಂಬನ, ಸರಸ
ವಿಲಾಸಮಯ ಸಂತಸ ಸುಖಗಳಿಂದ ಈರ್ವರೂ ತೃಪ್ತರಾದ ಬಳಿಕ ಶಿವನು
ರತ್ನಲಿಂಗ ಮೂರ್ತಿಯೊಂದನ್ನು ತೆಗೆದು ಅವಳ ಕೈಗೆ ಕೊಡುತ್ತ ಪ್ರಿಯೆ
ಮಂದಗಮನೆ, ಸರಸ ಮಯೂರ ವಿಲಾಸೇ, ಇದು ನನ್ನ ಪ್ರಾಣ ಸಮಾನ.
ಇದು ಇಲ್ಲವಾದರೆ ನನ್ನ ಪ್ರಾಣ ಉಳಿಯಲಾರದು. ಅದಕ್ಕಾಗಿ ಇದನ್ನು, ಈ
ಲಿಂಗಮೂರ್ತಿಯನ್ನು ಭದ್ರವಾಗಿ ಇಟ್ಟು ಬಾ, ಎಂದು ಮಹಾನಂದಿಯ
ಕೈಯಲ್ಲಿ ಆ ರತ್ನಲಿಂಗವನ್ನು ಕೊಟ್ಟು, ಭಕ್ತಿಯಿಂದ ಪೂಜಿಸಲು ತಿಳಿಸಿದನು.

ಮಹಾನಂದಿಯು, ಲಿಂಗವನ್ನು ನಾಟ್ಯಶಾಲೆಯಲ್ಲಿದ್ದ ಭದ್ರವಾದ ಕಪಾಟಿ
ನಲ್ಲಿಟ್ಟು, ವಿಟನಾಗಿ ಬಂದ ಶಿವನ ಬಳಿಗೆ ಬಂದು, ಸರಸ ವಿಲಾಸದಲ್ಲಿರಲು
ಸೂರ್ಯದೇವನು ನಸುನಾಚಿ ಮರೆಯಾದನು. ನಕ್ಷತ್ರಗಳು ಸಂಜೆಗತ್ತಲನ್ನು
ಅಣಕಿಸುವಂತೆ ಚಮಕಿಸ ಹತ್ತಿದವು, ಉಲ್ಲಾಸದಿಂದ ಚಂದ್ರೋದಯವು
ಆಯಿತು. ಆಗ ಶಿವನ ವಿರಹ ವ್ಯಥೆಯನ್ನು ತಾಳಲಾರದೆ, ಮಹಾನಂದಿಯ
ಬರುವನ್ನು ನಿರೀಕ್ಷಿಸುತ್ತ ಹಂಸತೂಲಿಕಾ ತಲ್ಪದಲ್ಲಿ ಪವಡಿಸಿದ್ದನು.

ಅಷ್ಟರಲ್ಲಿ ವೇಶ್ಯೆ ಎನಿಸಿದ ಮಹಾನಂದಿಯು, ಸ್ನಾನದ ಪೂಜಾದಿ ಕರ್ಮ
ಗಳನ್ನು ತೀರಿಸಿಕೊಂಡು ಬಂದು, ವಿಟನನ್ನು ಆದರದಿಂದ ಕರಪಿಡಿದು ಕರೆದು

ೊಂಡು ಹೋಗಿ, ಪೂಜಾ ಗ್ರಹದಲ್ಲಿ, ಉನ್ನತ ದಿವ್ಯ ಆಸನದಲ್ಲಿ ಕೂಡ್ರಿಸಿ, ದ್ಧತಿಯಂತೆ ಶಿವಪೂಜೆಯನ್ನು, ಲಿಂಗಾರ್ಚನೆಯನ್ನು ಮಾಡಿಸಿ ಪ್ರಸಾದ ಂದ ತೃಪ್ತಿಪಡಿಸಿ, ಶಯನ ಮಂದಿರಕ್ಕೆ ಕರೆತಂದಳು. ಅಡಿಕೆ, ಯಾಲಕ್ಕಿ, ಾಜಿ, ಕಸ್ತೂರಿ, ಕಾಚು, ಸುಗಂಧ ಅರ್ಕುಗಳಿಂದ ಸಿದ್ಧಪಡಿಸಿದ ಎಲೆಯನ್ನು ುಡಿಚಿ ಪ್ರೀತಿಯಿಂದ ತಾಂಬೂಲ ಸೇವನೆಯ ಸೇವೆಯಿಂದ ಆನಂದಗೊಳಿ ಿದಳು. ಬಳಿಕ ಕಾಮ ಕಲೆಯ ಸಕಲ ಕಲೆಗಳಿಂದ, ರತಿ ಕ್ರೀಡೆಯಿಂದ ಶಿವನನ್ನು ಮೆಚ್ಚಿಸಿದಳು. ರತಿ ಕ್ರೀಡೆಯಲ್ಲಿ ಅನಂತ ಆನಂದದಿಂದ ಪರವಶ ರಾಗಿ ಈರ್ವರು ಸುಖನಿದ್ರೆಗೈಯುತ್ತಿರುವಾಗ, ಶಿವ ಮಾಯೆಯಿಂದ ವೇಶ್ಯೆ ಮಹಾನಂದಿಯ ಮನೆಯ ನಾಟ್ಯಗ್ರಹಕ್ಕೆ ಬೆಂಕಿ ಹತ್ತಿ, ಕ್ಷಣಾರ್ಧದಲ್ಲಿ ಸುತ್ತಲೂ ವ್ಯಾಪಿಸಿತು.

ಆಗ ಮಹಾನಂದಿಗೆ, ಬೆಂಕಿಯ ಝಳಕ್ಕೆ ಎಚ್ಚರವಾಗಿ, ಅತೀ ಆತುರ ದಿಂದ ಮೊದಲು ಮಂಗ ಹಾಗು ಕೋಳಿಗಳನ್ನು ಬಿಚ್ಚಿ ಹೊರಗಟ್ಟಿದಳು. ಅವು ಗೋಳಾಡುತ್ತ ಅಡವಿಯನ್ನು ಸೇರಿಕೊಂಡವು ಬಳಿಕ ವಿಟ ಶಿವನ ಅಪ್ಪಣೆಯಂತೆ ಲಿಂಗವನ್ನು ನೋಡಲಿಕ್ಕೆ ಹೋದರೆ, ರತ್ನಲಿಂಗವು ಹತ್ತೆಂಟು ಹೋಳಾಗಿ ಛಿದ್ರಗೊಂಡಿತ್ತು. ಅದನ್ನು ತಿಳಿದ ವಿಟ ಶಿವನು ಅಯ್ಯೋ, ನನ್ನ ಜೀವ ಸಮಾನವಾದ ಲಿಂಗವೇ ಇನ್ನಿಲ್ಲವಾದ ಮೇಲೆ ನಾನು ಬದುಕಲಾರೆ, ಎಂದು ಉರಿವ ಅಗ್ನಿಯಲ್ಲಿ ಹಾರಿಕೊಂಡನು.

ಆಗ ಮಹಾನಂದಿಯು ಸತಿಧರ್ಮ ಪಾಲನೆಯಂತೆ ಇನ್ನೂ ಎರಡು ದಿವಸ ಈ ವಿಟನು ನನ್ನ ಪತಿಯಾಗಿರುವನಲ್ಲವೇ ಪಾತಿವೃತ್ಯ ಧರ್ಮ ನೀತಿ ಯಂತೆ ಗಂಡ ಇಲ್ಲದ ನಾನಾದರೂ ಜೀವಿಸವದೆಂತು ಎಂದು ಅದೇ ಅಗ್ನಿಯಲ್ಲಿ ಬೀಳುವ, ಸಾಹಸದಲ್ಲಿರಲು ಶಿವನು ಪ್ರತ್ಯಕ್ಷನಾಗಿ ಅವಳನ್ನು ಹಿಡಿದು ಹುಚ್ಚಿ ನಾನು ಇಚ್ಛೆ ಪಟ್ಟು ಹೂಡಿದ ನಾಟಕವಿದು ವಿನೋದ ಪ್ರಿಯ ನಾದ ನಾನು ವಿನೋದ ಮಾಡಿದೆ. ಈಗ ನಿನಗೇನು ಬೇಕು ಕೇಳು ಎನ್ನಲು ಮಹಾನಂದಿಯು ದೇವಾ ಯಾವಾಗಲೂ ತಮ್ಮ ಸೇವೆಮಾಡಿ ಕೊಂಡಿರುವ ಭಾಗ್ಯಲಭಿಸಿದರೆ ಸಾಕು. ಎಂದು ವಿನಯ ಭಕ್ತಿಯಿಂದ ನಮಸ್ಕರಿ ಸಿದಳು. ಆಗ ಶಿವನು ಅವಳ ಭಕ್ತಿಗೆ ಮೆಚ್ಚಿ ಕೈಲಾಸಕ್ಕೆ ಕರೆದೊಯ್ದನು.

ಬಳಿಕ ಮಹಾನಂದಿಯು ಕೈಲಾಸಕ್ಕೆ ಹೋದಮೇಲೆ ಅವಳು ಸಾಕಿದ ಮಂಗ ಹಾಗು ಕೋಳಿಯು ಬಳಲಿ ಬೆಂಡಾಗಿ ಬಸವಳಿದು ಪ್ರಾಣನೀಗಿದವು. ಅವುಗಳಲ್ಲಿದ್ದ ಶಿವಧರ್ಮ ವಿಶ್ವಾಸದಿಂದಲೂ ಶಿವನ ಪ್ರೀಯ ಆಭರಣಗಳೆನಿಸಿದ ರುದ್ರಾಕ್ಷಿ ಭಸ್ಮ ವಸ್ತ್ರಗಳ ಮೇಲಿನ ಅಭಿಮಾನಕ್ಕಾಗಿ ಮಂಗವು ರಾಜಪುತ್ರ ನಿನ್ನ ಮಗ ಧರ್ಮನೆಂದು ಹುಟ್ಟಿ ಬಂದಿರುವನು. ಅದರಂತೆ ಕೋಳಿಯೆನಿಸಿದ ಪ್ರಾಣಿ ಮಂತ್ರಿಯ ಮಗ ತಾರಕನಾಗಿ ಹುಟ್ಟಿಬಂದಿರುವನು. ಪೂರ್ವ ಜನ್ಮದಲ್ಲಿ ರುದ್ರಾಕ್ಷಿ ಧರಿಸಿದ ಪುಣ್ಯವೇ ಈ ನಿಮ್ಮಗಳ ಪುತ್ರ ಜನನಕ್ಕೆ ಬಲವಾದ ಕಾರಣವೆಂದು ಹೇಳಿ ಶಿವಜ್ಞಾನ ಪ್ರಭಾವಿಗಳಾದ ಅವರಲ್ಲಿ ಈಗಲೂ ಭಸ್ಮರುದ್ರಾಕ್ಷಿಮಾಲೆಗಳನ್ನು ಧರಿಸುವ ಹಂಬಲವಾಗುವದು ಎಂದು ಭದ್ರಾಶ್ವನಿಗೆ ಪರಾಶರ ಮುನಿಗಳು ಹೇಳಿದರು ಅದನ್ನೇ ನಾವೀಗ ನಿಮ್ಮೆಲ್ಲರಿಗೂ ತಿಳಿಸಬೇಕಾಯಿತು

ಬಳಿಕ ಭದ್ರಾಶ್ವನು ಪರಾಶರ ಮುನಿಗಳಲ್ಲಿ ಕರ ಜೋಡಿಸಿ ಮಕ್ಕಳ ಬಾಳ ಭವಿಷ್ಯವನ್ನಟ್ಟು ತಿಳಿಸಿ ನಮ್ಮ ವಂಶಜ್ಯೋತಿಯನ್ನು ಉಜ್ವಲಗೊಳಿಸುವ ಕೃಪೆಯಾಗಬೇಕೆಂದು ಅನನ್ಯ ಭಕ್ತಿ ವಿಸ್ವಾಸಗಳಿಂದ ಬೇಡಿಕೊಳ್ಳ ಹತ್ತಿದನು. ಅದಕ್ಕೆ ಪರಾಶರ ಯತಿವರನು ಬೇಡ ಮಹಾರಾಜಾ ಅದನ್ನು ಕೇಳುವದರಿಂದ ಮನಕ್ಕೆ ಮತ್ತಷ್ಟು ವೇದನೆ ಉಂಟಾಗುವದೆಂದು ಸಮಾಧಾನ ಹೇಳಲು ಪ್ರಯತ್ನಿಸಿ ಪರಾಜಯ ಹೊಂದಿದರು.

ಪರಾಜಯವೆಂದರೆ ಅರಸನ ಭಕ್ತಿಗೆ ಹಾಗು ವಿನಯ ಪೂರ್ಣ ಬೇಡಿಕೆಗೆ ಪರಾಶರ ಮುನಿಯು ಸೋತರು

ಮುನಿವರರ ಮಾತಿಗೆ ಭದ್ರಾಶ್ವರಾಜ ಮುನೀಂದ್ರಾ ನನ್ನ ಮಗನ ಹಾದರ ಜನ್ಮದ ರಹಸ್ಯವನ್ನು ತಿಳಿಸಿದಂತೆ ಅವನ ಬಾಳ ಭವಿಷ್ಯವನ್ನು ಅರುಲೇಬೇಕೆಂದು ಬೇಡಿಕೊಂಡನಲ್ಲದೆ, ತಮ್ಮ ಮೃದು ಮಧುರ ಸತ್ಯವಚನಗಳಿಂದ ಮನಸ್ಸಿಗೆ ನೋವಾಗುವ ಬದಲು ನೆಮ್ಮದಿ ದೊರೆಯುವದೆಂದು ಬಿನ್ನೈಸಿಕೊಂಡನು.

ಬಳಿಕ ಉಪಾಯಗಾಣದೆ ಪರಾಶರ ಮುನಿಯು ರಾಜೇಂದ್ರಾ, ನಿನ್ನ ಮಗನಿಗೆ ಕೇವಲ ಹನ್ನೆರಡು ವರುಷ ಆಯುಷ್ಯ, ಇನ್ನೆರಡು ತಿಂಗಳಲ್ಲಿ ಆತನ ಮರಣ ಶತಸಿದ್ಧವೆಂದು ಉಸುರುವದಷ್ಟೇ ತಡ ಭದ್ರಾಶ್ವನು ಮೂರ್ಚಿತನಾದನು.

ಕೆಲವು ಸಮಯದ ನಂತರ ಮೂರ್ಛೆಯಿಂದ ಎಚ್ಚತ್ತ ಬಳಿಕ, ಮುನೀಂದ್ರನ ಪಾದಗಳ ಮೇಲೆ ಬಿದ್ದು ಗುರುದೇವಾ ವಂಶೋದ್ಧಾರಕ ಮಗನನ್ನು ಕಳೆದುಕೊಂಡು ನಾಂ ಬದುಕಲೆಂತು ಯತಿರಾಜಾ ನನ್ನ ಮಗನಂ ನುಂಗುವ ಮಾರಿಯ ಮುಸುಡೆಯಂ ತವಿವ ಉಪಾಯ ತಿಳುಹಿಸಿ ನನ್ನ ವಂಶವಂ ಉದ್ಧರಿಸುವದಾಗಬೇಕೆಂದು ಬಿನ್ನೈಸಿಕೊಳ್ಳುವೆನು. ಕರುಣೆಯಿಂದ ಯುಕ್ತಿಯನ್ನು ಬೋಧಿಸು ಎಂದ ಪರಿಪರಿಯಿಂದ ಬೇಡಿಕೊಳ್ಳ ಹತ್ತಿದನು.

ಮಗನ ಮರಣ ವಾರ್ತೆಯಿಂದ ಸೋತು ಸಪ್ಪೆಯಾಗಿ, ಅವನು ಉಳಿದು ಬಾಳುವ ಉಪಾಯಕ್ಕಾಗಿ ಹಂಬಲಿಸುವ ಅರಸನ ಬಗ್ಗೆ ಪರಾಶರ ಮುನಿಗೆ ಕರುಣೆ ಹುಟ್ಟಿ, ರಾಜೇಂದ್ರಾ ನಿನ್ನ ವಂಶವಲ್ಲಿರಿಯು ಚಿಗುರುವ ಉಪಾಯ ಒಂದೇ ಒಂದು ಇದೆ, ಅದಾವದೆಂದರೆ ಪೂರ್ವದಲ್ಲಿ ಪರಬ್ರಹ್ಮ ಶಿವನು ಬ್ರಹ್ಮನನ್ನು ಹುಟ್ಟಿಸಿ, ವೇದಗಳನ್ನು ಉಪದೇಶಿಸಿ, ರುದ್ರವೇ ಸಕಲ ವೇದದ ಸಾರವು ಯಾವತ್ತು ದೋಷವನ್ನು ಪರಿಹರಿಸುವ ದಿವ್ಯ ಅಸ್ತ್ರವು. ಇದನ್ನು ಜಪಿಸುವದರಿಂದ ಕಾಲ ಮೃತ್ಯು ನಿವಾರಣೆಯಾಗುವದು ಖಂಡಿತ. ಸೃಷ್ಟಿ ರಚನೆಯಾಯಿತು. ಅದರಲ್ಲಿ ಸ್ವರ್ಗ ನರಕಗಳ ಭಾಗವು ಆಯಿತು. ಅಲ್ಲದೆ ಅತ್ರಿ ಶ್ರೀ ಋಷಿಯು ತನ್ನ ಮಕ್ಕಳಿಗೆ ಬೋಧಿಸಿದ ಆ ರುದ್ರಮಹಿಮೆಯ ಸಾರವನ್ನು ಇಂದು ನಿನ್ನ ಕುಮಾರ ಧರ್ಮನಿಗೆ ಉಪದೇಶ ಮಾಡುತ್ತೇನೆ. ಅದು ಮೃತ್ಯುಂಜಯ ಮಂತ್ರವೆಂದು ನಿಷ್ಠೆ ನೇಮ ಪೂಜ್ಯಭಾವನೆಯಿಂದ ಪಠಿಸಿ ಜಪಗೈಯುವದರಿಂದ ಪೂರ್ಣ ಸಿದ್ಧಿ ದೊರೆಯುವದೆಂದು ತಿಳಿಸಿದರು.

ಅಲ್ಲದೇ ಭದ್ರಾಶ್ವನ ಮಗ ಧರ್ಮನನ್ನು ಕರೆಯಿಸಿ, ರುದ್ರಸೂಕ್ತ ಪಠಣವನ್ನು ನಿನ್ನ ಮಗನಿಂದ ಸಾಂಗಗೊಳಿಸುವದಾಗಲೆಂದು ಅಪ್ಪಣೆ ಮಾಡಿದರು.

ಬಳಿಕ ಮುನೀಂದ್ರರ ಅಭಿಪ್ರಾಯದಂತೆ ಸಾವಿರ ಜನ ಆಗಮಗಳಲ್ಲಿ ಜ್ಞಾನ ಸಂಪನ್ನರೆನಿಸಿದ ಶಿವಬ್ರಾಹ್ಮಣರನ್ನು ಕರೆಯಿಸಿ ಹತ್ತುಸಾವಿರ ಶ್ರೀರುದ್ರ ಜಪದಿಂದ ಶಿವಮಹಾದೇವ ನೀಲಕಂಠ ನಿತ್ಯ ನಿರ್ಮಲಮೂರ್ತಿ ಅಭಿಷೇಕ ಮಾಡಿಸಿ, ಆ ಪುಣ್ಯತೀರ್ಥ ಜಲದಲ್ಲಿ ಮಗ ಧರ್ಮನಿಗೆ ಸ್ನಾನ ಮಾಡಿಸಿ, ಏಳು ದಿವಸಗಳವರೆಗೆ ಇದೇ ಪ್ರಕಾರ ಅಭಿಷೇಕ ನಡೆದು ಏಳನೇ ದಿವಸ ವಿಧಿಪೂರಕ ಈಶ್ವರನ ಪೂಜೆಮಾಡಿಸಿ ಮುಗಿಸುವ ಸಮಯದಲ್ಲಿ ವಿಧಿಸಂಕೇತ ಪ್ರಕಾರ ರಾಜಪುತ್ರನು ಕ್ಷಣಹೊತ್ತು ಮೂರ್ಛೆ ಹೊಂದಿದವನಂತೆ ಮಾಡಲು ತಂದೆ ಕೂಡಿದ ಬ್ರಾಹ್ಮಣ ಬಳಗವು, ರಾಜಪರಿವಾರವು ಗಾಭರಿ ಗೊಂಡರು. ಆಗ ಭದ್ರಾಶ್ವನು ಮಗನನ್ನು ಅಪ್ಪಿಕೊಂಡಂತೆ ಮಗ ಧರ್ಮನು ಎಚ್ಚತ್ತು, ಮೂರ್ಛೆಹೋದ ಸಮಯದಲ್ಲಿ ತನಗಾದ ಅನುಭವದ ಪ್ರಸಂಗವನ್ನು ವಿವರಿಸುತ್ತ, ಅಪ್ಪಾಜಿ ಯಮಧೂತರು ಬಂದು ನನ್ನನ್ನು ಎಳೆದೊಯ್ಯುತ್ತಿರಲು, ಶಿವಗಣನಾಯಕನು ಶಿವಗಣ ಬಳಗದೊಡನೆ ಬಂದು ಯಮಭಟರನ್ನು ಒಳಿತಾಗಿ ದಂಡಿಸಿ ನನ್ನನ್ನು ಬಿಡಿಸಿ, ತಮ್ಮ ಬಳಿಗೆ ಕಳುಹಿಸುತ್ತ, ನಿನ್ನ ತಂದೆ ಗಾಬರಿಗೊಂಡಿರುವನು, ತೀವ್ರ ಭೂಮಿಗೆ ಬೇಕೆಂದು ಅಪ್ಪಣೆಮಾಡಿ ಕಳುಹಿಸಿದನು. ಎಂದು ತನಗಾದ ಅನುಭವ ವಿವರಿಸಿ ದನು ಮತ್ತು ಮುನಿಂದ್ರರ ಪಾದಕ್ಕೆ ವಂದಿಸಿ ನನ್ನನ್ನು ಯಮಭಟರಿಂದ ಮುಕ್ತಗೊಳಿಸಿದ ಮಹಾನುಭಾವ ಶಿವಗಣನಾಯಕ ಯಾರೆಂದು ಕೇಳಿದನು.

ಆಗ ಪರಾಶರ ಮುನಿಯು ಅಯ್ಯಾ, ಅರಸುಗುವರನೇ ಆತನೇ ಶಿವಪುತ್ರ ವೀರಭದ್ರನು. ಅವನೊಡನೆ ಬಂದ ಬಳಗವು ಶಿವಗಣ ಸೇನಾನಿಗಳು. ವೀರಗಣರೊಡನೆ ಯಮಭಟರನ್ನು ತೆರುಬಿದ ವೀರಭದ್ರನು ನಿನ್ನ ಮಗನನ್ನು ಕಟ್ಟಿದ ಹಗ್ಗವನ್ನು ಹರಿದು, ಅದೇ ಹಗ್ಗವನ್ನು ಮೃತ್ಯಗೆ ಕಟ್ಟಿ ನಿನ್ನನ್ನು ಬಿಡಿಸಿ ಕಳುಹಿಸಿದ್ದಾನೆ. ರುದ್ರಪಠಣದ ಮಹಿಮೆಯಲ್ಲಿ ಹನ್ನೆರಡು ವರ್ಷದ ಅಂಕಿಗಳು ಮಾಯುವಾಗಿ, ಹತ್ತು ಸಾವಿರ ಅಂಕಿಗಳು ಚಿತ್ರಗುಪ್ತನ ಲೆಕ್ಕದ ಪುಸ್ತಕದಲ್ಲಿ ಮೂಡಿ ಎವನ್ನು ನೋಡಿ ಯಮಭಟರು ಅಚ್ಚರಿಪಟ್ಟರು. ಮತ್ತು ಹ ಚ್ಚರಾಗಿ ಯಮನೊಡನೆ ವೀರಭದ್ರನ ಬಳಿಗೆ ಬಂದು ಕರಜೋಡಿಸಿ ಬೇಡಿಕೊಳ್ಳಲು ವೀರಭದ್ರನು ಅಂಜದಿರೆಂದು ಯಮನಿಗೆ ಅಭಯವಚನ

ಕೊಟ್ಟು, ಶಿವಮಂತ್ರಗಳನ್ನು ಉಚ್ಚರಿಸುವವರ, ಲಿಂಗಪೂಜಾಸಕ್ತರ, ಶಿವಭಕ್ತರೆನಿಸಿದವರ ಮನೆಯ ಸಮೀಪ ಸಹ ನೀನು ಸುಳಿಯಕೂಡದೆಂದು ಹೇಳಿ ಕಳುಹಿಸಿದನು, ಎಂದು ಪರಾಶರ ಯತಿರಾಜನು ಭದ್ರಾಶ್ವನಿಗೆ ಹಾಗು ಅವನ ಮಗ ಧರ್ಮನಿಗೆ ತಿಳಿಸಿ ಹೇಳಿದನು.

ಬಳಿಕ ಮುನಿಗಳ ಅಪ್ಪಣೆಯಂತೆ ಬ್ರಾಹ್ಮಣ ಸಮೂಹಕ್ಕೂ ಇತರರಿಗೂ ತಕ್ಕ ಸನ್ಮಾನಮಾಡಿ ಬೀಳ್ಕೊಟ್ಟನು. ಮುಂದೆ ಲಿಂಗಪೂಜಾಲೋಲನಾಗಿ, ಶಿವಭಕ್ತ ಸಂಪನ್ನನಾಗಿ ಮಗನಿಗೆ ಪಟ್ಟಗಟ್ಟಿ ಸುಖದಿಂದ ಇದ್ದನು. ಈತನ ಹತ್ತುಸಾವಿರ ವರ್ಷದ ಆಳಿಕೆಯಲ್ಲಿ ಎಲ್ಲಿ ನೋಡಿದರೂ ರುದ್ರಪೂಜೆ, ರುದ್ರಸೂಕ್ತ ಪಠಣ, ರುದ್ರಾಕ್ಷಧಾರಣತೆ ಕಂಡುಬರುವಂತೆ ವ್ಯವಸ್ಥೆ ಮಾಡಿದ್ದನು. ಶಿವನು ತಂದೆ ಮಕ್ಕಳಿಬ್ಬರ ಹಾಗು ಆ ರಾಜ್ಯದ ಜನತೆಯ ಶಿವಭಕ್ತಿಗೆ ಮೆಚ್ಚಿ ಮೋಕ್ಷಪದವಿಯನ್ನಿತ್ತನು. ಎಂದು ಗುರು ಬಸವರಾಜರು ಬ್ರಾಹ್ಮಣ ಸಮೂಹಕ್ಕೆ ತಿಳಿದರು.

ಆಗ ಬ್ರಾಹ್ಮಣ ಬಳಗದವರು ಸಂತೋಷಭರಿತರಾಗಿ ಗುರುಬಸವ ರಾಜರ ಪಾದಕಮಲಗಳಿಗೆ ವಂದಿಸುತ್ತ ನಮ್ಮ ಜನ್ಮಜನ್ಮಾಂತರಗಳ ಪಾಪವನ್ನೆಲ್ಲಾ ಹರಿದು ಹಾಕಿದ ದಿವ್ಯ ಮಂಗಳಮೂರ್ತಿಯೇ, ಸದ್ಗತಿಯನ್ನು ಪಡೆಯುವ ಮಾರ್ಗ ಕರುಣಿಸಿದ ತಮ್ಮ ಉಪಕಾರವನ್ನು ಅದಾವ ರೀತಿ ತೀರಿಸಬೇಕೋ ತಿಳಿಯದಾಗಿದೆ. ಅಂತೇ ತಮ್ಮ ದಿವ್ಯ ನಾಮ ಸಂಕೀರ್ತನೆಯಿಂದ ರಕ್ತಗುಣದೋಷವನ್ನು ಕಳೆದುಕೊಳ್ಳುತ್ತೇವೆ ಎಂದು—

— ಸ್ತುತಿ —

ಕರುಣಿ ಕರುಣಿ ಜಯ ಗುರುಬಸವಾ
ಕರುಣಿ ಕರುಣಿ ಜಯ ನಿರಂಜನ ಬಸವಾ
ಯೋಗಸಾಧನೆಯಿಂದ ಭೋಗದೂರ ಬಸವಾ
ತ್ಯಾಗವೀರ ಶಿವಸಂಪ್ರೀಯ ಸದ್ಗುಣಿ ಬಸವಾ
ಗುರುವೇ ಬಸವಾ ಶರಣು ಬಸವಾ
ನಿರುಪಮ ನಿರಂಜನ ನಿರ್ಮಲ ಮೂರುತಿ ಶ್ರೀಗುರುಬಸವಾ

ಮೋಕ್ಷ ಸಾಧನೆಯು ಬೋಧಕ ಬಸವಾ
ದಕ್ಷ ಶಿವಧರ್ಮ-ಸಾಧಕ ಶ್ರೀಗುರು ಬಸವಾ
ಶ್ರೀಗುರು ಬಸವಾ, ಶರಣು ಬಸವಾ ಶರಣು ಬಸವಾ
ಬೋಗ ದೂರನೇ ತ್ಯಾಗಯೋಗಿಯೇ ಜಯ ಜಯ ಬಸವಾ

ಹಾಡಿ ಪಾಡಿ ನಲಿಯುತ್ತಿರುವ ಭಕ್ತಬ್ರಾಹ್ಮಣ ಬಳಗವನ್ನು ನಿರ್ಮಲಾಂತಃ ಕರುಣೆಯಿಂದ ಆಶೀರ್ವದಿಸುತ್ತಿರುವ ಗುರುಬಸವರಾಜರು ತಮ್ಮ ಅಮೋಘ ವಾಣಿಯಿಂದ, ಶಿವಧರ್ಮ ದೀಕ್ಷೆಯಿಂದ ಆಗುವ ಲಾಭವನ್ನು, ಶಿವಧರ್ಮದ ಅವಹೇಳನಗೈದ ಪಾಪದಿಂದ ಆಗುವ ಹಾನಿಯನ್ನು, ಶಿವಧರ್ಮ, ಶಿವತತ್ವ, ಶಿವನಾಮ-ಘೋಷಣೆಯ ಆಚರಣೆಯಿಂದ ದೊರೆಯುವ ಮೋಕ್ಷ ಸಂಪದ ಸಾಧಕರ ಕಥೆಗಳನ್ನು ಹೇಳಿ, ಯಾವತ್ತರನ್ನು ಆಶೀರ್ವದಿಸಿ ಅವರವರ ನಿತ್ಯ ಕರ್ತವ್ಯಕ್ಕೆ ಅಪ್ಪಣೆಕೊಟ್ಟು ಕಳುಹಿಸಿ, ಗುರು ವೃಷಭೇಂದ್ರರಾಜರು ಭಕ್ತಿ ಜ್ಞಾನ ಸುಜ್ಞಾನ ವೈರಾಗ್ಯಗಳ ದಿವ್ಯ ಕಾಂತಿಯಿಂದ ಸಭಾಪೀಠದಲ್ಲಿ ರಂಜಿಸುತ್ತಿದ್ದರು.

....

೧೩ ನೇ ಸಂಧಿ

ಗುರುಬಸವರಾಜರು ನರಸೀಪುರ ಮಠದ ಪಟ್ಟವನ್ನು ಸುಜ್ಞಾನಿ ದೇವನಿಗೆ ಕೊಟ್ಟು ತಾವು ಕೊಟ್ಟೂರವಾಸಕ್ಕೆ ಹೊರಟಿದ್ದು.

ಇಲ್ಲಿಯವರೆಗೆ ಶಿವನ ಮಹಿಮೆಯನ್ನು ಸಾರುವ ಅನೇಕ ಕಥೆಗಳನ್ನು ದೃಷ್ಟಾಂತಕೊಟ್ಟು ತಿಳಿಸಿದ ಗುರು ಬಸವರಾಜರಿಗೆ ಅದೇನು ತಿಳಿಯಿತೋ ಏನೋ ಸುಜ್ಞಾನಿದೇವನಿಗೆ ನರಸೀಪುರದ ಮಠದ ಅಧಿಕಾರಕೊಟ್ಟು ತಾವು ದೇಶಪರ್ಯಟನದಲ್ಲಿ ತೀರ್ಥಕ್ಷೇತ್ರ ದರ್ಶನಕ್ಕಾಗಿ ಹೊರಡುವ ಹಂಬಲ ತಳೆದರು. ಅವರ ಹಂಬಲಕ್ಕೆ ಇಂಬುಕೊಟ್ಟಂತೆ, ಶಿವನು ಗುರುದೇಶಿಕರ ಕನಸಿನಲ್ಲಿ ಕಂಡು, ಕಂದಾ ನಿನ್ನ ಕರ್ತವ್ಯಕಹಳೆ ಮೊಳಗಬೇಕಾಗಿರುವದು ಕುತಲದೇಶದಡಿಯ ಕೊಟ್ಟೂರ ಸುಕ್ಷೇತ್ರದಲ್ಲಿ ಆ ಭೂಮಿ ನಿನ್ನಿಂದ ಪಾವನ

ಪುಣ್ಯಭೂಮಿ ಎನಿಸಬೇಕಾಗಿದೆ. ನಿನ್ನ ಇರುವ ಅರಿವ ನರಗುರಿಗಳ ಉದ್ಧಾರ ಕಾರ್ಯವು ಲೀಲಾಮಾತ್ರದಿಂದ ಜರುಗಬೇಕು. ಅವಕಾಶಕ್ಕೆ ಅನುಜ್ಞೆ ಬೇಡ. ನಿನ್ನ ನೆಚ್ಚಿನ ಹೆಚ್ಚಿನ ಶಿಷ್ಯೋತ್ತಮ ವಟುವರ ಸುಜ್ಞಾನಿ ದೇವನಿಗೆ ಮಠದ ಅಧಿಕಾರವನ್ನು ಕೊಟ್ಟ ಅದರೊಡನೆ ನಿನ್ನ ಘನಲಿಂಗ ಚಕ್ರವರ್ತಿ ಪಟ್ಟಗಟ್ಟಿ ಹೊರಡುವವನಾಗೆಂದು ಅಪ್ಪಣೆ ಮಾಡಿದನು.

ಶಿವನ ಅಪ್ಪಣೆಯು ಪ್ರಕಾರವೋ, ಮನದಾಸೆಯಂತೆಯೋ ಮರುದಿನವೆ ಸರ್ವ ಭಕ್ತಮಂಡಳಿಯನ್ನು ಕರೆಯಿಸಿದ ಗುರುಬಸವರಾಜರು ತಮ್ಮ ಮನದಾಸೆಯನ್ನು ತಿಳಿಸುತ್ತ, ಶಿವಯೋಗಸಾಧನೆಯ ಘನಉದ್ದೇಶದಿಂದ ನಾವು ಇಂದು ಈ ಮಠದ ಅಧಿಕಾರವನ್ನು ನಮ್ಮ ಮನ ಒಪ್ಪಿದ ಶಿಷ್ಯವಟು ವರ ಸುಜ್ಞಾನಿದೇವನಿಗೆ ಒಪ್ಪಿಸಿ, ಲೋಕಕಲ್ಯಾಣ ಕಾರ್ಯಕ್ಕೆ, ಶಿವಧರ್ಮದ ಏಳಿಗೆಗಾಗಿಯೂ, ಶಿವಮತ ಪ್ರಸಾರಕ್ಕಾಗಿಯೂ, ವೀರಶೈವ ಶಿವಧರ್ಮ ಜಾಗ್ರತಿಗಾಗಿಯೂ ಶಿವನು ಕಳುಹಿಸಿದತ್ತ ಹೊರಡಬಯಸಿದ್ದೇವೆ, ನೀವೆ ಲ್ಲರೂ ಒಮ್ಮತದಿಂದ ಒಪ್ಪಿಗೆಕೊಟ್ಟು ನಮ್ಮ ಮನದಾಸೆಗೆ ಸ್ಫೂರ್ತಿಸೆಲೆಯಾಗಿ ಸುಜ್ಞಾನಿಗೆ ಸಹಾಯದ ಶಿಲೆಯಾಗಿ ಶಿವಧರ್ಮದ ಬೆಲೆಯನ್ನು ಉಳಿಸುತ್ತೀರಿ ಎಂದು ಬಲವಾಗಿ ನಂಬಿದ್ದೇವೆ. ನಿಮ್ಮ ಒಪ್ಪಿಗೆ ಜಯಧ್ವನಿ ನಭೋ ಮಂಡಲವನ್ನು ತುಂಬಿದರೆ ಅದೇ ನಮಗಾನಂದವೆಂದು ಗುರುಬಸವರಾಜರು ಸರ್ವ ಭಕ್ತಬಳಗದೆದುರು ತಮ್ಮ ಸಂಕಲ್ಪವನ್ನು ತಿಳುಹಿಸಿದರು.

ಆಗ ಶಿವಭಕ್ತ ಬಳಗವು, ಶಿಷ್ಯವೃಂದವು, ಬ್ರಾಹ್ಮಣ ಸಮೂಹವೂ ನಭೋಮಂಡಲ ಅದುರುವಂತೆ ಉಘೇ ಉಘೇ ಎಂದು ಜಯ ಜಯಕಾರ ಗೈದು ಗುರುದೇವಾ ನಮ್ಮ ಕರುಣಾದೃಷ್ಟಿಯ ಶ್ರೀಬೆಳಕು ನಾವೆಲ್ಲರೂ ಮತ್ತೆ ಕಾಣುವದೆಂದು ಗುರುಗಳ ಶ್ರೀಪಾದಗಳಿಗೆ ನಮಸ್ಕರಿಸಿದರು.

ಆಗ ಗುರುಬಸವರಾಜರು ಸಮಾಧಾನದ ಉಸುರಿನೊಡನೆ ಎಲ್ಲರನ್ನು ಸಂತೈಸುತ್ತ ನೀವು ಸ್ಮರಣಮಾಡಿದ ಮಾತ್ರದಲ್ಲಿ ನಿಮ್ಮ ಇಚ್ಛೆಯನ್ನು ಈಡೇರಿಸಲು ಸಿದ್ಧರಿರುತ್ತೇವೆ ಎಂದು ಅಭಯ ಆಶೀರ್ವಾದ ಮಾಡಿ ಶಿವಗಣರೆಲ್ಲರ ಒಪ್ಪಿಗೆ ಹಾಗೂ ಭಕ್ತಮಾಹೇಶ್ವರ ಬಳಗದ ಸಮಕ್ಷಮದಲ್ಲಿ ಸುಜ್ಞಾನಿದೇವಂಗೆ ಪ್ರೀತಿಯಿಂದ ಸಮೀಪ ಕರೆದು ಕೂಡ್ರಿಸಿಕೊಂಡರು.

ಬಳಿಕ ಹಿರಿಯರೆನಿಸಿದ ಶರಣ ಸಂತತಿಯವರನ್ನು ಕರೆದು ಸುಜ್ಞಾನಿ ದೇವನ ಪರಿಚಯ ಮಾಡಿಸುತ್ತ, ಶಿವಯೋಗಿಗಳ ವಂಶಜನು, ವೀರಶೈವ ಧರ್ಮತತ್ವ ತಿಳಿದವನು, ಜಂಗಮಾರ್ಯ ವರಪುತ್ರನು ಎನಿಸಿದ ಈ ನಮ್ಮ ಕರಜಾತ ಶಿಷ್ಯವರನಿಗೆ ನಿಮ್ಮೆಲ್ಲರ ಸಮಕ್ಷಮದಲ್ಲಿ ಸ್ವಸಂತೋಷದಿಂದ ಈ ಮಠದ ಅಧಿಕಾರ ಪಟ್ಟಗಟ್ಟಿ ನಾವು ಮನಾನಂದ ಹೊಂದುವದಲ್ಲದೇ ಶಿವನಿಚ್ಛೆಯಂತೆ ಇಂದೇ ನಾವಿಲ್ಲಿಂದ ಹೊರಡತಕ್ಕವರು ಎಂದು ಹೇಳಿ, ನಿಯಮಬದ್ಧವಾಗಿ ಮಠದ ಪೀಠಾಧಿಕಾರದ ಪಟ್ಟದಲ್ಲಿ ಆತನನ್ನು ಕೂಡ್ರಿಸಿ ಹರುಷದಿಂದ ಕೈತಟ್ಟಿ ಆಶೀರ್ವಾದ ಮಾಡಿದರು ಕೂಡಿದ ಶಿವಗಣವೆಲ್ಲ ಹರುಷದಲ್ಲಿ ಉಘೇ ಎಂದು ಜಯಧ್ವನಿ ಗೈದರು.

---

೧೪ ನೇ ಸಂಧಿ

ಗುರು ಬಸವರಾಜರ ತೀರ್ಥ ಕ್ಷೇತ್ರ ಸಂದರ್ಶನ

ಸುಜ್ಞಾನಿದೇವರಿಗೆ ಪಟ್ಟಗಟ್ಟಿ ಸರಸೀಪುರದಿಂದ ಹೊರಟ ಗುರುಬಸವ ರಾಜರು ಭಕ್ತಿ ಜ್ಞಾನ ವೈರಾಗ್ಯಗಳ ಆಸೆಯಿಂದ ಸುಜ್ಞಾನಿಗಳನ್ನು ಸತ್ಕೀರ್ತಿ ಸದ್ಗುಣಮಣಿಗಳನ್ನು ಅರಸುತ್ತ ಅವರ ಮನದಿಚ್ಛೆಯನ್ನು ಪೂರ್ಣ ಮಾಡುತ್ತ ಹೊರಟರು. ಗುರುಬಸವರಾಜರು ಪಾದವಿಟ್ಟ ಭೂಮಿ ಪಾವನವಾಗಿ ಪಾಪ ಪರಿಹಾರವಾಯಿತಲ್ಲದೆ ಪುಣ್ಯ ಜೀವನ ಮುಂದಾಯಿತು. ಪಾಪ ನಾಶವಂತೂ ಬಲು ಬೇಗವಾಯಿತು. ಮೃತ್ಯುದೇವತೆ ಹೆದರಿ ಹಿಂಜರಿದಳು, ದಾರಿದ್ರ್ಯ ದೂರಾಯಿತು. ಕಲಿ ಬಲವು ಕಡಿಮೆಯಾಗಿ ಸತ್ಯ ಧರ್ಮ ನೀತಿಗಳಿಗೆ ಬೆಲೆ ಸಿಕ್ಕಿತು. ಪರಮತ ಪರಾಜಯ ಹೊಂದಿ ವೀರಶೈವ ಮತದ ಹೆಚ್ಚಳವಾಯಿತು.

ಶಿವಯೋಗಿ ಸಾಮ್ರಾಟ ಗುರುಬಸವರಾಜರ ಸಂಚಾರದಿಂದ ನಾನಾಕಡೆ ಭಕ್ತರ ಉದ್ಧಾರವಾಯಿತು. ಕರ್ನಾಟಕವನ್ನು ಬಿಟ್ಟು ಹಲವಾರು ತೀರ್ಥ

ಕ್ಷೇತ್ರಗಳನ್ನು ಸುತ್ತಿ ಶಿವಕ್ಷೇತ್ರ ದರ್ಶನದಿಂದ ಆನಂದಗೊಂಡು ಲಿಂಗಲೀಲೆಯಲ್ಲಿ ಉಬ್ಬಿ ನದಿ ತೀರಗಳಲ್ಲಿ ಮಿಂದು ಪದ್ಮಾಸನಾರೂಢರಾಗಿ ಹೃದಯ ಮೂರುತಿ ಮಂಗಲಕೀರ್ತಿ ಚಿನ್ಮಯ ಚಿದಾನಂದ ಸ್ವರೂಪ ಶಿವನನ್ನು ಅಂತರಂಗದಲ್ಲಿ ಆಹ್ವಾನಿಸಿ ನಿಶ್ಚಲ ನಿರ್ಮಲ ನಿರ್ವಿಕಾರ ಮನೋಧಾರ್ಢ್ಯತೆಯಿಂದ ಮಾನಸ ಪೂಜೆಗೈದು ತೃಪ್ತರಾಗಿ ಅನಂತ ತೀರ್ಥಗಳ ಪಾವನ ಪುಣ್ಯ ಸಂಜೀವಿನಿ ರಸಪಾನ ಗೈದು ಬಂದರು.

ಕಾಶಿ ರಾಮೇಶ್ವರಗಳತ್ತ ತಿರುಗಿದ ಗುರುಬಸವರಾಜರು ಶಿವಲೋಕ ಸಮನಾದ ಶ್ರೀ ಗಿರಿಯನ್ನು ಕಾಣುವ ಹಂಬಲದಿಂದ ಮುಂದಾಗಿ ಶ್ರೀಗಿರಿಗೆ ಬಂದು ಶಿವನೈಸಿರಿಯ ಸೊಬಗಿನಿಂದ ಶೋಭಿಸುವ ಮಲ್ಲಯ್ಯನ ಪುಣ್ಯತಾನ ಶ್ರೀ ಗಿರಿಯಲ್ಲಿ ಸುತ್ತಿ ಕದಳಿಯಂ ಪೊಕ್ಕು ಶಿವಗಣ ಸಮೂಹದೊಡನೆ ಶಿವಾನುಭವಗೋಷ್ಠಿಯಲ್ಲಿ ಕೆಲವು ದಿವಸ ಆನಂದಹೊಂದಿ ಅಲ್ಲಿರುವ ಅನೇಕ ಯೋಗಿ ಶಿವಯೋಗಿ ಜ್ಞಾನಸಂಪನ್ನ ವೈರಾಗ್ಯಮೂರ್ತಿಗಳಿಗೆ ನಿಶ್ಚಲ ಸಮಾಧಿಗೆ ಅತೀ ಅವಶ್ಯವಾದ ಷಟಸ್ಥಲಗಳನ್ನು ವಿಧಿಪೂರ್ವಕ ಸ್ಥಿರ ಪ್ರಜ್ಞೆಯಲ್ಲಿ ಕ್ರಮದಿಂದ ಹಸ್ತ ಮನಸ್ಸು ಹಾಗು ಭಾವಗಳಲ್ಲಿ ಕಾಣುವ ಲಿಂಗಮೂರ್ತಿಯು ರೀತಿಯನ್ನು ವಿವರಿಸಿದರು.

ಬಳಿಕ ಶ್ರೀ ಗಿರಿಯನ್ನು ಮತ್ತೊಮ್ಮೆ ಇನ್ನೊಮ್ಮೆ ಮುನ್ನೊಮ್ಮೆ ಮುಗುದೊಮ್ಮೆ ನೋಡಿ ಆನಂದದಿಂದ ತಮ್ಮಲ್ಲಿ ತಾವೇ ಇಲ್ಲಿಯ ಕಲ್ಲಬಂಡೆಗಳು ಲಿಂಗರೂಪ,ನೀರೆಲ್ಲ ಗಂಗಾಜಲ, ಗಿಡಮರಗಳು ಕಲ್ಪವೃಕ್ಷ ಸಮಾನ. ಇಲ್ಲಿ ಜನ ಜೀವಿಗಳೆಲ್ಲ ಮುನಿಗಳು. ಇಲ್ಲಿ ಜೀವಿಸಿದ ಸರ್ವ ಪ್ರಾಣಿಗಳಿಗೆ ಮುಕ್ತಿಯೆಂಬುದು ಕೈಸೊತ್ತು ಎಂದು ಗಿರಿಯ ಬಗ್ಗೆ ಹೆಮ್ಮೆಪಟ್ಟರು.

ಶ್ರೀಶೈಲ ಯಾತ್ರಾರ್ಥಿ ಜೀವನ ಪಾವನ, ಶಿವಕೃಪೆಯಂತೂ ಶತಸಿದ್ಧ. ಇದು ಭೂಕೈಲಾಸ ಶಿವಗಣವರರ ಕ್ರೀಡಾವನ ಶಿವನ ರಾಜಭವನ ಎಂದು ಗಿರಿರಾಜನ ಸ್ಥಾನ ಶ್ರೀ ಶೈಲವನ್ನು ಹೊಗಳುತ್ತ ಹೊರಟ ಗುರುಬಸವರಾಜರು ಪಂಪಾ ಕ್ಷೇತ್ರಕ್ಕೆ ಬಂದರು ಮುಂದಾಗಿ ಪಂಪಾಪತಿ ವಿರುಪಾಕ್ಷನನ್ನು ಅತ್ಯಂತ ಪ್ರೀತಿ ವಿಶ್ವಾಸಗಳಿಂದ ಸೇವಿಸಿ ಅಲ್ಲಿ ವಾಸವಾಗಿರುವ ಅನೇಕ ಸುಜ್ಞಾನಿ ಶಿವಯೋಗಿಗಳ ಪ್ರೀತಿಯನ್ನು ಸಂಪಾದಿಸಿ ಭಕ್ತರನ್ನು ಸಂತಸದಿಂದ

ಆಶೀರ್ವದಿಸಿ ಹೇಮಕೂಟದ ದಕ್ಷಿಣ ದಿಕ್ಕಿನಲ್ಲಿ ಕೊಟ್ಟೂರು ಕ್ಷೇತ್ರವನ್ನು ಸುಕ್ಷೇತ್ರವನ್ನಾಗಿಯು ಭಕ್ತಿಯ ತವರುಮನೆಯನ್ನಾಗಿಯು ಜ್ಞಾನ ಸಂಪತ್ತಿನ ಬೀಡಾಗಿಯು ಪರಿವರ್ತಿಸುವ ಸಂಕಲ್ಪಮಾಡಿ ಹುಚ್ಚರಂತೆ ಕಂಗೊಳಿಸುವ ವೇಷ ಭೂಷಣಗಳಿಂದ ಅಜ್ಞಾನಿಗೆ ಹುಚ್ಚನಾಗಿ ಕಂಡರೆ ಸುಜ್ಞಾನಿಗೆ ಆನಂದ ಮೂರ್ತಿಯಾಗಿ ಕಂಗೊಳಿಸುತ್ತ ಹರಿದ ಅರಿವೆಯಿಂದ ರತ್ನದ ಕಜ್ಜ ಮುಚ್ಚಿದಂತೆ ಗುರು ವೃಷಭೇಂದ್ರನು ಕೊಟ್ಟೂರು ಕ್ಷೇತ್ರದತ್ತ ಪ್ರಯಾಣ ಬೆಳೆಯಿಸಿದನು.

---

೧೫ ನೇ ಸಂಧಿ

ಕಲ್ಲು ಒಗೆದವನೇ ಕಾಲು ಮುರಿದುಕೊಂಡು ನರಳಿದ್ದು

ಪಂಪಾಕ್ಷೇತ್ರದಿಂದ ಹೊರಟ ಗುರುಬಸವರಾಜರು ಕುಂತಳ ದೇಶದತ್ತ ಬಂದರು. ಕಂತು ಹರನ ಕರುಣೆಯಲ್ಲಿ ರೂಪಗೊಂಡಿರುವ ಕುಂತಲ ದೇಶದ ಪುಣ್ಯ ಪಾವನ ಬದುಕಿನೈಸಿರಿಯನ್ನು ಕಂಡು ಆಶ್ಚರ್ಯದಿಂದಲೂ, ಆನಂದ ದಿಂದಲೂ ಅವಲೋಕಿಸಿದರು. ದೇವಲೋಕವನ್ನು ಮೀರುವಂತೆ ಶಿವಲಿಂಗ ಭಜನೆ, ಪೂಜೆ, ಸೇವಿಸುವ ಭಕ್ತರು, ಕುಂತಲ ನಾಡದೇವಿಯ ಭಾಗ್ಯೋದಯಕ್ಕೆ ಕಾರಣವಾಗಿತ್ತು.

ಆ ನಾಡ ತಾಯಿಯ ಪುಣ್ಯ ಗರ್ಭದಲ್ಲಿ ಕಂಗೊಳಿಸುವ ಶಿಖಾಪುರವು, ಮಹಾ ಮಹಿಮ ವೃಷಭೇಶ್ವರನ ನಿವಾಸವಾಗಿತ್ತು. ವೃಷಭೇಂದ್ರನ ಕರುಣೆಯಿಂದ ಶಿಖಾಪುರದಲ್ಲಿ ಪೂರ್ವ ಆಚಾರ ಪದ್ಧತಿಯಲ್ಲಿ ರೂಪಗೊಂಡಿರುವ ಹಲವು ಶಿವ ದೇವಾಲಯಗಳು, ಶಿವಾಚಾರ ಸಂಪನ್ನರ ನಿವಾಸಗಳು, ಶಿವಯೋಗಿ ಸಂಪನ್ನರ ಜ್ಞಾನಭಾಂಡಾರದಂತಿರುವ ಮಠಗಳು, ಶಿವ ಶಾಸ್ತ್ರ ಪಂಡಿತ ಶಿರೋಮಣಿಗಳನೇಕರ ಮನೆಗಳು, ಶಿವಭಕ್ತರಿಗಂತೂ ಕೊರತೆ ಇರಲಿಲ್ಲ. ಶಿವಶರಣರ ಸಮ್ಮೇಳನ, ಶಿವಧ್ಯಾನಿಗಳ ಸಭೆ, ಶಿವಾನುಭವಿಗಳ ಕೂಟ, ದರ್ಶನ, ಪುರವಾಸಿಗಳೆಲ್ಲರು ಸಜ್ಜನರು, ಸಂಪನ್ನರು, ದಾನಶೂರ

ಸದಾಚಾರಿಗಳು, ಗುರುಚರ ಬಳಗದಲ್ಲಿ ಭಕ್ತಿಯುಳ್ಳವರು, ಇಂತಹ ಶಿಖಾಪುರವು ಶಿವಸದನವೆಂದೇ ಹೇಳಬೇಕು.

ಶಿಖಾಪುರದಲ್ಲಿ ಕಾಲಿರಿಸಿದ ಗುರುಬಸವರಾಜನು ಹರಿದ ಬಟ್ಟೆಯಲ್ಲಿ ನಿರ್ಮಲ ಶಿವ ಬೆಳೆಯು ಕಾಯವನ್ನು ಮುಚ್ಚಿಕೊಂಡು ಹುಚ್ಚನಂತೆ ಅಸಡ್ಡಾಳ ನುಡಿಗಳಿಂದಲೂ, ನಡೆಯಿಂದಲೂ, ವೃತ್ತಿಯಿಂದಲೂ, ಜನರನ್ನು ಬೆರಗುಗೊಳಿಸುತ್ತ ತಿರುಗ ಹತ್ತಿದನು. ಒಮ್ಮೆ ತನ್ನಷ್ಟಕ್ಕೆ ತಾನೇ ನಕ್ಕು, ನಲಿದು, ಕೇ ಕೇ ಹಾಕುವನು. ಮತ್ತೊಮ್ಮೆ ಉನ್ಮತ್ತತೆಯಲ್ಲಿ ಕುಣಿಯುವನು, ಮಗದೊಮ್ಮೆ ಗಮಕಿಯಂತೆ ಹಾಡುವನು, ಇನ್ನೊಮ್ಮೆ ಹುಚ್ಚ ಎನ್ನುವ ರೀತಿಯಲ್ಲಿ ವರ್ತಿಸುವನು, ಮುನ್ನೊಮ್ಮೆ ಶಿವಧ್ಯಾನದ ರಸಮುದಗೊಂಡು ತಲೆಗೇರಿ ಸ್ವೇಚ್ಛಾಚಾರದಿಂದ ಅಲ್ಪರನ್ನು ಅಲಕ್ಷಿಸಿ, ಶಿವಭಕ್ತರಿಗೆ ಕರುಣಾರಸ ಸುರಿಸುತ್ತಿದ್ದನು. ಅಂತೂ ಲೀಲಾ ವಿನೋದದಿಂದ ಕುಣಿದು, ತಣಿದು, ಅಜ್ಞಾನಿಗೆ ಮಣಿಯದೇ ಸುಜ್ಞಾನಿಗೆ ಹಣ್ಣಾಗಿ ಕಂಗೊಳಿಸುವ ಗುರು ವೃಷಭೇಂದ್ರನ ಮಹಿಮೆ ಶಿಖಾಪುರ ಜನತೆಯನ್ನು ಬೆರಗುಗೊಳಿಸಿದ್ದಲ್ಲದೇ, ಹುಚ್ಚರನ್ನಾಗಿಸಿತ್ತು.

ಬೀದಿಯ ಭಿಕಾರಿಯಂತೆ ಹೊರಟ ಗುರುವರನು ಇಚ್ಛಾ, ಕ್ರಿಯಾ, ಜ್ಞಾನ, ಮುಂತಾದ ಸಕಲ ಶಿವಶಕ್ತಿ ಪಂಚಕಗಳಲ್ಲಿ ಕುಶಲ ಮತಿಯೆನಿಸಿದ್ದರೂ ನೋಟಕರಿಗೆ ಭಿಕಾರಿ ಹುಚ್ಚನಂತೆ ತೋರಿ, ಜನರಲ್ಲಿ ಆಶ್ಚರ್ಯ ಬೀರಿದಂತೆ ಕೆಲವು ಪುಂಡ ಪೋಕರಿಗಳಿಗೆ ಹುಚ್ಚನೆಂದು ತಮಾಷೆಗೈಯ್ಯುವದಕ್ಕೆ ಅನುಕೂಲ ಮಾಡಿಕೊಂಡ ನೀಚರನೇಕರು ಕೂಡಿ, ಉನ್ಮತ್ತನೆಂದು ಭಾವಿಸಿ, ಕಲ್ಲು ಗುಂಡುಗಳಿಂದ ಹೊಡೆಯ ಹತ್ತಿದರು.

ಆದರೆ, ಆ ನೀಚರು ಒಗೆದ ಕಲ್ಲುಗಳು ಗುರುಬಸವರಾಜರನ್ನು ಮುಟ್ಟುವದಕ್ಕೆ ಹೆದರಿ ದೂರ ಬೀಳುತ್ತಿದ್ದವು. ಹೆದರಿಕೆ ಎಂಬುದನ್ನೇ ಅರಿಯದ ಅವನು ಮಾತ್ರ ನಿಶ್ಚಿಂತೆಯಿಂದ ಅವರ ಕಲ್ಲು ಗುಂಡುಗಳನ್ನು ಲೆಕ್ಕಿಸದೆ ಪರಶಿವ ಲಿಂಗ ಧ್ಯಾನದಲ್ಲಿ ಸಾಗಿದ್ದನು.

ಬರು ಬರುತ್ತ, ಬೀಳುವ ಕಲ್ಲುಗಳನ್ನು ಲಿಂಗವೆಂದು ಭಾವಿಸಿ, ಭಕ್ತಿ ಭಾವದಿಂದ ನಮುಸ್ಕರಿಸುವನು. ಈತನ ನಯ ವಿನಯ ಭಕ್ತಿಯ ಆಳವನ್ನು ಗುರ್ತಿಸಿದ ಸದ್ಗುಣಿಗಳು ಇವನೋರ್ವ ಹೆಚ್ಚಿನ ಶಿವಯೋಗಿ ಎಂದು ಭಯ ಭಕ್ತಿಯಿಂದ ನಮುಸ್ಕರಿಸಿದರು. ನೀಚರು ಮಾತ್ರ, ಕಲ್ಲು ಎಸೆಯುವದು ನಿಲ್ಲಿಸಲಿಲ್ಲ. ಅವರೆಲ್ಲರು ಕಲ್ಲು ಒಗೆದಂತೆ ಈತನು ಅಲಕ್ಷ್ಯದಿಂದ ನಕ್ಕು ಮುಂದೆ ಸಾಗುತ್ತಿದ್ದನು.

ಆಗ, ಅತೀ ನೀಚನಾದ ತರುಣನೊಬ್ಬನು ದೊಡ್ಡ ಕಲ್ಲೊಂದನ್ನು ಎತ್ತಿ ತಂದು ಗುರುಬಸವರಾಜನ ತಲೆಯ ಮೇಲೆ ಅಪ್ಪಳಿಸಿದನು. ಆಗ ಗುರು ಮೂರ್ತಿಯು ಅವನನ್ನು ಹೊರಳಿ ನೋಡಿ ದೃಷ್ಟಿ ತಾಕಿಸಿದ್ದೆ ತಡ ಅವನು ಎಡವಿದ ನೆಪದಲ್ಲಿ ಅವನ ಕಾಲು ಮುರಿದು ಭೂಮಿಯ ಆಶ್ರಯದಲ್ಲಿ ಬಿದ್ದನು.

ಬಳಿಕ ಕೆಲವು ಸಜ್ಜನ ಜನರು. ಇವನೋರ್ವ ಸತ್ಪುರುಷ ಶಿವಯೋಗಿ ಎಂಬ ಜ್ಞಾನ ಹುಟ್ಟಿ ಅಯ್ಯೋ, ಗುರುವೇ ಪರಮ ಗುರುವೇ, ಅಜ್ಞಾನಿಯ ತಪ್ಪನ್ನು ಮನ್ನಿಸಬೇಕು ಎಂದು ನಮುಸ್ಕರಿಸಲು, ಕಾಲು ಮುರಿದು ನೆಲಕ್ಕೆ ಬಿದ್ದ ಉಡಾಳ ತರುಣನು ಚಕ್ಕನೆ ಎದ್ದು ಭಯ ಕಂಪನದಲ್ಲಿ ಗಡಗಡ ನಡುಗುತ್ತ ಗುರುಬಸವರ ಪಾದಗಳ ಮೇಲೆ ಬಿದ್ದು, ಮಾಡಿದ ಅಪರಾಧಕ್ಕೆ ಕ್ಷಮೆ ಬೇಡಿದನು. ಆಗ, ಗುರುವರನು ಅದಾವದಕ್ಕೂ ಗಮನ ಕೊಡದೆ ಲಿಂಗಾನಂದ ಸುಖಾನ ಭವದಲ್ಲಿ ಪಟ್ಟಣದ ಬೀದಿಯೊಳು ಮುಂದಾದನು.

ಆಗ ಪುರವಾಸಿಗಳು ಗುರುಬಸವರಾಜರ ಲೀಲೆಯನು ಕಂಡು, ಈತನು ಸಾಮಾನ್ಯನಲ್ಲ, ಅಂದಿನ ಅಲ್ಲಮನ ಅವತಾರ ಎಂದೂ ನಮ್ಮ ರಕ್ಷಣೆಗಾಗಿ, ನಮ್ಮ ಪಟ್ಟಣಕ್ಕೆ ಬಂದ ಪುಣ್ಯ ಮೂರ್ತಿ, ಪರಶಿವ ಅವತಾರಿ ಎಂದೂ ಮಹಿಮಾ ಪುರುಷ, ಎಂದು ಮಣಿದು ನಮುಸ್ಕರಿಸ ಹತ್ತಿದರು.

ಗುರು ಬಸವರಾಜನು, ಪ್ರತಿದಿನವು ಆ ಪಟ್ಟಣದ ಬೀದಿಯಲ್ಲಿ ಇದೇ ರೀತಿ ಉಂಡೋ, ಉಪವಾಸವೋ, ಛಳಿಯೋ, ಮಳೆಯೋ, ಬಿಸಿಲಿನತಾಪವೋ ನೆರಳಿನ ಛಾಯೆ ಅರಿಯದಲೋ ಹುಚ್ಚನಂತೆ ಮೈತುಂಬ ಬಟ್ಟೆಯಿಲ್ಲದೆ,

ಮರ್ಯಾದೆ ಮುಚ್ಚುವಷ್ಟು ಮಾತ್ರ ಹರಕು ಚಿಂದಿ ಧರಿಸುವನು ಹೀಗೆ ದಿನಗಳೆದಂತೆ ಕಂದಿ, ಕುಂದಿ, ಕೃಶವಾಗಿ, ಶಿವಭಕ್ತರ ಮನಸ್ಸಿಗೆ ನೋವು ದುಃಖ ಅಯ್ಯೋ,ಪಾಪ ಎಂದು ಉಸುರುಗರೆಯುವ ರೀತಿಯಿಂದ ವರ್ತಿಸ ಹತ್ತಿದನು.

ಅದರಲ್ಲಿ ಕೆಲವರು ಸುಮ್ಮನೇ ಮರುಗಿ ಅಯ್ಯೋ ಎಂದರೆ ವಿನಃ ಮೈ ಮುಟ್ಟಿ, ಅನ್ನ ಕೊಟ್ಟು, ಬಟ್ಟೆ ಹೊಚ್ಚಿ ಉಪಚರಿಸುವ ಉಸಾಬರಿಗೆ ಬಾರದಾದರು. ಇದಾವದರ ಅವಶ್ಯ ನಮಗೇಕೋ ಎನ್ನುವ ರೀತಿಯಲ್ಲಿ ಗುರುಬಸವರಾಜರ ವರ್ತನೆಯಾಗಿತ್ತು.

---

೧೬ ನೇ ಸಂಧಿ

ಹುಚ್ಚನಂತೆ ತಿರುಗುವ ಗುರುಬಸವರಾಜನು ನಿಂಬಿಯಕ್ಕನ ಆಳಾದದ್ದು

ಹುಚ್ಚನಂತೆ ಬೀದಿ ಬೀದಿ ತಿರುಗುವ ಗುರುಬಸವರಾಜನು ಲೀಲಾ ವಿನೋದ ಗೈಯುವದನ್ನು ಕಂಡು ಪುರಜನರು ಹುಚ್ಚನೆಂದು ತೀರ್ಮಾನಿಸಿದರೆ ? ಶಿವಭಕ್ತ ಸಂಪನ್ನರ ಮನೆಯಲ್ಲಿ ಹುಟ್ಟಿ ಶಿವನಲ್ಲಿ ನಿಜ ಭಕ್ತಿಯಿಂದ ನಡೆದುಕೊಳ್ಳುವ ನಿಂಬಿಯಕ್ಕನು ಮಾತ್ರ ಹುಚ್ಚನಿವನಲ್ಲ ಜಗದ ನಿಜಹುಚ್ಚರ ಹುಚ್ಚುತನವನ್ನು ನಿಚ್ಚಳಗೊಳಿಸಲು ಬಂದ ನೀಲಕಂಠ ರೂಪನು ಎಂದು ನಂಬಿ ಮರುಗುತ್ತಿದ್ದಳು ಜನರು ಅವನನ್ನು ಪೀಡಿಸುವದನ್ನು ಕಂಡು ಅಯ್ಯೋ ಎನ್ನುತ್ತಿದ್ದಳು.

ಬರು ಬರುತ್ತ ವೃಷಭೇಂದ್ರನ ಸ್ಥಿತಿಯನ್ನು ಕಂಡು ನಿಂಬಿಯಕ್ಕನು ತಾಯಿಯಂತೆ ಮಮತೆ ತುಂಬಿದ ಧ್ವನಿಯಲ್ಲಿ ಅಪ್ಪಯ್ಯಾ ಏನಿದು ನಿನ್ನ ಸ್ಥಿತಿ ನಿನಗಾಗಿ ಮರುಗುವವರೇ ಇಲ್ಲವಲ್ಲಾ ಹೋಗಲಿ ನಿನ್ನನ್ನು ನನ್ನ ಮಗನಂತೆ ನೋಡಿಕೊಳ್ಳುತ್ತೇನೆ ನನ್ನ ಮನೆಯಲ್ಲಿ ಇರುವೆಯಾ ? ಎಂದು ಕೇಳಿದಳಲ್ಲದೆ ದುಡಿಯದೆ ಋಣದ ಕೂಳು ಬೇಡವೆಂದು ಆಲೋಚಿಸಿದರೆ ನನ್ನ ಮನೆಯಲ್ಲಿ

ನಾಲ್ಕಾರು ಆಕಳುಗಳುಂಟು ಅವುಗಳನ್ನು ಅಡವಿಗೆ ಒಯ್ದು ಸರಿಕರೊಡನೆ ಮೇಯ್ಯಿಸಿಕೊಂಡು ಬಂದರೆ ಸಾಕು ಎಂದು ರಂಭಿಸಿ ಮೈದಡವಿ ವಾತ್ಸಲ್ಯ ದಿಂದ ಕೇಳಿದಳು.

ಆಗ ಆ ಮುಗ್ಧ ಸ್ವಭಾವದ ಭಕ್ತಳ ಉಪಚಾರದ ಮಾತುಗಳಿಗೆ ಸಂತುಷ್ಟನಾದ ಶಿವಪ್ರೇಮಿ ಗುರು ವೃಷಭೇಶನು ಉಂಡುಟ್ಟು ಸುಖವಾಗಿ ಊಳಿಗದಾಳಾಗಲು ಒಪ್ಪಿಕೊಂಡು, ಶಿವನು ಭಕ್ತರ ಆಳಾಗಲು ಸಹ ಹಿಂಜರಿ ಯಲಾರ ಎನ್ನುವದನ್ನು ತೋರಿಸಿಕೊಟ್ಟು, ಭಾವಿಕಳಾದ ನಂಬಿಯಕ್ಕನ ಮನೆಗೆ ಹೋದನು.

ದಿನಾಲು ಬೀರ, ಮೈಲಾರ, ಮಲ್ಲೇಶಿ, ಶಿವಲಿಂಗರೊಡನೆ ಆಕಳುಗಳನ್ನು ಅಡವಿಗೊಯ್ದು ಎಳೆಹುಲ್ಲು ಮೇಯಿಸಿ, ತಿಳಿನೀರು ಕುಡಿಸಿ ಸರಿಕರೊಡನೆ ಆಕಳುಗಳನ್ನು ಮನೆಗೆ ಕಳುಹಿಸಿ, ತಾನು ಉಸುಕಿನಲ್ಲಿ ಲಿಂಗಮೂರ್ತಿಯನ್ನು ಸ್ಥಾಪಿಸಿ, ಮಾನಸ ಪೂಜೆಯಿಂದ ತೃಪ್ತರಾಗುತ್ತಿದ್ದರು. ದಿನಾಲು ಇದೇ ರೀತಿ ನಿಂಬಿಯಕ್ಕನ ಉಪಚಾರ ಹಾಗು ಮನದಿಚ್ಛೆಯಂತೆ ಇಷ್ಟಲಿಂಗ ಪೂಜೋತ್ಸವ ಹೀಗಾಗಿ ಅವರ ನಿಶ್ಚಲಭಾವಕ್ಕೆ ಪುಟಕೊಟ್ಟಂತೆ ಸಾಗಿತು.

ಒಂದು ದಿವಸ ಮಾನಸ ಪೂಜೆಯಲ್ಲಿ ನಿರತರಾಗಿ ನಿಶ್ಚಲ ಮನದಿಂದ ಲಿಂಗಧ್ಯಾನಲಹರಿಯಲ್ಲಿ ಹೊರಜಗದ ವ್ಯಾಪಾರವನ್ನು ಮರೆತು ಸಕಲ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟು ಚಿನ್ಮಯಮೂರ್ತಿ ಶಿವಧ್ಯಾನ ಸಮಾಧಿ ಯಲ್ಲಿ ಲೀನರಾಗಿರಲು ಭೂಮಂಡಲವೇ ಸಾಕು ಸಾಕೆನ್ನುವ ರೀತಿಯಲ್ಲಿ ಘನಘೋರ ಮಳೆ ಸುರಿದು ಪ್ರಚಂಡವಾಗಿ ಹರಿವ ನೀರು ಹಳ್ಳಹೊಳೆ ತುಂಬಿ ಹೊರಚಲ್ಲಿದರೂ ಅಂಗೈಭೂಮಿ ಉಳಿಯದಂತೆ ಸತತ ಏಳು ದಿನ ನೀರು ಹರಿಯುವದು ತಪ್ಪಲಿಲ್ಲ.

ಆವ ಗುರು ಬಸವರಾಜೇಂದ್ರನು ಏಳು ದಿನಗಳ ವರೆಗೆ ಹರಿವ ಪ್ರವಾಹದ ಮಧ್ಯ ಸಮಾಧಿಯಲ್ಲಿಯೇ ಇದ್ದನು. ಸಂಗಡಿಗರಾದ ಮೈಲಾರ, ಮಲ್ಲೇಶಿ ಮೊದಲಾದ ಗೋಪಾಲಕರು ನಿಂಬಿಯಕ್ಕನ ಬಳಿಗೆ ಹೋಗಿ, ನಿನ್ನ ಆಳು (ದನಗಾಹಿ) ಮೊದಲೇ ಹುಚ್ಚ, ತುಂಬಿದ ಪ್ರವಾಹದಲ್ಲಿ

ಮುಳುಗಿ ಹೋದನೆಂದು ನಂಬಿಕೆಯಾಗುವಂತೆ ಪ್ರವಾಹದ ಪಾತಳಿಯನ್ನು ತೋರಿಸಿ ನಂಬಿಸಿದರು.

ಆಗ ನಿಂಬಿಯಕ್ಕನು ಅವನ ಗುಣಗಳನ್ನು ನೆನೆಸಿಕೊಂಡು ಪಾಪ ಅವನಿಗಾದ ಸ್ಥಿತಿಗೂ ಮರುಗಿ, ಹಾಡಿಹಾಡಿಕೊಂಡು ಅಳಹತ್ತಿದಳು ಬರುಬರುತ್ತ ನಿಂಬಿಯಕ್ಕನ ರೋಧನ ಅತಿಯಾಯಿತೇ ಹೊರತು ಕಡಿಮೆ ಯಾಗಲಿಲ್ಲ. ಬಳಿಕ ಗುರುಬಸವರಾಜನಿಗೆ ಅವಳ ರೋಧನ ಕೇಳಿಸಿತೇನೋ ಎನ್ನುವಂತೆ ಎಂಟನೇ ದಿವಸದಂದು ಎಂದಿನಂತೆ ಓಣಿಯಲ್ಲಿ ತಿರುಗುತ್ತ ನಿಂಬಿಯಕ್ಕನ ಮನೆಯ ಹತ್ತಿರವೇ ಬಂದನು.

ಆಗ ಸತ್ಯ ಶರಣಸಂಪನ್ನರು ಗುರು ವೃಷಭೇಂದ್ರನನ್ನು ಕಂಡು ಎಂಟು ದಿವಸಗಳ ಪರಿಯಂತರ ನೀರಿನಲ್ಲಿ ಉಳಿದ ಈತನು ನಿಜವಾಗಿ ಮಹಾ ಮಹಿಮಾಶಾಲಿ ಎಂದು ಮೊದಲು ಅದೆಷ್ಟು ತಾತ್ಸಾರದಿಂದ ಕಂಡಿ ದ್ದರೋ ಅಷ್ಟೇ ಭಕ್ತಿ ವಿಶ್ವಾಸಗಳಿಂದ ಉಪಚಾರಕ್ಕೆ ಮುಂದಾದರು. ಅದರಲ್ಲಿ ಓರ್ವ ಭಕ್ತನು ತೊಯ್ದು ತುಂಡು ಬಟ್ಟೆಯನ್ನು ಬಿಡಿಸುವದಕ್ಕಾಗಿ ತನ್ನ ಮನೆಗೆ ಕರೆದುಕೊಂಡು ಹೋಗಿ ಮೊದಲಿನ ಹರಕು ಬಟ್ಟೆಬಿಡಿಸಿ ಹೊಸ ಅರಿವೆತೊಡಿಸಿ ಹರಕು ಬಟ್ಟೆಯನ್ನು ಸುಟ್ಟುಹಾಕಿ ಬಸವರಾಜನಿಗೆ ಎಣ್ಣೆ ಹಚ್ಚಿ ಬಿಸಿನೀರಿನಿಂದ ಎರೆದು ಉಣಿಸಿ ತಣಿಸಿ ಕೈಬಿಟ್ಟನು. ಆದರೆ ಬೀದಿಯಲ್ಲಿ ನೋಡಿದಾಗ ಮೊದಲಿನ ಹರಕು ಹಸಿ ಅರಿವೆಗಳೇ ಮೈಮೇಲೆ ಇರುವದನ್ನು ಕಂಡು ಭಕ್ತಜನರು ಬೆರಗಾಗಿ ಭಕ್ತಿಭಾವ ತನ್ನಿಂದ ತಾನೇ ಉದ್ಭವಿಸಿ, ಈತನು ಸಾಮಾನ್ಯ ಮನುಷ್ಯನಲ್ಲ, ಪ್ರತ್ಯಕ್ಷ ಶಿವಮಹಾದೇವ ಮುಕ್ಕಣ್ಣನೇ ಈತನೆಂದು ಸಾಷ್ಟಾಂಗ ನಮಸ್ಕಾರ ಗೈದು ಕೊಂಡಾಡ ಹತ್ತಿದರು.

೧೭ ನೇ ಸಂಧಿ

ಲಿಂಗಾನಂದ ಯೋಗ ಸಮಾಧಿಯಲ್ಲಿ ಕಾಲ ಕಳೆದದ್ದು

ಶಿಖಾಪುರದ ಮುಕ್ಕಲೇಶ್ವರ (ಮುಕ್ಕಣ್ಣ) ಶಿವದೇವಾಲಯವು ಊರ ಹೊರವಲಯದಲ್ಲಿ ದಾರಿಹೋಕರಿಗೂ ಹುಚ್ಚರಿಗೂ ನಿರಾಶ್ರಿತ ಅನಾಥರಿಗೂ ಆಶ್ರಯದ ಆಲಯವಾಗಿತ್ತು. ಆ ಲಿಂಗ ಮಂದಿರವು ಕಂಗೊಳಿಸುವದನ್ನು ಕಂಡ ಗುರು ವೃಷಭರಾಜನು ಪಟ್ಟಣಿಗರು ಮರುಳನೆಂದು ಮಣ್ಣೆರಚಿ ಅಟ್ಟಿದ ಮೇಲೆ ಮುಕ್ಕಲ್ಲ ಶಿವದೇವಾಲಯದಲ್ಲಿ ಬಂದು ದುಷ್ಟರ ಸಹವಾಸದಿಂದ ದೂರಾಗಿ ಲಿಂಗಾನಂದ ಸುಖದೊಡನೆ ಈಶ್ವರ ಧ್ಯಾನ ಸಮಾಧಿಯಲ್ಲಿರಲು ಈಶ್ವರನ ಕೋಪ ತಾಪದ ಶಕೆಯಲ್ಲಿ ಬೆಂದ ಸರ್ಪಗಳು ಗುರುವಿನ ಸಮ್ಮುಖದಲ್ಲಿ ಬಂದು ನಿಶ್ಚಿಂತೆಯಿಂದ ಹರಿದಾಡುತ್ತಿದ್ದವು.

ಆಗ ಶಿವನ ಪ್ರೇರಣೆಯೋ ಶ್ರೀಗುರುವಿನ ಪವಾಡವೋ ಅಥವಾ ದುಷ್ಟ ಜನರ ಕಾರ್ಯವೋ ಅಂತೂ ಆ ದೇವಾಲಯಕ್ಕೆ ಕಾರಣವಿಲ್ಲದೆ ಬೆಂಕಿ ಹತ್ತಿ ಇಡಿ ಮಂದಿರವೇ ಉರಿಯತೊಡಗಿತು. ಅಷ್ಟರಲ್ಲಿ ಪಟ್ಟಣದ ಅನೇಕ ಜನರು ಮರುಗುತ್ತ ಬಂದು ಅಯ್ಯೋ ಪಾಪ ದುಷ್ಟರು ಬಡಿದಟ್ಟಿದ ಬಳಿಕ ಆ ಹುಚ್ಚನು ಇಲ್ಲೇ ಈ ದೇವಾಲಯದಲ್ಲಿಯೇ ವಾಸವಾಗಿದ್ದನು. ಒಳಗೆ ಉರಿಯಲ್ಲಿ ಸುಟ್ಟುಹೋಗಿರಬೇಕೆಂದು ಸತ್ತೇಬಿಟ್ಟಿರಬೇಕೆಂದು ಭಾವಿಸಿ ಸುಟ್ಟುರಿದ ದೇವಾಲಯದ ವಳಗಡೆ ನೋಡುತ್ತಾರೆ. ಆಗ ಅಲ್ಲಿ ಬಂಗಾರದ ಬೊಂಬೆಯಂತೆ ಆನಂದ ಮೂರ್ತಿ ಗುರುದೇವನು ಕುಳಿತಿರುವದನ್ನು ಕಂಡು ಸಜ್ಜನರೆನಿಸಿದ ಪಂಡಿತನು ಸಮೀಪಕ್ಕೆ ಹೋಗುತ್ತ ಅಯ್ಯಾ ಇಷ್ಟೊಂದು ಭಯಂಕರ ದಾವಾನಲಕ್ಕೆ ಭಯಪಡದೆ ಕುಳಿತಿರುವ ಈತನು ಸಾಮಾನ್ಯನಲ್ಲ ಶಿವಯೋಗ ಸಮಾಧಿಯಲ್ಲಿದ್ದ ಅವನ ಸಮೀಪ ಸುಳಿಯುವ ಶಕ್ತಿ ಅಗ್ನಿ ದೇವನಿಗೆ ಅದು ಹೇಗೆ ಬಂದಿತು ಎಂದು ನಮಸ್ಕರಿಸಿ ಗುರುವೇ ಪರಶಿವ ಶಕ್ತಿ ಸ್ವರೂಪನೆ ಎಂದು ಗುರುನಾಮಸ್ಮರಣೆ ಗೈಯ್ಯುಹತ್ತಿದನು. ಸರ್ಪ ಸಮೂಹವು ಆನಂದದಿಂದ ತಲೆಹಾಕಿ ಆಡುತ್ತಿದ್ದವು. ಸುಟ್ಟು ಭಸ್ಮವಾದ

ಗುಡಿಯಲ್ಲಿಯೇ ಉಳಿದುಕೊಂಡ ಗುರುವೃಷಭೇಷನು ಲಿಂಗಧ್ಯಾನದಲ್ಲಿರುವಾಗ ಇಲಿಯೊಂದು ಬಂದು ಅಂಗೈಯಲ್ಲಿ ಮುಹೂರ್ತಮಾಡಿದ ಲಿಂಗವನ್ನು ಒಯ್ದು ಬಿಲದಲ್ಲಿಟ್ಟುಕೊಂಡಿತು. ಇದೇ ರೀತಿ ದಿನಮೂರು ಕಳೆದರು ಗುರುಗಳು ಅಲ್ಲಿಂದ ಕದಲಲಿಲ್ಲ, ಕುಳಿತವರು ಹಾಗೇ ಕುಳಿತರು. ತರುವಾಯು ಭಕ್ತ ಶಿರೋಮಣಿ ಸೋಮಲಿಂಗಪ್ಪನು ಬಂದು ಪ್ರಾಣವಿಲ್ಲದಂತೆ ಕುಳಿತು ಕೊಂಡಿರುವ ಗುರುಗಳ ಸ್ಥಿತಿಯನ್ನು ಕಂಡು ಪರೀಕ್ಷೆಮಾಡುವದಕ್ಕಾಗಿ ಗುರುದೇವಾ ಇಂದು ತಾವು ನನ್ನ ಮನೆಗೆ ದಯಮಾಡಿಸಬೇಕೆಂದು ಕರಜೋಡಿಸಿದನು.

ಅದಕ್ಕೆ ಗುರುಗಳು ಏನಯ್ಯಾ ಭಕ್ತಶ್ರೇಷ್ಠನೆ ನಿತ್ಯವು ನಮ್ಮ ಸಮ್ಮು ಖದಲ್ಲಿ ಸುಳಿದಾಡುತ್ತಿದ್ದ ಚಿಟ್ಟಿಗಳು (ಇಲಿಯು) ಮೂರು ದಿನವಾಯಿತು ಇತ್ತ ಸುಳಿಯದಾಗಿದ್ದಾನೆ ಎಂದು ಹೊದರಿನತ್ತ ಕೈಮಾಡಿದರು.

ಆಗ ಆ ಭಕ್ತನು ಸಮಸ್ಯೆಗೊಳಗಾದನು. ಗುರುಗಳ ಸಂಜ್ಞೆ ಮೋಜಿನ ದಾಯಿತು. ಕೊರಳಲ್ಲಿ ಲಿಂಗವಿಲ್ಲ ಬಿಲದತ್ತ ಕೈ ಮಾಡುವದೇಕೆ ಎಂದು ಯೋಚಿಸಿ ಕೊನೆಗೆ ಆ ಜಾಣ ಭಕ್ತನು ಅರ್ಥಮಾಡಿಕೊಂಡವನಂತೆ ಇಲಿಯ ಬಿಲವನ್ನು ಅಗಿದು ಒಳಗಡೆ ಇದ್ದ ಗುರುಗಳ ಲಿಂಗವನ್ನು ತಂದು ಕೊಟ್ಟನು.

ಆಗ ಆ ಲಿಂಗಮೂರ್ತಿಯನ್ನು ಅಂಗೈಯಲ್ಲಿ ಪಿಡಿದ ಗುರುಗಳು ವಳಿತಾಗಿ ಒಮ್ಮೆ ನಕ್ಕು ಲಿಂಗಮೂರ್ತಿ ಶಿವನೇ ಇನ್ನೂ ನಿನ್ನ ಚೇಷ್ಟಾಗುಣ ಬಿಟ್ಟಿಲ್ಲವೇ ನಿಂಬೆಕ್ಕ ಸತ್ಯಕ್ಕ ನುಲಿಯಚಂದಯ್ಯರಲ್ಲದೇ ಇನ್ನೂ ಶರಣ ಶರಣಿಯರು ಸಾಕಷ್ಟು ಸಾರೆ ಸರಿಯಾಗಿ ಬುದ್ದಿಗಲಿಸಿದ್ದಾರೆ. ನೀನು ಎಂದರೆ ನಿನಗಿಂತಲೂ ಒಂದು ಪಾಲು ಹೆಚ್ಚಿನವರು ನಿನ್ನ ಭಕ್ತರು ಸೇರಿಗೆ ಸವ್ವಾ ಸೇರು ಎಂದು ಚೇಷ್ಟೆಯ ನುಡಿಗಳಿಂದ ಲಿಂಗಕ್ಕೆ ಚೇಷ್ಟೆಮಾಡುವದನ್ನು ಕಂಡು ಶಿವಗಣರು ಅತ್ಯಾನಂದ ಉಳ್ಳವರಾಗಿ ಈ ಶಿವಯೋಗಿ ಸಾಮ್ರಾಟನ ಲೀಲೆ ಲಿಂಗಮಯವಾಗಿದೆ ಎಂದು ಆಕಾಶ ಅದರುವಂತೆ ಜಯಗೋಷ ಗೈದರು.

ಹರಿದುಹೋದ ಸೆರಗು ಬೆಳೆದುಬಂದ ಮಹಾತ್ಮೆ

ಶೈವಾಚಾರ ಪದ್ಧತಿಯಲ್ಲಿ ನಿಸ್ಸೀಮ ಎನಿಸಿದ ಗುರು ಬಸವರಾಜನ ಮಹಿಮೆ ಅಗಾಧವೆಂದು ಅರಿತ ಭಕ್ತಜನತೆ ಅವನ ಲೀಲಾ ವಿನೋದ ವಿಕಾಸಕ್ಕೆ ಬೆರಗಾಗಿ ಬೆರಳುಕಚ್ಚುತ್ತಿದ್ದರು. ಆದರೆ ಬರುಬರುತ್ತ ಗುರು ವೃಷಭರಾಜನು ಅಸಹ್ಯ ವರ್ತನೆಯಿಂದ ಶಿಖಾಪುರದ ಮುಖ್ಯ ಬೀದಿಗಳಲ್ಲಿ ತಿರುಗುವದು, ಬೆತ್ತಲೆಯಾಗಿ ಬಲ್ಲಂತೆ ಸ್ತ್ರೀ ಸಮೂಹದಲ್ಲಿ ನಿಂತು ಕುಣಿದು ನಲಿಯುವದು, ಆಕಾರತಪ್ಪಿ ಅರಚುವದು ಸುರುವಾಯಿತು.

ಆಗ ಅನೇಕ ಜನ ವಾರಿಜಾಕ್ಷಿ ಹೆಂಗಳೆಯರು ಮೇಲ್ ಉಪಚಾರದ ಮಾತಿಗೆಂದು ತಮ್ಮ ನಿತ್ಯ ಕೊಳಕನ್ನು ಮುಚ್ಚಿಕೊಂಡು, ಈ ಹುಚ್ಚನಿಗೆ ಬೇರೆ ಸ್ಥಳವಿಲ್ಲವೇ ? ಈ ರೀತಿ ಬತ್ತಲೆಯಾಗಿ ಹೆಂಗಳೆಯರೆದುರು ಬರಲು ನಾಚಿಕೆ ಬರಬಾರದೆ ಎಂದು ಹೀಯಾಳಿಸಿ, ಭೂತರೂಪದಲ್ಲಿ ದಿಗಂಬರನಾಗಿ ಕತ್ತಲೆಯಲ್ಲಿ ಬಂದರೆ ಕಂಡುವರು ಅಂಜಲಾರರೇ ಎಂದು ಮೂದಲಿಸಿ ಮುಂದಾಗಲು ಬಸವರಾಜನು ಅವರ ಈ ನಡಾವಳಿಯನ್ನು ಅಲ್ಲಗಳೆಯುತ್ತ ಮಾರ್ಗದ ಬದಿಯಲ್ಲಿ ಮತ್ತಷ್ಟು ದೂರಹಾಯ್ದು ಹೋಗಹತ್ತಿದನು.

ಅಷ್ಟರಲ್ಲಿ ಸೋಮವ್ವನೆಂಬ ಶಿವಭಕ್ತ ಸಂಪನ್ನಳು ಅಪ್ಪ ಬಸವರಾಜರನ್ನು ಬೈದುಹೋಗುವ ಹೆಂಗಳೆಯರನ್ನು ಹೀಯಾಳಿಸುತ್ತ, ನಿಮ್ಮೊಳಗಣ ಕಾಮವೃತ್ತಿಯನ್ನು ಹಿಡಿತದಲ್ಲಿ ಹಿಡಿದು ನಡೆದುನೋಡುವದು ಉಚಿತವಲ್ಲವೇ; ಅನ್ಯರನ್ನು ಹಿಯಾಳಿಸಿ ಪಾಪವನ್ನು ಹೆಚ್ಚಿಸಿಕೊಳ್ಳುವ ನೀವೆಂತಹ ಗುಣವಂತ ಸ್ತ್ರೀಯರೆಂದು ಗುರು ಬಸವರಾಜನಿಗೆ ಭಯಭಕ್ತಿಯಲ್ಲಿ ನಮಿಸುತ್ತಿರಲು, ಕಾಮಬುದ್ಧಿಯ ಕಿಡಿಗೇಡಿ ಹೆಂಗಸೊಬ್ಬಳು ಮುಂದಾಗಿ ಸೋಮವ್ವನನ್ನು ಕೆಣಕುತ್ತ ಲೋಕದಲ್ಲಿ ಕಾಮವಿಕಾರವನ್ನರಿಯದ ಮಹಾ ಜಂಗಮಭಕ್ತೆ ನೀನಾದರ ನೀನುಟ್ಟಿರುವ ಸೀರೆಯ ಸೆರಗು ಹರಿದು ಹುಚ್ಚು ನೀತನ ಮರ್ಯಾದೆಯ ಮರ್ಮಸ್ಥಾನ ಮುಚ್ಚಲು ಕೌಪೀನ ಮಾಡಿ ಉಡಿಸೇ ಎಂದು ಅಣುಕದ ನುಡಿಗಳನ್ನಾಡಿದಳು.

ಅವಳ ಅಣುಕದ ನುಡಿಗೆ ಸೋಮವ್ವ ಬೆದರದೆ ಸೆರಗನ್ನು ಹರಿದು ಕೌಪೀನ ಮಾಡಿ ಹಾಕಿದಳು. ಮತ್ತು ಗುರುಬಸವರಾಜನನ್ನು ಭಕ್ತಿಪೂರ್ವಕ ನಮಿಸಿ ಮನೆಗೆ ಬಂದಳು.

ಅತ್ತ ಮೊದಲಿಸಿದ ಮೊಳ ಬುದ್ಧಿಯ ಹೆಂಗಸರು ಸೋಮವ್ವನ ಗಂಡನನ್ನು ಕಂಡು, ಇಲ್ಲಸಲ್ಲದ ಅಪವಾದವುಳ್ಳ ಶಬ್ದಗಳಿಂದ ಅವನ ತಲೆ ಕೆಡಿಸಿ, ಅವಳ ಬಗ್ಗೆ ಅನುಮಾನ ಹುಟ್ಟುವಂತೆ ಮಾಡಿದರು ಅಷ್ಟರಲ್ಲಿ ಸೋಮವ್ವ ಮನೆಗೆ ಬರಲು, ಪತಿಯು ಉಗ್ರರೂಪ ತಾಳಿ ಶೀರಿಯ ಗತಿಯನ್ನು ಕೇಳುವ ಮೊದಲೇ ಗುರುಬಸವರಾಜನ ಬಳಿಗೆ ಬಂದು ತನ್ನ ಹೆಂಡತಿಯು ಶೀರೆಯ ಸೆರಗಿನಿಂದ ಕೌಪೀನವನ್ನು ತೊಡಿಸಿರುವದು ನಿಜವೆಂದು ನಂಬಿಕೆಯಾದ ಬಳಿಕಂತೂ ರುದ್ರ ಮಹಾರುದ್ರನಂತೆ ಕೈಯಲ್ಲಿ ಹರಿತವಾದ ಕುಡಗೋಲು ಹಿಡಿದು, ಸೋಮವ್ವನ ಕುತ್ತಿಗೆಯನ್ನು ಬಾಗಿಸುತ್ತ ನಿಜ ಹೇಳು ಆ ನಿನ್ನ ವಿಟನಿಗೆ ಸೆರಗು ಹರಿದು ಕೌಪೀನವನ್ನು ತೊಡಿಸಿದ್ದು ಸತ್ಯವಲ್ಲವೇ ಎಂದು ಆರ್ಭಟಿಸುತ್ತ ಹೆಂಡತಿಯ ಸೆರಗು ನೋಡುತ್ತಾನೆ. ಮೇಲ್‌ಪದರು ಸರಿಇದ್ದರೂ ಸೀರೆಯನ್ನು ಬಿಚ್ಚಲು ಒತ್ತಾಯಪಡಿಸಿದಾಗ ಸೋಮವ್ವನು ಸ್ವಾಮಿ ಕುಟಿಲ ಸ್ತ್ರೀಯರ ಮಾತು ಕೇಳಿ, ಹೆಂಡತಿಯ ಮಾನಭಂಗಗೊಳಿಸುವದು ಸರಿಯೇ ಎಂದು ಬೇಡಿಕೊಂಡರೂ ಕೇಳದೆ ತಾನೇ ಸೀರೆಯನ್ನು ಬಿಚ್ಚಿ ಎಳೆದಷ್ಟು ಬೆಳೆಯುತ್ತ, ಸೋಮವ್ವ ಉಟ್ಟಸೀರೆ ಮುಗಿಯಲಿಲ್ಲ. ಬಳಿಕ ಕೊನೆಯಂಚು ತಿರುಗಿಸಿ ನೋಡಿದಾಗ ನಾಚಿಕೆಯೆಂಬ ನಾಲ್ಕು ಏಟು ಕೊಟ್ಟಂತೆ ಹರಿಯದೇ ಮೊದಲಿನಂತಿರುವ ಸೆರಗು ಅತ್ತ ಕೌಪಿನವೂ ನಿಜ, ಇತ್ತ ಶೀರೆಯ ಸೆರಗು ಮೊದಲಿನಂತೆ ಇರುವದು ನಿಜ, ಅಲ್ಲದೆ ಎಳೆದ ಸೀರೆ ಬೆಳೆಯುತ್ತ ಹೋದದ್ದು ನಿಜ, ಆಗ ಸೋಮವ್ವನ ಗಂಡನಿಗೆ ಸುಬುದ್ಧಿ ಸಂಚಾರವಾಗಿ, ಚಾಡಿಗಾರ್ತಿಯರ ಮಾತಿನಿಂದ ದುಡುಕಿ ಮಹಿಮಾ ಪುರುಷನನ್ನು ಅರಿಯದೇ ನನ್ನ ಯಶೋ ಜೀವನದ ಹಾನಿಯನ್ನು ನಾನೇ ಬಯಸಿದೆನಲ್ಲಾ ಮಹಾಸಾಧ್ವಿ ಶಿವಭಕ್ತೆ, ಶೀಲ ಸದ್ಗುಣ ಮಣಿ ಸತಿಯಳಿಗೆ ಅಲ್ಲದೆ ಮಾತುಗಳನ್ನಾಡಿ, ಅವಳನ್ನು ಪರೀಕ್ಷಿಸಿ, ಮಾನಭಂಗಗೊಳಿಸಿ, ಮರ್ಯಾದೆಯ ಮಹಾವಸ್ತ್ರ ಸೀರೆಯನ್ನು ಬಿಚ್ಚಿ ಪರೀಕ್ಷೆಯಲ್ಲಿ

ಪರಾಜಯ ಹೊಂದಿ ಪಾಪವನ್ನು ಪದರಿನಲ್ಲಿ ಕಟ್ಟಿಕೊಂಡಂತಾಯಿತಲ್ಲ, ಶಿವ ಸ್ವರೂಪಿಗಳಾದ ಯೋಗೀಂದ್ರ ಬಸವರಾಜ ಗುರುಮೂರ್ತಿಗಳನ್ನು ಸಾಮಾನ್ಯ ಮನುಷ್ಯರಂತೆ ತಿಳಿದು ನಡೆದುಕೊಂಡದ್ದು ಪಾಪವನ್ನು, ಅಪರಾಧವನ್ನು ಆಮಂತ್ರಿಸಿದಂತಾಯಿತು.

ಇದೆಲ್ಲಕ್ಕೂ ಮೂಲಕಾರಣ ಚಾಡಿಯ ಸಿದ್ಧಮಂತ್ರವು ಚುಚ್ಚು ಮದ್ದಾಗಿ ನನ್ನ ಮೆದುಳನ್ನು ಕೆದಕಿದ್ದೆ ಕಾರಣವಲ್ಲವೇ ? ಹೌದು ಇಷ್ಟಾದರೂ ನನ್ನ ಹೆಂಡತಿ ಪತಿಭಕ್ತಿಯಿಂದ ಶ್ರೀಗುರು ಬಸವರಾಜರನ್ನು ಅನನ್ಯ ಭಕ್ತಿಯಿಂದ ಧ್ಯಾನಿಸಿ, ಸ್ಥಿರ ಮನಸ್ಸಿನಿಂದ ಹೇಳಿದ ನುಡಿಯನ್ನು ಕೇಳದೇ ಕೆಟ್ಟೆನಲ್ಲಾ ಎಂದು ದುಃಖಿಸುತ್ತ ಸತಿ ಸೋಮವ್ವನತ್ತ ಹೊರಳಿ, ಸತಿ ಶಿರೋಮಣಿಯಳೇ ನಾನು ಕಡುಪಾಪಿ, ಮಹಾಮಹಿಮರಾದವರ ಇವರನ್ನು ಅರಿಯದಲೇ ಅವಿವೇಕಿಯಂತೆ ವರ್ತಿಸಿದೆ, ಹುಚ್ಚನಂತೆ ಕಾಣುವ ಆತನು ಸಾಮಾನ್ಯ ಮಾನವನಲ್ಲವೆಂದು ಮನಗಂಡು ನಿಜಹುಚ್ಚನು ನಾನಾದೆ ಎಂದು ಹಲುಬಹತ್ತಿದ್ದಲ್ಲದೇ ಹೆಂಡತಿಯಲ್ಲಿ ಕ್ಷಮೆಕೇಳುತ್ತ ನಿನ್ನ ಕರುಣಾ ದೃಷ್ಟಿಯಂ ಬೀರಿ ಗುರುಕಾರುಣ್ಯವದು ದೊರೆಯುವಂತೆ ಮಾಡು ಎಂದು ಅಂಗಲಾಚಿ ಬೇಡಿಕೊಳ್ಳಹತ್ತಿದನು.

ಬಳಿಕ ಸೋಮವ್ವನು ಗಂಡನನ್ನು ಸಮಾಧಾನ ಪಡಿಸುತ್ತ ಗುರುವಿನ ಕಡೆಗೆ ಕರೆದುಕೊಂಡು ಹೊರಟು ಬಂದಳು. ಶ್ರೀಗುರುವೇ, ಪರಮ ಪುರುಷ ಚರಿತಾತ್ಮ, ಚನ್ನ ಚಲುವ ಎನ್ನಯ್ಯ ಗುರುಬಸವರಾಜ ತ್ರಾಹಿ, ತ್ರಾಹಿ, ತ್ರಾಹಿ ಅಜ್ಞರೆಸಗಿದ ತಪ್ಪನ್ನು ಮನ್ನಿಸುವ ಕೃಪೆಯಾಗಬೇಕೆಂದು ಬೇಡಿಕೊಳ್ಳ ಹತ್ತಿದರು.

ಆಗ ಕೆಂಜೆಡೆಯನ ವರಪುತ್ರ ಬಸವರಾಜ ಗುರುವರನು ಹುಚ್ಚನಂತೆ ತೋರುತ್ತಿದ್ದರೂ ಸಂಶಯದ ಹುಚ್ಚಿನಲ್ಲಿ, ನಂಜಿನ ಅಂಜಿಕೆಯಿಂದ ಬಂದ ಸೋಮವ್ವನ ಸತಿಯ ಕಳಾಹೀನ ಮುಖವನ್ನು ಕಂಡು ಮರುಕದಿಂದ ಏಕಯ್ಯಾ ಚಾಡಿಗಾರ್ತಿಯರ ಮಾತು ನಂಬಿ ಸುಗುಣಿ ಸಾಧ್ವಿ ಶಿವಭಕ್ತೆಯನ್ನು ಹಿಂಸೆಗೊಳಪಡಿಸಿದಿಯಾ ಎಂದು ಗಹಗಹಿಸಿ ನಕ್ಕು ಹುಚ್ಚನ ಹುಸಿ ಕೋಪ ತೋರಿದರು.

ಆಗ ಪತಿ–ಪತ್ನಿಯರಿರ್ವರು, ಗುರು ವೃಷಭರಾಜನಡಿಗೆರಗಿ, ಕರ ಜೋಡಿಸಿ ಪರಿ ಪರಿಯಿಂದ ಸ್ತುತಿಗೈದು ಶಿವಶಂಕರನ ಪ್ರತಿನಿಧಿಯಾಗಿ, ಜಗವ ಪೊರೆಯ ಬಂದ ಪರಂಧಾಮ ಗುರು ವೃಷಭೇಂದ್ರ, ಅಜ್ಞ ನಾ ಗೈದ ಅಪರಾಧವಂ ಒಪ್ಪಿದೊಡೆ, ಕ್ಷಮೆ ತಮ್ಮ ಗುಣವ ಧರ್ಮವೆನಿಸಲಾರದೆ ಎಂದು ದೀನ ವದನನಾದ ಸೋಮವ್ವ ವ ಗಂಡನು ಮತ್ತೊಮ್ಮೆ ಸಾಷ್ಟಾಂಗ ಗೈದು ರವಿಯ ಶ್ರೇಷ್ಠತೆಯನ್ನರಿಯದ ಗೂಗೆಯಂತೆಯು, ಹಂಸರಾಜ ಸಮಾನ ವೆಂಬಂತೆ ಶಡವಿನಿಂದ ಮುಂದಾದ ಬಡಪಕ್ಷಿಗಳಂತೆಯು, ಹೊಟ್ಟೆ ಉಬ್ಬಿಸಿ ಕೊಂಡು ಕೋರೆ ದವಡೆಯಿಂದ ಬಂದ ಹಂದಿಯು ಪಟ್ಟದಾನೆಯ ಯೋಗ್ಯತೆ ಪಡೆಯಲು ಹವಣಿಸಿದಂತೆ ನನ್ನ ಸ್ಥಿತಿಯಾಯಿತು. ತಮ್ಮ ಘನತೆಯನ್ನರಿಯ ಬಲ್ಲನೇ ಈ ಮೂಢ ಮಾನವನು ಒಬ್ಬಾರೆ, ಕೃಪಾ ಮೂರ್ತಿಯೇ ಅಜ್ಞ ಗೈದ ಅಪರಾಧವನ್ನು ಕ್ಷಮಿಸಬೇಕೆಂದನು .

ಬಳಿಕ, ಗುರು ಬಸವರಾಜನು ಸತಿ–ಪತಿಗಳನ್ನು ಆದರದಿಂದ ಕಾಣುತ್ತ ಕ್ಷಮೆಯ ಅಭಯದಾನ ನೀಡಿ ಹೊರಟಿರಲು, ಗುರುಗಳ ಮಹಿಮೆಯಿಂದ ಅನೇಕ ಶಿವಶರಣರ ಬಳಗವು ಮುಂದಾಗಿ ಕರಜೋಡಿಸಿ ಗುರುದೇವಾ ಹಿಂದಕ್ಕೆ ಕರಿಯೂರ ಸತ್ಯಸಂಗನೆಂಬ ಶಿವಭಕ್ತನ ಹೆಂಡತಿಯು ತಮ್ಮಲ್ಲಿ ಅಡವಿಟ್ಟ ಸೀರೆಯನ್ನು ಉಟ್ಟುಕೊಂಡು ಜಂಗಮಾರ್ಯರೊಬ್ಬರ ಸೇವೆ ಗೈಯ್ಯು ತ್ತಿರಲು ಆ ಜಂಗಮನು ಉಟ್ಟ ಸೀರೆಯ ಸೆರಗನ್ನು ಗುರುದಕ್ಷಿಣೆಯಾಗ ಕೊಡಲು ಕೇಳಿದಾಗ ಇನ್ನೊಬ್ಬರದೆಂಬ ಭಯವೇ ಬಸುಟ ನಿಶ್ಚಲಮನಸ್ಸಿನಿಂದ ಸೆರಗನ್ನು ಜಂಗಮನಿಗೆ ಕೊಟ್ಟು ಕಳುಹಿದಳು, ಮುಂದೆ ಸೀರೆಯನ್ನು ಅಡವಿಟ್ಟವನು ಬಂದು ಹಣ ಪಡೆದು ಸೀರೆ ಕೊಡಬೇಕೆಂದು ಕೇಳಿದಾಗ ಮಹಾ ಶಿವಶರಣ ಭಕ್ತೆಯಾದ ಸತ್ಯಸಂಗನ ಹೆಂಡತಿಯು ಶಿವನ ಮೇಲೆ ಭಾರ ಹಾಕಿ, ಶಿವಶರಣ ಗುಣಮಣಿಗಳ ಪಾದ ತೊಳೆದ ತೀರ್ಥದಿಂದ ಸೀರೆಯ ಸೆರಗು ಸವರಿದಾಗ ಸೀರೆಯ ಸೆರಗಂಚು ಮೊದಲಿನಂತಾಯಿತು. ಆಗ ಪತಿಪತ್ನಿಯರಿರ್ವರು ಸೀರೆಯ ವಡೆಯನಿಗೆ ಸೀರೆಯನ್ನು ಒಪ್ಪಿಸಿ ಕೀರ್ತಿ ಪಡೆದರು ಎಂಬ ಕಥೆಯನ್ನು ಕೇಳಿದ್ದೆವು, ಈಗ ಪ್ರತ್ಯಕ್ಷ ಕಂಡು ಆನಂದ ಐಶ್ವರ್ಯಗಳನ್ನು ಹೊಂದುವ ಸಂತಸ ಸುಯೋಗ ಪ್ರಾಪ್ತವಾಯಿತು ಎಂದು

ಮಹಾ ಮಹಿಮನಾದ ಗುರು ವೃಷಭೇಂದ್ರನ ಪಾದಗಳಿಗೆ ವಂದಿಸಿ ನಿತ್ಯ ಅವರ ಗುಣಗಾನ್ನಗೈಯ್ಯುವವರಾದರು.

ಬರುಬರುತ್ತ ಗುರುಬಸವರಾಜರ ಮಹಿಮೆಯು ದಶದಿಕ್ಕುಗಳಲ್ಲಿ ಪಸರಿಸಿ ಶಿವಗಣರೆನಿಸಿದ ಸಂಪನ್ನ ಸಜ್ಜನ ಸತ್ಪುರುಷ ಸದ್ಗುಣಶಾಲಿಗಳ ಬಳಗವು ಬಂದು ಸಿಖಾಪುರವನ್ನು ಸೇರಿ ಗುರು ಸನ್ನಿಧಿಯಲ್ಲಿ ವಿರಾಜಮಾನ ರಾದರು. ರಾಜವಂಶಜರು ಘನಪಾಂಡಿತ್ಯ ಪ್ರಭೆಯುಳ್ಳವರು ಸುಸ್ವಭಾವದ ಮುಮುಕ್ಷುಗಳು ಮಹೇಶ್ವರ ಮಂಡಳಿಯ ಗುರುಬಸವರಾಜ ಕೀರ್ತಿ ಸಭೆಯನ್ನು ಕೇಳಿ ನಾಲ್ಕು ನಿಟ್ಟಿನ ನಾಡ ಗರ್ಭವನ್ನು ಶೀಳಿ ಸುಳಿದು ನುಸುಳಿ ಬಂದರು.

ಕೋಲ ಶಾಂತೇಶ, ಭಿಕ್ಷದ ಮಹಾಂತೇಶ, ಯರಗಂಬಳಿಯ ಗುರುದೇವ ಮುನಿ, ಪೋಟಿಯ ಮಹೇಶ, ಮದ್ದಾನೆಯ ಮಹಾ ಸಿದ್ದಪತಿ, ಶಾವಲಗಿ, ಶೂಲಪಾಣೀಶ, ನಾಟ್ಯ ನಮಃ ಶಿವಾಯ, ಚನ್ನಂಜೇಶ್ವರಾಚಾರ್ಯ, ಕಿನ್ನರಿಯ ಕೆಂಚವೀರಯತಿ, ಜಿತಕಾಲ ಬರಿಗಲ್ಲ ದೇವ, ಸಿದ್ದಪತಿ ಸಿದ್ದಲಿಂಗೇಶ, ಗುರುಲಿಂಗ ಯತಿವರ, ಸಮಕಾಲ ಭೈರದೇವ, ಮುಂತಾದ ಲಿಂಗಪ್ರೇಮಿ ಶ್ರೇಷ್ಠರು ಸಾಧಕ ಶಿವಾಚಾರ್ಯ ಶಿವಗಣಾಧಿಪತಿಗಳು ಪ್ರೀತಿ ವಿಶ್ವಾಸಗಳಿಂದ ಗುರು ಸನ್ನಿಧಿಗೆ ಬಂದು ಗುರು ವೃಷಭೇಂದ್ರನ ದಿವ್ಯ ತೇಜಸ್ಸು ಲಿಂಗಾನಂದ ಸಮರಸಸ್ವಭಾವಕ್ಕೆ ಬೆರಗಾಗಿ ಹೆಮ್ಮೆಯಿಂದ ನಮಸ್ಕರಿಸಿ ಸತತವಾಗಿ ಅವರ ಸೇವಾಭಾಗ್ಯವನ್ನು ಹೊಂದ ಬಯಸಿ ಅವರ ಅಪ್ಪಣೆ ಪಡೆದು ಉಳಿದುಕೊಂಡರು. ಇನ್ನು ಕೆಲವು ಈಶ್ವರ ಭಕ್ತರು ಗುರುಗಳಲ್ಲಿ ತಮ್ಮ ಅಭಿಲಾಷೆಯನ್ನು ತಿಳಿಸಿ ಇಚ್ಚಿತ ಫಲಗಳನ್ನು ಪಡೆದು ಸಿಖಾಪುರವನ್ನು (ಕೊಟ್ಟೂರನ್ನು) ಶಿವಪುರ ವನ್ನಾಗಿ ಮಾಡಿ ಸುಖವಾಗಿದ್ದರು. ದಿನ ನಿತ್ಯವೂ ಒಬ್ಬೊಬ್ಬ ಶಿವಭಕ್ತರಿಂದ ಶಿವಗಣಾರಾಧನೆ ಸಾಗುವ ವ್ಯವಸ್ಥೆಯಾಯಿತು, ಮುಕ್ಕಲ್ಲ ಶಿವಾಲಯವು ಶಿವಭಕ್ತ ಶಿವಗಣ ಬಳಗದಿಂದ ನಿತ್ಯ ನಿರ್ಮಲವಾಗಿ ಕಂಗೊಳಿಸಿ ಶ್ರೀ ಗುರು ಬಸವರಾಜೇಂದ್ರರ ಪಾಲಿಗೆ ಆನಂದದ ಆಗರವಾಯಿತು.

ಕುರುಡನಿಗೆ ಕಣ್ಣು ಕೊಟ್ಟ ಪರಿಯು [ರೀತಿಯು]

ಸಿಖಾಪುರದ ಮುಕ್ಕಲ್ಲ ಶಿವಮಂದಿರವು ಗುರುಬಸವರಾಜರ ಇರುವಿಕೆಯಿಂದ ಪಾವನವಾಯಿತು, ಪವಿತ್ರವಾಯಿತು. ಅಷ್ಟೇ ಏಕೆ ಸಿಖಾಪುರದ ಸುತ್ತಲಿನ ನಾಡೇ ಪಾವನತೆಯ ಪಾವಿತ್ರತೆಯನ್ನು ಹೊಂದಿ ಸಂತಸದಿಂದ ಭಕ್ತರ ಬೀಡು, ಶರಣರ ಸಿವುಡು, ಸದ್ಗುರುನಾಥ ಗುರುಬಸವರಾಜರಿಂದ ಕೈಲಾಸ ಸದನವೆನಿಸಿ ರಾರಾಜಿಸುವದಾಯಿತು.

ಹೀಗಿರಲು ಗುರು ವೃಷಭೇಂದ್ರನ ಕೀರ್ತಿಪ್ರಭಯನ್ನು ಕೇಳಿದ ಓರ್ವ ಬಡವ ಅಷ್ಟೇ ಶಿವಭಕ್ತ, ಇಂತಹ ಅನಾಥನಿಗೆ ಹುಟ್ಟು ಕುರುಡುತನ ಮುಸುಕಿ ಜಗವೆಂದರೇನು ಎಂಬುವದನ್ನು ಕಾಣದಾಗಿ ಕಂಗೆಟ್ಟು ಕಂಗಾಲ ಸ್ಥಿತಿಯಲ್ಲಿ ಗುರುಗಳ ಸನ್ನಿಧಿಗೆ ಬಂದು, ತಾನು ಕುರುಡ, ತನಗೆರಡು ಕಣ್ಣು ಕೊಟ್ಟು ಶಿವನ ಸೇವಾಕಾರ್ಯ, ಗುರುಸೇವಾಭಾಗ್ಯ ಲಭಿಸುವಂತಾಗಬೇಕೆಂದು ಸನ್ನಿಧಾನದಲ್ಲಿ ಸಾಷ್ಟಾಂಗ ಹಾಕಿ ಮೇಲೆದ್ದು ಕರಜೋಡಿಸಿ ನಿಂತುಕೊಂಡನು.

ಆಗ ಗುರುಬಸವರಾಜರು ನಸುನಕ್ಕು, ಹುಸಿಮುನಿಸು ತಿನಿಸುವ ರೀತಿಯಲ್ಲಿ, ಏನಯ್ಯಾ ಕಣ್ಣು, ಕಾಲು ಕೈಕೊಟ್ಟು ರಕ್ಷಿಸಲು ನಮಗೇನು ನಾಡಾಳುವ ಅಧಿಕಾರ ಉಂಟೋ ಅಥವಾ ಪ್ರಜರಿಂದ ಪಡೆದ ಅನೇಕ ತರದ ವಸ್ತುಸಾಮುಗ್ರಿಗಳುಂಟೋ ? ಸುಮ್ಮನೇ ಈ ಶಿವಾಲಯದಲ್ಲಿ ಬಿದ್ದಿರುವ ನಾವೇನು ನಿನಗೆ ಕೊಡುವ ಸಾಧ್ಯ .ಹೋಗು ಊರನಾಳು ದೊರೆ ದಾಯಾದಿ ನಾಯಕನು ಧರ್ಮಿಷ್ಟನಿದ್ದಾನೆ. ಅವನ ಬಳಿಗೆ ಹೋಗಿ ನನಗೆ ಕಣ್ಣುಗಳನ್ನು ಕೊಡು ಎಂದು ಕೇಳು, ಬೇಕಾದರೆ ನಮ್ಮಮೇಲೆ ಹೇಳು ಎಂದು ದಾಯಾದಿನಾಯಕರ ಬಳಿಗೆ ಕಳುಹಿಸಿದರು.

ಗುರುಗಳ ಅಪ್ಪಣೆಯ ಪ್ರಕಾರ ರಾಜಸನ್ನಿಧಿಗೆ ಬಂದ ಕುರುಡನು ಗುರುಗಳು ತಿಳುಹಿಸಿದ ಪ್ರಕಾರ ಸರ್ವವಿಷಯುವನ್ನು ಸೇವಕರ ಎದುರು ಹೇಳಿ, ಅವರ ಅಪ್ಪಣೆಯಂತೆ ನನ್ನ ಕಣ್ಣು ದೊರೆ ಕೊಡಲೇಬೇಕೆಂದು ಹಟ ಹಿಡಿದನು. ಆಗ ಸೇವಕರು ಈತನ ಹಟವಾದಿತನಕ್ಕೆ ಬೇಸತ್ತು ಹೊರ

ಡಬ್ಬುವ ಸಾಹಸದಿಂದ ದೂಡಿದರು. ಆಗ ನಾಯಕರಿಗೆ ಅದೇನು ತಿಳಿಯಿತೋ ಸೇವಕರನ್ನು ಬೆದರಿಸಿ, ಕುರುಡನನ್ನ ಕರೆದು, ಸಮೀಪದಲ್ಲಿ ಕೂಡ್ರಿಸಿಕೊಂಡನು.

ಬಳಿಕ ಕುರುಡನನ್ನು ಸಂತೈಸುತ್ತ, ಅಯ್ಯಾ ಸುಜ್ಞಾನಿಯಾ ನೀನು ಅಜ್ಞರಿಂದಾದ ಅಪರಾಧಕ್ಕೆ ಹಳಹಳಿಸಬೇಡ, ಸರ್ವವಿಷಯವನ್ನು ನನ್ನೆದುರು ತಿಳುಹಿಸು, ನಾನು ನನ್ನ ಕೈಲಾದ ಸಹಾಯ ಮಾಡುತ್ತೇನೆ. ಗುರುಬಸವರಾಜರ ಅಪ್ಪಣೆಯಂತೆ ಬಂದಿರುವ ನೀನು ನಮಗೆ ಸರ್ವರೀತಿಯಿಂದಲೂ ಮಾನ್ಯನು, ಅಷ್ಟೇಅಲ್ಲ ಸಮೀಪದ ಬಂಧು ಎಂದು ತಿಳಿಯುತ್ತೇವೆ ಎಂದು ಮೈದಡವಿ ಮಾತನಾಡಿಸಿ ಸಮಾಧಾನಪಡಿಸಿ, ಬಂದಿರುವ ಕಾರಣವನ್ನು ತಿಳುಹಿಸಬೇಕೆಂದರು.

ಆಗ ಕುರುಡ ಮಹಾನುಭಾವನು ಗುರುವೃಷಭರಾಜರು ಕಣ್ಣಿನ ಅಪೇಕ್ಷೆಯನ್ನು ತಿಳುಹಿಸಲು, ತಮ್ಮ ಬಳಿಗೆ ಹೋದರೆ ಖಂಡಿತ ಕಣ್ಣು ಸಿಗುವದಾಗಿ ಅಪ್ಪಣೆಮಾಡಿದರು. ಆಗ ಕೋಲಶಾಂತೇಶನು ಗುರುಗಳ ಅಮರವಾಣಿ ಎಂದೆಂದಿಗೂ ಸುಳ್ಳಾಗಲಾರದು. ಅವರ ಅಪ್ಪಣೆಯಂತೆ ದೊರೆ ದಾದಿನಾಯಕರ ಬಳಿಗೆ ಹೋಗು ಎಂದು ಹೇಳಿದ ಪ್ರಕಾರ ಇಲ್ಲಿಗೆ ಬಂದೆನು. ಹೇ ಧೀನಬಂಧುವೇ ಶಬರಕುಲಮಣಿ ರಾಜೇಂದ್ರಾ ಗುರುಬಸವರಾಜ ಕರುಣಾವರಣ ದಾದಿನಾಯಕ ನರೇಂದ್ರಾ ನಿನ್ನ ಪುಣ್ಯ ಚರಿತ್ರೆಯು ಗುರುಬಸವರಾಜರ ಪಾವನ ಚಾರಿತ್ರ್ಯದಲ್ಲಿ ಸಮಾವೇಶಗೊಂಡು ಪ್ರಸಿದ್ಧಿಸುವದರಲ್ಲಿ ಸಂಶಯವಿಲ್ಲ. ಸಲಹು ನನ್ನನ್ನು ಎಂದು ಬೇಡಿಕೊಳ್ಳುತ್ತ ಏಳು ದಿನಗಳ ಪರಿಯಂತರ ತಪಗೈದು ಗುರುಗಳಿಂದ ಅಪ್ಪಣೆ ತಂದ ಸರ್ವ ವಿಷಯವನ್ನು ವಿವರಿಸಿ ಕರಜೋಡಿಸಿದನು.

ಬಳಿಕ ನಾಯಕ ನರೇಶ ಸ್ವಲ್ಪಹೊತ್ತು ಆಲೋಚಿಸಿ, ಆನಂದ ಆಶ್ಚರ್ಯಗಳ ಸಂಗಮದಲ್ಲಿ ಮಿಂದು ಎಚ್ಚತ್ತು, ಶಿವಗಣಾಧೀಶ್ವರರು ಮಹಿಮೆಯನ್ನು ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ, ಸೂರ್ಯ, ದೇವಮಾನವರಿಗೆ ತಿಳಿಯಲು ಅಸಾಧ್ಯವೆನಿಸಿರುವಾಗ ನನ್ನಂಥ ನರಮಾನವನಿಗೆ ತಿಳಿಯಲು

ಸಾಧ್ಯವೇ ಎಂದು ಯೋಚಿಸಿ, ಏನೇ ಇರಲಿ ಗುರುವರನು ನನ್ನನ್ನು ಪರೀಕ್ಷೆಗೆ ನಿಲ್ಲಿಸಿರುವಂತೆ, ನಾನೇಕೆ ಅವನನ್ನು ಪರೀಕ್ಷಿಸಬಾರದು ಎಂದು ಗುರುವಿನ ನಾಮಸ್ಮರಣೆಯಲ್ಲಿ ಕುರುಡನನ್ನು ಮುಂದೆ ಕರೆದು, ನನ್ನೆಡೆಗೆ ಕಣ್ಣಿಗಾಗಿ ನಿನ್ನನ್ನು ಕಳುಹಿಸಿದ ಗುರುದೇವನ ಪ್ರೀತಿ ನನ್ನಂತಹ ಪಾಮರ ಶಿಷ್ಯನ ಮೇಲಿರುವದು ನಿಜವಾದರೆ ನನ್ನಿಂದ ಕಣ್ಣುಕೊಡುವದು ಸಾಧ್ಯವೆಂದು ಗುರುವಾಕ್ಯವಾಗಿರುವದು ಸತ್ಯವಾಗಿದ್ದರೆ ನಿನಗೀಗಲೆ ಕಣ್ಣುಗಳು ಬಂದು ಜಗದ ನೈರ್ಮಲ್ಯವನ್ನು ನೋಡುವಂತಾಗಲಿ ಎಂದು ಮುಚ್ಚಿದ ಕಣ್ಣುಗಳ ಮೇಲೆ ಕೈಇಟ್ಟು ಜಯ ಗುರುದೇವ ಬಸವರಾಜೇಂದ್ರ ಜಯ ಗುರುವೃಷಭ ರಾಜ ಎನ್ನಲು ಕುರುಡನ ಕಣ್ಣು ಫಳಕ್ಕನೆ ತೆರೆದವು.

ಆಗ ಕುರುಡ ಎನಿಸಿದ ಮಾನವನು ದಾದಿ ನಾಯಕನ ಮುಖಾರವಿಂದ ವನ್ನು ಕದೇಕ ದೃಷ್ಟಿಯಿಂದ ನೋಡುತ್ತ ಗುರುವರೇಂದ್ರ, ಮಹಿಮೆ ಎಂಬ ಸೂರ್ಯನು ರಾಜೇಂದ್ರ ಮುಖ ಪೂರ್ವ ದಿಕ್ಕಿನಲ್ಲಿ ಬೆಳಗಲಾಗಲೇ, ನನ್ನೀ ಕಣ್ಣುಗಳೆಂಬ ಕಮಲಗಳು ಅರಳಿದವು ಎಂದು ಕುಣಿದಾಡಿದನು.

ಆದರೆ, ದಾದಿನಾಯಕ ನರೇಶನಿಗೆ ಆಶ್ಚರ್ಯವೆನಿಸಿ, ಗುರುಬಸವರಾಜರ ಬಗ್ಗೆ ಅಭಿಮಾನ, ಅತಿಯಾದ ಭಯ, ಭಕ್ತಿ ಉದ್ಭವಿಸಿ, ಭೂಮಿಯಂ ಬೆಳಗಲ್ ಬಂದ ಈಶ ಮಹೇಶನವತಾರಿ ಪರಮೇಶ್ವರ ಸ್ವರೂಪದ ಗುರುವರನ ನಾಮಸ್ಮರಣೆ ಮಾತ್ರದಿಂದ ಕುರುಡರ ಕಣ್ಣು ಬರಿಸುವ ಯೋಗ್ಯತೆ ನನಗೆ ಲಭಿಸಿತೆ ನಾನೆಷ್ಟು ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲವೋ ಬಲ್ಲವರಾರು, ಗುರುವೇ, ತಂದೆ, ಪ್ರಭೋ, ಶಿವ ಮಹಾದೇವ ಪ್ರಿಯ, ಗುರು ವೃಷಭೇಂದ್ರಾ ಎಂದು ಕೊಂಡಾಡುತ್ತ ಶಿವಗಣ ಸಭಾ ಮಧ್ಯದಲ್ಲಿ ವಿರಾಜಮಾನರಾದ ದೇವ ಮೂರ್ತಿ ಗುರು ವೃಷಭೇಂದ್ರ ರಾಜನಿಗೆ ಸಾಷ್ಟಾಂಗವಂ ಗೈದು ನಾನಾ ರೀತಿಯಿಂದ ಸ್ತುತಿಸಿ, ಆನಂದದಿಂದ ಗುರುದೇವಾ ಈ ಹಿಂದೆ ಸಾಮಾನ್ಯರಿಂದ ವೇದಗಳನ್ನು ಓದಿಸಿ ಅದರ ಅರ್ಥವಿವರಣೆಯನ್ನು ನೀನು ನೀಡಿ, ಅರಿಯದ ಅವಿವೇಕಿಗಳ ಮುಖದ ಮೇಲೆ ಹೊಡೆದಂತೆ ಮಾಡಿ ಬುದ್ಧಿಗಲಿಸಿದಿ, ಇಂದು ನಿನ್ನಿಂದ ಈ ಕಾರ್ಯ ಮಾಡಿಸಿ ಜಗವೇ ಅಚ್ಚರಿಯಿಂದ ಕೇಳುವಂತೆ ಮಾಡಿದೆ. ಅಂದಿನ ಶೈವಧರ್ಮ ತೇಜಸ್ಸು ಇಂದಿನ ಈ ಅಗಾಧ ಲೀಲೆ ಎನಿಸಿದ ಕಣ್ಣು

ಕರುಣಿಸಿದ ತೇಜಸ್ಸು ಜಗತ್ಪ್ರಸಿದ್ಧಿಯನ್ನು ಹೊಂದುವ ಮಹಿಮೆ ಎಂದು ಉತ್ಸಾಹ ಪೂರ್ಣ ನುಡಿಗಳಿಂದ ದೇವಾ, ಗುರುದೇವಾ ನನ್ನಂತಹ ಅಜ್ಞನಿಂದ ಶಬರ ಜಾತಿಯ ಮೂಢನಿಂದ ಇದೆಂಥಹ ಘನ ಕಾರ್ಯ ಮಾಡಿಸಿ ಘನತೆಯ ಹೊರೆ ಹೊರಿಸಿದೆ ತಂದೆ, ತಮ್ಮ ಘನ ಮಹಿಮೆ, ಘನ ಚಾರಿತ್ರ್ಯವನ್ನು ಅರಿಯದ ಮತಿಗೇಡಿಯನ್ನು ಮತಿ ನೀಡಿ ಉದ್ಧರಿಸುವ ಮಹಾದೇವನಾಗ ಬೇಕೆಂದು ಗುರುಬಸವರಾಜರ ಪಾದಗಳಿಗೆ ಸಾಷ್ಟಾಂಗ ನಮಸ್ಕಾರಗೈದು ನನ್ನ ಭಕ್ತಿಯಭಾವನೆಯನ್ನು ವ್ಯಕ್ತಪಡಿಸಿದನಲ್ಲದೇ ಅಜ್ಞಾನದಲ್ಲಿ ಮುಚ್ಚಿದ ನನ್ನ ಕಣ್ಣು ತೆರೆಯಿಸಲು ಗುರುವರನು ರಚಿಸಿದ ನಾಟಕವಿದೆಂದು ಅಭಿಮಾನ ದಿಂದ ನುಡಿದು ಗುರುಕೃಪೆಗೆ ಪಾತ್ರನಾದನು.

ಇದೇ ಪ್ರಕಾರವಾಗಿ ಅನೇಕ ಲೀಲೆಗಳನ್ನೆಸಗುತ್ತ ಸಾಗಿದ ಗುರುಬಸವ ರಾಜರ ಮಹಿಮೆಯನ್ನು ಹಾಗು ಶಿವಗಣರ ಮಹಿಮೆಯನ್ನು ವಿವರಿಸಿದ ಕೋಲ ಶಾಂತೇಶ್ವರ ಮೊದಲಾದ ಶಿವಯೋಗಿಗಳಿಗೆ ತನ್ನೊಡೆಯನು ವಿನಯ ಶೀಲ ಶಿವಭಕ್ತಿಯಲ್ಲಿ ನಮಸ್ಕರಿಸುತ್ತಿರುವದನ್ನು ಕಂಡ ನಾಯಕನ ಬಳಗವು ನಮಸ್ಕರಿಸಿದರು.

ಬಳಿಕ ನಾಯಕನು, ಗುರು ವೃಷಭೇಂದ್ರ ಪ್ರಭುವವರು ಅಂಧಕನ ಪ್ರಥಮ ದರ್ಶನದಲ್ಲಿ ಈ ನಾಡನಾಳ್ವ ಅರಸುತನ ನನಗುಂಟೇ ಎಂದು ಅಪ್ಪಣೆ ಕೊಡಿಸಿದರಲ್ಲದೇ ಅಖಿಳ ಲೋಕವನ್ನಾಳುವ ಶಂಭುವಿಗೆ ನಾಡಿನೊಡೆತನ ವೇನು ದೊಡ್ಡದೇ, ಮುಟ್ಟದ ಕಡ್ಡಿ ಗುಡ್ಡದಷ್ಟಾಗಿಸುವ ಕರುಣಾಳು ಕಾರಣ ಪುರುಷನ ಒಲುಮೆಯೊಂದಿದ್ದರೆ ಸಾಕು ಅದೇ ನನಗೆ ಸಂಪತ್ತು, ರಾಜ್ಯ, ಐಶ್ವರ್ಯ ಎಂದು ತನ್ನ ಛತ್ರ, ಚಾಮರ, ಇನ್ನಿತರ ವೈಭವವೂ ಇಂದಿನಿಂದ ದಾನಿಗಳಲ್ಲಿ ಮಹಾದಾನಿ ಬಸವರಾಜ ಗುರುವರನ ಪದತಲದಿ ಅರ್ಪಿತವು. ಅಲ್ಲದೇ ತಾವು ಈ ಪಟ್ಟಣದಲ್ಲಿ ವೀರ ಮಾಹೇಶ್ವರ ಸಮಾಜದಲ್ಲಿ ರಾಜ ವೈಭವದಲ್ಲಿ ಸಕಲ ಮರ್ಯಾದೆಗಳಲ್ಲಿ ಇರಬೇಕು. ನಾನು ತಮ್ಮ ಅಡಿಹುಡಿಯ ತೊಳೆಯ ಬಯಸಿ ಜಾಗಿಲ ಕಾಯುವ ಆಳಿನಂತಿರುವ ಸೇವಕ. ಈ ಸೇವಕನ ವಂಶಪಾರಂಪಾರ ಕುಲದೈವನಾಗಿ ರಕ್ಷಿಸುವ ಹೊಣೆಯಿರಲಿ ಎಂದು ವಿನಯ ಭಕ್ತಿಯಿಂದ ನಮಸ್ಕರಿಸಿದನು.

ಅರಸನ ಅತುಲ ಭಕ್ತಿಗೆ ಮೆಚ್ಚಿದ ಗುರುಬಸವರಾಜರು ಸಂತಸದಿಂದ ಆಶೀರ್ವದಿಸಿದರು. ಆಗ, ಮಾಹೇಶ್ವರ ಸಮೂಹವು ಆನಂದದಿಂದ ಅರಸರ ಹಾಗು ಇತರ ಪ್ರಮುಖರ ಅಭಿಮತದಂತೆ ಗುರುಗಳನ್ನು ಬಂಗಾರದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ಸಕಲ ಶೋಭೆ ಸಂಭ್ರಮದ ಮೆರವಣಿಗೆಯೊಡನೆ ದಯಮಾಡಿಸಿದಂತೆ ವ್ಯವಸ್ಥೆಯಾಗಿ ಮೆರವಣಿಗೆಯು ಪಟ್ಟಣದ ಮಧ್ಯದಲ್ಲಿ ರಚಿತವಾದ ಸಿಂಹಾಸನದತ್ತ ಜಯ ಜಯಕಾರದೊಡನೆ ಬಂದು ಆಸೀನಗೊಂಡರು. ಬಳಿಕ ಅರ್ಪಣ ಸಮಾರಂಭವು ಸಾಗಿ ದಾದಿನಾಯಕ ನರೇಶನು ಗುರುಬಸವರಾಜರ ಮನ ತೃಪ್ತಿ ಹೊಂದುವಂತೆ ಅನರ್ಘ್ಯ ಮುತ್ತು, ರತ್ನ, ಮಣಿಮಂಚ, ನವರತ್ನ ಮಾಲೆಗಳ ಕಾಣಿಕೆಯನ್ನು ಕೊಟ್ಟು ಗುರುವರರ ಸೇವಾನುಸೇವಕನಾದನು.

ಕೋಲಶಾಂತೇಶ ಮೊದಲ್ಗೊಂಡು ಸರ್ವ ಶಿವಶರಣಬಳಗದವರು ಗುರುವೃಷಭೇಂದ್ರನ ಮಹಾತ್ಮೆಯನ್ನು ಕೊಂಡಾಡುತ್ತ ಸಿಖಾಪುರವೆಂದರೆ ಶಿವನ ಕೈಲಾಸಕ್ಕೆ ಸಮನಾದ ಮಹತ್ವಪೂರ್ಣ ಸ್ಥಳವಾಯಿತೆಂದು ದಿಕ್ಕತಟಗಳಲ್ಲಿ ಸುವಾರ್ತೆ ಹಬ್ಬಿತು ಎಂದು ಉತ್ಸುಕತೆಯಿಂದ ನುಡಿದರು.

ಭಕ್ತರು ಗುರುನಾಮಸ್ಮರಣೆ ಗೈಯ್ಯಲು ಕಳ್ಳರ ಕಣ್ಣು, ಕೈಕಾಲು ಹೋದದ್ದು

ಶ್ರೀಗುರು ಬಸವರಾಜೇಶ್ವರನ ಮಹತ್ವಪೂರ್ಣ ಲೀಲೆಗಳು ಅನಂತವಾಗಿ ದಿಕ್ಕು ದಿಕ್ಕುಗಳಲ್ಲಿ ಹಬ್ಬಿ, ಬೇಡಿಕೊಳ್ಳುವ ಭಕ್ತರ ಇಷ್ಟಾರ್ಥಗಳು ಸಿದ್ಧಿಸಿ, ವೀರಶೈವ ಧರ್ಮಜಾಗ್ರತಿಯ ಕಾರ್ಯವು ಸುಲಭರೀತಿಯಲ್ಲಿ ಮುಂದುವರೆಯಿತು.

ಆದರಿಂದ ಸದ್ಧರ್ಮಪಾಲನೆಯ ಮೂರ್ತಿ ವೃಷಭೇಂದ್ರನನ್ನು ಸೇವಿಸಿ, ಮೋಕ್ಷ ಹೊಂದಬೇಕೆಂದು ನಾಡಿನ ಮೂಲೆಮೂಲೆಗಳಿಂದ ಶರಣಬಳಗವು ಧಾವಿಸಿ ಬರಹತ್ತಿದರು. ಕೇಳರ ಲಾಟ, ಮರ್ಜರ ಮಾಳವಾ ವೆವದಲಾದ

ಕಡೆಗಳಿಂದ ಭಕ್ತಬಳಗ ತಮ್ಮ ಅಭಿಲಾಷೆಯು ಈಡೇರಿದ ಪ್ರಯುಕ್ತ ರಾಜ ಮಹಾರಾಜ, ಶೆಟ್ಟಿ ಸಾಹುಕಾರ, ಘನ ಶ್ರೀಮಂತ ಬಳಗ ಮೊದಲಗೊಂಡು ಅದರಲ್ಲಿ ಹೆಂಡರು ಮಕ್ಕಳು ಸಮೇತ ವೈಭವ ಪೂರ್ಣ, ಉಲ್ಲಾಸ ಪೂರ್ಣ ಮೆರವಣಿಗೆಯಲ್ಲಿ ಗುರುಮೂರ್ತಿ ಬಸವರಾಜರ ದರ್ಶನಾಶೀರ್ವಾದ ಹೊಂದ ಬಯಸಿ ಮುತ್ತು, ರತ್ನ, ಮಣಿ ಮಾಣಿಕ್ಯದೊಡವೆಗಳನ್ನ ಧರಿಸಿ ಕುದುರೆ, ಎತ್ತಿನ, ಆನೆ, ಒಂಟೆಗಳ ವಾಹನಗಳಲ್ಲಿ ಭರ್ಜರಿಯಲ್ಲಿ ಸಡಗರದ ಸಜ್ಜಿನಲ್ಲಿ ಯಾತ್ರೆಯನ್ನು ಮಾಡಿ ಗುರುದರ್ಶನ ಪಡೆಯಲು ಹೊರಟು ಬರುತ್ತಿರಲು ನಿರ್ಜನ ಕಾಡಿನ ಮಧ್ಯ ಬಂದು ನೋಡುತ್ತಾರೆ. ದಟ್ಟವಾಗಿ ಬೆಳೆದ ಗಿಡ ಮಧ್ಯ ಹಲವಾರು ತರುಲತೆಗಳ ಸಪ್ಪಳ, ನಾನಾಮೃಗಗಳ ಚೀತ್ಕಾರ, ಎರಳೆ, ಚಿರತೆ, ನವಿಲು ಅನೇಕ ಸುಂದರ ವನ್ಯಪಶುಗಳು ಸಿಂಹ, ಶಾರ್ದೂಲ, ಕಾಡಾನೆ, ಕಾಡೆಮ್ಮೆಮೊದಲಾದ ಹಿಂಸ್ರ ಜೀವಿಗಳು ಕಮಲ, ಕೇದಿಗೆ, ಸೇವಂತಿಗೆ, ಮಲ್ಲಿಗೆ, ಕಾಡುಮಲ್ಲಿಗೆಗಳ ಸುವಾಸನೆಯಲ್ಲಿ ಸುಂದರ ಬದುಕಿನ ನೆನವು ಕೊಡುವಂತೆ ಭಾಸವಾಗುತ್ತಿತ್ತು.

ಇಂತಹ ಸಮಯದಲ್ಲಿ ಬೇಡರ ಬಳಗವು ಆ ಅರಣ್ಯಮಧ್ಯ ಉಳಿದು ಕೊಂಡಿದ್ದು ಬರುಹೋಗುವ ಶಿರಿವಂತ ದಾರಿಕಾರರನ್ನು ಒಡೆದು, ಬೆದರಿಸಿ ಅವರಲ್ಲಿದ್ದ ವಸ್ತುವಡವೆಗಳನ್ನು ದೋಚಿಕೊಂಡು ಹೋಗುವ ನಿತ್ಯ ಕಾಯಕ ದಿಂದ ಉಪಜೀವನಗೈವ ಪಾಪಿಗಳಾಗಿದ್ದರು.

ಆಗ ಅತ್ತಲಿಂದ ಯಾತ್ರೆಯು ನಿಮಿತ್ಯ ಹೊರಟವರು ಬರುವದಕ್ಕೂ ಸರಿಹೋಯಿತು. ಕ್ಷಣದಲ್ಲಿ ಶಿರಿಜನ ಸಮೂಹವಿದೆಂದು ಅರಿತ ಬೇಡರು ಅಡ್ಡಗಟ್ಟಿ ಇದ್ದುದನ್ನೆಲ್ಲ ದೋಚತೊಡಗಿದರು. ಜನರು ಭಯದಿಂಧ ಥರಗುಟ್ಟಿ ನಡುಗುತ್ತ ಗುರುಬಸವರಾಜನನ್ನು ನೆನೆಯುತೊಡಗಿದರು.

ಅತ್ತ ಬೇಡರು ಸುಲುಗೆಯ ಗದ್ದಲದಲ್ಲಿದ್ದವರು ಕಣ್ಣು ಕೈ ಕಳೆದು ಕೊಂಡು, ಕಾಲಿನ ನಾಡಿ ಸ್ಪಂದಗಳುನಿಂತು, ನಿಂತ ಸ್ಥಳದಲ್ಲಿಯೇ ಕುಸಿದು ಮೇಲೇಳದಾದರು. ಅಷ್ಟರಲ್ಲಿ ಸಂಜೆಯದು ಸರಿದು ಮುಂಜಾವಿನ ಮುಂಬೆ ಳಕು ಮೂಡಿ ಒಂದು ಪರಿಸೆಯ ಜನರು ಗುರುಬಸವರಾಜನ ಸ್ತುತಿಯಲ್ಲಿ ಉಳಿದಷ್ಟು ಉಳಿಸಿಕೊಂಡು ಮುಂದಾಗಿ ಕೊಟ್ಟೂರದಾರಿ ಹಿಡಿದರು.

ಬಳಿಕ ಬೇಡರನಾಯಕ ಹಿರಿಯ ತಿಳುವಳಿಕೆಯುಳ್ಳವನೊಬ್ಬ ತನ್ನ ಬಳಗದವರ ಗತಿ ಕಂಡು ಮರುಗುತ್ತ, ಎಲ್ಲೈ ನೀಚರೇ ಅದು ಶ್ರೀಗುರು ಕೊಟ್ಟೂರು ಬಸವರಾಜರ ಪರಿಸೆಯ ಮಂದಿ, ಅವರನ್ನು ಸುಲಿದು ಬಸವ ರಾಜನ ಭಕ್ತಸಮೂಹಕ್ಕೆ ಅನ್ಯಾಯಮಾಡಿದಿರಿ, ಭಕ್ತರಿಗಾದ ಅನ್ಯಾಯ ವನ್ನು ಗುರುವೆಂತು ಸಹಿಸ್ಯಾನು. ತಿಳುವಳಿಕೆ ತಂದುಕೊಂಡು ಮೊದಲು ಗುರು ವೃಷಭೇಂದ್ರನಲ್ಲಿ ಪೋಗಿ ಕ್ಷಮೆಬೇಡಿರಿ. ಅಂದೆ ನಿಮಗಿದರಿಂದ ಮುಕ್ತಿ. ಕ್ಷಮಾಗುಣಶೀಲನಾದ ಗುರುವು ಕ್ಷಮಿಸದಿರಲಾರನು ಎಂದು ಬುದ್ಧಿಹೇಳಿ, ಅವರೆಲ್ಲರನ್ನು ಮಠಕ್ಕೆ ಕರೆದುಕೊಂಡು ಬಂದನು.

ಆಗ ಎಲ್ಲರೂ ಗುರುಬಸವರಾಜರನು ಸ್ತುತಿಸುತ್ತ ಬಂದು, ತಾವು ಸುಲಿದುದೆಲ್ಲವನ್ನು ಗುರುಗಳ ಮುಂದಿಟ್ಟು, ತಮ್ಮಿಂದಾದ ಘನ ಅಪರಾಧ ವನ್ನು ತಿಳುಹಿಸಿ, ದಯಮಾಡಿ ಎಲ್ಲರನ್ನು ಕ್ಷಮಿಸಬೇಕೆಂದು ಹಿರಿಯ ಬೇಡನು ಅಂಗಲಾಚಿ ಬೆ ಡಿಕೊಳ್ಳಹತ್ತಿದನು.

ಆಗ ಗುರುಗಳು ಕೃತಿಕರ್ಮ ಹರಿಯಲೆಂದು ಹರುಷದಿಂದ ನುಡಿಯಲು ಯಾವತ್ತು ಬೇಡರ ಕಣ್ಣು, ಕೈಕಾಲುಗಳು ಮೊದಲಿನಂತಾದವು. ಆಗ ಎಲ್ಲರು ಆನಂದದಿಂದ ಮತ್ತಷ್ಟು ಭಕ್ತಿಯಿಂದ ಉಘೇ ಚಾಂಗು ಬಲ ಎಂದು ಜಯ ಜಯಕಾರ ಮಾಡಿದರು. ಆಗ ಕೋಲ ಶಾಂತೇಶ್ವರ ಹಾಗು ಹಲವು ಶರಣರು ಆನಂದದಿಂದ ಗುರು ವೃಷಭೇಶ್ವರನನ್ನು ಹೊಗಳಿದರು. ಹಾಗು ನಮ್ಮ ಪುಣ್ಯ ವಿಶೇಷದಿಂದ ಎಂಥಹ ಮಹತ್ವಪೂರ್ಣ ಘಟನೆಗಳನ್ನು ನೋಡುವದು, ಕೇಳುವದು ನಮ್ಮ ಸುದೈವದಲ್ಲಿದೆಯಲ್ಲಾ ಸತ್ಯ ಶರಣ ಶಿವಯೋಗಿಗಳ ಜೀವನದಲ್ಲಿ ಕೆಲವು ಇಂತಹ ಪ್ರಸಂಗಗಳು ಬಂದು ಹೋಗಿವೆ ಎಂದು ಕಥೆ ಕೇಳಿದ್ದೇವೆ ಹೊರತು ಪ್ರತ್ಯಕ್ಷ ಕಾಣುವ ಪ್ರಸಂಗವೇ ಬಂದಿರಲಿಲ್ಲ. ಈಗ ಗುರುಗಳ ಕರುಣೆಯಿಂದಲೂ, ಅವರ ಮಹಿಮೆಯಿಂದಲೂ ಭಕ್ತರ ಬದುಕಿನಲ್ಲಿ ಘಟನೆಯಾಗಿ ಜರಗಿದ ಹಲವು ಪ್ರಸಂಗಗಳಿಂದಲೂ ಶಿವ ಮಹಾದೇವ, ಮುಕ್ಕಣ್ಣ, ಮಹೇಶ್ವರನು ನಮಗಾಗಿ ನಮ್ಮ ಮಾಹೇಶ್ವರ ಬಳಗದ ಉದ್ಧಾರಕ್ಕಾಗಿ, ಶೈವ ಮತದ ಆಧಾರಕ್ಕಾಗಿ ಶ್ರೀಗುರು ವೃಷಭೇಂದ್ರ ಪ್ರಭುವನ್ನು ಅನುಗ್ರಹಿಸಿದ್ದಾನೆ ಎಂದು ಹರುಷದಿಂದ ಮಾತನಾಡಿದರು.

————

ಸೊಂಡೂರ ಪರವಿನಾಯಕರ ಹೆಂಡತಿ [ಮಹಾರಾಣಿ] ಯನ್ನು ಬದುಕಿಸಿದ್ದು

ಸೊಂಡೂರ ಪರವಿನಾಯಕ ಎಂಬ ಅರಸನು ಶಿವಭಕ್ತನಾಗಿದ್ದರೂ ಒಂದು ದಿನ ತನ್ನ ಹೆಂಡತಿಯೊಡನೆ ಶಿವನು ಗುರುವಿನ ಮೂಲಕ ಭಕ್ತರನ್ನು ಪೊರೆಯುತ್ತಾನೆ. ಕಾರಣಪುರುಷ ತಾನಾದರೂ ಕರ್ತೃವನ್ನು ಹುಟ್ಟಿಸಿ ಕಾರ್ಯಗೈಯುವದನ್ನು ನಾನು ಒಮ್ಮೆಯಾದರೂ ಕಂಡಿಲ್ಲವೆಂದು ಅಣಕದ ನುಡಿಗಳನ್ನಾಡಲು, ಹೆಂಡತಿಯು ಪತಿಯ ಹಮ್ಮಿನ ನುಡಿಗೆ, ಪತಿದೇವಾ ಹರ ಮುನಿದರೂ ಗುರು ಕಾಯುವನು ಎಂಬ ನುಡಿಯನ್ನು ಕೇಳಿಲ್ಲವೇ ? ಶಿವಭಕ್ತ ಸಂಪನ್ನರಾದ ನಿಮ್ಮಿಂದ ಗುರುಮೂರ್ತಿಯ ಬಗ್ಗೆ ಹಮ್ಮಿನ ನುಡಿ ಚಿಮ್ಮಬಾರದಾಗಿತ್ತು ಎಂದು ವ್ಯಸನದ ಉಸುರೆಳೆದಳು. ಆದರೂ ಪರವಿನಾಯಕ ದೊರೆಯು ಹೆಂಡತಿಯ ನುಡಿಗೆ ಒಪ್ಪಲಿಲ್ಲ.

ಬಳಿಕ ಕೆಲವು ದಿವಸ ಗತಿಸಲು ಅಕಸ್ಮಾತ ಮಹಾರಾಣಿ ಮರಣಪನ್ನಪ್ಪಿದಳು. ಆಗ ನಾಯಕನಿಗೆ ಹೇಳತೀರದ ದುಃಖವಾಗಿ, ಚಿಂತೆಯ ಚಿತೆಯಲ್ಲಿ ಬೆಂದು ಬೆಂಡಾಗುತ್ತಿರಲು, ಸಚಿವ ಹಾಗು ಕೆಲವು ಭಕ್ತಜನರು ಅರಸನನ್ನು ಸಂತೈಸುತ್ತ, ಪ್ರಭು ಶರಣಾಗತ ರಕ್ಷಕ ಸಂಜೀವಿನಿ ಎಂದೆನಿಸಿದ ಕೊಟ್ಟೂರೇಶನ ಕರುಣೆ ನಮಗಿರಲು ಅಂಜುವದೇಕೆಂದು ಹೇಳಿದರಲ್ಲದೇ ಅವರ ಪಾದಬಳಿಗೆ ಮಹಾರಾಣಿ ಶವ ಒಯ್ಯೋಣವೆಂದು ಉಪದೇಶ ಮಾಡಿದರು.

ಅಷ್ಟರಲ್ಲಿ ಮತಿವಂತೆ ಶಿವಭಕ್ತೆ ಸಾತವ್ವ ಎಂಬ ಶಿವಶರಣೆಯು ಧಾವಿಸಿ, ಅರಮನೆಗೆ ಬಂದು, ಕೂಡಿದ ಜನರನ್ನು ಸರಿಸಿ. ಅಯ್ಯಾ ಸದ್ಭಕ್ತರ ಹೃದಯ ದೇಗುಲದಲ್ಲಿ ಗುರು ಕೊಟ್ಟೂರೇಶನು ಸದಾ ವಾಸವಾಗಿರಲು ಅಲ್ಲಿಗೇಕೆ, ನಮ್ಮಲ್ಲಿಯೇ ಇದ್ದಾನೆ ತಾಳಿರಿ ಎಂದು ಜಂಗಮ ಪಾದೋದಕದಲ್ಲಿ ಭಸ್ಮವನ್ನು ಬೆರೆಯಿಸಿ, ಬಸವ ಮಂತ್ರದೊಡನೆ ರಾಣಿಯ ಸರ್ವಾಂಗಕ್ಕೆ ಲೇಪಿಸಲು, ಕ್ಷಣಕಳೆಯುವಷ್ಟರಲ್ಲಿ ಪರವಿನಾಯಕನ ಪತ್ನಿಯು ಮಲಗಿ

ದ್ದವಳಂತೆ ಮೈಮುರಿಯುತ್ತ ಎದ್ದು, ಯಾವತ್ತು ಶಿವಭಕ್ತ ಸಂಪನ್ನರಿಗೆ ನಮಸ್ಕರಿಸಿದಳು.

ಬಳಿಕ ಪತಿಯನ್ನು ಉದ್ದೇಶಿಸಿ, ನಮಸ್ಕಾರ ಗೈದಬಳಿಕ ಸ್ವಾಮಿ ಈಗಲಾದರೂ ತಿಳಿಯಿತೇ ಗುರುಕಾರುಣ್ಯದ ಮಹಿಮೆ, ಹರನು ಕಾರಣ ಪುರುಷನಾದರೂ ಕರ್ತೃಪುರುಷ ಗುರು ಎಂಬುದನ್ನು ಮನಗಂಡಿರಾ ಎಂದು ಅಲ್ಲದೇ ಗುರುವಿನ ಮಹಿಮೆ ಅಪಾರವಾದದ್ದು. ಅದರಲ್ಲಿ ನಮ್ಮ ಕೊಟ್ಟೂರ ಬಸವರಾಜನ ಮಹಿಮೆ ಅಗಾಧವೆಂದು ನಂಬಿ, ರಾಜಪರಿವಾರದೊಡನೆ ಗುರುಗಳ ಸನ್ನಿಧಿಗೆ ಹೋಗಿ, ಭಕ್ತಿಭಾವದಿಂದ ಸೇವಿಸಿ ಅವರ ಆಶೀರ್ವಾದ ಪಡೆದರು.

ಕಾದಾಡುವ ಹುಂಜಗಳನ್ನು ಕರುಣೆಯಿಂದ ಪೊರೆದದ್ದು (ಮಿಡಿವಿಲ್ಲಿಗೆ ಪ್ರಾಣ ನೀಗಿದ ಹುಂಜವನ್ನು ಬದುಕಿಸಿದ್ದು)

ಬರು ಬರುತ್ತ ಶ್ರೀ ಗುರುಗಳ ಪವಾಡಗಳು ಹೆಚ್ಚುತ್ತ ನಡೆದು ನಾಡಿನ ಮೂಲೆ ಮೂಲೆಗಳಲ್ಲಿ ಶ್ರೀ ಗುರು ಕೊಟ್ಟೂರ ಬಸವೇಶ್ವರನ ಅರಿಯದ ಅಜ್ಞ ಇಲ್ಲದಾಯಿತು.

ಹೀಗಿರುವಾಗ ಗುರುದೇವ ಬಸವರಾಜರು ಶಿಷ್ಯ ಬಳಗದೊಡನೆ, ಶರಣ ಸಮೂಹದೊಡನೆ ಆನಂದ ಲಹರಿಯಲ್ಲಿ ಶಿವ ನಾಮಸ್ಮರಣೆಯಲ್ಲಿ ಪಟ್ಟಣದ ಬೀದಿಯಲ್ಲಿ ಬರುತ್ತಿರುವಾಗ ಹರೆಯದ ಹುಮ್ಮಸ ಉಕ್ಕಿ ಸೊಕ್ಕಿನ ಕಾಲುಗಳ ಕುಕ್ಕಿ ನೈರ್ಮಲ್ಯ ಜೀವನವದು ದಕ್ಕಿ ಸೊಕ್ಕಿನಿಂದ ಸೆಣಸಾಟಕ್ಕೆ ನಿಂತ ಹುಂಜಗಳು ಪಟ್ಟಣದ ನಾಲ್ಕುನಿಟ್ಟಿನ ದಾರಿ ಕೂಡಿದ ಚವಕಿನಲ್ಲಿ ರಭಸದಿಂದ ಕಾಳಗ ಮಾಡುತ್ತಿದ್ದವು. ನಿಂತು ನೋಡುವ ಜನರಿಗೂ ಕೊರತೆ ಇರಲಿಲ್ಲ. ಜನ ಕೂಡಿದಂತೆ ಇವುಗಳ ಕಾದಾಟ ಅತಿಯಾಯಿತು. ಅಷ್ಟರಲ್ಲಿ ಗುರು ಬಸವರಾಜರು ತಮ್ಮ ಭಕ್ತ ಸಮೂಹದೊಡನೆ ಅಲ್ಲಿಗೆ ಬಂದರು.

ಆಗ ಕರುಣೆ, ಅಂತಃಕರುಣೆ, ದಯಾ, ಧರ್ಮ ಬುದ್ಧಿಯನ್ನೆ ತಿಳಿ
ತಿಳಿಗೇಡಿ ಬೇಡನೊಬ್ಬನು ತನ್ನ ಗುರಿಯ ಹೆಮ್ಮೆಯಲ್ಲಿ ಮಿಡಿವಿಲ್ಲಿ
ಹೊಡೆಯಲು ಅದು ಒಂದು ಹುಂಜಕ್ಕೆ ತಾಕಿ ತಕ್ಷಣ ಅದು ಸತ್ತಿತು.

ಅಧನ್ನು ಕಂಡ ಗುರುಗಳ ಮನ ಮರುಗಿ ಚಂಡಾಲ ಮಾನ
ಪಾಪ ಮೂಕ ಪ್ರಾಣಿಯೊಂದರ ಪ್ರಾಣವನ್ನು ವಿನಾಕಾರಣ ಅಪಹರಿ
ಯಲ್ಲವೇ ಪಾಪಿ, ನಿನ್ನ ಮರಣ ಅದಾವ ರೀತಿ ಮುಗಿಯುವದೋ ತಿಳಿ
ಕೊಂಡಿರುವಿಯಾ, ಮತ್ತು ಯಮನಿಂದ ದೊರೆಯುವ ಶಿಕ್ಷೆಯನ್ನು ಅ
ಭವಿಸುವಿಯಾ ಎಂದು ನುಡಿಯುತ್ತ ಯಮಧೂತರು ನಿನ್ನನ್ನು ಇದೇ ರಿ
ಶಿಕ್ಷೆ ನೀಡಿ ಕಾಡುವರೆಂಬುದನ್ನು ಮರೆಯಬೇಡ ಹೋಗು ಎಂದು ಸಿಟ್ಟಿ
ಶಾಪ ವಾಣಿಯಿಂದ ತೆಗಳಿದರು.

ಆಗ ಬೇಡ ಪಶ್ಚಾತ್ತಾಪದಿಂದ, ದೈನ್ಯದಿಂದ ಬೇಡಿಕೊಂಡು ಸಾಯು
ಪರಿಯಂತರ ಮಠದ ಮುಂದಿನ ಕಸ ಬಳಿದು ಈ ಪಾಪದಿಂದ ಮುಕ್ತನಾಗು
ನೆಂದು ಅಂಗಲಾಚಿದನು. ಆಗ ಗುರುಗಳಿಗೆ ಅದೇಕೋ ಅವನ ಬಗ್ಗೆ ಕರು
ಹುಟ್ಟಿ ಅಭಯ ವಚನ ಕೊಟ್ಟು, ಸತ್ತು ಹೋದ ಹುಂಜವನ್ನೂ ಬದುಕಿ
ಬೇಡನು ಗೈದ ಕರ್ಮ ಕಾರ್ಯದಿಂದ ಬಿಡುಗಡಿಸಿದರು. ಕೂಡಿದ ಜನ
ಹರುಷದಿಂದ ಜಯ ಜಯಕಾರ ಮಾಡಿದರು.

ಗುರುಗಳ ನೋಟದಿಂದ ಸತ್ತ ಕುದುರೆ ಬದುಕಿದ್ದು

ನಾಸಲೂರ ಬೇಡನಾಯಕನೊಬ್ಬನು ಅಂದವಾದ ಕುದುರೆಯನ
ಜೋಪಾನ ಮಾಡಿದ್ದನು. ಆದರೆ ಪ್ರಿಯವಾದ ಆತನ ಕುದುರೆಯ
ಹೊಟ್ಟೆಕಡಿತ ರೋಗದಿಂದ ಬಳಲಿ ಸತ್ತುಹೋಯಿತು. ಆಗ ಬೇಡನಾಯ
ಅತೀವ ದುಃಖದಿಂದ ಗೋಳಾಡುತ್ತಿರಲು, ಓರ್ವ ಶಿವಭಕ್ತ ಸ್ನೇಹಿತನ
ನಾಯಕನನ್ನು ಸಮಾಧಾನ ಪಡಿಸುತ್ತ, ಮಿತ್ರಾ ಕೊಟ್ಟೂರ ಶ್ರೀಗುರು
ಬಸವರಾಜನಿಗೆ ಅಸಾಧ್ಯವಾದ ಕಾರ್ಯವೇನಿದೆ. ಇಂತಹ ಎಷ್ಟ

ಪ್ರಸಂಗಗಳು ಸರಳವಾಗಿ ಭಕ್ತರ ಸಂಕಷ್ಟಗಳು ದೂರಾಗಿಲ್ಲಾ, ದನ, ಕರು, ಮನುಷ್ಯ ಪಶುಪಕ್ಷಿಗಳಾದಿಯಾಗಿ ಯಾವ ಜೀವಿಯ ಪ್ರಾಣಹಾನಿಯನ್ನು ಪರಿಹರಿಸಿ ಪುನರ್ಜನ್ಮವೀಯದೇ ಬಿಟ್ಟದ್ದಾನೆ ನಮ್ಮ ಗುರುವರನು. ನಾವು ಸ್ಮರಣೆ, ವಿಭೂತಿ, ಪಾದೋದಕ ದರ್ಶನಮಾತ್ರದಿಂದ ಮೃತ್ಯುವನ್ನು ಗೆಲಿದು ಮೃತ್ಯುಂಜಯನಾದ ಗುರುವಿನ ಬಳಿಗೆ ಹೋಗೋಣ ನಡೆ ಎಂದು ಸರ್ವರೂ ವೃಷಭೇಂದ್ರರ ಸನ್ನಿಧಿಗೆ ಬಂದರು.

ಬಳಿಕ ಬೇಡನಾಯಕನು ಮುಂದಾಗಿ ಗುರುವರನ ಪಾದಗಳಿಗೆ ಬಿದ್ದು ಬೇಡಿಕೊಳ್ಳುತ್ತ, ತನ್ನ ಕುದುರೆಯನ್ನು ಬದುಕಿಸಬೇಕೆಂದು ಕರಜೋಡಿಸಿ ಅನನ್ಯ ಭಕ್ತಿಭಾವದಿಂದ ಬಿನ್ನೈಸಿಕೊಳ್ಳಹತ್ತಿದನು.

ಆಗ ಗುರುಗಳು ಕರುಣೆಯಿಂದ ಎದ್ದು ಮುಂದಾಗಿ ಮುಗುಳು ನಗೆ ಚಿಮ್ಮಿ, ಕೃಪಾಪೂರ್ಣ ದೃಷ್ಟಿಯಿಂದ ಅಶ್ವವನ್ನು ನೋಡಲು, ಮಲಗಿದ ಪ್ರಾಣಿಯು ಕಾಲ್ಬಡಿದು ಚೇತರಿಸಿಕೊಂಡು ಏಳುವ ತೆರದಿ ಬೇಡನಾಯಕನ ಪ್ರೀತಿಯ ತೇಜಿಯು ಎದ್ದುನಿಂತು ಆನಂದದಲ್ಲಿ ಹೂಂಕರಿಸಿತು.

ಆಗ ನೋಡುತ್ತ ನಿಂತುಕೊಂಡ ಭಕ್ತಜನತೆಯು ಇಂತಹ ಕೀಳು ವಿಚಾರ ಪಾಪಪೂರ್ಣ ಲೋಕಗಳಲ್ಲಿ ಶ್ರೀಗುರು ವೃಷಭೇಂದ್ರನಂತೆ ಇಚ್ಛಿತ ಫಲಗಳನ್ನು ಕೊಡುವ ಪುಣ್ಯಪುರುಷ, ಪಾವನಚರಿತ ಸದ್ಗುರು ದೊರೆಯಲು ಸಾಧ್ಯವೇ ಎಂದು ಗುರುಬಸವರಾಜರ ಗುಣಗಾಯನ ಮಾಡಹತ್ತಿದರು.

_ಬೇಡರ ನಾಯಕನು ತನ್ನ ಕೀಳುಮನೋಧರ್ಮದಿಂದ ಪರಿವರ್ತನ ಹೊಂದಿ, ಸ್ನೇಹಿತನ ಉಪದೇಶದಂತೆ ಗುರುಗಳ ದಾಸಾನುದಾಸನಾಗಿ, ಶಿವ ಭಕ್ತನಾಗಿ ಬಾಳಲು ಗುರುವಿಗೆ ವಚನಕೊಟ್ಟು ಸಾಷ್ಟಾಂಗ ಹಾಕಿದನು ಆಗ ಗುರುಗಳು ಇಚ್ಛೆ ಪ್ರಾಪ್ತಿರಸ್ತು ಎಂದು ಆಶೀವಾದ ಮಾಡಿದರು.

ಭಸ್ಮ ಲೇಪನ ನಾಮಸ್ಮರಣೆಯಿಂದ ಸತ್ತ ಆಕಳ ಕರುಗಳು ಬದುಕಿದ್ದು

ಕೊಟ್ಟೂರ ಗ್ರಾಮದ ಹೆಸರು ಅನಂತ ಕಾಲ ಚಿರಸ್ಮರಣೀಯವಾಗ್ವ ವಂತಹ ಪ್ರಸಂಗಗಳು ಗುರುಬಸವರಾಜರ ಕೃಪಾ ಛಾಯೆಯ ಬೆಳಕಿನಿಂದ ಬೆಳಗುವಂತಾಯಿತು ಎಂದು ಭಕ್ತರಾದಿಯಾಗಿ ಕೋಲ ಶಾಂತೇಶ ಮೊದಲಾದ ಶಿವಶರಣ ಬಳಗವು ನಿತ್ಯ ಮಂಗಲ ನಾಮಸ್ಮರಣೆಯಲ್ಲಿ ಕಾಲ ಕಳೆಯುತ್ತ ಹೊಗಳುತ್ತಿದ್ದರು.

ಒಂದು ದಿವಸ ಕೊಟ್ಟೂರ ಗ್ರಾಮವಾಸಿ ಎನಿಸಿದ ಶಿವಲಿಂಗಪ್ಪ ಎಂಬ ಶ್ರೇಷ್ಠ ಶಿವಭಕ್ತನು ಜಂಗಮ ಗಣರಾಧನೆಯ ಸುಖ ಸಂತೋಷದಲ್ಲಿ ಇರುತ್ತಿರುವಾಗ ಗುರು ವೃಷಭೇಂದ್ರನನ್ನು ಪರುಕಿಸುವ ಕಾಲ ತಾ ಕೂಡಿ ಬಂದಂತೆ ಶಿವನ ಪ್ರೇರಣೆಯ ಪ್ರಕಾರ ಅಂದಚಂದದಲ್ಲಿ ಮಾಟಾದ ಮೈಯಿಂದ ತಿದ್ದಿ ಮಾಡಿದ ಕೆಸರಿನ ಗೊಂಬೆಯಂತೆ ಮುದ್ದಾಗಿ ಬೆಳೆದುಕೊಂಡ ಆತನ ಆಕಳು ಕರುಗಳೆರಡು ಅಸು ನೀಗಿದವು

ಆಗ ಭಕ್ತ ಶಿವಲಿಂಗಪ್ಪನು ಎಳ್ಳನಿತು ಚಿಂತಿಸದೇ ಶ್ರೀ ಗುರು ಬಸವ ರಾಜನ ನಾಮಸ್ಮರಣೆಯ ಬಲ, ಪಾದೋದಕ ಪ್ರಭಾವ ತೀರ್ಥ, ಪ್ರಸಾದಗಳ ಮಹಿಮೆಯನ್ನರಿತ ಶಿವಭಕ್ತ, ಗುರುಭಕ್ತನು ಇಂತಹ ಅಲ್ಪ ಕಾರಣಕ್ಕೆ ಬೆದರಿ ಚಿಂತಿಸುವದೇಕೆಂದು ಬಸವ ಮಂತ್ರವನ್ನು ಉಚ್ಚರಿಸುತ್ತ, ಭಸ್ಮ ಪಾದೋದಕ ಮಿಶ್ರಣದಿಂದ ಆಕಳು ಕರುಗಳ ಮೈಗೆ ಸವರಿ, ಗುರುಬಸವಾ, ಹರ ರೂಪಿ ಬಸವಾ ಪೊರೆಯುವ ಭಾರ ನಿನ್ನದೈ ಬಸವಾ, ಶ್ರಿ ಗುರು ಬಸವಾ, ಕೊಟ್ಟೂರ ವಾಸಿ ಕರುಣಿ ಬಸವಾ ಎಂದು ಬಸವರಾಜ ಗುರುವರನ ನಾಮಸ್ಮರಣೆ ಗೈಯ್ಯುತ್ತಿರಲು ಎರಡು ಆಕಳು ಕರುಗಳು ಚೇತರಿಸಿಕೊಂಡು ಚಟ್ಟನೆ ಎದ್ದು ಮೈ ಮುರಿದು ಬಾಲ ಮೇಲೆತ್ತಿ ಶಡವಿನ ಆಳಿಕೆಯನ್ನು ತೋರಿಸುತ್ತ ಪುಟಿ ನೆಗೆದು ಕುಣಿಯುತ್ತ ಮುಂದಾಗಿ ಒಡೆಯ ಶಿವಲಿಂಗಪ್ಪನ ಮೈ, ಕೈ, ನೆಕ್ಕಿ ಹತ್ತಿದವು.

ಬಳಿಕ ಗುರುವರನ ಮಹಿಮೆಯಿಂದ ಭಕ್ತ ಶಿವಲಿಂಗಪ್ಪನು ಆನಂದ ಆಶ್ಚರ್ಯಗಳಿಂದ ಸಂತೋಷಗೊಂಡು ಗುರುವಿನ ಸನ್ನಿಧಿಗೆ ಹೊರಟು ಬಂದನು.

ಪಾದೋದಕದಿಂದ ಸತ್ತ ಸ್ತ್ರೀಯೊಳನ್ನು ಬದುಕಿಸಿದ್ದು

ಗುರುಬಸವರಾಜನ ಕೀರ್ತಿಪ್ರಭೆಯೊಡನೆ ಅನಂತ ಲೀಲಾ ವಿನೋದವು ಮುಂದಾಗಿ, ಪ್ರಭುವರನು ಇಚ್ಛಿಸಿ, ಕೆಲವು ಘಟನೆಗಳನ್ನು ಗೈಯ್ಯುವಂತೆ ತನ್ನ ಭಕ್ತ ಬಳಗವನ್ನು ಮತ್ತಷ್ಟು ಪರೀಕ್ಷೆಯ ಗೊಂದಲದಲ್ಲಿ ಸಿಲುಕಿಸಿ ಮೋಜು ಮಾಡಹತ್ತಿದನು.

ಹಿರಿಯೂರ ಗಂಗವ್ವ ಎಂಬ ಸದ್ಗುಣ ಸಂಪನ್ನ ಶಿವಭಕ್ತೆ, ಗುರು ಭಕ್ತೆಯು ಗುರುಬಸವರಾಜರನ್ನು ಅನನ್ಯ ಭಕ್ತಿಭಾವದಲ್ಲಿ ಸೇವಿಸಿ ಗುರುರಾಜರಲ್ಲಿ ಶ್ರೇಷ್ಠ ಶಿವಭಕ್ತೆ ಎನಿಸಿಕೊಂಡು, ಗುರುಗಳ ಶ್ರೀವಾಣಿಯಿಂದ ಸಜ್ಜನ ಭಕ್ತೆ ಎಂದು ಹೊಗಳಿಸಿಕೊಂಡ ಪ್ರಸಂಗಗಳು ಸಾಕಷ್ಟು ಸಾರೆ ಬಂದುಹೋಗಿದ್ದವು.

ಮತ್ತೀ ಈಗ ಗುರುಗಳು ಭಕ್ತಳನ್ನು ಪರೀಕ್ಷಿಸುವ ಪಣತೊಟ್ಟವರಂತೆ ಇದ್ದಕ್ಕಿದ್ದ ಹಾಗೆ ಗಂಗಮ್ಮನ ಸೊಸೆಯನ್ನು ಪ್ರಾಣಾಪಾಯದಲ್ಲಿ ಸಿಲುಕಿಸಿ, ಜಂಗಮಾರ್ಯ ಸೇವೆಯಲ್ಲಿದ್ದ ಅವಳು ಹಟಾತ್ತನೇ ಪ್ರಾಣಬಿಟ್ಟಳು.

ಆಗ ಗಂಗಮ್ಮನು ದುಃಖಿಸುವ ಬದಲಾಗಿ ಗುರು ನಾಮಸ್ಮರಣೆಯಲ್ಲಿ ಬಸವಾ, ಬಸವರಾಜಾ, ಬಸವಯ್ಯಾ, ಬಸವೇಶಾ, ಗುರುಬಸವರಾಜಾ, ತಂದೆ ದೀನಬಂಧುವೇ, ದಯಾಳು ದಯಾಸಾಗರಾ ಎಂದು ಹಲುಬುತ್ತ ಸೊಸೆಯ ಶವವನ್ನು ಹೊತ್ತುತಂದು ಗುರುಪಾದ ಸನ್ನಿಧಿಯಲ್ಲಿ ಹಾಕಿ, ತಂದೆ ಬಸವ ರಾಜಾ ಅಪ್ಪಾ ನನ್ನ ಸೊಸೆ ಇವಳು, ಸತ್ತು ನನ್ನ ಮನೆಮುರಿಯಿತು. ಏಕಿನಿತು ಮುನಿಸು ನನ್ನ ಒಳಗದ ಮೇಲೆ ಎಂದು ಹಂಬಲಿಸಿ, ಈ ಬಡವಿಯ

ಮಾನ ಪ್ರಾಣ ಬಾಳಿನ ಶ್ರೇಯಸ್ಸು ಎಲ್ಲವೂ ನಿನ್ನಿಂದ ಎಂದು ರೋಧಿಸ ಹತ್ತಿದಳು.

ಅಷ್ಟರಲ್ಲಿ ಗುರುಗಳು ಮುಂದಾಗಿ, ಹುಚ್ಚಮ್ಮಾ ಅವಳಿಗೇನಾಗಿದೆ, ಗಾಢವಾದ ನಿದ್ರೆ ಆವರಿಸಿದೆ, ತಾಳು ಎಂದು ಸತ್ತವಳನ್ನು ಮಾತನಾಡಿಸುತ್ತ ಏಳಮ್ಮ ನಿಮ್ಮತ್ತೆ ಬೈಯ್ತಾಳೆ, ಬಹಳ ಸಮಯ ಮಲಗಬಾರದು, ಏಳೇಳು ಮಗಳೇ ಒಂದು ಪಾದೋದಕವ ಸಿಂಪಡಿಸಲು, ನಿದ್ರೆಯಿಂದ ಎಚ್ಚತ್ತವಳಂತೆ ಎದ್ದು ಕುಳಿತ ಸೊಸೆಯನ್ನು ಕರೆದುಕೊಂಡು ಗಂಗಮ್ಮ ಗುರುಬಸವರಾಜರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದಳು.

ವಿಭೂತಿಯಿಂದ ಎಮ್ಮೆಯು ಪ್ರಾಣ ಪಡೆದದ್ದು

ಮುತ್ತೂರ ಮಲ್ಲಣ್ಣ ಎಂಬ ಭಕ್ತನು ಗುರು ಬಸವರಾಜರ ನಿಷ್ಠಾವಂತ ಭಕ್ತರಲ್ಲಿ ಒಬ್ಬ, ಅವನು ನಿರ್ಮಲ ಮನಸ್ಸಿನಿಂದ ಬಸವ ನಾಮವನ್ನೆ ತನ್ನ ಉಸುರುಸುರಿನಲ್ಲಿ ತುಂಬಿಕೊಂಡು ಜೀವನ ಸಾಗಿಸಿದ್ದನು.

ಹೀಗಿರುವ ಭಕ್ತ ಮಲ್ಲಣ್ಣನ ಹೆಂಡತಿಯು ಉಪಜೀವನದ ಉಪಯೋಗಕ್ಕಾಗಿ ಒಂದು ಎಮ್ಮೆಯನ್ನು ಸಲುಹುತ್ತ ಅದರ ಹಾಲು, ಬೆಣ್ಣೆ, ಮೊಸರು ಮಾರಿ ಬಂದ ಹಣದಿಂದಲೂ ಕಾಳು ಕಡಿಯಿಂದಲೂ ಉದರ ಪೋಷಣೆಗೆ ಮಾರ್ಗ ಮಾಡಿಕೊಂಡಿದ್ದಳು.

ಇಂತಹ ಅವಳ ಬಾಳಿನಲ್ಲಿ ಜೊತೆಯಾಗಿದ್ದ ಆ ಎಮ್ಮೆಯು ಅಕಸ್ಮಾತ್ ಸತ್ತು ಹೋಯಿತು. ಆಗ ಕೇಳುವದೇನು ಮಲ್ಲಣ್ಣನ ಹೆಂಡತಿಯು ಹೊಟ್ಟೆಯ ಮಗ ಸತ್ತರು ಅಷ್ಟು ಪರಿಯಿಂದ ರೋಧಿಸುತ್ತಿದ್ದಳೋ ಇಲ್ಲೋ, ಆ ಶಿವನೇ ಬಲ್ಲ. ಅವಳ ರೋಧನ, ಎಮ್ಮೆಯ ಗುಣಗಾನ ಹೊಗಳಿಕೆಯ ಶ್ರಿಂಗಾರಮಯ ಅಳು ಕೇಳಲು ಗ್ರಾಮನಿವಾಸಿಗಳನೇಕರು ಹುಡಗಾಟಕ್ಕೆಂದು ಬಂದು ಸೇರಿದರು.

ಆದರೂ ಶಿವಭಕ್ತ ಸಂಪನ್ನ, ಗುರುಭಕ್ತ ಮಲ್ಲಣ್ಣನು ಹೆಂಡತಿಯನ್ನು ಸಮಾಧಾನಪಡಿಸುತ್ತ, ಹುಚ್ಚ ಹೆಂಗಳೆ ಮೃತ್ಯುವನ್ನು ಗೆದೆಯಬಲ್ಲ ಮೃತುಂಜಯ ಸ್ವರೂಪಿ ಗುರುಮೂರ್ತಿಗಳ ಕರುಣೆ ನಮಗಿರುತ್ತಿರಲು ಅಳುವ ದೇಕೆ, ಭಕ್ತರ ಕಷ್ಟವನ್ನು ಪರಿಹರಿಸಿ, ಬಂದಿರುವ ಸಂಕಟದಿಂದ ಪಾರು ಮಾಡುವದು ಅವನ ಕರ್ತವ್ಯ. ಅಂದಮೇಲೆ ಭಯವೇಕೆ, ಅಳುವದೇಕೆ ಅಂದೊಮ್ಮೆ ಕಾದಿಡಲು ಹೇಳಿ ಪ್ರಸಂಗ ಬಂದಾಗ ಉಪಯೋಗವಾಗಲೆಂದು ಆಶೀರ್ವದಿಸಿಕೊಟ್ಟ ವಿಭೂತಿಯ ಗಟ್ಟಿಯನ್ನು ತಾಇಲ್ಲಿ ಎಂದು ವಿಭೂತಿ ಯಿಂದ ಎಮ್ಮೆಯ ಮೈಗೆಲ್ಲ ಸವರುತ್ತ, ಕಾಲನಿಗೆ ನೀ ಕಾಲ ಎನಿಸಿದ್ದರೆ ಭಕ್ತರ ಇಚ್ಚಿತವನ್ನು ಪೂರೈಸುವ ಗುರುವಾಗಿದ್ದರೆ ನಿನ್ನ ನಾಮವದು ವಿಭೂತಿಯೊಡನೆ ಎಮ್ಮೆಯ ಪ್ರಾಣ ತಿರುಗಿಸಲಿ ಎಂದು ಬಸವನಾಮಂ, ಶರಣ ಹೃದಯಾಭಿರಾಮಂ, ಅಂತಕ ಭೀಮ ಎಂದು ಬಸವ ಮಂತ್ರ ಉಚ್ಚರಿಸುತ್ತ, ಹೆಂಡತಿಗೆ ಇದರ ಮಹತ್ವ ಇನ್ನರ್ಧ ಗಳಿಗೆಯಲ್ಲಿ ತಿಳಿಯು ವದು ಎಂದು ಹೇಳುತ್ತಿರುವಾಗಲೇ ಎಮ್ಮೆಯ ಪ್ರಾಣ ತಿರುಗಿ ಮಲಗಿದ್ದು ಎದ್ದುನಿಂತಿತು. ಭಕ್ತರ ಆನಂದಕ್ಕೆ ಅಳತೆ ಇಲ್ಲದಾಗಿ ಬಸವನಾಮದಲ್ಲಿ ತಲ್ಲೀನರಾದರು.

ಭಾವಿಯಲ್ಲಿ ಬಿದ್ದ ಭಕ್ತನನ್ನು ನೋಟ ಮಾತ್ರದಿಂದ ಬದುಕಿಸಿದ್ದು

ಬರು ಬರುತ್ತ ಗುರು ಬಸವರಾಜರು ಮೃತ್ಯುವನ್ನು ಕಟ್ಟಿ ಕೆಡುಹಲು ಕಂಕಣ ಬದ್ಧರಾಗಿ ನಿಂತರು. ಒಂದೇ, ಎರಡೇ, ನೂರಾರು ಜೀವಗಳ ಪ್ರಾಣ ವನ್ನು ಗೆಲಿದ ಪ್ರಕರಣಗಳು ಗಾಳಿಯಲ್ಲಿ ಕೂಡಿದವು. ಮಳೆ ಹನಿಯಲ್ಲಿ ಮುತ್ತಿನಂತೆ ಶೋಭಿಸಿದವು. ಜನತೆಯ ನುಡಿಯಲ್ಲಿ ನುಡಿ ಮುತ್ತುಗಳಾಗಿ ಪರಿಣಮಿಸಿ ಭಕ್ತರ ಬರುವಿಕೆ, ಶರಣರ ಇರುವಿಕೆ, ಶಿವಯೋಗ ಸಾಧಕ ವಟುಗಳ ಸಾಧನಕೆ ತವರು ಮನೆಯಾಯಿತು. ಗುರು ಬಸವರಾಜರ ಸನ್ನಿಧಿಯು.

ಹೀಗಿರುವಾಗ ಶಿವಭಕ್ತ ಶ್ರೇಷ್ಠ ಶಾಂತಲಿಂಗಪ್ಪ ಎಂಬವನು ಕತ್ತಲೆಯ ಮುಸುಕಿನಲ್ಲಿ ಬೈಹಿರ್ದೆಸೆಗೆ ಹೋಗಿ ಮರಳಿ ಬರುವ ಸಮಯದಲ್ಲಿ ದಾರಿಯ ಬದಿಯಲ್ಲಿದ್ದ ಹಾಳು ಭಾವಿಯಲ್ಲಿ ಬಿದ್ದು ಒದ್ದಾಡಿ ಪ್ರಾಣ ನೀಗಿದನು.

ಬಳಿಕ ಶಿವಭಕ್ತರೆಲ್ಲರೂ ಸೇರಿ ಪರಿಶ್ರಮದಿಂದ ಆತನನ್ನು ಭಾವಿಯಿಂದ ಹೊರಗೆ ತೆಗೆದು, ಗುರು ಸನ್ನಿಧಾನಕ್ಕೆ ತಂದು, ಪರಿಪರಿಯ ಪ್ರಾರ್ಥನೆಯಿಂದ ಗುರುಗಳ ಮನ ಒಲಿಸಿ, ಅಯ್ಯಾ ಗುರುಬಸವೇಶಾ, ಗುರುಕೊಟ್ಟೂರೇಶಾ, ಪಾಪ ಶಿವಭಕ್ತ ಸಂಪನ್ನನೋರ್ವನು ದುರ್ಮರಣಕ್ಕೆ ಆಹುತಿಯಾಗುವದು ಉಚಿತವೇ ಎಂದು ಬೇಡಿಕೊಳ್ಳಹತ್ತಿದರು.

ಆಗ ಗುರು ವೃಷಭೇಂದ್ರನು ಅಂತಃಕರುಣ ಉಕ್ಕಿ, ಭಕ್ತನ ಸಮೀಪ ಸುಳಿದು ಕೃಪಾದೃಷ್ಟಿಯಿಂದ ಶವವಾದ ಶಿವಭಕ್ತನನ್ನು ನೋಡಿದೊಡನೆ ಮಲಗಿದವನು ಆಕಳಿಸುತ್ತ ಮೇಲೇಳುವಂತೆ ಎದ್ದು, ಮೈಮುರಿದು ಗುರು ಸನ್ನಿಧಾನವನ್ನು ಕಂಡು ಭಕ್ತಿಯಿಂದ ನಮಸ್ಕರಿಸಿದನು.

ಬಳಿಕ ಭಕ್ತಬಳಗವೆಲ್ಲವೂ ಸೇರಿ ಗುರುನಾಮಸ್ಮರಣೆಯಿಂದ ಗುರುಗಳ ಮನ ತಣಿಯುವಂತೆ–

ಶ್ರೀಗುರು ಬಸವಾ ಶ್ರೀಗುರು ಬಸವಾ
ಜಯ ಗುರು ಬಸವಾ ಜಯ ಗುರು ಬಸವಾ
ಜಯ ಕೊಟ್ಟೂರೇಶಾ ಜಯ ಕೊಟ್ಟೂರೇಶಾ
ಜಯ ಜಯ ಕೊಟ್ಟೂರ ಈಶಾ ಗುರು ವೃಷಭೇಶಾ

ಎಂದು ಹಾಡಿ ಹೊಗಳಿ ಆನಂದಿಸಿದರು.

ಸತ್ತ ಗೂಳಿಯನ್ನು ತಮ್ಮತ್ತ ಆಹ್ವಾನಿಸಿಕೊಂಡದ್ದು

ಕೊಟ್ಟೂರ ಗ್ರಾಮವಾಸಿಗಳಲ್ಲಿ ಬಸವ ಭಕ್ತರಬಳಗವು ಹೆಚ್ಚಾದಂತೆ, ಶಿವಸಂಪ್ರೀತ ಕಾರ್ಯಗಳು ಎಡೆಬಿಡದೆ ಸಾಗಹತ್ತಿದವು ದೇವರ ಹೆಸರಿನಲ್ಲಿ ಅನಂತ ಕಾರ್ಯಕಲಾಪಗಳು, ಉತ್ಸವ ಪ್ರಸಂಗಗಳು ಪದೇ ಪದೇ ನಡೆಯುತ್ತಿದ್ದವು.

ಇಂತಿರ್ಪ ಸಮಯದಲ್ಲಿ ಭಕ್ತಶ್ರೇಷ್ಠರೊಬ್ಬರು ದೇವರ ಹೆಸರಿನಲ್ಲಿ ಗೂಳಿಯೊಂದನ್ನು ಬಿಟ್ಟಿದ್ದರು. ಆದರೆ ಅದು ದೇವರದೇವ ಮಹಾದೇವ ಶಿವನ ಮನಸ್ಸಿಗೆ ಬರಲಿಲ್ಲವೋ ಅಥವಾ ಗುರುಬಸವರಾಜರ ಪ್ರಭಾವ ಲೀಲಾ ವಿನೋದವನ್ನು ಭಕ್ತರಿಗೆ ತೋರಿಸುವ ಇಚ್ಛೆಯಿಂದಲೋ ಆ ಗೂಳಿಯು ಹಠಾತ್ತನೇ ಮರಣವನ್ನಪ್ಪಿತು.

ಆಗ ಕೂಡಿದ ಭಕ್ತಜನರು ಗೂಳಿಯನ್ನು ಹೂಳುವ ಮನದವರಾಗಿ ಗುರುಗಳ ಸನ್ನಿಧಿಗೆ ಬಂದು, ಅಪ್ಪಣೆಯನ್ನು ದಯಪಾಲಿಸಲು ಕೇಳಿದರು. ಅದಕ್ಕೆ ಶ್ರೀಗುರು ಬಸವರಾಜನು ನಸುನಕ್ಕು, ಸ್ನೇಹ ಸೌಹಾರ್ದ ದೃಷ್ಟಿಯಿಂದ, ಅಯ್ಯಾ ನಮ್ಮ ಆ ಬಸವನನ್ನು ನಮ್ಮ ಹತ್ತಿರ ಬರಲು ತಿಳಿಸಿರಿ ಎಂದರು.

ಗುರುಗಳ ನುಡಿಯಿಂದ ಶರಣಬಳಗದವರಿಗೆ ಕೌತುಕವೆನಿಸಿ, ಏನಿದು ಗುರುಗಳ ಅಪ್ಪಣೆ ಎಂದು ಬೆರಗುಗಣ್ಣುಗಳಿಂದ ನೋಡಿದರೆ ಹೊರತು ಒಬ್ಬರಿಗೂ ಏನೆಂದೂ ಮಾತನಾಡುವ ಧೈರ್ಯಬರಲಿಲ್ಲ. ಕೊನೆಗೊಮ್ಮೆ ಗುರುಗಳ ಅಪ್ಪಣೆಯಂತೆ ನಡೆಯುವದು ನಮ್ಮ ಕರ್ತವ್ಯವೆಂದು ಭಕ್ತರು, ಶರಣರು ಕೂಡಿ ಬಸವ ಮರಣಗೈದ ಸ್ಥಳಕ್ಕೆ ಬಂದು, ನಿರ್ಮಲಚಿತ್ತದಿಂದ ಮೈತೊಳೆದು, ಭಸ್ಮ, ಗಂಧ, ಪೂಸರ, ಜೂಲ, ಬಾಸಿಂಗ, ಗೆಜ್ಜೆ, ಗಂಟೆ ಅನಂತರೀತಿಯ ವೈಭವದಿಂದ ಶೃಂಗರಿಸಿ, ಸಡಗರದ ಶೋಭೆಯಲ್ಲಿ ಮಲಗಿದ ನಂದಿದೇವನನ್ನು ಮಾತನಾಡಿಸುತ್ತ, ಕೋಲಶಾಂತೇಶ ಶರಣರು ಅಯ್ಯಾ ಪ್ರಥಮಗಣ ನಾಯಕರಾದ ಗುರುಬಸವರು ನಿಮ್ಮನ್ನು ತಮ್ಮತ್ತ ಬರಹೇಳಿದ್ದಾರೆ. ತೀವ್ರ ಏಳಯ್ಯಾ ಏಳು ಎನ್ನುತ್ತಿರುವಾಗಲೇ ಗೂಳಿಯು

ಪುಟಿನೆಗೆದು, ಹೂಂಕರಿಸಿ ಎದ್ದು ಚಿನ್ನಾಟದ ಚಲುವ ಸಡಗರದಲ್ಲಿ ತಲ್ಲೀನನಾಗಿ, ಜಿಗಿದು ಮುಂದಾಯಿತು. ಶರಣಗಣ ಭಕ್ತ ಬಳಗದೊಡನೆ ಹೊರಟು ಬರುತ್ತಿರುವ ಬಸವನ ಆ ನಡಿಗೆಯ ವೈಖರಿಯನ್ನು ಕಂಡು, ಗುರು ವೃಷಭೇಂದ್ರನು ಸ್ನೇಹಪೂರ್ಣ ಕಂಗಳಿಂದ ಕಂಡು ಆನಂದಗೊಂಡು ಶಿವಗಣರೊಡನೆ ಸುಖವಿಲಾಸ ವೈಖರಿಯಲ್ಲಿ ಸಾಗಿಬರುವ ಬಸವಾ, ಬಾರಯ್ಯಾ ಬಾ ಬೇಗ ಎಂದು ಸಮೀಪದಲ್ಲಿ ಕರೆದು, ಆನಂದದಿಂದ ಆಲಿಂಗಿಸಿ, ಮುದದಿಂದ ಮುದ್ದುಕೊಟ್ಟು, ಸಂತಸದ ಸತ್ಕಾರವುಳ್ಳ ವಾಕ್ಯಸರಣಿಯಿಂದ ಮನ್ನಿಸಿ, ಮೈಸವರಿ ಮನಸಾರೆ ಆನಂದಪಟ್ಟರು.

ಗುರುಗಳ ಆನಂದವನ್ನು ಕಣ್ಣಾರೆಕಂಡ ಶರಣ ಕೋಲಶಾಂತೇಶನು ಅಭಿಮಾನದಿಂದ ಕರಜೋಡಿಸಿ, ಗುರುದೇವಾ ಭೂಮಿಯಂ ಬೆಳಗಲೆಂದು ಬಂದ ಶಿವಮಹಾದೇವನ ಸತ್ವವನ್ನು ಪಡೆದುಕೊಂಡು ಬಂದಿರುವ ಪ್ರಥಮ ಗಣಾಧೀಶ್ವರ ಗುರುವರನೇ ನಿಮ್ಮನ್ನು ಮರೆಯುತ್ತಿರುವ ಜನರಿಗೆ ನಿಜತ್ವದ ನೆಲೆ ತಿಳಿಸಿ, ಭಕ್ತಿ ಇರುವಲ್ಲಿ ಸದಾ ಬೆಂಗಾವಲಾಗಿರುವೆನೆಂಬುದನ್ನು ತೋರ್ಪಡಿಸಲೆಂದು ಬಂದ ನಿಮ್ಮಿಂದ ಒಂದೆ ಎರಡೇ ಆನಂತ ಲೀಲೆಗಳ ಸುರಿಮಳೆಯಾಯಿತು. ಕುರುಡರಿಗೆ ಕಣ್ಣು ಕೊಟ್ಟೆ, ಮೃತ್ಯುದೇವಿ ನಿನಗಿಂದು ದಾಸಿಯಾಗಿಹಳು. ದೈನ್ಯರಾಗಿ ನಿಷ್ಠೆಯಿಂದ ಪ್ರಾರ್ಥಿಸುವ ಭಕ್ತರನ್ನು ಉದ್ಧರಿಸುವ ದೀನ ಬಂಧು, ದಯಾಸಾಗರ ಎನಿಸಿದೆ ಎಂದು ಪರಿಪರಿಯಿಂದ ಪ್ರಾರ್ಥನೆ ಸಲ್ಲಿಸಿದನು.

ಬಳಿಕ ಗುರುದೇವಾ ಇನಿತೆಲ್ಲ ಪ್ರಸಂಗಗಳ ಪ್ರಕರಣ (ಪವಾಡ) ಪರಿಚಯವನ್ನು ಪುರಾಣದ ಮುಖಾಂತರ ಅರಿತುಕೊಂಡು ನಮಗಿಂದು ಪ್ರತ್ಯಕ್ಷ ನಿದರ್ಶನವಾಗಿ ತಮ್ಮ ಮಹಿಮೆಯನ್ನೂ ಅದಾವ ರೀತಿ ಬಣ್ಣಿಸಿದರೂ ಕಡಿಮೆ ಎಂದು ಭಕ್ತಿಭಾವದಲ್ಲಿ ಕರಜೋಡಿಸಿ, ತಮ್ಮ ಪ್ರಭಾವದಿಂದ ಎಕ್ಕಪ್ಪ ತಂದೆ ಎಂಬ ಶರಣರ ನೆನಪು ಬರುವದೆಂದರು.

ಆಗ ಗುರುಬಸವರಾಜರು ಎಕ್ಕಪ್ಪತಂದೆಗಳ ಕಥೆಯನ್ನು ಭಕ್ತಜನ ಸಮೂಹದಲ್ಲಿ ವಿವರಿಸಬೇಕೆಂದು ಅಪ್ಪಣೆಯನ್ನು ದಯಪಾಲಿಸಿದರು.

———

ಕೋಲಶಾಂತೇಶನಿಂದ ಮಾಣೂರ ಎಕ್ಕಪ್ಪ ತಂದೆ ಶರಣರ ಕಥೆ

ಮಾಣೂರ ಎಂಬ ಗ್ರಾಮದಲ್ಲಿ ಶಿವಭಕ್ತಶ್ರೇಷ್ಠರೂ, ಕವಿಕಲಾವಂತ ಸಜ್ಜನ ಸತ್ಪುರುಷರೂ ಎನಿಸಿ ಬಾಳಿಕೊಂಡಿದ್ದ ಎಕ್ಕಪ್ಪತಂದೆ ಎಂಬ ಶರಣ ಶ್ರೇಷ್ಠರಿದ್ದರು. ಇವರ ಶರಣತ್ವ ಸಾಧನೆಯಲ್ಲಿ ಅಸಾಧಾರಣವಾದ ನಿಜ ಬೆಲೆಯ ಬೆಳಕು ಕಾಣುವಂತಹ ವ್ಯಕ್ತಿತ್ವ ಅಡಕವಾಗಿತ್ತು.

ಇಂತಿರ್ಪ ಶರಣರ ವಸತಿಯಾದ ಮಾಣೂರ ಗ್ರಾಮಾಧಿಕಾರಿ ಮಲ್ಲುಕ ಎಂಬವನು ಮಹಾ ಗರ್ವಿಷ್ಟನು. ಆತ್ಮಪ್ರಶಂಸೆಯಲ್ಲಿ ಸರ್ವರೀತಿಯ ಹಕ್ಕು ಬಾಧ್ಯತೆಗಳು ತನ್ನವೆಂದು ಸಾಧಿಸುವ ನೀಚಸಾಧಕನಾಗಿದ್ದನು. ತನ್ನ ಗೌರವದ ಘನಕಾರ್ಯದಲ್ಲಿ ಎಕ್ಕಪ್ಪತಂದೆ ಮುಳ್ಳಾಗಿದ್ದಾನೆ. ಆ ಮುಳ್ಳು ಮುರಿಯಬೇಕೆಂದರೆ ಊರಿನ ಅನೇಕ ಪ್ರಮುಖ ಹಿರಿಯ ನಾಗರಿಕರಿಗೆ ಹೊರತಾಗಬೇಕಾಗುತ್ತದೆ ಎಂಬ ಸಂಶಯದಲ್ಲಿ ಸದಾ ಕೊರಗುತ್ತಿದ್ದನು.

ಏನಾದರೊಂದು ನೀಚಸಾಧನೆ, ಮೋಸ ವಂಚನೆಯಿಂದ ಆ ಶರಣನ ಘನತೆಯನ್ನು ತಗ್ಗಿಸಬೇಕೆಂಬ ಸ್ವಾರ್ಥ ಸಾಧನೆಯಲ್ಲಿರಲು ದೈವೀನಿರ್ಣಯ ವೇನೋ ಎನ್ನುವಂತೆ ಅವನ ನೆಚ್ಚಿನ ಕುದುರೆ ಅಕಸ್ಮಾತ್ತಾಗಿ ಸತ್ತು ಹೋಯಿತು.

ಇದೇ ಸರಿಯಾದ ಪ್ರಸಂಗವೆಂದು ಮಲ್ಲುಕನು ಸತ್ತ ಅಶ್ವವನ್ನು ಎಕ್ಕಪ್ಪತಂದೆಗಳ ಬಳಿಗೆ ಹುಡುಗಾಟದಲ್ಲಿ ಕಳುಹಿಸಿದನು. ಆಗ ಆ ಶರಣರು ಪರವಾಯಿಲ್ಲವೆಂಬ ಉಲ್ಲಾಸದಿಂದ ಅಶ್ವದಮೇಲೆ ಮಾಹೇಶ್ವರ ಗಣಂಗಳ ಪಾದೋದಕ ಸಿಂಪಡಿಸಿ, ಶಿವನಾಮಸ್ಮರಣೆಯಲ್ಲಿರಲು ತೇಜಿಯು ಬದುಕಿ, ಎಕ್ಕಪ್ಪತಂದೆಯ ಕೀರ್ತಿ ಸುತ್ತಲೂ ಪಸರಿಸಿತು.

ಶರಣರ ಕೀರ್ತಿಯನ್ನು ಕೇಳಿದ ದಿಲ್ಲಿಯ ಬಾದಶಹನು ಅನಾಯಾಸ ಅದೇ ಸಮಯದಲ್ಲಿ ಅಸುನೀಗಿದ ತನ್ನ ಮಗನ ಶವವನ್ನು ಒಂದು ಪೆಟ್ಟಿಗೆ ಯಲ್ಲಿ ಭದ್ರಪಡಿಸಿ, ಅವರ ಬಳಿಗೆ ಕಳುಹಿಸಲು, ಜಂಗಮರ ಪಾದೋದಕದಿಂದ ಆ ಕೂಸಿನ ಪ್ರಾಣವನ್ನು ಮರಳಿ ಕರುಣಿಸಿದರು. ಬಾದಶಹನು ಸಂತೋಷ

ಗೊಂಡು, ಶರಣರನ್ನು ತನ್ನಬಳಿಗೆ ಕರೆಯಿಸಿಕೊಂಡು ಸನ್ಮಾನಿಸಬೇಕೆಂದು ಸೇವಕರನ್ನು ಕಳುಹಿಸಿದನು.

ಸೇವಕರ ನುಡಿಯನ್ನು ಕೇಳಿದ ಶರಣರು ಬಾದಶಹನ 'ಸನ್ಮಾನಕ್ಕೆ ನಾವು ಸಮ್ಮಂಥವಿಲ್ಲಾ, ಎಲ್ಲವೂ ಶಿವಗಣವರರ ಪಾದೋದಕ ಮಹಿಮೆ, ನಾನು ನಿಮಿತ್ಯಮಾತ್ರ ಎಂದು ಬಾದಶಹರ ಬಳಿಗೆ ಹೋಗಲು ಒಪ್ಪಲಿಲ್ಲ. ಆಗ ಸೇವಕರು ಅನಿವಾರ್ಯವೆಂದು ತಿರುಗಿ ತಮ್ಮ ದೊರೆಯ ಬಳಿಗೆ ಹೋಗಿ ಶರಣರು ಇಲ್ಲಿಗೆ ಬರಲು ನಿರಾಕರಿಸಿದರು ಎಂದು ತಿಳಿಸಿದರು.

ಬಳಿಕ ಸೇವಕರ ಹೇಳಿಕೆಯಿಂದ ಸಿಟ್ಟು ಬೆಂಕಿಯಾದ ಬಾದಶಹನು ಅವರ ಮನೆಗೆ ಬೆಂಕಿಯನ್ನಿಟ್ಟು ಸುಟ್ಟುಬರಲು ತನ್ನ ಸೇವಕರಿಗೆ ಆಜ್ಞಾಪಿಸಲು, ಅವರು ದೊರೆಯ ಆಜ್ಞೆಯಂತೆ ಶರಣರ ಮನೆಗೆ ಬೆಂಕಿಯನ್ನು ಹಚ್ಚಿದರು. ಆದರೆ ಶರಣರ ಮಹಿಮೆಯಿಂದ ಅವರ ಮನೆ ಬೆಂಕಿಯಿಂದ ಸುಡುವ ಬದಲು ಸೇವಕರ ಹೃದಯವೇ ಸುಟ್ಟ ವೇದನೆ ಅನುಭವಿಸುತ್ತ ದಿಲ್ಲಿಯತ್ತ ಸಾಗಿದರು. ಅಲ್ಲಿ ಬಾದಶಹನಾದರೂ ಅದೇ ಸ್ಥಿತಿಯಿಂದ ತಳಮಳದಲ್ಲಿ ತೊಳಲಾಡುತ್ತಿದ್ದನು.

ಇಷ್ಟಾದ ಬಳಿಕ ಬಾದಶಹನಿಗೆ ವಿವೇಕಮೂಡಿ ಎಕ್ಕಪ್ಪತಂದೆ ಶರಣರ ಬಳಿಗೆ ಬಂದು, ತನ್ನಿಂದಾದ ಅಪರಾಧವನ್ನು ಮನ್ನಿಸಿ ಕಾಪಾಡಬೇಕೆಂದು ಬೇಡಿಕೊಳ್ಳಲು, ಶರಣರಿಗೆ ದಯೆಹುಟ್ಟಿ ದೊರೆಯ ತಳಮಳವನ್ನು ಶಾಂತಗೊಳಿಸಿದರು. ಅಂದಿನಿಂದ ದೊರೆಯಾದರು. ಎಕ್ಕಪ್ಪತಂದೆಗಳ ಸೇವಕನಾಗಿ ಬಾಳಿ, ಜೀವನದಲ್ಲಿ ನಿಜಸುಖವನ್ನು ಅನುಭವಿಸಹತ್ತಿದನು.

ಅದರಂತೆ ಹಾವು ಕಡಿದವನನ್ನು ಬದುಕಿಸಿದ ಪ್ರಸಂಗವು ಉಂಟು. ಆದರೆ ಗುರುವರಾ ತಮ್ಮ ನಾಮ, ವಚನ, ನೋಟ, ಪಾದೋದಕ ಪ್ರಸಾದ ವಿಭೂತಿ ಇವುಗಳ ಮಹಿಮೆಯಿಂದ ಇಚ್ಛಿಸಿದವರಿಗೆ, ನಿಜಭಕ್ತರಿಗೆ ಕಾಮ-ದೇನು, ಕಲ್ಪವೃಕ್ಷ ಚಿಂತಾಮಣಿಗಳಾಗಿ ಪರಿಣಮಿಸಿ, ಸ್ಥಿತಿ, ಲಯ, ಉತ್ಪತ್ತಿಗೂ ತಾವೇ ಕಾರಣ ಎನ್ನುವ ತೆರದಿ ತೋರುತ್ತಿರುವ ಪ್ರಸಂಗಗಳನ್ನು ನೋಡಿದರೆ ತಮಗಾರು ಸರಿ ಈ ಜಗದಿ ಎಂದು ಅಭಿಮಾನದ ನುಡಿಗಳಿಂದಲೂ, ಭಕ್ತಿಯ ಭಾವನೆಯಿಂದಲೂ ಸಂತಸದಲ್ಲಿ ಮಾತನಾಡಿದನು.

ಆಗ ಗುರುವೃಷಭೇಂದ್ರನು ಕೋಲಶಾಂತೇಶನನ್ನು ಅಭಿಮಾನದಿಂದ ಅಪ್ಪಿ ಶರಣ ಸಮೂಹದಲ್ಲಿ ಮಧ್ಯದಲ್ಲಿ ದಿವ್ಯ ತೇಜಸ್ಸಿನಿಂದ ಶೋಭಿಸುತ್ತಿದ್ದನು.

ರಾಜಾಂಗಣದ ಧೂಳದಿಂದ ವಡ್ಡರ ಜ್ವರಬಾಧೆಯು ನಿವಾರಣೆಯಾದದ್ದು

ಉದಯದಿಂದ ಹಿಡಿದು ಸೂರ್ಯ ಕಿರಣಗಳು ಹೆಚ್ಚಾಗಿ ಪ್ರಖರತರವಾದ ಪ್ರಕಾಶವನ್ನು ಬೀರುವಂತೆ ಗುರು ಬಸವರಾಜರ ಪವಾಡಗಳು ಬರ-ಬರುತ್ತ ಪ್ರಖರ ಪ್ರಕಾಶದಂತೆ ಶೋಭಿಸಹತ್ತಿದವು.

ಒಮ್ಮೆ ಮತ್ತಿಗಟ್ಟೆ ಎಂಬ ಗ್ರಾಮದಲ್ಲಿ ಒಡ್ಡರ ಸಮಾಜದಲ್ಲಿ ಬಹು ಪಾಲು ಜನರಿಗೆ ಉಗ್ರ ಜ್ವರ ಬಾಧೆ ಪ್ರಾರಂಭವಾಗಿ ಬಳಲಿ ಸಾಯುತ್ತಿರಲು ಗುರು ಬಸವರಾಜರ ಮಹಿಮೆಯನ್ನರಿತ ಓರ್ವ ಶಿವಭಕ್ತನು ಅವರನ್ನು ಸಂತೈಸುತ್ತ ಅಯ್ಯಾ ವಡ್ಡರೇ ಸತ್ತು ಸುಡುಗಾಡ ಕರಕಾದ ಮಾನವ ಜೀವಿ, ಪಶುಗಳಾದಿ ಎಲ್ಲರನ್ನು ಪೊರೆದು ಹೆಸರುವಾಸಿಯಾದ ಗುರು ಬಸವರಾಜ ಶ್ರೇಷ್ಠನು ಕೊಟ್ಟೂರಲ್ಲಿ ವಿರಾಜಮಾನರಾಗಿರುವಾಗ ಭಯವೇತರದು. ಕೊಟ್ಟೂರಿಗೆ ಸಾಗಿ ಅವರ ಪಾದಗಳನ್ನು ಪಿಡಿದು, ಬಂದಿರುವ ಜ್ವರ ಬಾಧೆಯಿಂದ ಮುಕ್ತಗೊಳಿಸಬೇಕೆಂದು ಬೇಡಿಕೊಳ್ಳುವದು ಉಚಿತವೆಂದು ಭೋಧಿಸಿದನು.

ಅವನ ಭೋಧೆಯಂತೆ ವಡ್ಡರೆಲ್ಲರೂ ಸೇರಿ ಕೊಟ್ಟೂರಿಗೆ ಬಂದು ಗುರುವಿಗೆ ಪೊಡಮೊಟ್ಟು ಭಯ ಭಕ್ತಿ ವಿಶ್ವಾಸದಿಂದ ಪ್ರಾರ್ಥಿಸಿ ರಾಜಾಂಗಣದಲ್ಲಿ ಹೊರಳಾಡುತ್ತಿರಲು ಅಂಗಳದ ಧೂಳ ಮೈಗೆ ಮೆತ್ತಿದ ಕ್ಷಣ ಮಾತ್ರದಲ್ಲಿ ಅವರೆಲ್ಲ ಜ್ವರ ಭಾಧೆ ಮಾಯವಾಗಿ ರೋಗದಿಂದ ಮುಕ್ತರಾದರು.

ಮುಂದೆ ಯಾವತ್ತು ವಡ್ಡರು ತಮ್ಮ ಸರ್ವ ಸಮಾಜದವರೊಡಗೂಡಿ ಗುರುವಿನಲ್ಲಿ ಭಕ್ತಿ ಇಟ್ಟು ಪ್ರೀತಿ ವಿಶ್ವಾಸಪೂರ್ಣ ಸೇವೆಯಲ್ಲಿ ಕಾಲ ಕಳೆಯುತ್ತ ನಿಜ ಸೇವಕರಾದರು. ವಡ್ಡರ ಸೇವೆ ವಿಶ್ವಾಸಗಳನ್ನು ಪರಾಂಭರಿಸಿದ

ಗುರು ವೃಷಭೇಂದ್ರರು ಅವರ ಬಾಳಿನ ಭವಿತವ್ಯವನ್ನು ಉಜ್ವಲಗೊಳಿಸಿ ಕೀರ್ತಿಶಾಲಿಗಳಾಗಿ ಬಾಳುವಂತೆ ವಚನವನಿತ್ತು ಪೊರೆದರು.

ಗುರುವಿನ ಅಂತಃಕರುಣ ಪೂರ್ಣ ಮನಸ್ಸನ್ನರಿತ ಜನರು ತಮ್ಮ ಕರ್ತವ್ಯದಂತೆ (ಮರಣ ಭಯತಿಮಿರ ಭಾಸ್ಕರ, ಉತ್ಕಟ ಜ್ವರ ಮಹೋತ್ಕರ್ಷಾಪಪ್ರವರ್ಷಾಗಮ) ಹೊಗಳುತ್ತಿರಲು ಗುರು ವೃಷಭರಾಜರು ಶರಣ ಸಮೂಹದೊಡನೆ ಆನಂದದಿಂದ ಲೀಲಾ ವಿನೋದದಲ್ಲಿ ಕಾಲ ಕಳೆಯುತ್ತಿದ್ದರು.

---

(೧)

ಹೊಡೆದು ತಲೆಶೂಲೆ ಕಳೆದದ್ದು

ಒಂದು ದಿನ ಶ್ರೀ ಗುರುಗಳು ಸಕಲ ಶರಣರೊಡಗೂಡಿ ಊರಲ್ಲಿ ದಯ ಮಾಡಿಸುತ್ತಿರಲು, ಸಂಭ್ರಮದ ಮೆರವಣಿಗೆಯಲ್ಲಿ ಕವಿ ಕಲಾವಂತ ಬಳಗ, ಪಂಡಿತ ಶಿರೋಮಣಿಗಳು ವಂದಿಗರಾದಿಯಾಗಿ ಗುರುವಿನ ಸಕಲ ಬಿರುದುಗಳನ್ನು ಹೊಗಳುತ್ತ ಸಾಗಿರುವ ಸಮಯದಲ್ಲಿ ಮಲ್ಲಪ್ಪ ಶೆಟ್ಟಿ ಎಂಬ ಪ್ರಿಯ ಭಕ್ತನು ಎದುರಾಗಿ ಬರಲು ಗುರು ಬಸವರಾಜನಿಗೆ ಅದಾವ ರಭಸ ಉಕ್ಕಿ ಬಂತೋ ಬಲ್ಲವರಾರು ಶೆಟ್ಟಿಯು ನಮಸ್ಕರಿಸಿ ಮೇಲೇಳುವಾಗ ಬಲವಾಗಿ ಬೀಸಿ ಮೋರೆಯ ಮೇಲೆ ಹೊಡೆದನು. ಶೆಟ್ಟಿಯು ಪೆಟ್ಟಿನ ನೋವು ತಾಳಲಾರದೆ ನೆಲಕ್ಕುರುಳಿದನು. ಜನ ಸಂದಣಿಯು ಗಾಭರಿಯಿಂದ ಮುಂದಾಗುತ್ತಿರಲು ಗುರುವು ಹಿಂದೆ ಉಳಿಯುತ್ತ ಬಿದ್ದನೋ ಬಿದ್ದಿರುವನೋ ನಿಲ್ಲಿರೆನಲು ಎಲ್ಲರಿಗೂ ಮತ್ತಷ್ಟು ಆಶ್ಚರ್ಯವಾಗಲು, ಬಿದ್ದ ಶೆಟ್ಟಿ ಎದ್ದು ಬರುತ್ತ ಸಂತಸದಿಂದ ಕೂಡಿದ ಜನರ ಸಮ್ಮುಖದಲ್ಲಿ ನನಗಿದ್ದ ಹನ್ನೆರಡು ವರುಷದ ತಲೆಶೂಲೆಯನ್ನು ಹೊಡೆದು ಅಟ್ಟಿದನು ನಮ್ಮ ಗುರು ಬಸವರಾಜ ಎಂದು ಹೆಮ್ಮೆಯಿಂದ ಹೇಳಿ ನಮಸ್ಕರಿಸಿ ಮೆರವಣಿಗೆಯೊಡನೆ ಸಾಗಿದನು.

(೨)

ವಿಷ್ಣುಭಕ್ತನ ರೋಗ ಪರಿಹರಿಸಿದ್ದು

ಒಮ್ಮೆ ಹರಿದಾಸ ಎಂಬ ವಿಷ್ಣುಭಕ್ತನು ಸಕಲ ರೋಗಗಳ ಸರಮಾಲೆಯನ್ನೇ ಹೊತ್ತು ಕಾಡುವ ರೋಗಗಳ ಬಾಧೆಯಿಂದ ಬಳಲಿ ಸೋತು ವೆಂಕಟೇಶ ಸ್ವಾಮಿಯ ದರ್ಶನದಿಂದ ನನ್ನ ರೋಗಗಳು ವಾಸಿಯಾಗಬಹುದೆಂದು ತಿರುಪತಿಗೆ ಹೋಗಿ ನಾನಾ ರೀತಿ ಸೇವೆಯಿಂದ ಸ್ವಾಮಿಯನ್ನು ತೃಪ್ತಿಪಡಿಸಿ ಮರಳಿ ಊರಿಗೆ ಬಂದು ಏಳು ದಿನಗಳು ಗತಿಸಿದರು ರೋಗದ ಬಳಲಿಕೆಯಲ್ಲಿ ಯಾವ ಬದಲಾವಣೆಯಾಗದೆ ಬಲು ನೊಂದು, ಬೆಂದು, ಘಾಸಿಯಾಗ ಹತ್ತಿ ಪ್ರಭೋ ಸ್ವಾಮಿ ವೆಂಕಟೇಶಾ ಎಂದು ಹಲಬ ಹತ್ತಿದನು.

ಆಗ ಏಳನೇ ದಿವಸ ರಾತ್ರಿ ವೆಂಕಟೇಶ್ವರನು ಹರಿದಾಸನ ಕನಸಿನಲ್ಲಿ ಕಾಣಿಸಿಕೊಂಡು ಹುಚ್ಚಾ. ಜಾತಿಯ ಮದದಲ್ಲಿ ಮುಚ್ಚಿದ ಕಣ್ಣು ತೆರೆಯಬಾರದೇ ಬುದ್ಧಿಗೇಡಿ ಮಾನವಾ, ದಯಾನಿಧಿಯಾದ ಗುರು ಕೊಟ್ಟೂರೇಶನು ಕಣ್ಣ ಮುಂದೆ ರಾರಾಜಿಸುತ್ತಿರಲು, ಸುಮ್ಮನೆ ಏಕೆ ಬಳಲುವೆ ಹೋಗು ಗುರು ಬಸವರಾಜನ ಸೇವೆಯಲ್ಲಿ ಬಾಳು ಅಂದಾಗ ನಿನ್ನ ಜೀವನದಿ ನೆಮ್ಮದಿ, ರೋಗ ನಿವಾರಣೆ ಎಂದು ಹೇಳಿ ಮಾಯವಾದನು.

ಬಳಿಕ ಮರುದಿನ ವೆಂಕಟೇಶನ ಹೇಳಿಕೆಯಂತೆ ಹರಿದಾಸನು ವಿವೇಕಶಾಲಿಯಾಗಿ ಗುರು ಸನ್ನಿಧಿಗೆ ಬಂದು, ಲಕ್ಷ್ಮೀಪತಿಯಿಂದ ತನಗಾದ ಸ್ವಪ್ನ ಸಂಗತಿಯನ್ನು ವಿವರಿಸಿ ಭಕ್ತಿ ವಿಶ್ವಾಸಗಳಿಂದ ನಮುಸ್ಕರಿಸಿ ನುತಿಸಲು, ಅವನ ಅಂಗಾಂಗಗಳಲ್ಲಿ ಸೇರಿದ ರೋಗಗಳು ಮಾಯವಾದವು. ಆಗ ಹರಿದಾಸನು ಗುರುವೇ ಮಹಾ ಗುರುವೇ, ಅರಿಯದೇ ಅವಿವೇಕಿಯಾದ ನನ್ನ ಅಪರಾಧವನ್ನು ಕ್ಷಮಿಸಿ ಕಾಪಾಡಿದ ತಮ್ಮ ದಾಸಾನುದಾಸನಾಗಿ ಬಾಳಲು ಅಪ್ಪಣೆಯನ್ನು ದಯಪಾಲಿಸೆಂದು ಸಾಷ್ಟಾಂಗ ನಮಸ್ಕಾರ ಗೈದು ಗುರುವಿನ ಪರಮ ಶಿಷ್ಯನಾದನು.

(೩)

ಸುಳ್ಳು ಶಿಕ್ಷೆಯಿಂದ ಬಿಡುಗಡಿಸಿದ್ದು

ರಟ್ಟಿಹಳ್ಳಿ ಎಂಬ ಗ್ರಾಮದಲ್ಲಿ ಭದ್ರಶೆಟ್ಟಿ ಎಂಬ ವ್ಯಾಪಾರಿ ಇದ್ದನು. ಅವನು ಧನ, ಧಾನ್ಯ, ಸಕಲ ಸಂಪತ್ತುಳ್ಳವನಾಗಿ ಸುಖ ಸಂತೋಷದಿಂದ ಬಾಳಿಕೊಂಡಿದ್ದನು. ಆದರೆ ಅವನ ವಿರುದ್ಧವಾಗಿರುವ ದಾಯಾದಿಗಳು, ಊರನಾಳುವ ಅರಸರಲ್ಲಿ ಅಲ್ಲಸಲ್ಲದ ವಿಷಯ ವಿವರಿಸಿ ಶೆಟ್ಟಿಗೆ ಶಿಕ್ಷೆಯಾಗುವಂತೆ ಮಾಡಿದರು.

ಬಳಿಕ ವಿವೇಕ ಶೂನ್ಯನಾದ ದೊರೆಯು ಭದ್ರಶೆಟ್ಟಿಯನ್ನು ಸೆರೆಮನೆಯಲ್ಲಿ ತಳ್ಳಿಸಿದನು. ಶೆಟ್ಟಿ ಸುಳ್ಳು ಅಪವಾದ ಶಿಕ್ಷೆಯಾದ ನೋವಿನಿಂದ ಮನನೊಂದು, ಸನಗಿದೇಸು ಆಪತ್ಕಾಲ ಬಂತು, ಕೆಟ್ಟ ಕಾಲ ಕಳೆಯಲಿಲ್ಲ. ಈ ಪ್ರಸಂಗದಲ್ಲಿ ಈಶ ಮಹೇಶ ಪ್ರಿಯ ಕೊಟ್ಟೂರೇಶನೊಬ್ಬನೇ ಕಾಯಬೇಕು. ದಯವೇ ಧರ್ಮದ ಮೂಲವೆಂಬ ಮಂತ್ರ ಪಠಿಸುವ ಅವನ ಹೊರತು ಅನ್ಯರಾರು ಗತಿಯೆನಗೆಂದು ಬಸವ ನಾಮ ಸಂಕೀರ್ತನೆಯಲ್ಲಿ, ಬಸವ ಮಂತ್ರ ಘೋಷಣೆಯಲ್ಲಿ ಕಾಲಕಳೆಯುತ್ತಿರಲು, ಕಾರಾಗೃಹದ ಅಗಳಿ ಸಮೇತ ಕೀಲಿಯು ಬಿಚ್ಚಿ ಬಿದ್ದವು. ಆಗ ಆ ಬಿದ್ದ ಅಗಳಿ ಕೀಲಿಯನ್ನು ಕಂಡ ಕಾವಲುಗಾರನು ಸರ್ವಸಂಗತಿಯನ್ನು ಅರಸನಿಗೆ ತಿಳಿಸಿದನು.

ಬಳಿಕ ಅರಸನು ಬಂದು ನೋಡುತ್ತಾನೆ, ಭದ್ರಶೆಟ್ಟಿಯು ಬಸವನಾಮಾ-ಮೃತಪಾನ ಮಾಡಿ, ನಿಶ್ಚಿಂತನಾಗಿ ಕಣ್ಮುಚ್ಚಿ ಇನ್ನೂ ಅವನ ಧ್ಯಾನದಲ್ಲಿರಲು ಅರಸನಿಗೆ ವಿವೇಕ ಮೂಡಿ, ಶೆಟ್ಟಿಯಲ್ಲಿ ಕ್ಷಮೆ ಬೇಡಿ, ಗುರು ಕೊಟ್ಟೂರೇಶನ ಭಕ್ತನಾಗಲು ಹಂಬಲಿಸಿ, ಕೊಟ್ಟೂರ ಶ್ರೀ ಕ್ಷೇತ್ರ ದರ್ಶನಕ್ಕೆ ಹೊರಟನು.

ದೇವಾಲಯ ಪ್ರದಕ್ಷಿಣೆಯಿಂದ ಕುಷ್ಠರೋಗ ನಿವಾರಣೆಯಾದದ್ದು

ಗುರುಬಸವರಾಜರ ಮಹಿಮೆಯನ್ನು ಅರಿತ ರೋಗಿಗಳು, ಸತ್ತವರು ಟ್ಟವರು, ಕುರುಡರು, ಕುಂಟರು, ಐಶ್ವರ್ಯಹೀನರು, ಒಟ್ಟಾರೆ ಸರ್ವಸಂಕಟ ಳಲ್ಲಿ ಬಳಲಿ ಬೆಂಡಾದ ಭಕ್ತರ ಬಯಕೆ ಈಡೇರುತ್ತ ಮಹಿಮಾಪುರುಷ ುರುಬಸವರಾಜ ಯೋಗೇಂದ್ರ ಗುರುಕೊಟ್ಟೂರ ಬಸವೇಶ ದಿರೇಂದ್ರ ಪಾಹೀ ಾಹೀ ಎಂಬ ಭಕ್ತರ ಕೂಗು ದಿನನಿತ್ಯ ದಿಕ್ಕೆತಟಗಳಲ್ಲಿ ದಿಮಿಗುಡುವದು ೀಳಿ, ಮತ್ತಷ್ಟು ಇನ್ನಷ್ಟು ಭಕ್ತರ ಸಂಖ್ಯೆ ಹೆಚ್ಚುತ್ತ ನಡೆಯಿತು.

ಒಮ್ಮೆ ಕುಷ್ಠರೋಗದಿಂದ ಬಳಲಿ ಮೈ ತುಂಬ ಹುಣ್ಣು ಒಡೆದು ುಮನ ಅಪ್ಪಣೆಯಾಗುವ ಕಾಲ ಸಮೀಪಿಸಿದಂತೆ ಮೈಯಿಲ್ಲಿ ಕೀವು ರಕ್ತ ುರಿದು ಹೊಲಸು ನಾರುವ ಶರೀರವನ್ನು ನೋಡುವದಕ್ಕೂ ಹೇಸಿಕೆ. ಬರು ಬರುತ್ತ ಸಾಯುವ ಸ್ಥಿತಿಯಲ್ಲಿಯು ಅವನಿಗೆ ತನ್ನ ಪೂರ್ವ ಸುಕೃತ ಫಲ ವಿಶೇಷದಿಂದ ಗುರು ಬಸವರಾಜರ ನೆನಪಾಗಿ ಕಷ್ಟ ನೋವು ಅನುಭವಿಸುತ್ತ ಮಠಕ್ಕೆ ಬಂದು ಗುರುವಿನ ಸ್ಥಾನ ಮಹಿಮೆಯನ್ನು ಅರಿತವನಂತೆ ಬೀಳುತ್ತ ಏಳುತ್ತ ದೇವಾಲಯದ ಸುತ್ತಲು ಪ್ರದಕ್ಷಿಣೆ ಹಾಕಿ ಬಂದು ನಿಲ್ಲುವಷ್ಟರಲ್ಲಿ ರೋಗದಿಂದ ಮುಕ್ತನಾಗಿ ನಿರೋಗಿ ಎನಿಸಿದನು.

ಬಳಿಕ ಕುಷ್ಠರೋಗದಿಂದ ಕಂಗೆಟ್ಟು ಬಂದವನು ಗುರುವಿನ ಪಾದ ಸನ್ನಿಧಿಗೆ ನಮಸ್ಕರಿಸಿ ಎದ್ದು ಕರಜೋಡಿಸಿ ಗುರುವೇ ಪರಮ ಗುರುವೇ ತಮ್ಮ ಮಹಿಮೆಯ ನ್ನರಿಯಲು ಆಗಮ ನಿಗಮಗಳಿಗೂ ತಿಳಿಯದು. ದೂರ ದಿಂದ ಪ್ರದಕ್ಷಿಣೆ ಗೈದು ನಮಸ್ಕರಿಸಿದ ಮಾತ್ರಕ್ಕೆ ಕುಷ್ಠರೋಗದಂತಹ ಭಯಂಕರ ರೋಗವು ಕ್ಷಣದಲ್ಲಿ ನಿವಾರಣೆಯಾಗುವದೆಂದರೆ ಸಾಮಾನ್ಯ ಮಹಿಮೆಯಲ್ಲವಿದು ಎಂದು ಪದೇ ಪದೇ ದೇವಾಲಯದ ಅಂಗಳದಲ್ಲಿ ಪಾಪವದು ಪೂರ್ಣ ರೂಪಗೊಂಡು ವ್ಯಾಪಿಸಿದ ಕುಷ್ಠರೋಗದ ಶರೀರವನ್ನು ಗುರು ವೃಷಭೇಂದ್ರನ ಸನ್ನಿಧಿಯಲ್ಲಿ ಸವೆಸುವ ಸಲುವಾಗಿ ಮನದಣಿಯುವಂತೆ ಹೊರಳಾಡಿದನು, ತನು ತಣಿಯುವಂತೆ ಗುರುನಾಮ ಭಜಿಸಿದನು.

ಬಸವ ಮಂತ್ರದ ಮಹಿಮೆ

ಅದರಂತೆ ಕಂಚಗೆರೆಯ ಗೌಡನು ಜ್ವರ ಬಾಧೆಯಲ್ಲಿ ಬಳಲಿ ಕೊನೆಗೆ ಆ ತಾಪವನ್ನು ತಾಳಲಾರೆನೆಂದು ಗುರು ಬಸವನೇ ಗತಿ ಎಂದು ಮನದಲ್ಲಿ ಆತನನ್ನು ನಿಲ್ಲಿಸಿ ಬಾಯಿಂದ ಬಸವಾ ಬಸವಾ ಎಂದು ಗುರು ನಾಮಸ್ಮರಣೆ ಗೈಯ್ಯಲು ಆತನ ಜ್ವರ ಬಾಧೆ ಇದ್ದಕ್ಕಿದ್ದಂತೆ ಮಾಯವಾಯಿತು. ನೆನೆಸಿದ ಮಾತ್ರದಲ್ಲಿ ಅದೆಂಥ ಕಠೋರ ಬಾಧೆ ಇದ್ದರು ಪರಿಹರಿಸುವ ಬಸವ ಎಂಬ ಮೂರಕ್ಷರದ ಮಂತ್ರಕ್ಕೆ ಸಾಟಿ ಯಾವದೆಂದು ಗೌಡನು ತಿಳಿದುಕೊಂಡು ಗುರುವಿನ ಧ್ಯಾನದಲ್ಲಿ ಜೀವನದ ಸಕಲ ಭೋಗ ಭಾಗ್ಯಗಳನ್ನು ಪಡೆದು ಸುಖದಿಂದ ಬಾಳಿದನು.

ಬಸವ ನಾಮಸ್ಮರಣೆಯುಳ್ಳ ಮಂತ್ರದಿಂದ ಉದ್ದೆಯ ಚೆನ್ನಮಲ್ಲನ ಕುಷ್ಠ ರೋಗವಳಿದು ಸುಖದ ಬದುಕು ಬಾಳಿದನು.

ಮ್ಯಾದಾರ ಧೂಳಯ್ಯನ ಬಚ್ಚಲ ನೀರಿನಿಂದ ಬ್ರಾಹ್ಮಣನ ಕುಷ್ಠ ರೋಗ ಅಳಿದರೆ ಶ್ರೀಗುರು ಬಸವರಾಜರ ನಾಮಸ್ಮರಣೆ, ದೂರದ ನೋಟ ರಾಜಾಂಗಣದ ಧೂಳ ಮೈಗೆ ಮೆತ್ತಿದಾಗ, ಅಷ್ಟೆ ಅಲ್ಲಾ ನಮಿಸಿ ನುತಿಸಿದಾಗ ಕ್ಷಣ ಉಳಿಯದು ರೋಗದ ಛಾಯೆ ಎಂದು ಭಕ್ತರು ಅರಿತುಕೊಳ್ಳುವಂಥ ಪ್ರಸಂಗಗಳು ಎಡಬಿಡದೇ ಉದ್ಭವಿಸಹತ್ತಿದವು ಎಂದು ಹಿರಿಯ ಶರಣ ಕುಲಮಣಿ ಕೋಲ ಶಾಂತೇಶನು ಕೂಡಿದ ಭಕ್ತ ಸಮೂಹಕ್ಕೆ ತಿಳಿಸಿ ಹೇಳಿದನು,

ಬಳಿಕ ಗುರುವಿನ ಮಹಿಮೆಯನ್ನರಿಯುವದಕ್ಕಾಗಿಯೇ ಶರಣ ಕುಲವರ ಕೋಲ ಶಾಂತೇಶನು ಇಕ್ಕೇರಿ ಶಿಟ್ಟಿಯು ಗುಲ್ಮ ಹುಟ್ಟಿ ಬಳಲಿ ಬೆಂಡಾಗಿ ಬಸವ ಗುರುವೇ, ಗುರು ಬಸವೇಶಾ, ಗುರು ಬಸವರಾಜಾ, ಗುರು ಕೊಟ್ಟೂರ ಬಸವೇಶಾ, ಪೊರೆ ತಂದೆ ದೀನ ರಕ್ಷಕಾ ಈ ಗುಲ್ಮದ ಬಾಧೆಯನ್ನು ತಾಳಲಾರೆ ಎಂದು ಬೇಡಿಕೊಳ್ಳಲು ದಯಾ ಸಾಗರ ಗುರುವರನೆಂಬ ಗರುಡ ಮಂತ್ರ ಕೇಳಿ ಸರ್ಪದ ಸೊಕ್ಕು ತಣ್ಣಗಾಗುವಂತೆ, ಗುಲ್ಮದ ಮದವಳಿದು ಶಿಟ್ಟಿಯು ಸುಖ

ಂದ ಬಾಳಹತ್ತಿರುವೆನೆಂದು ಗುರು ಸನ್ನಿಧಾನಕ್ಕೆ ಅರಿಕೆ ಮಾಡಿ ವಿಷಯ ವಿವರಿಸಿ ಬಸವ ಮಂತ್ರದ ಮಹಿಮೆ ಸಾಮಾನ್ಯವಲ್ಲವೆಂದು ತಿಳಿಸಿದನು.

....

ತುಂಗಭದ್ರೆಯಲ್ಲಿ ತೇಲಿ ಹೋಗುವ ಮಗುವನ್ನು ಸಭೆಯಲ್ಲಿ ಕೈ ಚಾಚಿ ರಕ್ಷಿಸಿದ್ದು

ಗುರು ವೃಷಭೇಂದ್ರನು ಸಭಾ ಸ್ಥಾನದಲ್ಲಿ ಮಂಡಿಸಿದವರು ಶರಣ ರೊಡನೆ ಮಾತನಾಡುತ್ತಿದ್ದಂತೆ ಅಯ್ಯೋ, ಏನಿದು ಎಂದು ಎರಡು ಕೈಗಳನ್ನು ಚಾಚಿ ವಿನಯ ಸೌಜನ್ಯ ಪೂರ್ಣ ನುಡಿಗಳಿಂದ ಅಮ್ಮಾ ಅಂಜದಿರು ಇದೋ ನಿನ್ನ ಕೂಸು ತೆಗೆದ-ಕೋ ತಾಯೆ ಎಂದರು.

ಕುಳಿತವರೆಲ್ಲರು ಅಚ್ಚರಿಯಿಂದ ಗುರುದೇವಾ, ಈ ಲೀಲಾ ವಿಲಾಸದ ಅರ್ಥವೇನೆಂದು ತಿಳಿಸಿ, ಸರ್ವ ಮಾಹೇಶ್ವರ ಬಳಗವನ್ನು ಸಂತೋಷಪಡಿಸ ಬೇಕೆಂದು ಬಿನ್ನೈಸಿಕೊಂಡರು. ಆಗ ಗುರುಗಳು ನಸುನಕ್ಕು ಅಯ್ಯಾ, ತುಂಗಭದ್ರಾ ತೀರದಲ್ಲಿ ಮುಳುಗಿ ಹೋಗುವ ಮಗುವನ್ನು ಉಳಿಸೆಂದು ನನ್ನ ಹೆಸರಿಡಿದು ಓರ್ವ ತಾಯಿ ಕೂಗಿದಳು. ಆ ತಾಯಿಯ ಕರುಳು ಕೊರೆಯುವ ಕೂಗು ಕೇಳಿ, ಆ ಮಗುವನ್ನು ಉಳಿಸಿ ಅವಳಿಗೆ ಒಪ್ಪಿಸಿದೆವು ಎಂದು ನುಡಿದರು.

ಅಷ್ಟರಲ್ಲಿ ಗುರುದರ್ಶನಕ್ಕೆ ಹೊರಟ ಓರ್ವ ಹೆಣ್ಣು ಮಗಳು ಜನ ನಿಕರವನ್ನು ದಾಟಿ ಬಲು ಬೇಗನಿಂದ ಮುಂದಾಗಿ ಬಂದು ತುಂಬಿದ ತುಂಗ ಭದ್ರೆಯ ಪ್ರವಾಹದಲ್ಲಿ ತೇಲಿ ಹೋದ ತೊಟ್ಟಿಲ ಸಹಿತ ಮಗುವನ್ನು ತಂದು ಗುರುಪಾದದ ಬಳಿ ಇರಿಸಿ, ಭಕ್ತಿಯಿಂದ ನಮಿಸಿ, ಶರಣು ಬಂದವರನ್ನು ರಕ್ಷಿಸುವ ತಂದೆ, ತುಂಗಭದ್ರೆಯ ನೀರಿನಲ್ಲಿ ಮುಳುಗುವ ಮಗುವನ್ನು ಉಳಿಸಿ ಕಾಪಾಡಿದ ನಿಮ್ಮ ಕರುಣೆಯನ್ನು ಅದೆಷ್ಟು ಕೊಂಡಾಡಿದರು ಕಡಿಮೆ ಎಂದು ಹೊಗಳಿ ಹಾಡಿದಳು.

ಆಗ ಗುರುದೇವರ ಹೇಳಿಕೆಗೂ, ಈಗ ಈ ಹೆಣ್ಣು ಮಗಳು ಹೇಳು ಮಾತಿಗೂ ಅಂತರವಿಲ್ಲದಿರೇ, ಯಾವತ್ತು ಮಾಹೇಶ್ವರ ಬಳಗವು ಮಹಾತ್ಮನು ಅಲ್ಲಿಗೆ ಹೋಗಿ ರಕ್ಷಣೆಗೈದ ಪ್ರಸಂಗವೇ ಕೈಚಾಚಿ ತೆಗೆದು ಕೊಳ್ಳಮ್ಮಾ ನಿನ್ನ ಮಗುವನ್ನು ಎಂದ ನುಡಿಯನ್ನು ನೆನೆದುಕೊಂಡು, ಈತ ಲೀಲೆ ತಿಳಿಯಲಸದಳ. ಯಾವದೇ ರೀತಿಯಿಂದ ತನ್ನ ನೆನಪಿನಲ್ಲಿದ್ದ ಭಕ್ತರನ್ನು ರಕ್ಷಿಸುವ ಈ ಶರಣ ಕುಟುಂಬಿಯು ನಂಬಿದವರನ್ನು ಕೈ ಬಿಡಲಾರ ಮತ್ತು ಗುರುವಿನ ಬೆನ್ನು ಬಿದ್ದವರಿಗೆ ಯಾವ ಗ್ರಹಚಾರಗಳ ಬಾಧೆ ಸೋಂಕಲಾರ ದೆಂದು ಎಲ್ಲರೂ ಹೊಗಳಿ ಅಂದಿನ ಸಭೆಯ ಶೋಭೆಯನ್ನು ಮುಕ್ತ ಗೊಳಿಸಿದರು.

....

ಬಂಜೆಯ ಬೆಂದೊಡಲ ತಾಪ ಹಿಂಗಿಸಿ ಮಗುವನ್ನು ಕರುಣಿಸಿದ್ದು

ಭಕ್ತರ ಬದುಕಿನ ಕಲ್ಪವೃಕ್ಷ ಸಮಾನಾದ ಗುರುಬಸವರಾಜನ ಕೀರ್ತಿ ಪತಾಕೆಯು ಎತ್ತರದಿ, ಮೇಲೆತ್ತರದಿ ಹಾರುವದಾಯಿತು. ಕೊಟ್ಟೂರ ಬಸವರಾಜರ ಹೆಸರನರಿಯದ ಮನುಜರಿಲ್ಲವೆಂದೆ ಹೇಳುವಂತೆ ಸುತ್ತಲಿನ ನಾಡತಾಯಿಯ ಮಕ್ಕಳೆಲ್ಲರ ಮನೆಮಾತಾಯಿತು ಕೊಟ್ಟೂರ ಬಸವೇಶ್ವರನ ಚರಿತ್ರೆಯು.

ಇಂತಿರುವಾಗ ಹಿರಿಯಕಲ್ಲು ಎಂಬ ಊರಲ್ಲಿ ಶಂಕರಶೆಟ್ಟಿ ಎಂಬ ಶಿವಭಕ್ತನಿದ್ದನು. ಅವನ ಹೆಂಡತಿಯು ಗರ್ಭಧರಿಸಿದಳಾದರು, ಅದರಿಂದ ಯಾರಿಗೂ ಸಂತಸವೆನಿಸಲಿಲ್ಲ. ಕಾರಣವೇನೆಂದರೆ ಆದೆಷ್ಟು ಮಕ್ಕಳ ತಾಯಿ ಎನಿಸುವ ಭಾಗ್ಯ ಲಭಿಸಿದರು, ಆರೆಂಟು ತಿಂಗಳಲ್ಲಿ ಗರ್ಭಪತನಕಾರ್ಯವು ಜರುಗಿ ಬಾಳಿನಲ್ಲಿ ಬೇಸರ, ಮಕ್ಕಳಾಸೆಯ ಮೌನ ವ್ಯಸನದಲ್ಲಿ ಕೊರಗುವದು ತಪ್ಪಿರಲಿಲ್ಲ. ಈ ಸಾರೆಯ ಗರ್ಭವು ಅದೇ ಸ್ಥಿತಿ ಕಾಣುವದೆಂಬ ಭಯ ಹುಟ್ಟಿಕೊಂಡಿತು. ಆದರೆ ಹಿರಿಯಕಲ್ಲು ಗ್ರಾಮವನ್ನು ತಲುಪಿದ ಗುರು

ಕೊಟ್ಟೂರು ಬಸವೇಶ್ವರನ ಹೆಸರು ಶೆಟ್ಟಿಯ ಕಿವಿಗೆ ತಾಕದಿರಲಿಲ್ಲ. ಬೇಡಿದವರಿಗೆ ಬೇಡಿದ್ದನ್ನು ಕೊಟ್ಟು, ಭಕ್ತರ ಇಷ್ಟಾರ್ಥ ಪೂರೈಸುವ ಕಾಮಧೇನು ಎಂದು ಹೊಗಳಿ, ಹಾಡಿ ಸಂತಸಪಡುವ ಜನರಿಂದ ಕೇಳಿತಿಳಿದ ವಿಷಯವದು ನೆನಪಿನ ಸುಳಿಯಲ್ಲಿ ಸುಳಿದು ಸತಿಯಳ ಮುಂದೆ ವಿಷಯ ತಿಳಿಸಿದನು.

ಆಗ ಆ ಸತಿಯಳು ನಿಜಸ್ವಾಮಿ ನಮ್ಮ ಸಂತಾನಬಳ್ಳಿಯು ಕ್ರೂರ ಕಾಲನ ತುಳಿತದಿಂದ ಕಮರದಂತೆ ಉಳಿಯಬೇಕಾದರೆ ಗುರುಕಾರುಣ್ಯ ಜಲ ಸುರಿಯಲೇಬೇಕು, ಅಂತೆ ನಾವೀಗ ಗುರು ಕೊಟ್ಟೂರ ಬಸವರಾಜನನ್ನು ಮೊರೆಹೋಗುವದು ವಿಹಿತವೆಂದು ಗುರುನಾಮ ಜಪವನ್ನು ಒಂದೇ ಮನಸ್ಸಿನಿಂದ ಗೈದು ಹುಟ್ಟಿದ ಮಗನಿಗೆ ಬಸವನೆಂದು ಆತನ ಹೆಸರನಿಟ್ಟು ಕರೆಯುವದಾಗಿ ದಂಪತಿಗಳೀರ್ವರು ಸಂತಸದಿಂದ ಸಂಕಲ್ಪ ಮಾಡಿದರು.

ಬಸವನಾಮ ಜಪವೇನು ಸಾಮಾನ್ಯವೇ, ಸಕಲ ವೇದಗಳು ಸಾಟಿಯಾಗಲಾರವು, ಷಡಕ್ಷರ ಮಂತ್ರದ ಮೂಲ ಶಬ್ದಾಕ್ಷರಮಾಲೇಯೇ ಅಡಕವಾಗಿರುವದು. ಅಂತೆ ಈ ಸಾರೆ ಆ ಸಾಧ್ವಿ ಸತಿಯಳು ಸುಖದಿಂದ ಗಂಡುಮಗುವಿಗೆ ಜನ್ಮವಿತ್ತಳು. ಬಸವಮಂತ್ರ ಮಹಾತ್ಮೆಯಿಂದ ಯಮ ಭಟರಿಂಗೆ ತಮ್ಮ ಕಾರ್ಯ ಸಾಧಿಸಲು ಅಸಾಧ್ಯವಾಗಿ ಹಿಂದಿರುಗಿ, ಕೂಸು ಪ್ರಾಣಾಪಾಯದಿಂದ ಉಳಿಯಿತು, ಬೆಳೆದು ಬಾಳಿತು. ಆಗ ದಂಪತಿಗಳೀರ್ವರು ಮಗುವಿನೊಂದಿಗೆ ಕೊಟ್ಟೂರಿಗೆ ಬಂದು, ಗುರುದೇವ ಬಸವರಾಜನ ಸೇವೆಯನ್ನು ಸಡಗರದಲ್ಲಿ ಮಾಡಿ ಆನಂದಪಟ್ಟರು.

....

ಯಮಭಟರು ಒಯ್ದ ಕೂಸು ಮರಳಿ ಬಂದದ್ದು

ಗುರುಬಸವರಾಜರ ಭಕ್ತ ಬಳಗದವರು ಗುರುದರ್ಶನಕ್ಕೆಂದು ಸಡಗರದಲ್ಲಿ ಬರುತ್ತಿದ್ದರು. ಭಕ್ತರ ಭಕ್ತಿಯ ಆಳದಲ್ಲಿ ಸಿಲುಕಿದ ಗುರುವಿಗೆ ಶಿವಭಕ್ತರೆಂದರೆ ಎಲ್ಲಿಲ್ಲದ ಪ್ರೀತಿ. ಅಂತಹ ಭಕ್ತರ ಬಾಳಿನಲ್ಲಿಯೂ ಪರೀಕ್ಷೆಯ ಬಿರುಗಾಳಿ ಬೀಸಿ, ಸಂತಾನವಿಲ್ಲದೇ ಚಿಂತೆಯ ಚಿತೆಯಲ್ಲಿ ಬೆಂದು,

ಬೆಂದೊಡಲಿನ ಬೇಗೆಯನ್ನು ಒಸವರಾಜ ಗುರುವರನ ನೆನಹಿನಲ್ಲಿ ಮರೆಯು ತ್ತಿದ್ದರು.

ಇಂತಿರುವ ಪ್ರಸಂಗದಲ್ಲಿ ಭಕ್ತಳೊಬ್ಬಳು ಸಂತಾನಕ್ಕಾಗಿ ಗುರುಬಸವ ಮಂತ್ರವನ್ನು ಬಿಡದೇ ಜಪಿಸಿ, ಗುರುಕಾರುಣ್ಯದಿಂದ ಮಗುವನ್ನು ಪಡೆದು, ಅದೇ ಸಂತಸದಲ್ಲಿ ಕೊಟ್ಟೂರೇಶನ ದರ್ಶನಕ್ಕಾಗಿ ದಂಪತಿಗಳು ತಮ್ಮ ಬಳಗ ದೊಡನೆ ಕೊಟ್ಟೂರಿಗೆ ಬರುತ್ತಿದ್ದರು.

ಬರುತ್ತಿರುವಾಗ ಸಂತಸದ ದಿವ್ಯಕಾಂತಿಯುಳ್ಳ ಚಿತ್ರವನ್ನು ಸಿಡಿಲು ಬಡಿದು ಕೆಡಿಸಿದಹಾಗೆ, ಇದ್ದಕ್ಕಿದ್ದಂತೆ ನಡುದಾರಿಯಲ್ಲಿ ಮಗುವು ಸತ್ತು, ತಂದೆ ತಾಯಿಗಳಿಗೆ ಆಕಾಶವೇ ಕಳಚಿಬಿದ್ದಂತಾಯಿತು. ಉಪಾಯಗಾಣದೇ ಆ ಕೂಸು ಅಲ್ಲೇ ಮಣ್ಣುಮುಚ್ಚಿ, ಫಿರ್ಯಾದಿಕೊಡಲು ಗುರುಕೊಟ್ಟೂರೇಶನ ಬಳಿಗೆ ದುಃಖದುಮ್ಮಾನ ಹತ್ತಿಕ್ಕಿ, ಹೊರಟು ಬಂದು ಸನ್ನಿಧಿಯಲ್ಲಿ ಬಿದ್ದು ಹೊರಳಾಡುತ್ತ, ಹೆತ್ತೊಡಲ ಸಂತಾಪವನ್ನು ಕಡಿಮೆ ಮಾಡಿಕೊಳ್ಳ ಬಯಸಿದರು. ಅವರ ದುಃಖ ಕಂಡ ಗುರುಗಳು ಅವರನ್ನು ಸಂತೈಸುತ್ತ ನಿಮ್ಮ ಮಗನು ಬಂದೇ ಬರುತ್ತಾನೆ, ದುಃಖಿಸುವ ಕಾರಣವೇಕೆ ಎಂದು ಹೇಳಿದರು. ಆಗ ಪಠಾಂಗಣದಲ್ಲಿದ್ದ ಜನತೆ ನಿಬ್ಬೆರಗಾಗಿ ನೋಡುತ್ತ ನಿಂತುಕೊಂಡರು.

ಅತ್ತ ಯಮರಾಯನು ಗುರುಬಸವರಾಜನ ಹೆಸರಿನಲ್ಲಿದ್ದ ಆ ಕೂಸು ಅದರಲ್ಲಿ ಆತನ ವರಮಂತ್ರ ಪ್ರಭಾವದಿಂದ ಹುಟ್ಟಿರುವಾಗ ಅವನ ಅಪ್ಪಣೆ ಇಲ್ಲದೇ ನಮಗಿದು ದಕ್ಕಲಾರದು. ಹಿಂದೊಮ್ಮೆ ಶಿದ್ಧರಾಮ ಭಕ್ತನ ಕೂಸು ತಂದು ಸಾಕಷ್ಟು ತೊಂದರೆಪಟ್ಟಿದ್ದೇನೆ. ಈಗ್ಯೂ ಅದೇ ಸ್ಥಿತಿ ಬರಬಾರದು, ಗುರುಬಸವರಾಜನ ಭಕ್ತರ ಪ್ರಾಣ ತರುವದೆಂದರೆ ಬೆಂಕಿಯನ್ನು ಪದರಿಗೆ ಸುರುವಿಕೊಂಡಂತೆ, ಬೇಗ ಈ ಕೂಸಿನ ಆತ್ಮವನ್ನು ಮರಳಿ ಭೂಮಿಗೆ ಕಳಿಸಿರಿ ಎಂದು ಹೇಳಿದನು.

ಬಳಿಕ ಯಮಧರ್ಮನ ಆಜ್ಞೆಯಂತೆ ಭಟರು ಕೂಸಿನ ಜೀವವನ್ನು ಭೂಮಿಗೆ ಕಳುಹಿಸಿದರು.

ಆಗ ಕೂಸನ್ನು ಹುಗಿದು ಬಂದ ಶವದಲ್ಲಿ ಪ್ರಾಣಸಂಚಾರವಾಗಿ, ತಗ್ಗಿನ ಆಳದಲ್ಲಿ ದೊಡ್ಡ ಶಬ್ದ ಹೊರಟು, ಮೇಲಿನ ಮಣ್ಣು ತನ್ನಿಂದತಾನೇ ಹಾರ ಹತ್ತಿತು ಅಷ್ಟರಲ್ಲಿ ಭೂಮಿಯ ಕೆಲಸಕ್ಕೆ ಹೋದ ಪುರಜನರು ಆ ಶಬ್ದವನ್ನು ಕೇಳಿ, ಹಾರುವ ಮಣ್ಣು ಮುದ್ದಿಯನ್ನು ಕಂಡು ಹೋಗಿ ನೋಡಿದರು. ಅಲ್ಲಿಂದ ಸಂಶಯಗೊಂಡು ಮಣ್ಣು ತೆಗೆಯಲು, ಅಳುವ ಕೂಸು ದೊರಕಿತು, ಆಗ ಕೆಲಸದಾಳುಗಳು ಯೋಚಿಸುತ್ತ, ಭೂಮಿತಾಯಿಯ ಕರುಣೆಯಿಂದ ದೊರೆತ ಈ ಕೂಸು ಸಾಮಾನ್ಯ ಕೂಸಲ್ಲ. ಇದನ್ನು ಗುರುಪಾದ ಸನ್ನಿಧಿಗೆ ಅರ್ಪಿಸಿ ಪುನೀತರಾಗುವಾ ಎಂದು ಬಸವರಾಜ ಗುರುವರನ ಸನ್ನಿಧಿಗೆ ಬಂದರು

ಅದನ್ನು ಕಂಡ ಗುರುವೃಷಭರಾಜನು ಸತ್ತಮಗನೆಂದು ಹುಗಿದುಬಂದ ಕೂಸಿನ ತಂದೆತಾಯಿಗಳೆನಿಸಿದ ಭಕ್ತರನು ಕರೆದು, ಕಂದನಿವ ನಿಮ್ಮವ ಹೌದೇ ಎಂದು ತೋರಿಸಿದರು. ಆಗ ಕೂಸಿನ ತಂದೆತಾಯಿಗಳ ಆನಂದ, ಆಶ್ಚರ್ಯಗಳಿಗೆ ಅಳತೆ ಇಲ್ಲದಾಯಿತು. ಬಳಿಕ ಗುರುಗಳು ಯಮಭಟರಿಂದಾದ ಪ್ರಸಂಗವನ್ನು ವಿವರಿಸಿ, ಮಗುವನ್ನು ತಂದುಕೊಟ್ಟ ಯಾವತ್ತರಿಗೂ ಸನ್ಮಾನ ಮಾಡಿಸಿ, ಆಶೀರ್ವಾದಗೈದು ತಮ್ಮ ಹೆಸರಿನ ಆ ಮಗು ಜಗದ್ವಂದ್ಯ ನಾಗುವನೆಂದು ಹರಿಸಿ ಬೀಳ್ಕೊಟ್ಟರು.

ಗುರು ಬಸವರಾಜರ ಮಹಿಮೆಯಿಂದ ಆ ಕೂಸಿನ ತಂದೆತಾಯಿಗಳು ಸೇವಾನು ಸೇವಕರಾಗಿ ಬಾಳಿ, ಸುಖ ಸಂತೋಷ ಶರಧಿಯಲ್ಲಿ ಲೋಲಾಡಿದರು. ಇತ್ತ ಗುರು ಬಸವರಾಜರು ಶರಣ ಬಳಗದೊಡನೆ ಲಿಂಗಲೀಲಾ ವಿನೋದ ವಿಲಾಸದಲ್ಲಿ ಮಗ್ನರಾಗಿ ಆನಂದ ಹೊಂದುತ್ತಿದ್ದರು.

....

ಸಂಕಲ್ಪಿಸಿದಷ್ಟು ಹೊನ್ನು ಪಡೆದು ಮಗುವ ಕರುಣಿಸಿದ್ದು

ಗೋವಿಂದಯ್ಯನೆಂಬ ಬ್ರಾಹ್ಮಣನು ಸಕಲ ಸಂಪತ್ತಿನಿಂದ ಸುಖಿಯಾಗಿದ್ದನಾದರೂ, ದುರ್ದೈವದಿಂದ ಸಂತಾನವಿಲ್ಲದೇ ಪತಿ-ಪತ್ನಿಯರೀರ್ವರು ಅಸುಖವನ್ನೇ ಅನುಭವಿಸುವಂತಾಗಿತ್ತು ೮೦ ವಯಸ್ಸಿನ ವರೆಗೆ ಮಕ್ಕಳ ಭಾಗ್ಯವನ್ನೇ ಅರಿಯದ ಆ ಬ್ರಾಹ್ಮಣ ಸತಿಯು ಗಂಡನೊಡಗೂಡಿ ಗುರು ಬಸವರಾಜನನ್ನು ನೆನೆಯುತ್ತ ನನ್ನ ಗಳಿಕೆಯ ಮೂರು ಸಾವಿರ ಹೊನ್ನು ತಂದು ನಿನ್ನ ಧರ್ಮಕಾರ್ಯಕ್ಕೆ ಒಪ್ಪಿಸುತ್ತೇನೆ. ತಂದೆ, ' ಸುಪುತ್ರನನ್ನು ಕರುಣಿಸೆಂದು ಸಂಕಲ್ಪಿಸಿ ಬೇಡಿಕೊಂಡರು.

ಬಳಿಕ ಗುರುವಿನ ಪ್ರಭಾವದಿಂದ ಆ ಬ್ರಾಹ್ಮಣ ಮುದುಕಿಯು ಆ ೮೦ ರ ವಯದಲ್ಲಿ ಗರ್ಭ ಧರಿಸಿ, ಗಂಡು ಮಗುವಿಗೆ ಜನ್ಮ ಕೊಟ್ಟಳು ಬಳಿಕ ಬ್ರಾಹ್ಮಣನು ಗುರು ಬಸವರಾಜರಿಗೆ ಕೊಟ್ಟ ಮಾತಿನಂತೆ ಮೂರು ಸಾವಿರು ಹೊನ್ನು ಒಯ್ಯುವ ಬದಲು ಮೂರು ನೂರು ತೆಗೆದುಕೊಂಡು ಮಗು, ಪತ್ನಿ ಸಮೇತ ಗುರುವಿನ ಸನ್ನಿಧಿಗೆ ಬರುತ್ತಿರಲು ಮಾರ್ಗ ಮಧ್ಯ ಮಗು ಮರಣವನ್ನು ಕಂಡು ಈ ಲೋಕದಿಂದ ಮರೆಯಾಗಿತ್ತು.

ಬಳಿಕ ತನ್ನ ವಂಚನೆಯ ಬುದ್ಧಿಗೆ ಹೀಗಾಗಿರುವದು ಸ್ವಾಭಾವಿಕವೆಂದರಿತು, ಕೇಡಿಗೆ ಕೆಟ್ಟ ಬುದ್ಧಿ ಹುಟ್ಟಿರುವದು, ಖೊಟ್ಟಿ ದೈವವ ಹಳಿದರೇನು ಫಲವೆಂದು ತನ್ನ ತಪ್ಪಿಗೆ ಮರುಗುತ್ತ ಸತ್ತ ಮಗುವಿನೊಟ್ಟಿಗೆ ಗುರು ಸನ್ನಿಧಿಗೆ ಬಂದು ಗುರುಸಾರ್ವಭೌಮರ ಪಾದಗಳ ಮೇಲೆ ಬಿದ್ದು ಹಲುಬ ಹತ್ತಿದನು.

ಆಗ ಗುರುಗಳು ನಸು ಹುಸಿಕೋಪದಿಂದ ಈ ಜಗತ್ತಿನಲ್ಲಿ ದುಡ್ಡಿಗೆ ಅದೆಷ್ಟು ಪ್ರಾಧಾನ್ಯತೆ ಇರುವದಲ್ಲಾ, ದುಡ್ಡೇ ಪ್ರಾಣವಲ್ಲದೇ ಬೇರಿಲ್ಲವೆಂಬ ನಿಮ್ಮಂಥಹ ಅಜ್ಞಾನಿಗಳ ಪಾಡೇ ಇಷ್ಟು. ಮಾತು ಕೊಟ್ಟು ಮಗು ಜನಿಸಿದ ಬಳಿಕ ವಂಚನೆಗೈದವನಾದೆ ಎಂದು ಛೀ ಹಾಕಿ, ಎಲ್ಲರ ಸಮಕ್ಷಮದಲ್ಲಿ ಕಠೋರ ನುಡಿಗಳಿಂದ ನಮ್ಮ ವಸ್ತು ನಮಗೆ ಮುಟ್ಟಿದೆ, ಬೇಕಾದರೆ ನೀನು

ಕೊಡಬೇಕಾದ ನಿನ್ನ ವಸ್ತುವನ್ನು ಮುಟ್ಟಿಸಿ ನಮ್ಮ ವಸ್ತುವನ್ನು ಒಯ್ಯಬಹು ದೆಂಬ ಔದಾರ್ಯವನ್ನು ತೋರಿಸಿದನು.

ಬಳಿಕ ಗುರುಗಳ ನುಡಿಗೆ ಲಜ್ಜಿತನಾದ ಬ್ರಾಹ್ಮಣನು ಗುರುವರಾ ಅಜ್ಞಾನಿಯ ತಪ್ಪು ಮನ್ನಿಸುವ ಕೃಪೆಯಾಗಬೇಕೆಂದು ಬೇಡಿಕೊಂಡು ಸಂಕಲ್ಪಿಸಿದ ಮೂರು ಸಾವಿರ ಕಾಣಿಕೆಯನ್ನು ಒಪ್ಪಿಸಿ ಮಗನ ಜೀವವನ್ನು ಪಡೆದು ಸುಖ ಸಂಸಾರಿಯಾದನು. ಆಗ ಕೋಲ ಶಾಂತೇಶ ಶರಣರು ನಗೆ ನುಡಿಯಲ್ಲಿ ಜಾಣರೊಡೆಯ ದೇವನು ಕಾಣಿಕೆಯನ್ನು ಗೆಲಲಾರ ಅರ್ಥ ಕಾಣೆ ಯನ್ನೂ ಸೋಲಲಾರ ಎಂಬ ಗಾದೆಯಮಾತು ಪ್ರತ್ಯಕ್ಷವಾಯಿತೆಂದು ಹಿಗ್ಗಿದರು.

ಗುರುಕಾರುಣ್ಯ ಪಡೆದ ಗೌರವಾಂಕ ಕವಿಯು

ಗುರು ಕಾರುಣ್ಯವನ್ನು ಪಡೆಯಬೇಕೆಂಯ ಇಚ್ಛೆಯುಳ್ಳವನಾದ ಗೌರವಾಂಕ ಕವಿವರನು ಸರಸ ಮೃದು ಪದಬಂಧ ಬಂಧುರಾಲಂಕಾರಗಳಿಂದ ಕೂಡಿದ ಲಲಿತ ಪ್ರಬಂಧವನ್ನು ರಚಿಸಿ, ಗುರು ಚರಣಾರವಿಂದಗಳಿಗೆ ಅರ್ಪಿ ಸುವ ಆಸೆಯಿಂದ ಗಾಯಕನ ಸಂಗಡ ಗುರುವಿನ ಸನ್ನಿಧಾನಕ್ಕೆ ಕಳುಹಿಸಿದನು. ಗುರು ಸನ್ನಿಧಿಗೆ ಬಂದ ಗಾಯಕನು ಹಾಡಿ ತೋರಿಸಿದಾಗ ಗುರು ವೃಷ ಭೇಂದ್ರನು ಮೆಚ್ಚಿದನಾದರು ಅಡಿಗೆಯಂ ಸಿದ್ಧಪಡಿಸಿದವರೇ ಬಡಿಸಿ ಸಂತ ಗೊಳಿಸಿದ್ದರೆ ಚನ್ನಾಗಿತ್ತಲ್ಲವೇಎಂದು ಹುಸಿಕೋಪ ತೋರಿಸಿದರು.

ಬಳಿಕ ಗಾಯಕನು ಮರಳಿ ಬಂದು ಗೌರವಾಂಕನಿಗೆ ಗುರುದೇವ ನುಡಿದ ನುಡಿಯನುಸುರಿದನು. ಆಗ ಕವಿವರನು ಆನಂದ ಬಾಷ್ಪಗಳ ಚಿಮ್ಮಿಸಿ ಗುರು ಸನ್ನಿಧಿಗೆ ಬಂದು, ಪಾದಗಳಿಗೆ ಒಂದಿಸಿ, ಕರುಣಾ ಲೀಲಾಮಯ ಲಿಂಗ ಪ್ರೇಮಿ, ಶರಣ ಜನಪ್ರಿಯ, ಗುರುಬಸವರಾಜ ನನ್ನ ಹಿತ ದೃಷ್ಟಿಯಿಂದ ಹೆತ್ತವರ ಹಿತದಿ ಗಾಯಕನ ಮುಖಾಂತರ ವಿವೇಕದ ಹಾದಿಯಂ ತೋರಿಸಿ ದೆಯಾ, ಹಾದಿ ತಪ್ಪಿದ ಮಗುವನ್ನು ಹಾದಿ ತೋರಿಸಿ ಮುನ್ನಡೆಸುವ ರೀತಿ

ಯಲ್ಲಿ ಕರೆಯಿಸಿಕೊಂಡು ನಿತ್ಯ ಸುಖ ಸೌಭಾಗ್ಯವನ್ನು ಕರುಣಿಸಿದೆಯ
ತಂದೆ ಎಂದು ಕೊಂಡಾಡ ಹತ್ತಿದನು.

ಆಗ ಸಂತಸದಿಂದ ಎದ್ದು ಬಂದ ಗುರುವರನು, ಗೌರವಾಂಕನನ್ನು
ಗೌರವಾದರಗಳಿಂದಲೂ ಕೃಪಾಪೂರ್ಣ ದೃಷ್ಟಿಯಿಂದಲೂ ಕಂಡು ತಾನ
ಹೊದ್ದ ಶಾಲನ್ನು ಅವನಿಗೆ ಹೊದಿಸಿ ಉಚಿತವಾದ ಆಸನದಲ್ಲಿ ಕುಳ್ಳಿರಿಸಿದನು

ಆಗ ಕೋಲಶಾಂತೇಶ ಗಣಾಧಿಪರು ಭಲರೇ ಕವಿವರಾ, ಭಾಪುರೆ
ಕರುಣಾಮೂರ್ತಿ ಗುರುವಿನ ಕರುಣೆಯನ್ನು ದೊರಕಿಸಿದ ನೀನೇ ಪುಣ್ಯಶಾಲಿ
ಎಂದು ಎಲ್ಲರೂ ಕವಿವನ್ನು ಪ್ರೀತ್ಯಾದರಗಳಿಂದ ಕಂಡರು.

ಆಗ ಸಕಲ ಗಣ ಬಳಗವನ್ನು ವಂದಿಸಿ, ಗುರುವಿನ ನಾಮಸ್ಮರಣೆ ಗೈದು
ಗೌರವ ಪಂಡಿತನೆಂಬ ಪೆಸರ್ ಪಡೆದು, ಗುರು ಲಿಂಗ ಜಂಗಮ ಭಕ್ತಿ
ಸಂಪನ್ನತೆಯಿಂದ ಸುಕುಮಾರನಂ ಪಡೆದು, ಗುರುನಾಮ ಬಸವ ಎಂಬ
ಹೆಸರಿಟ್ಟು, ಶರಣ ಬಳಗದಲ್ಲಿ ಬೆರೆತು, ಶಿವಕೃತಿ ರಚನೆಯಲ್ಲಿ ಬಲ್ಲಿದವನಾಗಿ
ಗುರು ಬಸವರಾಜರ ಕೃಪಾಛತ್ರ ಛಾಯೆಯಲ್ಲಿ ಬಾಳಿಕೊಂಡಿದ್ದನು.

ವಿಭೂತಿಯ ಮಹತ್ವ ಅರಿಯದ ಮೂಢಮತಿಯು

ಕರುಣಾಸಾಗರನಾದ ಗುರು ಬಸವರಾಜನು ಶರಣ ಸಮುದಾಯದಲ್ಲಿ
ಶಿವಲೀಲಾ ವಿನೋದ ವಿಲಾಸಗಳಲ್ಲಿ ನಿಮಗ್ನನಾಗಿ ಕಾಲ ಕಳೆಯುತ್ತಿರಲು
ಪಗಡೆಯ ಚೆನ್ನೊಡೆಯ ಎಂಬ ಮುಗ್ಧ ಭಕ್ತನು ಶಿವಮತ ಸೂರ್ಯನೋಪಾದಿ
ಯಲ್ಲಿ ಬೆಳಗುವ ಗುರುವಿನ ಸನ್ನಿಧಿಗೆ ಬಂದು ಭಯ, ಭಕ್ತಿ, ವಿಶ್ವಾಸಗಳಿಂದ
ನುತಿಸಿ ನಮಿಸಲು ಗುರುವರನು ಅವನಂತರಂಗವನ್ನು ಅರಿತವನಾಗಿ ಒಂದು
ಭಸ್ಮದ ಉಂಡೆಯನ್ನು ಕೊಟ್ಟು ಕಳುಹಿಸಿದನು.

ಭಕ್ತನಾದರೂ ವಿಶ್ವಾಸಪೂರ್ಣ ಭಕ್ತಿಯಿಂದ ಭಸ್ಮದ ಉಂಡೆಯನ್ನು
ಒಯ್ದು ನೋಡಿದರೆ ಅದು ಎರಡಾಗಿ ಕಂಡಿತು. ಬಳಿಕ ಮತ್ತಷ್ಟು ಭಕ್ತಿ
ಹುಟ್ಟಿ ಚೆನ್ನೊಡೆಯನು ಭಸ್ಮದ ಉಂಡಿಗಳನ್ನು ಭಕ್ತಿಯಿಂದ ಪೂಜಿಸುತ್ತ

ಸಕಲ ಐಶ್ವರ್ಯ, ಧಾನ್ಯ, ಗೋ ಸಮೂಹದೊಡನೆ ಆನಂದದಿಂದ ಕಾಲ ಕಳೆದು ಗುರು ಬಸವರಾಜನ ಕೃಪೆಗೆ ಪಾತ್ರನಾಗಿದ್ದನು. ಇಮ್ಮಡಿಯಾಗಿ ಮುಮ್ಮಡಿಯಾಗಿ ಬೆಳೆದ ಐಶ್ವರ್ಯವನ್ನು ಸದಾಚಾರ ಸಂಪನ್ನತೆಯಲ್ಲಿ ವಿನಿಯೋಗಿಸಿ, ದೀನದಲಿತ, ಅನಾಥರಿಗೆ, ಗುರುಚರ ಬಳಗದವರಿಗೆ ಆಶ್ರಯದಾತನಾಗಿ ಶಿವಭಕ್ತ ಸಂಪನ್ನ ಎನಿಸಿಕೊಂಡಿದ್ದನು.

ಹೀಗಿರುವಾಗ, ಒಮ್ಮೆ ಬೇಡಗೌಡಗನು ಈತನ ಐಶ್ವರ್ಯದೊಡನೆ ಮುಗ್ಧ ಸ್ವಭಾವ ಕಂಡು ಕಾರ್ಯಸಾಧನೆಯಲ್ಲಿ ಬಡತನದ ಭವಣೆಎಂಬ ನಟನೆಯನ್ನು ತೋರ್ಪಡಿಸಿ ತೊಳಲಾಡಿದಂತೆ ಮಾಡಿದನು.

ಸ್ವಭಾವದಿಂದ ಮೊದಲೇ ಮುಗ್ದನಾದ ಚನ್ನೊಡೆಯನು ಐಶ್ವರ್ಯದ ಅನುಗ್ರಹ ಕರುಣಿಸಿದ ಎರಡು ಭಸ್ಮದ ಉಂಡಿಗಳಲ್ಲಿ ಒಂದನ್ನು ಬೇಡಗೌಡನಿಗೆ ಕೊಟ್ಟು ಕಳುಹಿದನು. ಆಗ ಒರು ಬರುತ್ತ ಚೆನ್ನೊಡೆಯನ ಸಂಪತ್ತು ಸವೆಯುತ್ತ ಬಂದುದಲ್ಲದೇ ಉಳಿದ ಒಂದು ಭಸ್ಮದ ಉಂಡಿ ಸಹ ಬೇಡನ ಮನೆಯಲ್ಲಿ ಹೋಗಿ ಮೊದಲು ಕೊಟ್ಟ ಉಂಡಿಯೊಡನೆ ಕೂಡಿಕೊಂಡಿತ್ತು ವಿಭೂತಿಯ ಮಹತ್ವ ಅರಿಯದ ಚೆನ್ನೊಡೆಯ ದುಃಖಕ್ಕೀಡಾದನು.

ಬಳಿಕ ಚೆನ್ನೊಡೆಯನು ಆರ್ಯ ಚೂಡಾರತ್ನವೆನಿಸಿದ ಗುರುವಿನ ಬಳಗೆ ಬಂದು ಸಕಲ ವೃತ್ತಾಂತವನ್ನು ತಿಳಿಸಿ ತನ್ನ ದುಃಖವನ್ನು ತೋಡಿಕೊಂಡನು. ಆಗ ಗುರುವರನು ಮುಗುಳು ನಗೆ ನಕ್ಕು ಅಷ್ಟಷ್ಟೇ ಹೊತ್ತೊಂಡು ನೂರು ಎಂದರು. ಅದನ್ನು ಕೇಳಿದ ಗಣವರರಿಗೆ ಆಶ್ಚರ್ಯವಾಯಿತು. ಬಳಿಕ ಶರಣರಲ್ಲೊಬ್ಬರು ಈಶ್ವರ ಪಾದ ಧೂಳಿಯಿಂದ ಫಣಿಯು ಅಲಂಕಾರಗೊಂಡಗೆ ಸ್ಥಿರ ಮೋಕ್ಷ ದೊರೆಯುವದು ಅಂದಾಗ, ಗುರುದೇವನ ಹಸ್ತದಿಂದ ದೊರಕಿದ ವಿಭೂತಿಯನ್ನು ಪಡೆದವನ ಪುಣ್ಯವನ್ನು ವರ್ಣಿಸುವದೆಂತು. ವಿಭೂತಿಯ ಮಹತ್ವವನ್ನೇ ಅರಿಯದವರ ಬಾಳು ಚೆನ್ನೊಡೆಯನಂತೆ ಅಷ್ಟಷ್ಟೇ ಆಗುವದೆಂದೆ ಗುರುವಿನ ನುಡಿ ಎಂದರು.

ಭಕ್ತನ ಮನದಾಸೆಯಂತೆ ಹೊನ್ನಮಳೆ ಸುರಿಸಿದ್ದು

ಶಿವನು ಶಿವಭಕ್ತ ಸಂಪನ್ನರಾದವರಿಗೆ ಪರೀಕ್ಷೆಗೆಂದು ತಂದೊಡ್ಡುವ ಕಷ್ಟನಷ್ಟ, ಬಡತನದ ಬವಣೆ, ತಾಪತ್ರಯದ ತೊಳಲಾಟ ಇವುಗಳು ಭಕ್ತಿಗೆ ಅಡ್ಡಿಯನ್ನುಂಟುಮಾಡುವದಲ್ಲದೇ ಭಕ್ತಿಯು ನಾಶಹೊಂದಿ ನೀಚ ಕೃತಿಗಳತ್ತ ಮನಸ್ಸು ಹರಿದಾಡುವದು ಸಹಜ ಮನಸ್ಸಿನ ಸ್ಥಿರತೆ ಅಳಿದು ಸಮಾಧಾನ ಶಾಂತಿಗಳೇನೆಂಬುವದೇ ತಿಳಿಯದಾಗುವದು ಅಂತರಂಗದ ಹೊಯ್ದಾಟದಿಂದ ನೀಚಕೃತಿಗಳಿಗೂ ಮನಸ್ಸು ಮುಂದುವರಿಯುವದು.

ಇದೇ ರೀತಿಯಾಗಿ ಓರ್ವ ಶಿವಭಕ್ತನ ಸ್ಥಿತಿಯಾಗಿ ಕೆಲವು ದಿವಸಗಳು ಗತಿಸಿ, ಗುರುಬಸವರಾಜನ ಕರುಣೆಯಿಂದ ವಿವೇಕ ಮೂಡಿ ನನ್ನ ಈ ಅಸ್ಥಿರ ಬದುಕಿನ ಬಡತನದ ಬರುಡು ಬಾಳಿನಲ್ಲಿ ಶಾಂತಿಯನ್ನು ಕಾಣಬೇಕಾದರೆ ಗುರು ಕೊಟ್ಟೂರೇಶನ ಹೊರತು ಅನ್ಯರಿಂದ ಸಾಧ್ಯವಿಲ್ಲವೆಂದು ತಿಳಿದು, ಕೊಟ್ಟೂರಿಗೆ ಬಂದು ಗುರುವಿನ ಪಾದಗಳಿಗೆ ವಂದಿಸಿದಾಕ್ಷಣವೇ ಸಂಸಾರದ ಸರ್ವಚಿಂತೆ ಮಾಯವಾಗಿ, ಮನಸ್ಸು ಶಾಂತಿಯ ಮಟ್ಟವನ್ನು ಮುಟ್ಟಿತು. ಒಣಗಿದ ಆತ್ಮದೊರತಿಯು ಸಂತೋಷ ಸೆಲೆಯಿಂದ ಉಕ್ಕುವಂತಾಯಿತು.

ಬಳಿಕ ಆ ಶಿವಭಕ್ತನು ಮನದಲ್ಲಿ ಯೋಚಿಸುತ್ತ ಗುರು ಸನ್ನಿಧಾನ ಸುಖ ಸಮೃದ್ಧರಾಶಿಯನ್ನು ಪಡೆದ ಪುಣ್ಯ ನನ್ನದಾಗಿರಲು ಅನ್ಯತರದ ಆಸೆ ಆಕಾಂಕ್ಷೆಗಳ ಮೋಹವೇಕೆಂದು ಗುರುವಿನ ಸೇವೆಯಲ್ಲಿ ಆನಂದದಿಂದ ಕಾಲ ಕಳೆಯುಹತ್ತಿದನು.

ಆಗ ಅದನ್ನರಿತ ಗುರು ವೃಷಭೇಂದ್ರನು ಭಕ್ತನ ಮನದಾಸೆಯಂತೆ ಕೃಪಾಪೂರ್ಣ ಆಶೀರ್ವಾದ ಮಾಡಿ, ಶಿವಭಕ್ತಶ್ರೇಷ್ಠಾ ಅದೇಕೋ ನಿನ್ನ ಕಂಡು ಮನ ಆನಂದ ಶರಧಿಯಲ್ಲಿ ಮುಳುಗೇಳುತಿದೆ. ಹೋಗು ನಿನ್ನ ಬಯಕೆಯಂತೆ ಇಂದು ನಿನ್ನ ಮನೆಯು ಬಡತನದ ತಾಪತ್ರಯವನ್ನು ಹೊಡೆದೋಡಿಸುವ ಹೊನ್ನರಾಶಿ ವರುಣರೂಪದಿಂದ ಸುರಿಪುದು ಎಂದ ಮತ್ತೊಮ್ಮೆ ಅನುಗ್ರಹ ಆಶೀರ್ವಾಧ ಗೈದು, ನಿತ್ಯ ಜಂಗಮಾರಾಧನೆ ತಪ್ಪದಿರೆಂದು ಅಪ್ಪಣೆ ಮಾಡಿದರು. ಬಳಿಕ ಗುರುಕಾರುಣ್ಯವಲ್ಲಿ ವರು

ದೇವನು ಹನಿಮುತ್ತುಗಳೊಡನೆ ಹೊನ್ನುರಾಶಿ ಸುರಿದು ಭಕ್ತನ ಆನಂದಕ್ಕೆ ಅಳತೆ ಇಲ್ಲದಾಯಿತು. ಗುರುವಿನ ಅಪ್ಪಣೆಯ ಪ್ರಕಾರ ನಿತ್ಯ ಜಂಗಮಾರಾಧನೆ, ದೀನದಲಿತರ ಉದ್ಧಾರಕಾರ್ಯದಲ್ಲಿಯೂ ಅನೇಕ ಪ್ರಕಾರ ಗುರುಜಂಗಮರ ಸೇವೆ, ಗುರುಚರಮೂರ್ತಿಗಳಲ್ಲಿ ಸದಾ ಸೇವಾಭಕ್ತಿಯನ್ನಿಟ್ಟು ಆಚರಿಸಿ, ಶ್ರೀಗುರು ಕೊಟ್ಟೂರ ಬಸವೇಶ್ವರನ ಕೃಪಾಛತ್ರ ಛಾಯೆಯಲ್ಲಿ ಭಕ್ತದುರಂಧರನೆನಿಸಿ ಬಾಳಿದನು.

ಹಾವು ಹಿಡಿದು ಬಾಲ ಪಡೆದು ಬಂಗಾರದ ಕಂಡದ್ದು

ಗುರು ಕರುಣೆಯಿಂದ ಭಕ್ತನ ಮನೆಯಲ್ಲಿ ಹೊನ್ನಿನ ಮಳೆಯಾದ ಸುದ್ದಿಯನ್ನು ಕೇಳಿದ ಪಾಮರನೊಬ್ಬನು ಹೊನ್ನಿನ ಆಸೆಯಿಂದ ದಾರಿದ್ರ್ಯತನದ ಸೋಗು ಹಾಕಿ ಗುರುಗಳ ಸನ್ನಿಧಿಗೆ ಬಂದು, ಮೊದಲಿನ ಭಕ್ತನಂತೆ ನೀಚಕೃತಿಗಳಿಂದ ಹೊಟ್ಟೆ ತುಂಬಿಕೊಳ್ಳಲು ನಾಚಿಕೆ ಎನಿಸಿ, ಗುರುಸೇವಾಕಾರ್ಯದಿಂದ ಪುನೀತನಾಗಬಯಸಿ ಬಂದಿರುವೆನು. ತಂದೆ ಗುರುವೇ ಕಾಪಾಡು ಎಂದು ನಟನೆಯಿಂದ ಹಲುಬಿದನು.

ಆಗ ಗುರುಸಾರ್ವಭೌಮ ಬಸವರಾಜರು ನಸುನಕ್ಕು, ಅಯ್ಯಾ ಇಂದು ಸರಿರಾತ್ರಿಯ ಸಮಯಕ್ಕೆ ಹೊರಗಿನಿಂದ ಬಂದು ನಿನ್ನ ಮನೆ ಹೊಕ್ಕದ್ದನ್ನು ಹೊನ್ನೆಂದುಪಡೆದು ಸುಖಿಯಾಗಿರು ಎಂದು ಆಶೀರ್ವದಿಸಿ ಕಳುಹಿಸಿದರು, ಗುರುವಾಕ್ಯದಂತೆ ಆ ಮೂಢನು ಮನೆಗೆ ಬಂದು, ಸರಿರಾತ್ರಿಯವರೆಗೆ ಕಾಯ್ದು ಕೂತಿರಲು, ಸರಿಯಾದ ಸಮಯಕ್ಕೆ ಘಟಸರ್ಪವು ಮನೆಹೊಕ್ಕು ಮನಬಂದಂತೆ ಆಡಿ ನಲಿದು ನರ್ತಿಸುತ್ತಿತ್ತು. ಅದನ್ನು ಕಂಡು ಅಂಜಿ ಹಿಂಜರಿದ ಭಕ್ತನ ಸ್ಥಿತಿಯಿಂದ ನಾಗರಾಜನು ಬದಿಯಲ್ಲಿ ಕಾಣುವ ಹೊದರಿನಲ್ಲಿ ಸಾವಕಾಶ ಸಾಗಿರಲು ಅವನಿಗೆ ವಿವೇಕ ಮೂಡಿ ತೀವ್ರಗತಿಯಿಂದ ಮುಂದಾಗಿ ಇದೇ ಬಸವರಾಜ ಗುರುವರ ಕರುಣಿಸಿದ ಹೊನ್ನಿನ ನಿಧಿ ಎಂದು ಅರ್ಥಮಾಡಿಕೊಂಡು ಹಾವಿನ ಬಾಲ ಹಿಡಿದು ಪ್ರಯತ್ನಪಟ್ಟು ಎಳೆದರೂ

ಅವನ ದುರ್ದೈವಕ್ಕೆ ಬಾಲಪಾತ್ರ ಕತ್ತರಿಸಿ ಬಂದದ್ದು ಬಂಗಾರವಾಗಿತ್ತು. ಅವಿಶ್ವಾಸದಿಂದ ಗುರುವಾಕ್ಯವನ್ನು ತಿಳಿಯದಲೇ ದುಡುಕಿದ ಮಂದಬುದ್ಧಿಯ ನನ್ನಂಥವನಿಗೆ ಕಲ್ಪವೃಕ್ಷ ಕೊಟ್ಟರು. ಅದರಿಂದ ಫಲ ದೊರೆಯದು ಎಂದು ಸ್ಥಿರವಿಲ್ಲದ ತನ್ನ ಅಸ್ಥಿರ ಮನೋಧರ್ಮಕ್ಕೆ ತಾನೇ ಹಳಹಳಿಸಿಕೊಂಡನು. ಬಳಿಕ ಗುರುವಿನ ಸನ್ನಿಧಾನಕ್ಕೆ ಹೋಗಿ ಹೀಗಾಯಿತೆಂದು ಕರಜೋಡಿಸಿ ನಿಂತುಕೊಂಡಾಗ ಗುರು ವೃಷಭೇಂದ್ರನು ಅಯ್ಯಾ ನಿನಗೆ ದೊರೆಯಬೇಕಾದದ್ದು ಅಷ್ಟೆ ಇತ್ತು ಅಂದಾಗ ಅಷ್ಟರಿಂದಲೇ ತೃಪ್ತನಾಗು, ಅನ್ಯರ ಐಶ್ವರ್ಯ ಕಂಡು ಅಸಹ್ಯಪಟ್ಟು ದುಡುಕಿದರೆ ದೊರೆಯುವ ಫಲ ಅಷ್ಟೆಎಂದು ತಿಳುವಳಿಕೆ ಹೇಳಿ ನಿನ್ನ ಪುಣ್ಯ ಅಷ್ಟೆ ಹೋಗು ಎಂದು ನುಡಿದು ಗಣಸಮುದಾಯದೊಡನೆ ಶಿವಾನುಭವ ಗೋಷ್ಠಿಯಲ್ಲಿ ತಲ್ಲೀನರಾದರು.

ದಾಸೋಹ ಲಿಂಗಮ್ಮಗೊಲಿದ ಗುರುಮೂರ್ತಿ

ಗುರು ವೃಷಭರಾಜನು ಸ್ಮರಿಸಿದೊಡನೆ ಇಚ್ಛಿತ ಫಲಗಳನ್ನಿತ್ತು ಪರಿಪಾಲಿಸುವನೆಂಬ ಸುದ್ದಿ ಗಾಳಿಯಂದದಿ ದಶದಿಕ್ಕುಗಳಲ್ಲಿ ಹಬ್ಬಿತು. ಪಡೆಯುವರು ಸಂಪತ್ತು ಪಡೆದರು, ಹಲವರು ಮೃತ್ಯು ಭಯದಿಂದ ದೂರಾದರು, ಸ್ತ್ರೀಯರು ಬಂಜೆತನವಡಗಿ ಸಂತಾನ ಸಂಭ್ರಮದಲ್ಲಿ ಸಂತಸಪಟ್ಟರು, ರೋಗರುಜಿಗಳಿಂದ ಮುಕ್ತರಾದರು. ಒಟ್ಟಾರೆ ಗುರುವಿನ ನಾಮವೆಂಬ ಚಿಂತಾಮಣಿಯಿಂದ ಶುಭಕರ ವಾತಾವರಣವು ಭೂಮಿತಾಯಿಯನ್ನು ಸಕಲೈಶ್ವರ್ಯದಲ್ಲಿ ಲೋಲಾಡುವಂತೆ ಮಾಡಿತು.

ಇಂತಿರುವ ಕಾಲದಲ್ಲಿ ಕೊಟ್ಟೂರ ಗ್ರಾಮದಲ್ಲಿ ದಾಸೋಹಿ ಲಿಂಗಮ್ಮ ಎಂಬ ಶಿವಭಕ್ತೆಯು ಗುರುರಾಜೇಂದ್ರನ ಕೃಪೆಯಿಂದ ಚರ ದಾಸೋಹವನ್ನು ಪ್ರೀತಿ, ವಿಶ್ವಾಸಗಳಿಂದ ಜರುಗಿಸುತ್ತ, ಜಂಗಮರಲ್ಲಿ ಭಕ್ತಿಯಿಂದ ನಡೆದುಕೊಳ್ಳುತ್ತ, ತನ್ನತ್ತ ವಿಶ್ವಾಸದಿಂದ ಬರುವ ಮಾಹೇಶ್ವರರಿಗೆ ಸತ್ಕಾರದಿಂದ ತಣಿಸಿ, ಒಂದೊಂದು ವಿಭೂತಿಯ ಉಂಡೆಯನ್ನು ಕೊಡುವ ನೇಮದಿಂದ ಶಿವಪ್ರಿಯ ಭಕ್ತಳಾಗಿದ್ದಳು.

ಒಂದು ಸಾರೆ ಶಿವಗಣಬಳಗವು ಲಿಂಗಮ್ಮನ ಮನೆಗೆ ಬರಲು ಅವರನ್ನು ಆದರದಿಂದ ಸತ್ಕರಿಸಿ, ವಿಭೂತಿಯನ್ನು ಕೊಡಬೇಕೆಂದು ನೋಡುತ್ತಾಳೆ. ಒಂದೆ ವುಂಡೆ ಉಳಿದಿತ್ತು. ಅದನ್ನು ಕೈಯಲ್ಲಿ ಹಿಡಿದು, ಜಗದೊಡೆಯ ಶ್ರೀಗುರು ಬಸವರಾಜ ನಿನ್ನ ಭಕ್ತರ ಆಳಿನಾಳು ನಾ ನನ್ನ ಮಾನ ಕಾಯುವ ಭಕ್ತಪಾಲಕ ನೀ, ನಂಬಿ ಶರಣೆಂಬೆ ಎಂದು ಬಂದಿರುವ ಶಿವಗಣಬಳಗದವರೆಲ್ಲರಿಗೂ ಒಂದೊಂದರಂತೆ ಉಂಡೆಗಳನ್ನು ಕೊಟ್ಟದ್ದಾಯಿತು. ಕೈಯಲ್ಲಿ ಹಿಡಿದ ಮೊದಲಿನ ವಿಭೂತಿ ಉಂಡೆ ಹಾಗೇ ಉಳಿದಿತ್ತು.

ಮತ್ತೊಮ್ಮೆ ಮಳೆ ಇಲ್ಲದೇ ಭೂಮಿಯ ಬಾಯಿ ಬಿರಿದು, ಪೈರು ಒಣಗಿ ರೈತರು ಬೆಂದೊಡಲ ತಾಪದಿಂದ ಲಿಂಗಮ್ಮನ ಬಳಿಗೆ ಬಂದು, ಅಮ್ಮಾ ಜಗದ ಜೀವಿಗಳ ರಕ್ಷಕನಾದ ನಂದಿಲಿಂಗನು ನಿನ್ನಂತರಂಗದ ದೇವನಾಗಿರಲು ನೀನಿಂದು ಆತನಿಗೆ ಅರುಹಿ, ವೃಷ್ಟಿ ನಷ್ಟದಿಂದುಂಟಾದ ಭವಣೆಯನ್ನು ಪರಿಹರಿಸುವ ಉಪಕಾರವಾಗಬೇಕೆಂದರು.

ಆಗ ಲಿಂಗಮ್ಮನು ಅಂಜದಿರಿ ಅಣ್ಣಗಳಿರಾ ನಿಧಿ ಪಾತ್ರೆ ನಮ್ಮ ಕೈಯಲ್ಲಿರಲು ಬೆದರುವದೇ, ಮೂಜಗ ಪೊರೆವ ಒಡೆಯನೇ ನಮ್ಮಲ್ಲಿರಲು ದುರ್ಭಿಕ್ಷೆ ಎಂದು ಅಂಜಿ ಅಳುಕುವದೇ, ನಿಷ್ಠೆಯಿಂದ ಗುರು ವೃಷಭೇಂದ್ರನನ್ನು ನಂಬಿರಿ, ಶರಣಾಗತ ರಕ್ಷಕಾ ಸಚರಾಚರ ಸಮೂಹ ಸಕಲ ಜೀವಿಗಳ ಜೀವನಾಧಾರವಾದ ಮಳೆಯನ್ನು ಕರುಣಿಸು. ನಿನ್ನ ಭಕ್ತರ ವಾಸದಲ್ಲಿ ದುರ್ಭಿಕ್ಷೆಯ ಹಾಹಾಕಾರವೇ, ತುದಿ ಎಂದು ಲಿಂಗಮ್ಮ ಆದಿಯಾಗಿ ಯಾವತ್ತರು ಗುರುಬಸವರಾಜರನ್ನು ಪ್ರಾರ್ಥಿಸಲು ಕ್ಷಣಮಾತ್ರದಲ್ಲಿ ಮೋಡಗಳು ತುಂಬಿ ಗುರುವಿನ ಪ್ರಭಾವ ಪ್ರಕಾಶದ ಸೆಕೆತಾಕಿ ಸಮುದ್ರ ಉಕ್ಕಿ ಮೊದಲೇ ತುಂಬಿ ತೇಲಾಡುತ್ತಿದ್ದ ಮೋಡಗಳಿಂದ ಗುಡುಗು ಸಿಡಿಲು ಮಿಂಚಿನ ಅಬ್ಬರದೊಡನೆ ಮಳೆ ಸುರಿದು ಒಣಗಿ ಬಾಯ್ದೆರೆದುಕೊಂಡಿದ್ದ ಭೂದೇವಿ ತಂಪಿನ ಪೆಂಪಿನಿಂದ ಸಂತಸಗೊಂಡಳು.

ಆಗ ಗುರು ಕಾರುಣ್ಯವನ್ನು ಪಡೆದ ಹರ ಶರಣರೂ ಪುರಜನ ಭಕ್ತರೂ ಲಿಂಗಮ್ಮನ ನಿರ್ಮಲ ಭಕ್ತಿಪಾಶದಲ್ಲಿ ಬಂಧಿತನಾದ ಗುರು ಬಸವರಾಜೇಂದ್ರರ ಮಹಿಮೆ ಅಗಾಧವು, ಲೀಲಾಪೂರ್ಣವು ಎಂದು ಹರಿಸಿನಿಂದ ನುಡಿದು ಸಂತೋಷಪಟ್ಟರು,

ಇತ್ತ ದಾಸೋಹದ ಲಿಂಗಮ್ಮತಾಯಿಯು ಗುರುಬಸವರಾಜರ ಪ್ರೀತಿ ವಿಶ್ವಾಸಗಳಿಗೆ ಪಾತ್ರಳಾಗಿ, ಭಕ್ತಿಯ ಬಿರುದು ಪಡೆದು, ಜಂಗಮ ದಾಸೋಹದಿಂದ ಅಮರ ಸುಖಾನಂದ ಸಂಪತ್ತಿನಲ್ಲಿ ಕಾಲ ಕಳೆಯುತ್ತ ಸುಖವಾಗಿದ್ದಳು.

ಕೋಲಶಾಂತೇಶ ಶರಣರು ಲಿಂಗಮ್ಮನಂತಹ ಶಿವಭಕ್ತೆ, ಶಿವಶರಣೆಗೊಲಿದ ಬಸವರಾಜ ಗುರುವರನ ಮಹಿಮೆ ಅಗಾಧವೆಂದು ಕೊಂಡಾಡಿದರು.

ಜಂಗಮಪ್ರೇಮಿ ಗುರು ಬಸವರಾಜರ ಮಹಿಮೆ

ಪ್ರತಿದಿನದ ನೇಮದಂತೆ ಒಂದು ದಿನ ಓರ್ವ ಭಕ್ತನು ಗುರು ನಂದಿ ಲಿಂಗನಿಗಾಗಿ ಮೀಸಲು ಭಕ್ಷ್ಯಗಳನ್ನು ಒಯ್ಯುತ್ತಿರಲು ಹಾದಿಯಲ್ಲಿ ಓರ್ವ ಜಂಗಮನು ಹಸುವಿನಿಂದ ಅಯ್ಯಾ ಭಕ್ತಾ ಆ ಕಜ್ಜಾಯಗಳನ್ನು ಇಲ್ಲಿಯೇ ಕೊಟ್ಟು ಬಿಡು ಈ ಜಂಗಮ ಲಿಂಗಕ್ಕೆ ಅರ್ಪಿತವಾದರೆ ಅದು ಬಸವರಾಜ ಗುರುವರನಿಗೆ ಸಲ್ಲಿದಂತೆ ಎಂದು ಹೇಳಿದರೂ ಕೇಳದೇ ಅಲಕ್ಷ್ಯ ಮಾಡಿ ಗುರು ಸನ್ನಿಧಿಗೆ ತಂದನು.

ಆಗ ಗುರುದೇವನು, ಎಲವೋ ನಿನ್ನ ಮೂಢಮತಿಗೆ ಏನೆಂದು ಹೇಳಬೇಕು. ಜಂಗಮವು ನನ್ನ ಪ್ರಾಣ, ನಾನು ಜಂಗಮದ ಪ್ರಾಣವಾಗಿರುವೆನು, ಜಂಗಮ ಭಕ್ತಿ ಇಲ್ಲದೇ ಅದೆಷ್ಟು ಲಿಂಗಾರ್ಚನೆ ಮಾಡಿದರೂ ಪ್ರಯೋಜನವಿಲ್ಲ. ಆದ ಕಾರಣ ಜಂಗಮನನ್ನು ತೃಪ್ತಿ ಪಡಿಸದ ನಿನ್ನಂಥವನ ಮೀಸಲು ನಮಗೆ ಹೇಸಿಕೆ ಎಂದು ಹೀಯಾಳಿಸಿದನು.

ಅದೆಲ್ಲವನ್ನು ಕಂಡ ಮಾಹೇಶ್ವರ ಸಮೂಹವು ಮನದಲ್ಲಿಯೇ ಗುರುವನ್ನು ವಂದಿಸಿ, ಜಂಗಮ, ಜಂಗಮ ದಾಸೋಹ, ಜಂಗಮ ಭಕ್ತಿಗಾಗಿ ತಿಳಿಸಿ ಹೇಳಿದ ಮಹತ್ವದಿಂದ ಆನಂದಗೊಂಡು ಗುರು ಬಸವರಾಜರನ್ನು ಸ್ತುತಿಸುವವರಾದರು.

ಜಂಗಮ ಪ್ರಾಣ ಬಸವಾ ಶ್ರೀಗುರು ಬಸವಾ
ಜಂಗಮೇಚ್ಛಾಪಾಲಶೀಲ ಬಸವಾ ಶ್ರೀಗುರು ಬಸವಾ
ಜಂಗಮಾಘಲ ಭಕ್ತಿಮೂಲ ಬಸವಾ ಶ್ರೀಗುರು ಬಸವಾ

ಜಂಗಮ ಸಂಗ ಶೀಲ ಬಸವಾ ಶ್ರೀಗುರು ಬಸವಾ
ಜಂಗಮ ಸಕಲ ಸಂಪದ ಬಸವಾ ಶ್ರೀಗುರು ಬಸವಾ

ಎಂದು ಶ್ರೀಗುರುವಿನ ಕೀರ್ತಿಯನ್ನು ಕೊಂಡಾಡಿದ ಕೋಲಶಾಂತೇಶ ಶರಣರನ್ನು ಅಭಿಮಾನದಿಂದ ಅಪ್ಪಿ ಆನಂದಿಸುವಷ್ಟರರಲ್ಲಿ ಭಕ್ತನೋರ್ವನು ಕೈಯಲ್ಲಿ ಬಾಳೆಹಣ್ಣು ಹಿಡಿದುಕೊಂಡು ಬಂದು ಸನ್ನಿಧಿಯಲ್ಲಿ ಅರ್ಪಿಸಿ, ಅಂಜಿ ನಡುಗುತ್ತ ನಿಂತಿರಲು, ಗುರುವರನು ನಸುನಕ್ಕು ಭಕ್ತಶ್ರೇಷ್ಠಾ ಅಪರಾಧ ಗೈದವನಂತೆ ಏನಿದು ನಿನ್ನ ಸ್ಥಿತಿ, ನಮಗಾಗಿ ತಂದ ಹಣ್ಣುಗಳಲ್ಲಿ ಎರಡು ನೀನು ತಿಂದದ್ದು ಇದಾವ ದೊಡ್ಡ ತಪ್ಪು ಎಂದು ನುಡಿದರಲ್ಲದೇ, ಹುಚ್ಚಪ್ಪಾ ಹಣ್ಣುತಿಂದು ಆತ್ಮತೃಪ್ತಿಗೊಳಿಸಿದ್ದು ತಪ್ಪಲ್ಲ. ಅದರ ಬದಲಾಗಿ ಕಳವಳಿಸಿ ಆತ್ಮಘಾತ ಮಾಡುವದು ಮಹಾತಪ್ಪು ಎಂದು ಪ್ರೀತಿಯಿಂದ ಕರೆದು ಅಪ್ಪಿಕೊಂಡರು. ಆಗ ಕೂಡಿದ ಸಭಾಸದರು ಭಕ್ತವತ್ಸಲ ಬಸವಾ ಭಕ್ತ ಕರುಣಿ ಬಸವಾ, ಭಕ್ತಾಂಗ ಶ್ರೀಗುರು ಬಸವಾ ಎಂದು ಕೊಂಡಾಡಿದರು.

ಚಂದ್ರಧರ ಮೂರ್ತಿಗೆ ವೀರಶೈವಾಚಾರ ಮಹತ್ವ ತಿಳಿಸಿದ್ದು

ಒಂದು ದಿವಸ ಚಂದ್ರಧರ ಮೂರ್ತಿಯು ಗುರು ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳುತ್ತ, ಗುರುದೇವಾ ಇಹ ಸುಖದಾಸೆಗೆ ಮರುಳಾಗಿ ನಿಜ ಸೌಖ್ಯಾನಂದಕ್ಕೆ ದೂರಾದೆವು. ಕಾರಣ ಇಷ್ಟಾರ್ಥ ಕೂಟ ಶಿವಗಣರೊಡನೆ ಒಡನಾಟವಾಗಿ ಈ ಭವದ ಪರದಾಟದಿಂದ ದೂರಾಗಿ ಶೈವಾಚಾರ ಮಹಿಮೆಯನ್ನು ಅರುಹಬೇಕೆಂದನು.

ಆಗ ನಸುನಕ್ಕ ಗುರುಗಳು ಅಯ್ಯಾ, ಸುವಿಚಾರ ಸಂಪನ್ನನೆ ಕೇಳು, ಶೈವ ಸಂಕುಳದಲ್ಲಿ ವೀರಶೈವವು ಅತೀ ಶ್ರೇಷ್ಠವಾದದ್ದು. ಅದರಿಂದ ಶಿವಕೃಪೆ ಸುಲಭದಲ್ಲಿ ದೊರೆಯುವದು. ಮಾನವನ ಭ್ರಮೆ ಭ್ರಾಂತಿಗಳನ್ನು ಬಿಡಿಸುವಂತಹದು, ಸ್ವಲ್ಪ ಆಚರಣೆಯಿಂದ ಅತುಲ ಫಲ ಕೊಡುವಂತಹದು.

ಈ ವೀರಶೈವ ವ್ರತ ಪಾಲನೆಯಿಂದ ಭಕ್ತನು ನಿರ್ಮಲನಾಗುತ್ತಾನೆ. ಲಿಂಗಾಂಗ ಸಂಗಿಯಾಗಿದ್ದು ಲಿಂಗಾರ್ಪಿತ ಹೊರತು ಏನನ್ನೂ ಸ್ವೀಕರಿಸಕೂಡದು. ಒಂದು ಸಮಯ ಲಿಂಗ ದೂರಾದರೆ, ವ್ರತಪಾಲನೆಯಿಂದ ಭ್ರಷ್ಟತೆ ಉಂಟಾದರೆ ಪ್ರಾಣ ತ್ಯಾಗವೇ ಕೊನೆಯದಾರಿ ವೀರಶೈವಕ್ಕೆ ವಿಶಿಷ್ಟವಾದ ಷಟ್‌ಸ್ಥಲಾ ಚಾರದಲ್ಲಿ ಮಾಹೇಶ್ವರ ಗಣಂಗಳು ಶರಣ ಸತಿ ಲಿಂಗ ಪತಿ ಎಂಬ ಭಾವದಲ್ಲಿರ ಬೇಕು. ಅಂಗ ಪ್ರಾಣ ಭಾವಗಳಲ್ಲಿ ಒಂದಾದ ಜೀವೇಶ್ವರನು ತನ್ನ ಸತಿಯಾದ ಶರಣನನ್ನು ಎಂದೂ ಅಗಲಿರಲಾರನು, ಲಿಂಗ ಪತಿಯನ್ನಗಲಿ ಅರಗಳಿಗೆ ಕೂಡಾ ಶರಣ ಸತಿ ಜೀವಿಸಲು ಸಾಧ್ಯವಿಲ್ಲಾ ಎಂದು ವೀರಶೈವಾಚಾರದ ಮೂಲ ಮಹತಿಯನ್ನರುಹಿದರು.

ಆಗ ಚಂದ್ರಧರ ಮೂರ್ತಿಯು ತನ್ನ ಲಿಂಗ ಪತಿಯನ್ನು ನೋಡಿ ಅಭಿ ಮಾನದಿಂದ ಕೊಂಡಾಡಿ, ಪ್ರೀತಿಯಿಂದ ಅರ್ಚಿಸಿ, ಸುಖಾನಂದ ಹೊಂದಿ, ಶಿವಾನಂದ ರಸ ಸಾಗರದಲ್ಲಿ ಮುಳುಗೇಳುವವನಾದನು ಮತ್ತು ಗುರುಪಾದ ಭಕ್ತಿ ಎಂಬ ಕಲ್ಪವೃಕ್ಷಕ್ಕೆ ಶಿವಸಾಕ್ಷಾತ್ಕಾರವೇ ಬೇರು, ಜಂಗಮಾರ್ಚನ ಆರತಿಯೇ ಪಲ್ಲವ, ಆಗಮನಿಷ್ಠೆ ಶಾಖೆಗಳು, ಶಾಂತರಸವೇ ಮಕರಂದವು, ಲಿಂಗ ಸಂಗ ಸ್ಥಿರ ಸೌಖ್ಯವೇ ಮಧುರವಾದ ಮೋಕ್ಷ ಫಲ. ಈ ಫಲವನ್ನು ಇತ್ತು ರಕ್ಷಿಸಿದ ಗುರುವರಾ ಜಯ ಜಯವು ತಮ್ಮ ಪಾದ ಪದ್ಮಂಗಳಿಗೆ ಎಂದು ಜಯ ಜಯಕಾರಗೈದು ಭಕ್ತಿಯಿಂದ ನಮಸ್ಕಾರ ಮಾಡಿದನು.

(ಶ್ರೀ ಕೊಟ್ಟೂರ ಬಸವೇಶ್ವರ ಚರಿತ್ರೆಯ ೧೪ ನೇ ಸಂಧಿ)

ಅಕಬರ ಬಾದಶಹನ ಭಕ್ತಿಗೊಲಿದು ದಿಲ್ಲಿಯಲ್ಲಿ ದರ್ಶನಕೊಟ್ಟು ಮಣಿಮಂಚ ಪಡೆದದ್ದು

ಸುಖಶಾಂತಿಗಳ ತವರೆನಿಸಿ; ನಾಡಿನ ಮುಖ್ಯಸ್ಥಳವೆನಿಸಿ ಎಂದಿನಿಂದಲೂ ತನ್ನ ಪ್ರತಿಭೆ, ಉಜ್ವಲ ಕೀರ್ತಿಯನ್ನು ಮೊಳಗಿಸುತ್ತ ಅನೇಕ ಅರಸರ ಆಳ್ವಿಕೆಯ ಸ್ಥಳವಾಗಿ ರಾಜ ಮಹಾರಾಜರನೇಕರ ನೆತ್ತರದ ನೀರ್ಗುಡಿದು ನಿತ್ಯ ನಿರ್ಮಲ ಶೋಭಾಯಮಾನ ಭೂಲಕ್ಷ್ಮಿಯ ವಾಸಸ್ಥಾನವಾಗಿ ರಾಜ

ಧಾನಿ ಎಂಬ ಹೆಸರು ಪಡೆದ ದಿಲ್ಲಿಯಂತಹ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಅಕಬರ ಬಾದಶಹನು ಮುಸಲ್ಮಾನನಾದರೂ ಇತರ ಧರ್ಮಗಳನ್ನು ಆದರದಿಂದ ಕಾಣುವ ನಿರ್ಮಲ ಮನಸ್ಸಿನವನಾಗಿದ್ದನು. ಶೌರ್ಯ, ಧೈರ್ಯ ಚಾತುರ್ಯಗಳೊಡನೆ ಸತ್ಯ ನಿಷ್ಠುರ ರಾಜನೀತಿ, ಧರ್ಮನೀತಿ, ಸಮಾಜ ನೀತಿಗಳ ಆಳವನ್ನು ಅರಿತವನಾಗಿದ್ದನು.

ಅಲ್ಲದೇ ಸದ್ಗುಣ ಪಂಡಿತರನ್ನೂ, ಕವಿ, ಗಾಯಕರನ್ನೂ, ಚತುರ ಮತಿಯರನ್ನು ಆಶ್ರಯಕೊಟ್ಟು ಸಲುಹುವ ನೀತಿವಂತನಾಗಿದ್ದನು. ಪುಣ್ಯವಂತನೂ, ಉದಾರಿಯೂ, ರಾಗದ್ವೇಷಗಳಿಲ್ಲದ ನಿರ್ಮಲ ಚಿತ್ತನೂ ಎನಿಸಿ, ರಾಜಧರ್ಮ ನೀತಿಗೆ ಕುಂದುಬಾರದಂತೆ ವರ್ತಿಸಿ, ಸಕಲ ಪ್ರಜರಿಗೆ ಬೇಕಾದವನಾಗಿದ್ದನು. ಮುಸಲ್ಮಾನ ತಾನೆಂಬ ಅಹಂಕಾರವನ್ನು ತೊರೆದು ಸಕಲ ಧರ್ಮಗಳನ್ನು ಸನ್ಮಾನಿಸುತ್ತ ಪರಶಿವನನ್ನು ಆರಾಧಿಸುವ ಶಿವಶಂಕರ ಪ್ರಿಯನಾಗಿದ್ದನು ಹಾಗು ಏಕನಿಷ್ಠೆಯಿಂದ ಆ ಪರಶಿವ ಮೂರ್ತಿಯನ್ನು ಧ್ಯಾನಿಸಿ, ಅಸುರಿಜಾತಿಯ ಅಧರ್ಮಕ್ಕೆ ಅವಕಾಶ ಕೊಡದವನಾಗಿದ್ದನು. ದುಷ್ಕೃತ್ಯವನ್ನರಿಯದ ಧರ್ಮಾಚರಣೆಯಿಂದ ಪ್ರಜರೊಡನೆ ಪ್ರೀತಿ ವಿಶ್ವಾಸ ಗಳಿಸಿಕೊಂಡ ಪ್ರಭುವಾಗಿ ರಾಜ್ಯಭಾರ ಮಾಡುತ್ತಿದ್ದನು.

ಇಂತಿರುವ ಅಕಬರ ಬಾದಶಹನ ಬಗ್ಗೆ ಅದಾವ ಕಾರಣದಿಂದ ಕರುಣೆ ಹುಟ್ಟಿತೋ ಏನೋ ಗುರು ಕೊಟ್ಟೂರೇಶನು ಕೊಟ್ಟೂರು ಮರೆತು ದಿಲ್ಲಿಯ ಅರಮನೆಯಲ್ಲಿ ಪ್ರಕಟನಾಗಿ, ' ಅಕಬರನ ಮಣಿಮಂಚದ ಮೇಲೆ ವಿರಾಜಮಾನನಾಗಿದ್ದನು. ಬಳಿಕ ಕೆಲವು ಸಮಯದ ಮೇಲೆ ಶಯನ ಮಂದಿರದಲ್ಲಿ ಪೊಕ್ಕ ಮಹಾರಾಣಿಯು ಮಂಚದ ಮೇಲೆ ಪ್ರಕಾಶಗೊಂಡು ಉಜ್ವಲ ತೇಜಸ್ಸಿನಿಂದ ಕಂಗೊಳಿಸುವ ಮಂಗಲ ಮೂರ್ತಿಯನ್ನು ಕಂಡು, ಅರೆಕ್ಷಣ ಆಶ್ಚರ್ಯ, ಮತ್ತರಕ್ಷಣ ಭಯ, ಇನ್ನೊಂದುಕ್ಷಣ ಭಕ್ತಿ. ಈ ಅದ್ಭುತ ಚತುರ ಪ್ರಸಂಗದಲ್ಲಿ ಸಿಲುಕಿದ ಪಟ್ಟದರಸಿಯು ದಾಸಿಯನ್ನು ಕಳುಹಿ, ಬಾದಶಹನಿಗೆ ಬರಹೇಳಿ ಗದಗದನೇ ನಡುಗುತ್ತ ನಿಂತುಕೊಂಡಳು.

ಅಷ್ಟರಲ್ಲಿ ಅರಸ ಅಕಬರನು ಶಯನ ಮಂದಿರಕ್ಕೆ ಬಂದು ದಿವ್ಯ ತೇಜದಿಂದೊಪ್ಪುವ ಮಂಗಲಾಂಗನನ್ನು ಕಂಡು, ಭಯಮಿಶ್ರಿತ ಆಶ್ಚರ್ಯದ

ಕಂಗಳಿಂದ ನೋಡುತ್ತಿರಲು, ಪಟ್ಟದರಸಿ ತಾ ಮುಂದಾಗಿ ಆ ಮೂರ್ತಿಯನ್ನು ಪರುಕಿಸಲು ಒತ್ತಾಯ ಪಡಿಸಿದಳು. ಆದರೆ ಅದೇಕೋ ಅಕಬರನ ಮನ ಒಪ್ಪದ ರೀತಿಯಲ್ಲಿ ಮಿಡುಕಹತ್ತಿತು.

ಯಾಕಂದರೆ ಯಾವ ಆತಂಕ, ಅಳುಕು, ಒಳಿತು ಕೆಡಕುಗಳ ಭಯವಿಲ್ಲದೇ ದಿಲ್ಲಿಯನಾಳುವ ಬಾದಶಹನ ಅರಮನೆ ಪೊಕ್ಕು, ಶಯನ ಮಂದಿರದಿ ಮಂಡಿಸಿದ ಈ ಮಂಗಲಕಾಯ ಪುರುಷೋತ್ತಮನು ಸಾಮಾನ್ಯನಲ್ಲವೆಂದು ತರ್ಕಿಸಿದರೂ, ಅರಸಿಯ ಒತ್ತಾಯಕ್ಕೆ ಅರಸುತನದ ದೊಡ್ಡಸ್ತನಕ್ಕಾಗಿ ಮತ್ತು ಇವನಾರೋ ಮಾಯಾಜಾಲಗಾರ, ಮಂತ್ರವಾಗಿ ಏಕಿರಬಾರದು ಎಂಬ ಶಂಕೆಯಿಂದ ಖಡ್ಗವನ್ನು ಝಳಪಿಸುತ್ತ ಮುಂದಾಗಲು, ಮುಂದಿಡ ಬಯಸಿದ ಕಾಲುಗಳು ಕೀಳಲಾರದೇ, ನಿಂತ ಸ್ಥಳಬಿಟ್ಟು ಕದಲಲಾರದೇ ನಾಚಿಕೆ ಅಂಜಿಕೆಗಳು ಏಕಕಾಲಕ್ಕೆ ಹುಟ್ಟಿ, ವಿವೇಕ ತಾ ಮುಂದಾಗಿ ಈ ಮಂಗಲಮಯ ಗುರುವರನು ನನ್ನ ಹೃದಯ ಮಂದಿರದಲ್ಲಿ ಸದಾ ವಾಸವಾಗಿದ್ದರೂ ಅರಿಯದೆ ಅವಿವೇಕಿಯಂತೆ ವರ್ತಿಸಿದೆನಲ್ಲಾ ಎಂದು ಗುರುವರ ಪರಂಜ್ಯೋತಿಯೇ ನನ್ನ ಅಪರಾಧವನ್ನು ಮನ್ನಿಸುವ ಮನ ಮಾಡೈ ತಂದೆ ಎಂದ ದೀರ್ಘದಂಡ ಪ್ರಣಾಮಗೈದನು.

ಆಗ ಗುರುವೃಷಭೇಂದ್ರನು ತನ್ನ ನಿಜ ರೂಪದಿಂದ ಅಕಬರನನ್ನು ಸಮಾಧಾನ ಪಡಿಸಿ, ಸಹಸ್ರ ಭುಜಗಳು ಪ್ರಸನ್ನ ಮುಖಮಂಡಲ ಭಸ್ಮಬಳಿದ ಹಣೆ, ಕರ್ಣಕುಂಡಲ, ರುದ್ರಾಕ್ಷಿ ಮಾಲೆಗಳಿಂದ ಒಪ್ಪುವ ಕೊರಳು, ಕೋಟಿ ಪ್ರಕಾಶದಿಂದ ರಾರಾಜಿಸುವ ಬಸವಮೂರ್ತಿ ಸೇವಿಸುವ ವಿಷ್ಣು, ಬ್ರಹ್ಮ ಉಘೆ ಎಂದು ಜಯಧ್ವನಿಗೈವ ಗಣ ಬಳಗದೊಡನೆ ಪರಶಿವ ಮೂರ್ತಿಯೇ ಪ್ರಕಟನಾದನು. ದೇವ ದುಂದುಭಿ ಮೊಳಗಿ, ಪೂಮಳೆ ಸುರಿದು ದೇವತೆಗಳ ಜಯಧ್ವನಿಯ ನಾದದಿಂದ ಆಕಾಶ ಡಿಮಿಡಿಮಿಸುತ್ತಿತ್ತು. ಇದನ್ನೆಲ್ಲಾ ಕಂಡ ಬಾದಶಹನು ಭಯ ಭಕ್ತಿ, ವಿನಯಶೀಲ ಸೌಜನ್ಯಗಳಿಂದ ವಿಸ್ಮಯಗೊಂಡು, ತನ್ನ ಮನದಲ್ಲಿ ತಿಳಿವಿನ ತಿಳಿಮೊಗ್ಗು ಅರಳಿ ಸಂಶಯವೆಂಬ ಹೊಲಸು ಮಾಯವಾಗಿ, ಇದು ಪರವಸ್ತು ಆಕಾರವಿಲ್ಲದ ನಿರಾಕಾರ ವಸ್ತು ಎಂದು ತತ್ವಜ್ಞಾನಿ ಪಂಡಿತರು ಹೇಳುವ ನುಡಿ ಸುಳ್ಳೆನಿಸಿ, ಏಕಮೇವಾ

ಪರಬ್ರಹ್ಮವೇ ತಾನೆ ಪ್ರೀತಿಯಿಂದ ನನ್ನನ್ನು ಉದ್ಧರಿಸಲಿಕ್ಕೆ ಬಂದಿರುವದು ನಿಜ ಎಂದು ಆನಂದ, ಅಭಿಮಾನ ಉಕ್ಕಿ ನಮಸ್ಕರಿಸಿ, ಆನಂದಾಶ್ರುಗಳಿಂದ ಗುರುವರ ಶ್ರೀಪಾದಗಳನ್ನು ತೊಳೆದು ಪುನೀತನಾದನು.

ಭೂಪತಿಯ ಆನಂದ ಪ್ರೀತಿ, ಭಕ್ತಿ ವಿಶ್ವಾಸಗಳನ್ನು ಕಂಡ ಗುರುಪರನು ಅಯ್ಯಾ ನಿನ್ನ ನಿಷ್ಕಾಮಭಕ್ತಿಗೆ, ಭಾವನಿಷ್ಠೆಗೆ ಮೆಚ್ಚಿದ ಕಾರಣಕ್ಕಾಗಿ ಕೊಟ್ಟೂರಿನಿಂದ ಇಲ್ಲಿಗೆ ಬರಬೇಕಾಯಿತು. ನನ್ನ ಹೆಸರು ನಂದಿಲಿಂಗನೆಂದೂ ವೃಷಭೇಂದ್ರನೆಂದೂ, ಬಸವೇಶ, ಬಸವರಾಜನೆಂದೂ ಕರೆಯುವದುಂಟು, ಅವರವರ ಇಚ್ಛೆಯಂತೆ ಪೊಗಳುವರು. ಇರಲಿ, ಬಾದಶಹಾ ನಿನ್ನಾಳಿಕೆ ಇರುವಿಕೆಯ ಕೊನೆಯವರೆಗೆ ಐಶ್ವರ್ಯ ಕಡಿಮೆಯಾಗದೇ ಸುಖ ಸಂಪದಗಳಿಂದ ಬಾಳುವವನಾಗು ಎಂದು ಪ್ರೀತಿಯಿಂದ ಹರಿಸುತ್ತಿರಲು, ಅಕಬರನು ಧನ್ಯ ನಾದೆನೆಂದು ನಮಸ್ಕಾರ ಗೈಯ್ಯುತ್ತಿರುವಾಗ, ಸಾಕಾರವು ನಿರಾಕಾರ ವಾಗುವಂತೆ ಗುರುದೇವ ತಾ ಬಯಲಾದನು.

ಬಳಿಕ ನಮಸ್ಕರಿಸಿ ಮೇಲೆಳುವಷ್ಟರಲ್ಲಿ ಗುರುವರನು ಬಯಲಾದನು. ಆಶ್ಚರ್ಯಗೊಂಡ ಅಕಬರ ಬಾದಶಹನು ಎನಿದು ಪರವಸ್ತು ತಾನಿರುವ ಸ್ಥಳದ ಪರಿಚಯ ಮಾಡಿಕೊಡಬೇಕೆಂದೇ ಇಲ್ಲಿಯವರೆಗೆ ಬಂದನಲ್ಲವೇ, ಭಕ್ತಪ್ರಿಯ ಅವನ ಪ್ರೀತಿಗೆ ಪಾತ್ರನಾದ ನನ್ನಂಥಹ ಸುಕೃತಶಾಲಿಗಳು ಇನ್ನಾರಿದ್ದಾರೆ. ಶ್ರೀಗುರುದೇವ ಮಂಡಿಸಿದ ಈ ಮಣಿಮಂಚ ಅವನ ಸಿಂಹಾಸನವೆಂದು ಅಭಿಮಾನದಿಂದ ವಂದಿಸಿ, ಪಟ್ಟದರಸಿಯ ಸಂಶಯ ನಿವಾರಣೆಗೆ ಸರ್ವ ವಿಷಯವನ್ನು ವಿವರಿಸಿದನು.

ಬಳಿಕ ರಾಣಿವಾಸದೊಡದೆ ಸಭಿಕರು, ಸರದಾರರಾದಿಯಾಗಿ, ಮಂತ್ರಿ, ಆಪ್ತ ಬಂಧುಗಳೊಡನೆ ಗುರು ನಂದಿಲಿಂಗನು ನೆಲೆಸಿರುವ ಪುಣ್ಯತಾನವಾದ ಶ್ರೀಕ್ಷೇತ್ರ ಕೊಟ್ಟೂರಿಗೆ ಬಂದು ಆಪ್ತ ಜನರೊಡನೆ ಅನರ್ಘ್ಯವಾದ ರತ್ನಾಭರಣ ವಸ್ತ್ರ ವಾಹನ ಸಹಿತ ಶ್ರೀಗುರು ದರ್ಶನದಾಸೆಯಿಂದ ಸಾಧು, ಸಜ್ಜನ ಸತ್ಪುರುಷರ ತತ್ವೋಪದೇಶದಂತೆ ಏಳು ದಿನಗಳ ಪರಿಯಂತರ ದಾರಿ ಕಾಯ್ದನು.

ಆ ಮೇಲೆ ಗುರು ಸಾರ್ವಭೌಮನು ಸಕಲ ಸಂಭ್ರಮದಿಂದ ನಗು ಮೊಗದ ಅರಳು ಮಲ್ಲಿಗೆಯ ತೆರದಿ ಬಂದು ದರ್ಶನ ಕೊಟ್ಟು, ರಾಜೇಂದ್ರಾ, ನಮ್ಮನ್ನು ಕಾಣುವ ಆತುರದಿಂದ ಬಲು ಆಯಾಸಪಟ್ಟಿರುವಿಯಲ್ಲವೇ ? ಅಂತೆ ನಿನ್ನಂಥ ಸುಖ ಜೀವಿಗೆ ಆಯಾಸವಾಗದಿರಲೆಂದೆ ನಾವು ನಿನ್ನಲ್ಲಿಗೆ ಬಂದು ದರ್ಶನ ಕೊಟ್ಟದ್ದು ಒಂದು ರೀತಿಯಿಂದ ಒಳ್ಳೆಯದೇ ಆಯಿತು. ಅಂತೂ, ಸುಜ್ಞಾನಿಯಾದ ರಾಜೇಂದ್ರಾ ನಿನಗೆ, ನಿನ್ನ ಉದಾರ ಗುಣಕ್ಕೆ ನಾವು ಮೆಚ್ಚಿದ್ದೇವೆ, ನಿನ್ನ ಕೀರ್ತಿ ಕುಸುಮವು ಕಲ್ಪಾಂತರದವರೆಗೂ ಘಮ ಘಮಿಸುವದರಲ್ಲಿ ಸಂಶಯವಿಲ್ಲ. ಇನ್ನು ನಿನ್ನ ರಾಜಧಾನಿಗೆ ತೆರಳಬಹುದೆಂದು ಅಪ್ಪಣೆ ಕೊಟ್ಟರು.

ಆಗ ಅಕಬರ ಬಾದಶಹನು ಗುರುವು ತನ್ನ ಅರಮನೆಯಲ್ಲಿ ಮಂಡಿಸಿ ನಿಜರೂಪ ತೋರಿದ ಮಣೆ ಮಂಚವನ್ನು ಕಾಣಿಕೆಯ ರೂಪದಲ್ಲಿ ಸದ್ಗುರು ಬಸವರಾಜನ ಪಾದಕ್ಕೆ ಅರ್ಪಿಸಿ ತನ್ನ ರಾಜಧಾನಿಗೆ ಹಿಂತಿರುಗಿದನು.

ದಿಲ್ಲಿಯಿಂದ ಅಕಬರ ಬಾದಶಹನು ಬಂದು ಗುರು ದರ್ಶನ ಪಡೆದು ಕಾಣಿಕೆಯನ್ನಿತ್ತು ಹೋದ ಸುದ್ದಿ ಬಲುಬೇಗ ಹಬ್ಬಿ ಬಿದರಿ, ಭಾವನಗರ, ವಿಜಯನಗರದಿಂದ ಇನ್ನೂ ಅನೇಕ ಅರಸರು ತರತರದ ಕಾಣಿಕೆಗಳನ್ನು ತಂದು ಗುರುವಿನ ಸನ್ನಿಧಿಗೆ ಅರ್ಪಿಸಿ ಆಶೀರ್ವಾದ ಪಡೆದು ತಮ್ಮ ಇಚ್ಛಿತ ಫಲಗಳನ್ನು ಹೊಂದಿದರು.

ಹೀಗೆ ರಾಜ ಮಹಾರಾಜರಿಂದಲೂ, ಧನಿಕರನೇಕರಿಂದಲೂ ಅನೇಕ ಕಾಣಿಕೆಗಳನ್ನು ಪಡೆದು ಸುಖ ಸಂತೋಷವನ್ನು ಕುಣಿಸಿ ಭಕ್ತರ ಇಚ್ಛಾ ಫಲಗಳಿಗೆ ಇಲ್ಲೆಂಬ ಸೊಲ್ಲಿರಿಯದಂತೆ ಸಾಗಿರಲು ಅವಸರದಿ ಅಬ್ಬರಿಸಿ ಚೈತ್ರಮಾಸ ಮುಂದಾಯಿತು.

———

ಶೆಟ್ಟರ ಮಗನೊಡನೆ ಕೆರೆಯಲ್ಲಿ ಯೋಗನಿದ್ರೆ ಮಾಡಿದ್ದು

ಚೈತ್ರ ಮಾಸದ ಚಲುವ ಚಂದಿರನು ತನ್ನ ನಿತ್ಯ ಕರ್ತವ್ಯದಲ್ಲಿ ಅಣುವಿನಷ್ಟು ತಪ್ಪದೇ ಹಾಲು ಬಣ್ಣದ ಬೆಳದಿಂಗಳನ್ನು ಚೆಲ್ಲಿ ನೋಟಕರ, ಪಾಠಕರ, ಸ್ತುತಿನಿಂದಕರ, ಉಚ್ಚ ನೀಚರೆಲ್ಲರ, ಸಾತ್ವಿಕ, ಕ್ರೂರ ಮತಿ ಉಳ್ಳವರ ನೀತಿ, ಅನೀತಿ, ಧರ್ಮಾಧರ್ಮ, ಮತಿವಂತ, ಮಡಿವಂತರೆಲ್ಲರ ಬಡವ ಬಲ್ಲಿದ, ಮೇಲು ಕೀಳು, ಜಾತಿ ವಿಜಾತಿ, ಹೆಣ್ಣು ಗಂಡು ಯಾವ ತಾರತಮ್ಯವಿಲ್ಲದೇ ನಿತ್ಯದಂತೆ ಭೂವನವನ್ನು ಬೆಳಗುತ್ತಿದ್ದಾನೆ.

ನವಿಲು, ಗಿಳಿ, ಕೋಗಿಲೆ, ಹಂಸಗಳ ಆನಂದಕ್ಕಂತೂ ಅಳತೆ ಇಲ್ಲಾ. ಮಧುಮಾಸದ ಮನೋಹರ ಆ ಸೃಷ್ಠಿ ಸೌಂದರ್ಯ ವರ್ಣಿಸುವಂತಹದೆಂದೇ ಕವಿಗಳ ವರ್ಣನೆಗೆ ಸಹಾಯಕವೆನಿಸಿತ್ತು. ಕಾಮೋದ ಕಳೆ ಮತ್ತಿಷ್ಟು ಕಳೆ ಗೊಂಡಿತು, ವಿರಕ್ತಿಗೂ ಸಹ ವಿರಹ ಬಾಧೆ ಬೆನ್ನು ಹತ್ತಿರಬೇಕು.

ಇಂತಿರ್ಪ ಕಾಲದಲ್ಲಿ, ದೇಶಿಕ ಚಕ್ರವರ್ತಿ ಬಸವರಾಜ ಗುರುವರನು ನಗು ನಲುವಿನ ಚಿನ್ನಾಟದಲ್ಲಿ ಒಬ್ಬನೇ ರಾಜಬೀದಿಗುಂಟ ನಡೆದವನು ತಟ್ಟನೇ ನಿಂತನೊಮ್ಮೆ, ನಕ್ಕನೊಮ್ಮೆ, ಆಗ ಹಲವು ಹುಡುಗರು ಗುರುವಿನ ಮಹಿಮೆಯನ್ನರಿಯಲು ಕೂಡಿದರು. ಅದರಲ್ಲಿ ಸಂಗಶೆಟ್ಟಿಯ ಮಗ ಲಿಂಗ ಶೆಟ್ಟಿ ಗುರುವಿನ ವಿನೋದದಲ್ಲಿ ಭಾಗವಹಿಸಿ ಕೆರೆಯ ದಿಬ್ಬದವರೆಗೆ ಹೋದನು. ಆದರೆ ಉಳಿದ ಹುಡುಗರು ಬಸವರಾಜ ಗುರುವರನ ಬೆನ್ನಟ್ಟಲಾರದೆ ಹಿಂದೆ ಉಳಿದರು.

ಲಿಂಗಶೆಟ್ಟಿಯೊಡನೆ ಕೆರೆಯ ಬಳಿಯಲ್ಲಿ ಗುರು ಬಸವರಾಜನು ಒಮ್ಮಿಂದೊಮ್ಮಲೆ ಮಾಯವಾದನು. ಆಗ ಹಿಂದೆ ಉಳಿದ ಹುಡುಗರಿಗೆ ಗುರುವು ಲಿಂಗಶೆಟ್ಟಿಯನ್ನು ಕರೆದುಕೊಂಡು ಮಾಯವಾದದ್ದು ಮಾತ್ರ ಗೊತ್ತು. ಆದರೆ ಎಲ್ಲಿ ಹೇಗೆ ಎಂಬುದನ್ನು ಅರಿಯದೆ ಹುಡುಗನನ್ನು ಎಳೆದು ಕೊಂಡು ಕೆರೆಯಲ್ಲಿ ಮುಳುಗಿದನೆಂದು ಊರಲ್ಲಿ ಸುದ್ದಿಯನ್ನು ಮಾಡಿದರಲ್ಲದೇ ಲಿಂಗಶೆಟ್ಟಿಯ ತಂದೆಗೂ ಅದೇ ರೀತಿ ಹೇಳಿದರು.

ಆಗ ಸಂಗಶೆಟ್ಟಿಯು ದುಃಖಿಸುತ್ತ ಬಯಸಿದ ಭಕ್ತರಿಗೆ ಮಕ್ಕಳನ್ನು ಕರುಣಿಸುತ್ತಾನೇ ನನ್ನ ಮಗನನ್ನು ಅಪಹರಿಸಿದನೆ ಎಂದು ಚಿಂತಿಸುವಾಗ

ಮಾಹೇಶ್ವರ ಬಳಗವು ಅವನನ್ನು ಸಮಾಧಾನ ಪಡಿಸುತ್ತ ಅಯ್ಯಾ, ಶೆಟ್ಟರೆ ಅವನ ಲೀಲೆಯನ್ನಾರು ಬಲ್ಲರು, ನಿಮಗೇನು ಅರಿಯದೆ ಎನ್ನಲು ಎಲ್ಲರಿಗೂ ಆಶ್ಚರ್ಯವಾಗುವಂತೆ ಏಳು ದಿನಗಳ ಪರಿಯಂತರ ಕಾಣೆಯಾಗಿದ್ದ, ಕೆರೆಯಲ್ಲಿ ವಾಸ ಮಾಡಿದ ಗುರುಮೂರ್ತಿಯು ಲಿಂಗಶೆಟ್ಟಿಯೊಡನೆ ಬಯಲಿಗೆ ಬಂದು, ತೋಟದಲ್ಲಿ ಹೊಕ್ಕು ಶೆಟ್ಟರ ಹುಡುಗನೊಡನೆ ಉಪಚಾರ ಹೊಂದುತ್ತ, ಯೋಗ ನಿದ್ರೆಯಲ್ಲಿ ಲೀನನಾದನು.

ಬಳಿಕ ಪಟ್ಟಣದ ಜನರಿಗೆ ಅಚ್ಚರಿಯಾಗುವಂತೆ ಗುರು ಬಸವರಾಜನು ತೋಟದಲ್ಲಿ ಯೋಗ ನಿದ್ರೆಯಲ್ಲಿ ಪವಡಿಸಿದ್ದಾನೆ ಎಂದು ತಿಳಿದು ತಾಯಿಯನ್ನು ಕಳೆದುಕೊಂಡ ಕರು ಧಾವಿಸಿ ಬರುವಂತೆ, ಕಳೆದ ಹೋದ ನಿಧಿ ಸಿಕ್ಕ ಆನಂದದಲ್ಲಿ ಪುರಜನರೆಲ್ಲರೂ ವೈಭವದಿಂದ ಗುರುವರನನ್ನು ಕರೆತರುವ ಅಭಿಲಾಷೆಯಲ್ಲಿ ಮೆರವಣಿಗೆಯ ಸಕಲ ಸಿದ್ಧತೆಯಿಂದ ತಂಡೋಪತಂಡವಾಗಿ ತೋಟಕ್ಕೆ ಬಂದರು.

ಆಗ ಶರಣ ಕುಲತಿಲಕ ಕೋಲ ಶಾಂತೇಶನು ಮುಂದಾಗಿ ಗುರುವರನ ಪಾದವನ್ನು ಪಿಡಿದು ಬಳಿಕ ಕೈ ಮುಗಿದು ಪರಿಪರಿಯಿಂದ ಧ್ಯಾನಿಸಲು ಅವನ ಸುತ್ತಿಯಿಂದ ಎಚ್ಚೆತ್ತ ಗುರು ವೃಷಭೇಂದ್ರನು ಎಲ್ಲರನ್ನೂ ಕೃಪಾದೃಷ್ಟಿಯಿಂದ ನೋಡಿದನು.

ಬಳಿಕ ಪುರಜನರಾದಿಯಾಗಿ ಶರಣ ಸಮೂಹವು ಗುರುವರನನ್ನು ವಿವಿಧ ರೀತಿಯಿಂದ ಪೂಜಿಸಿ ಅವನ ಕೃಪೆಗೆ ಪಾತ್ರರಾದರು.

ಭವಿಜನ್ಮದ ದಾಸಿಗೆ ಹೂದಂಡೆಯಲ್ಲಿ ಲಿಂಗ ಕರುಣಿಸಿದ್ದು

ಭವಿಜನ್ಮದಿಂದ ತೊಳಲಾಡುವ ಗೌರಾಯಿ ಎಂಬ ದಾಸಿಯು ಮನದಲ್ಲಿ ಮಿಡುಕುತ್ತ, ನನಗೇಕೆ ಈ ಭವಿಜನ್ಮವಾಯಿತೋ, ನಾನೆಂಥಹ ಪಾಪ ಮಾಡಿರುವೆನೋ, ಪೂರ್ವಜನ್ಮದ ಕರ್ಮದಿಂದಾಗಿ ಉಂಟಾದ ಈ

ಭವಿಜನ್ಮದಿಂದ ಮುಕ್ತಳಾಗಬೇಕಾದರೆ ಗುರುಕಾರುಣ್ಯ ಒಂದೇ ಸಮರ್ಥವೆಂದು ತೀರ್ಮಾನಿಸಿ, ಗುರು ಬಸವರಾಜನ ದಾಸಿಯಾಗಿ ಸೇವೆ ಸಲ್ಲಿಸುವ ಸಂಕಲ್ಪ ಮಾಡಿದಳು.

ದಾಸಿ ವೃತ್ತಿಯಲ್ಲಿದ್ದ ಗೌರಾಯಿಯು ಭಯಭಕ್ತಿಯಿಂದ ಪರಿಮಳ ತುಂಬಿದ ಪೂಸರವಂದನ್ನು ಸಿದ್ಧಪಡಿಸಿ, ದೂರದಿಂದಲೇ ಗುರುವಿಗೆದುರಾಗಿ ನಿಂತುಕೊಂಡರು. ಅವಳ ಮನದಾಳವನ್ನು ಅರಿತ ನಂದಿಲಿಂಗನು ನಗು ಮೊಗದಿ ಮುಗುಳು ನಗೆ ಚೆಮ್ಮಿ, ಬಾರೌ ನಿನ್ನ ಕೈಯೊಳಿರುವ ಪೂವಿನಲ್ಲಿದ್ದ ಪರಶಿವ ಮೂರ್ತಿಯನ್ನು ಪೂಜಿಸಿ, ಗುರು ಜಂಗಮಾರ್ಯ ಸೇವೆಮಾಡಿ ಮೋಕ್ಷ ಪಡೆವ ಮಾನಿನಿಯಾಗು, ಭವಿಜನ್ಮದಿಂದ ದೂರಾಗು ಎಂದರು.

ಗುರು ಸಾಮ್ರಾಟನ ನುಡಿ ಕೇಳಿದ ಗೌರಾಯಿ ತನ್ನ ಕೈಯೊಳಿದ್ದ ಹೂವು ಬಿಚ್ಚಿ ನೋಡಲಿಲ್ಲ, ಶಿವಲಿಂಗಮೂರ್ತಿ ಪ್ರಕಾಶ ಪೂರ್ಣವಾಗಿ ಕಂಗೊಳಿಸು ತ್ತಿತ್ತು. ಅದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ಅದೇ ಸಂತಸ ಸಮಯ ದಲ್ಲಿ ಎಲ್ಲರೂ ತಮ್ಮ ತಮ್ಮ ಇಷ್ಟಾರ್ಥಗಳನ್ನು ಕೇಳಿ ಪಡೆದು ಸುಖಿಯಾದರು. ಗೌರಾಯಿಯ ಆನಂದಕ್ಕಂತೂ ಅಳತೆ ಇಲ್ಲದೆ ಗುರುಮೂರ್ತಿಗಳ ಪ್ರೀಯ ಸೇವ ಕಿಯಾಗಿ ಸುಖದಿಂದ ಬಾಳಿದಳು.

ಬಳಿಕ ಕೋಲ ಶಾಂತೇಶ್ವರ ಇನ್ನಿತರ ಶರಣ ಬಳಗದವರು ಈ ಹಿಂದೆ ನಿಂಬಾಂಬೆಯೆಂಬ ಶಿವ ಶರಣೆಯ ಭಕ್ತಿಗೊಲಿದ ಪರಶಿವನು ಲಿಂಬೆ ಹಣ್ಣಿನಲ್ಲಿ ಲಿಂಗವನ್ನು ತೋರಿಸಿದಂತೆ, ಇಂದು ಗುರುಸಾರ್ವಭೌಮ ಬಸವರಾಜರು ಹೂ ದಂಡೆಯಲ್ಲಿ ಲಿಂಗವನ್ನು ಪ್ರಕಟಿಸಿದರಲ್ಲಾ ಎಂದು ಉಬ್ಬಿನಿಂದ ಮನದುಂಬಿ ಹೊಗಳಿದರು.

ಸ್ವಲ್ಪ ಸಮಯದಲ್ಲಿ ಲಿಂಗಾರ್ಚನೆ ಪ್ರಾರಂಭವಾಗಲು ಲಿಂಗಾನಂದದಲ್ಲಿ ಎಲ್ಲರೂ ಮೈಮರೆತು ಕುಳಿತಿರಲು ಬಲಭಾಗದಿಂದ ಕರಡಿಯೊಂದು ಕರಿ ಗೂದಲು ಕುಣಿಸುತ್ತ ಕ್ರೂರ ಕರಾಳ ಭೀಕರ ಶಬ್ದದೊಡನೆ ಸಾಗಿ ಬಂತು. ಬಳಿಕ ಎಡಗಡೆಯಿಂದ ಕೋರೆ, ದಾಡಿಗಳಿಂದ ವಿಕೃತ ರೂಪದ ಮೂರು ತಲೆ ಮೂರು ಮೋತಿ, ಮೂರು ಕರಭುಜ ಬೀಸುತ್ತ ಹೊರಟು ಬಂದ ಭೂತರೂಪ

ವನ್ನು ಕಂಡು ಹಲವರು ಹೌಹಾರಿದರು, ಕೆಲವರು ಅಂಜಿ ಕಂಗಾಲಾದರು. ಅಷ್ಟರಲ್ಲಿ ವಿವಿಧ ಬಣ್ಣಗಳಿಂದ ಸಣ್ಣ ದೊಡ್ಡ ಆಕಾರದಲ್ಲಿ ಪರಿ ಬಿಚ್ಚಿ ಹೆಡೆ ತೆರೆದು, ಕೊಡೆ ನೆರಳ ನೆರದಿ ಗುರುವರನತ್ತ ಸಾಗಿ ಬಂದು ಆಡ ಹತ್ತಿದವು. ಅವುಗಳ ಫೂತ್ಕಾರ ಶಬ್ದವು ಶಿವಗಣ ಸಮೂಹ, ಭಕ್ತಜನ ಸಂದಣಿಯನ್ನು ಹೆದರಿಸುವಂತಿತ್ತು.

ಅಷ್ಟರಲ್ಲಿ ಗಣನಾಯಕ ಕೋಲ ಶಾಂತೇಶನು ಗುರುವರೇಣ್ಯ ಇದೇನು ಉತ್ಪಾತ ಸಂಭವಿಸಿತೋ ಜನಜಂಗುಳಿಯು ಪರಿತಾಪ ಹೇಳತೀರದು ಎಂದು ವಿನಯದಿಂದ ಕರಜೋಡಿಸಿ ಬೇಡಿಕೊಂಡನು.

ಆಗ ಗುರು ವೃಷಭೇಂದ್ರನು ಬೆದರಬೇಡಿರೆಂದು ಅಭಯ ವಚನದಿಂದ ಸಮಾಧಾನ ಪಡಿಸಿ ಕರಡಿಯನ್ನು ಕರೆಯುತ್ತ ಕಾರಣ ಪುರುಷೋತ್ತಮಾ ನೀನು ಸದಾ ನನ್ನ ಸನ್ನಿಧಿಯಲ್ಲಿರು, ಭೂತಶ್ರೇಷ್ಠಾ ದ್ವಾರ ರಕ್ಷಣೆಯ ಭಾರ ನಿನ್ನದಾಗಲಿ, ನೀನು ಸದಾ ಹೆಬ್ಬಾಗಿಲದಲ್ಲಿ ವಾಸವಾಗಿರು. ಬಳಿಕ ನಾಗ ಸಮೂಹವೇ ನಿಮ್ಮಿಂದ ಜನತೆಯಲ್ಲಿ ಭಯ ಉತ್ಪತ್ತಿಯಾಗುವದು ಕಾರಣ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಬಹುದು ಎಂದು ಅಪ್ಪಣೆ ಮಾಡಿದನು.

ಅಷ್ಟರಲ್ಲಿ ಹಿಡುತ್ತ ಬಂದ ನರಿಯೊಂದು ಬಸವನಾಣೆ ಎಂಬ ಶಬ್ದ ಕಿವಿಗೆ ಬಂದು ೩ ದಿನಗಳ ಪರಿಯಂತರ ಅಲ್ಲೆ ನಿಂತು ಆಣೆ ಬಿಡಿಸಿದ ಮೇಲೆ ಹೊರಟು ಹೋಯಿತು.

ಬಳಿಕ ಗುರುವರನು ಒಂದು ದಿನ ಹೊರ ತೋಟದಲ್ಲಿರಲು ಕೋಲ ಶಾಂತೇಶನೊಡಗೂಡಿ ಭಕ್ತರೆಲ್ಲರು ಪುರದಲ್ಲಿ ಬರಬೇಕೆಂದು ಬಿನ್ನೈಸಿಕೊಳ್ಳಲು ಒಪ್ಪಿಗೆ ಕೊಟ್ಟು ಹೊರಟು ನಿಂತಿರಲು ಮೊದಲೇ ತೀರ್ಮಾನಿಸಿದಂತೆ ಗುರು ಮೂರ್ತಿಯನ್ನು ಶೃಂಗರಿಸಿದ ಆನೆಯ ಮೇಲೆ ಕುಳ್ಳಿರಿಸಿ ಮೆರವಣಿಗೆಯಿಂದ ಕರೆದೊಯ್ದರು. ಸಂಭ್ರಮದಿಂದ ಶೋಭಾಯಮಾನವಾಗಿ ಕಂಗೊಳಿಸುವ ಅಂದಿನ ಕೊಟ್ಟೂರು ಪುರ ವೈಭವವನ್ನು ಕಂಡ ಗುರು ಬಸವರಾಜನು ಸರ್ವ ಭಕ್ತರನ್ನು ಸಂತೋಷದಿಂದ ನೋಡುತ್ತಿದ್ದನು. ಅಷ್ಟರಲ್ಲಿ ಮೆರವಣಿಗೆ ಮಠಕ್ಕೆ ಬರಲು ಕೋಲ ಶಾಂತೇಶನು ಆನೆಯ ಮೇಲಿಂದ ಗುರುಗಳನ್ನು

ತಿಳಿಸಿಕೊಂಡು ಹೋಗಲು ಎಲ್ಲರಿಗೂ ಉಚಿತ ಸತ್ಕಾರಗೈದು ಶಿವತತ್ವಾನುಭವ ಸ್ತವದಲ್ಲಿ ಲೀನರಾದರು.

ಬೇಡ ಚಿಕ್ಕಣ್ಣನಿಗೊಲಿದು ಎರಳೆಯ ಗರ್ಭದಲ್ಲಿ ಲಿಂಗ ಕರುಣಿಸಿದ್ದು ಹಾಗು ಲಿಂಗದೀಕ್ಷೆ ಕೊಡಿಸಿದ್ದು

ಶಿವಗಂಗೆಯಲ್ಲಿ ವಿರಾಜಮಾನವಾಗಿರುವ ಗಂಗಾಧರೇಶ್ವರನ ಲೀಲಾ ವಿನೋದ ಮಹಿಮೆಯಿಂದ ದಕ್ಷಿಣ ಕಾಶಿಯೆಂದು ಹೆಸರು ಪಡೆದ ಕಕುದ್ಗಿರಿಯ ಸಮೀಪದಲ್ಲಿ ದೇವರಾಯ ಪಟ್ಟಣವಿರುವದು. ಅಲ್ಲಿ ಶಿವಭಕ್ತ ಶಿರೋಮಣಿಯಾಗಿ, ಅಷ್ಟಮದಗಳನ್ನು ಹುರಿದು, ಸಪ್ತ ವ್ಯಸನಗಳನ್ನು ವರ್ಜಿಸಿ, ಇರ್ಷೆ, ಮತ್ಸರಗಳನ್ನು ತರಿದು, ದಯಾಸಮುದ್ರನಾಗಿರ್ದ ಬೇಡನಾಯಕ ಚಿಕ್ಕಣ್ಣ ಭಕ್ತಶ್ರೇಷ್ಠನೆಂದು ಹೆಸರಾಗಿ ಬಾಳಿಕೊಂಡಿದ್ದನು.

ಅವನಿಗೆ ಬೇಟೆಯಾಡುವದೊಂದು ನಿತ್ಯ ಉದ್ಯೋಗವಾಗಿದ್ದರೂ ದಯಧರ್ಮದಿಂದ ಸರ್ವಜೀವಿಗಳಿಗೆ ಮುಕ್ತಿಯಮಾರ್ಗ ತೋರಿಸುವ ಪರಿಪಾಠದಲ್ಲಿ ಶಿವಪದನಿಷ್ಠೆಯಲ್ಲಿದ್ದ ಧೀರ, ವೀರ, ಗಂಭೀರ ಪುರುಷೋತ್ತಮ ಬೇಡ ಚಿಕ್ಕಣ್ಣ ವಿಶ್ರಾಂತಿಗಾಗಿ ಮಲಗಿ ನಿದ್ರಿಸುವ ಸಮಯದಲ್ಲಿ ಕನಸೊಂದು ಕಂಡನು.

ಕನಸಿನಲ್ಲಿ ಕಾಣಿಸಿಕೊಂಡ ಭೂರುದ್ರ ಬಸವರಾಜರು ಚಿಕ್ಕಣ್ಣನ ತಲೆಯ ಮೇಲೆ ವರಹಸ್ತವನ್ನಿಟ್ಟು ಎಲೈ ಮಗನೇ ಈ ಅಡವಿಯಲ್ಲಿ ಎರಳೆಯ ರೂಪದಲ್ಲಿ ಸಂಚರಿಸುವ ಗಂಧರ್ವರ ಗರ್ಭದಲ್ಲಿ ಲಿಂಗಗಳುಂಟು. ಆ ಎರಡು ಲಿಂಗಗಳನ್ನು ಪಡೆದುಕೊಂಡು, ಬಳಿಕ, ಲಿಂಗಸಮೇತ ಗುಮ್ಮಳಾಪುರದ ಹಿರಿಯ ಮಠದೊಡೆಯರ ಸನ್ನಿಧಿಗೆ ಹೋಗಿ, ಆ ಅಯ್ಯನವರಿಂದ ದೀಕ್ಷಾ ವಿಧಿಯಂತೆ ಲಿಂಗಗಳನ್ನು ಧರಿಸಿಕೊಂಡು, ಪತ್ನಿ ಸಮೇತ ನನ್ನ ಬಳಿಗೆ ಬಾ. ಖಂಡಿತ ದರ್ಶನ ದೊರೆಯುವದು ಎಂದು ಹೇಳಿದರು.

ಬಳಿಕ ಎಚ್ಚತ್ತ ಬೇಡರೊಡೆಯ ಚಿಕ್ಕಣ್ಣನು ಸೂರ್ಯೋದಯ ವಾಗುವದಷ್ಟೆ ತಡ, ಅನುಯಾಯಿಗಳೊಡನೆ ಬೇಟೆಗೆಂದು ನಿಬಿಡವಾದ ಅಡವಿಯನ್ನು ಸೇರಿದನು. ಗುರುಧ್ಯಾನದಲ್ಲಿ ಎರಳೆಗಳು ಬರುವದನ್ನು ನಿರೀಕ್ಷಿಸುತ್ತಿದ್ದನು. ಅಷ್ಟರಲ್ಲಿ ಸುಂದರವಾದ ಎರಡು ಚಿಗರೆಗಳು ಈತನ ಬಾಣದ ಅಳವಿನಲ್ಲಿ ಸುಳಿದು ನುಸುಳುವಷ್ಟರಲ್ಲಿ ಬತ್ತಳಿಕೆಯಿಂದ ಹೊರಬಂದು ಹೆದೆಏರಿದ ಬಾಣವು ಚಿಗರೆಗಳ ಗರ್ಭವನ್ನು ಪ್ರವೇಶಿಸಿತು.

ಬಾಣ ತಾಕಿದ ಎರಳೆಯು ಭೂಮಿತಾಯಿಯ ಆಶ್ರಯದಲ್ಲಿ ಬೀಳಲು ಚಿಕ್ಕಣ್ಣ ಅವುಗಳ ಹೊಟ್ಟೆಯಲ್ಲಿ ಹೊಕ್ಕಬಾಣಗಳಿಂದ ಬಿದ್ದ ರಂಧ್ರವನ್ನು ಕಣ್ಣುತುಂಬ ನೋಡಲು, ಒಳಗೆ ವಜ್ರದಂತೆ ಹೊಳೆವ ಎರಡು ಲಿಂಗಗಳು ಕಾಣುತ್ತಿದ್ದವು.

ಬಳಿಕ ಚಿಕ್ಕಣ್ಣದೊರೆಯು ಗುರು ಬಸವರಾಜನನ್ನು ನೆನೆಯುತ್ತ ಭಕ್ತಿಭಾವದಿಂದ ಎರಡು ಲಿಂಗಗಳನ್ನು ತೆಗೆದುಕೊಂಡು ನಮಸ್ಕರಿಸಿ, ಶೆಲ್ಲೆದ ಸೆರಗಿನಲ್ಲಿ ಕಟ್ಟಿಕೊಂಡು, ಬಂಧು ಮಿತ್ರರೊಡನೆ ಮರಳಿ ಮೃಗಗಳನ್ನು ನೋಡುತ್ತಿರುವಷ್ಟರಲ್ಲಿ ಹೊಳೆವ ಥಳಥಳಿಸುವ ದೇಹಧಾರಿಗಳಾಗಿ ಆಕಾಶಕ್ಕೆ ಹಾರಿದವು. ಆಗ ಬೇಡರೆಲ್ಲರು ಭಯಭಕ್ತಿಯಿಂದ ಜಯಘೋಷ ಮಾಡಿದರು.

ಚಿಕ್ಕಣ್ಣಯ್ಯನು ಅವರೆಲ್ಲರೊಡನೆ ತಾನು ತನ್ನ ಹೆಂಡತಿಯೊಡನೆ ಗುಮ್ಮಳಾಪುರದ ಹಿರಿಯ ಮಠಾಧೀಶ ರುದ್ರಮುನಿಸ್ವಾಮಿಗಳ ಸನ್ನಿಧಿಗೆ ಬಂದು, ಸಾಷ್ಟಾಂಗ ನಮಸ್ಕಾರ ಮಾಡಿ, ಲಿಂಗಗಳನ್ನುತೋರಿಸಿ, ಗುರುವರ ಬಸವರಾಜನ ಅಪ್ಪಣೆಯಂತೆ ಸರ್ವ ವೃತ್ತಾಂತವನ್ನು ತಿಳುಹಿಸಿದನು.

ಆಗ ರುದ್ರಮುನಿಸ್ವಾಮಿಗಳು ಇದು ಗುರುಬಸವರಾಜನ ಮಹಿಮೆ ಎಂದು ತಿಳಿದು, ಗ್ರಾಮದ ಭಕ್ತ ಮಾಹೇಶ್ವರ ಬಳಗದ ಸಮಕ್ಷಮದಲ್ಲಿ ಪತಿ–ಪತ್ನಿಗಳೀರ್ವರ ತಲೆಯ ಮೇಲೆ ಹಸ್ತವನ್ನಿಟ್ಟು, ಭಸ್ಮಧರಿಸಿ ಮೂಲ ಮಂತ್ರವನ್ನು ಕಿವಿಯಲ್ಲಿ ಉಪದೇಶಿಸಿ, ಆಗಮೋಕ್ತವಾಗಿ ಅವರಿಗೆ ಲಿಂಗ ದೀಕ್ಷೆಯನ್ನು ಕೊಟ್ಟರು.

ಬಳಿಕ ಚಿಕ್ಕಯ್ಯನನ್ನು ನಮ್ರನಯ ವಚನಗಳಿಂದ ಪರಾಂಭರಿಸಿ, ಕಲಿಕಲುಷದಿಂದ ದೂರಾಗಿ ಬಾಳುವ ಆಶೀರ್ವಾದ ಮಾಡಿದರು. ಆಗ

ಚಿಕ್ಕಯ್ಯನು ನಮಸ್ಕರಿಸಿ, ತನಗೊಂದು ಕಾಯಕವನ್ನು ನೇಮಿಸಿಕೊಡಬೇಕೆಂದು ಪ್ರಾರ್ಥಿಸಲು, ಗುರು ರುದ್ರಮುನಿಸ್ವಾಮಿಗಳು ಅಂದಿನ ಮೋಳಗೆಯ ಮಾರಯ್ಯನ ಕಾಯಕವೇ ನಿನ್ನದಾಗಲಿ, ಹೋಗು ಚಿಕ್ಕಯ್ಯಾ ಕೊಟ್ಟೂರಯ್ಯನ ಕರುಣವ ಪಡೆದು ಸುಖಿಯಾಗಿ ಬಾಳು ಎಂದು ಆಶೀರ್ವಾದ ಮಾಡಿ, ಆನಂದದಿಂದ ಕಳುಹಿಸಿ ಕೊಟ್ಟರು.

ಬಳಿಕ ಗುರುವಿನ ಅಪ್ಪಣೆಯಂತೆ ಹೆಂಡತಿಯೊಡಗೂಡಿ ಹೊರಟ ಮೋಳಿಗೆಯ ಚಿಕ್ಕಣಾರ್ಯನು ಮಾಯದಿಂದ ದೂರಾಗಿ, ಮನ ಲಿಂಗದೊಳಿರಿಸಿ, ಗುರುವಿಗಾಗಿ ಶಿವಧ್ಯಾನ ತತ್ಪರ ಸದ್ಭಕ್ತಿ ಮಂಡನ ಎಂಬ ಅವುಗೆಗಳನ್ನು ಸಿದ್ಧಗೊಳಿಸಿ, ಆತನ ಸನ್ನಿಧಿಗೆ ಹೊರಟನು. ಆಗ ಮಧ್ಯಮಾರ್ಗದಲ್ಲಿ ಸಿದ್ದೇಂದ್ರ ಶರಣರಿಗೆ ಈ ಸುದ್ದಿ ತಿಳಿದು ಪ್ರೀತಿಯಿಂದ ಅವನನ್ನು ತಮ್ಮ ಮಠಕ್ಕೆ ಕರೆದುಕೊಂಡು ಹೋದರು.

ಬಳಿಕ ಶಿವತತ್ವಾನುಭವ ಸುಖದಲ್ಲಿದ್ದು, ನಿತ್ಯನೇಮದಂತೆ ಕಟ್ಟಿಗೆ ತರಲು ಅಡವಿಗೆ ಹೋಗಲು, ಸೌದೆಗಳು ಕಾಣದೇ ಕಂಗೆಟ್ಟು, ಗುರುಬಸವಾ ಇಂದಿನ ಕಾಯಕ ನಿಂತುಹೋಗುವದು, ತಪ್ಪದೇ ನಾಳಿಗೆ ನಿನ್ನ ಸನ್ನಿಧಿಗೆ ಹೊರಡುವೆ. ಇಂದಿನ ಕಾಯಕ ಪೂರ್ತಿಯಾಗುವಂತೆ ಕೃಪೆಮಾಡೆಂದು ಧ್ಯಾನಿಸಲು ಕಟ್ಟಿಗೆ ದೊರೆತು, ಮಾರಿಬಂದ ಹಣದಿಂದ ಜಂಗಮಾರಾಧನೆ ಮಾಡಿಸಿದನು.

ಬಳಿಕ ಗುರುವಿನ ಅಪ್ಪಣೆಯನ್ನು ಸಿದ್ದೇಂದ್ರ ಶರಣರಿಗೆ ತಿಳಿಸಿ, ಎಲ್ಲ ಗಣಂಗಳಿಗೆ ವಂದಿಸಿ, ಕೊಟ್ಟೂರಿಗೆ ಬಂದನು. ತನ್ನ ನೆಚ್ಚಿನ ಶಿಷ್ಯ ಹೆಚ್ಚಿನ ಭಕ್ತ ಕಾಯಕದ ಕಟ್ಟಾಳು, ಮೋಳಿಗೆಯ ಚಿಕ್ಕಯ್ಯ ಬರುವನೆಂಬ ಆನಂದದಲ್ಲಿ ಕುಣಿದಾಡುವ ಗುರು ಬಸವರಾಜನಂ ಕಂಡು ಕೋಲಶಾಂತೇಶನೊಡಗೂಡಿ ಎಲ್ಲರೂ ಬೆರಗಾದರು. ಅಷ್ಟರಲ್ಲಿ ಚಿಕ್ಕಯ್ಯ ತಾ ಮುಂದಾಗಿ ಬಂದು ದಂಡ ನಮಸ್ಕಾರಮಾಡಿ ಕೈಮುಗಿದು ನಿಂತು—

ಕಂಡೆಂ ಪರಾತ್ಪರ ತತ್ವದಾದಿಯಂ
ಕಂಡೆಂ ಶಿವಮತಾಲಂಕಾರಿಯಂ

ಕಂಡೆಂ ಶಿವತತ್ವಾನುಭವ ಚಂದನಂ
ಕಂಡೆಂ ಶಿವಯೋಗಿ ಭೋಗದೂರನಂ

ಎಂದು ಭಕ್ತಿಪರವಶತೆಯಿಂದ ನಲಿ ನಲಿದು ಕೊಂಡಾಡಿದನು. ಬಳಿಕ ಮತ್ತೊಮ್ಮೆ ಗುರುವಿನ ಪಾದಕ್ಕೆ ಹಣೆಹಚ್ಚಿ ನಮಸ್ಕರಿಸಿದನು. ತಾನು ತಂದ ಆವುಗೆಗಳನ್ನು ತೊಡಿಸಿದನು. ಬಳಿಕ ಗುರು ವೃಷಭರಾಜನು ನನ್ನ ತನುಮನ ಮೆಚ್ಚು ಹೆಚ್ಚಿನ ಭಕ್ತಚಿಕ್ಕಯ್ಯ ಬಾರಾ ನಿನ್ನ ಇಷ್ಟಾರ್ಥವೇನೆಂದು ಕೇಳಲು, ಗುರುದೇವಾ ಅರಿಷಡ್ವರ್ಗಗಳಿಗೆ ಮಣಿಯದ ತಮ್ಮ ಪಾದಾರವಿಂದ ನಿತ್ಯ ಸುಖವನ್ನು ಕರುಣಿಸಿ ಅರಿಷಡ್ವರ್ಗಗಳನ್ನು ಗೆಲ್ಲುವ ಮಾರ್ಗತೋರಿ ಉದ್ಧರಿಸಿರಿ ಎಂದು ನುಡಿದನು.

ಆಗ ಗುರುವರನು ಸ್ವಯಂ ಪ್ರಕಾಶವುಳ್ಳ ವಸ್ತುವಿಗೆ ಕತ್ತಲೆಯ ಭಯ ಹೇಗೆ ಹುಟ್ಟುವದಿಲ್ಲವೋ ಅದರಂತೇ ನಿನ್ನಂಥ ಸದಾಚಾರ ಸಂಪನ್ನನಿಗೆ ಅವು ಗಳನ್ನು ಗೆಲ್ಲುವದೇನು ಕಠಿಣವಲ್ಲಾ ಸುಲಭವೆಂದೆ ಭಾವಿಸು ಎಂದು ಉಪ ದೇಶ ಮಾಡಿದನು.

ಬಳಿಕ ಮೋಳಿಗೆಯ ಚಿಕ್ಕಯ್ಯನ ಕಾಯಕವು ಬಲಿತು ನಿತ್ಯ ನೇಮ ದಂತೆ ಶಿವಪದ ಧ್ಯಾನದಿಂದ ಆನಂದ ಹೊಂದಿ, ಉದಯದಲ್ಲಿ ಗುರುಸನ್ನಿಧಿಗೆ ಹೋಗಿ ವಂದಿಸಿ ಚರಮೂರ್ತಿಯೊಡನೆ ಕಟ್ಟಿಗೆ ತರಲು ಕಾಡಿಗೆ ಹೋದನು. ಅಲ್ಲಿ ಕಾಡಿನಲ್ಲಿ ಹೆಬ್ಬುಲಿಯೊಂದು ಚರಮೂರ್ತಿಯನ್ನು ಬೆನ್ನಟ್ಟಿ ಬರಲು, ಅವನು ಅದನ್ನು ಕಂಡು ದಿಕ್ಕೆಟ್ಟು ಓಡ ಹತ್ತಿದನು. ಅಷ್ಟರಲ್ಲಿ ಹುಲಿಯ ಸಮೀಪದಲ್ಲಿದ್ದ ಚಿಕ್ಕಯ್ಯನು ಹುಲಿಯನ್ನು ಸಮೀಪಿಸಿ ಎಲೈ ಪಶುವೇ, ಆತನಾರು ಅರಿಯದೇ ಮೈಮೇಲೆ ಹೊರಟ-ನಿನ್ನ ಸ್ಥಿತಿ ಏನಾದೀತು ಬಲ್ಲೆಯಾ ಎಂದು ಕೊಡಲಿಯನ್ನೆತ್ತಿ ನಾರಸಿಂಹನಾಗಿ ಸೀಳಿ ಹಾಕುತ್ತೇನೆ ಎಂಬ ಕೂಗು ಹುಲಿಯ ಕಿವಿಗೆ ಬಿದ್ದಾಕ್ಷಣವೇ ಗದಗುಟ್ಟಿ ನಡುಗುತ್ತ ಚಿಕ್ಕಯ್ಯನಿಗೆ ದೈನ್ಯದಿಂದ ಪ್ರದಕ್ಷಿಣೆ ಹಾಕಿ ಪಾದಗಳ ಮೇಲೆ ಬಿದ್ದು ಉರುಳಾಡಿತು.

ಆಗ ಮೋಳಿಗೆಯ್ಯನು ಕನಿಕರದಿಂದ ಹುಲಿಯನ್ನು ಬಿಟ್ಟು ಗುರುದೇವನ ಧ್ಯಾನದಲ್ಲಿ ಕಟ್ಟಿಗೆ ಕಟ್ಟಿಕೊಂಡು ಚರಮೂರ್ತಿಯೊಡನೆ ಸನ್ನಿಧಾನಕ್ಕೆ ಬರು ತ್ತಿರಲು ಸಂಜೆಗತ್ತಲು ಆವರಿಸಹತ್ತಿತು.

ಬಳಿಕ ಮೋಳಿಗೆಯ್ಯನು, ಕಟ್ಟಿಗೆಯ ಹೊರೆ ಮಾರಿ, ಬಂದ ಹಣದಿಂದ ಸಕಲ ಅನ್ನಪಾನಾದಿ ಸಂಗ್ರಹ ತಂದು ಚರವರನನ್ನು ಪ್ರೀತಿಯಿಂದ ಪೂಜಿಸಿ ಪಾದ ತೀರ್ಥ ಪ್ರಸಾದಗಳನ್ನು ಸೇವಿಸಿ ಪುನೀತನಾದೆನೆಂದು ಶಿವಗಣ ಸಮೂಹ ದೊಡನೆ ಲಿಂಗಾನಂದ ಸುಖವನ್ನು ಅನುಭವಿಸುತ್ತ ಶಿವಯೋಗನಿದ್ರೆಯಲ್ಲಿರು ವಾಗ ಹಿಂದೊಮ್ಮೆ ಕನಸಿನಲ್ಲಿ ತಿಳಿಸಿದಂತೆ ಗುರುಬಸವರಾಜನು ಇಂದು ಕನಸಿನಲ್ಲಿ ಕಂಡು ಅಯ್ಯಾ ಪ್ರಿಯ ಕುವರ ಇಲ್ಲಿ ನಿನ್ನ ಕಾರ್ಯ ಮುಗಿಯಿತು ಶಿವನಪ್ಪಣೆಯಾಗಿದೆ ನೀನು ಕೈಲಾಸಕ್ಕೆ ತೆರಳಬೇಕು ಎಂದು ಹೇಳಿದನು.

ಮೋಳಿಗೆಯ್ಯ ಚಿಕ್ಕಣ್ಣಯ್ಯನು ಸಶರೀರದಲ್ಲಿ ಸತಿ ಸಹಿತ ಕೈಲಾಸಕ್ಕೆ ಹೋದದ್ದು

ಬಳಿಕ ಮೋಳಿಗೆಯ್ಯ ಚಿಕ್ಕಣ್ಣಯ್ಯನು ಉತ್ಸಾಹದುನ್ಮಾದದಲ್ಲಿ ಉಬ್ಬಿ ಎಚ್ಚತ್ತು ನೋಡಲಾಗಿ, ಗುರುವರ ಬಸವರಾಜೇಂದ್ರನು ಇನ್ನೂ ಹಾಸಿಗೆಯಲ್ಲಿ ಪವಡಿಸಿ ನಿದ್ರೆಯಲ್ಲಿದ್ದನು. ಆಗ ಮೋಳಿಗೆಯ್ಯನು ಶಿವಮಂತ್ರದೊಡನೆ ಪ್ರಥಮ ಗಣನಾಮ ಸ್ಮರಿಸುತ್ತ ಮಾಹೇಶ್ವರ ಪೂಜೆ, ಲಿಂಗ ಪೂಜಾದಿ ಕಾರ್ಯಗಳಿಂದ ತೃಪ್ತನಾಗಿ ಗುರು ಸನ್ನಿಧಿಗೆ ಬಂದು ಪ್ರದಕ್ಷಿಣೆ ನಮಸ್ಕಾರ ಗಳನ್ನು ಮುಗಿಸಿ ಕೈ ಕಟ್ಟಿ ನಿಂತುಕೊಂಡಿರಲು, ಗುರು ಬಸವರಾಜನು, ಕಂದಾ ಶಿವನು ನಿನ್ನ ಮೇಲೆ ಪ್ರೀತಿಯುಳ್ಳವನಾಗಿದ್ದಾನೆ ನಿನಗಾಗಿ ಪ್ರಮಥರು ದೇವತೆಗಳೊಡನೆ ಕರೆದೊಯ್ಯಲು ನಿಂತುಕೊಂಡಿದ್ದಾರೆ. ನಿನ್ನ ಬರುವಿಗಾಗಿ ಕಾದಿರುವ ಅವರನ್ನು ಬೇಸರ ಪಡಿಸದೇ ಬೇಗ ಹೋಗು, ಭಕ್ತ ಸುರಮಣಿ ಎಂಬ ನುಡಿ ಸಾರ್ಥಕವಾಯಿತು. ಇನ್ನು ಶಿವಕಾರುಣ್ಯ ಹೊಂದಿ, ಶಿವಗಣ ಭೂಷಣ ಎನಿಸಿ ಬಾಳು ಎಂದು ಮತ್ತೊಮ್ಮೆ ಹರಿಕೆಯನ್ನಿಟ್ಟು ಬೀಳ್ಕೊಟ್ಟರು.

ಬಳಿಕ ವಾದ್ಯ ವೈಭವದ ಮೆರವಣಿಗೆಯಲ್ಲಿ ಮೋಳಿಗೆಯ್ಯ ಚಿಕ್ಕಣ್ಣಯ್ಯ ನನ್ನು ಪುರದ ಹೊರಬದಿಯವರೆಗೆ ಕಳುಹಿಸಲು ಬಂದ ಮಾಹೇಶ್ವರ ಬಳಗವೂ ಶಿವಗಣ ಸಮೂಹವೂ ಉತ್ಸಾಹದಲ್ಲಿ ಜಯಘೋಷದಿಂದ ನಭೋಮಂಡಲವು ನಗುವ ಚೆಲ್ಲಿ ನರ್ತಿಸುವಂತಾಯಿತು. ಆಗ ಮೋಳಿಗೆಯ್ಯನು ಎಲ್ಲರಿಗೂ

ಒಂದಿಸಿ ಅವರನ್ನು ತಿರುಗಿ ಪಟ್ಟಣಕ್ಕೆ ಬೀಳ್ಕೊಟ್ಟು, ಅಡವಿಯಲ್ಲಿ ಮುಂದಾಗುತ್ತಿರುವಾಗ್ಗೆ ಗರುಡ, ಗಂಧರ್ವ, ಕಿನ್ನರ, ಕಿಂಪುರುಷರ ಸಮೂಹಗಳೊಡನೆ ದೇವದುಂದುಭಿ ಮೊಳಗಿ ಪ್ರೂ ಮಳೆ ತಾ ಸುರಿದು ಶಿವಬಳಗದೊಡೆಯ ಶಿವ ಮಹಾದೇವನು ನಿಜರೂಪವನ್ನು ತೋರಿದನು. ಆಗ ಮೋಳಿಗೆಯ್ಯನ ಆನಂದಕ್ಕೆ ಅಳತೆಯಿಲ್ಲದೆ ಆನಂದಭಾಷ್ಪಗಳುದುರುವ ಕಣ್ಣ ದೃಷ್ಟಿಯನ್ನು ಅಲುಗಿಸದೇ ದೇವ 'ಮಹಾದೇವನನ್ನು ನೋಡಹತ್ತಿದನು. ಶಿವನು ಅವನಂತರಂಗವ ಅರಿತು ಆನಂದದಿಂದ ಅಪ್ಪಿಕೊಂಡು, ಬಳಿಕ ಪ್ರೀತಿಯಿಂದ ಕಂದಾ ನಿನಗೇನು ಬೇಕು, ಇಚ್ಛಾನುಸಾರ ಬಯಕೆಯನ್ನು ಮುಚ್ಚಿಡಬೇಡ ಹೇಳು ಎಂದು ವಾತ್ಸಲ್ಯದಿಂದ ಕೇಳಿದನು. ಗುರುವಾಗಿ ನೆಲೆ ನಿಂತಿರುವ, ಗುರು ಬಸವೇಶನ ತತ್ವದಲ್ಲಿ ಅಡಿ ಇಟ್ಟು ಶೈವಾಚಾರ ಕಾಯಕಗಳಿಂದ ನನ್ನ ಮನ ತೃಪ್ತಿ'ಪಡಿಸಿದ ಭಕ್ತನೇ ನಿಜಭಕ್ತ ಎಂದು ಹೆಮ್ಮೆಯಿಂದ ಮೋಳಿಗೆಯ್ಯನನ್ನು ಕೊಂಡಾಡಿದನು.

ಮೋಳಿಗೆ ಚಿಕ್ಕಯ್ಯನು ಪರಮೇಶ್ವರನ ಪಾದಾರವಿಂದಗಳಲ್ಲಿ ಹಣೆ ಹಚ್ಚಿ, ತಂದೆ ಗುರುವಿನಿಂದ ದೊರೆತ ಉಪದೇಶ ನಾಶವಾಗದಂತೆ ನಿನ್ನ ಅನುಗ್ರಹ ಮೊದಲಿರಲಿ, ನಂದಿಲಿಂಗೇಶನ ಕರುಣಾರಸ ಪಾನದಿಂದ ಪಾವನಗೊಂಡ ಈ ಶರೀರವು ನಿನ್ನ ಪಾದಾರವಿಂದಗಳಿಂದ ದೂರಾಗದಂತೆ ಕರುಣಿಸು ತಂದೆ, ಮಿಕ್ಕಿದೆಲ್ಲ ಪದಗಳು ಅಸ್ಥಿರ. ಅಸ್ಥಿರವಾದ ಬದುಕು ಬಯಸಿ ತಿರುಗಿ ಬಳಲಿದರೇನು ಪ್ರಯೋಜನ ಎಂದು ಫದೇ ಪದೇ ಪರಶಿವನದಲ್ಲಿ ಪ್ರಾರ್ಥಿಸಲು ಮಹದಾನಂದ ಹೊಂದಿದ ಮಹಾದೇವನು ಮೋಳಿಗೆಯ್ಯ ಚಿಕ್ಕಯ್ಯ ನಾಯಕನನ್ನು ಅವನ ಸತಿಯಳನ್ನು ಸಹಿತ ವಿಮಾನದಲ್ಲಿ ಕರೆದುಕೊಂಡು ಒಯ್ದು ಗಣ ಪದವಿಯನ್ನಿತ್ತು ಸತಿ–ಪತಿಗಳು ಸುಖದಿಂದ ಇರುವಂತೆ ಮಾಡಿದನು.

ಬಳಿಕ ಗುರು ಬಸವರಾಜರ ಮಠದಾವರಣದಲ್ಲಿ ಕೂಡಿದ ಭಕ್ತ ಮಾಹೇಶ್ವರ ಬಳಗವೂ, ಶರಣ ಸಮುದಾಯವೂ ಹೆಮ್ಮೆಯಿಂದ ಗುರುವಿನ ಸ್ತುತಿಗೈಯುತ್ತ ಈಗಿನ ಕಾಲದಲ್ಲಿ ಶರೀರದೊಡನೆ ಕೈಲಾಸಕ್ಕೆ ಹೋದ ಮಹತ್ವವು ಭೂಲೋಕದಲ್ಲಿ ಅಚ್ಚರಿಯನ್ನುಂಟು ಮಾಡಿತು ಎಂದು ಆನಂದದಿಂದ ಕುಣಿದಾಡಿದರು.

ಅಷ್ಟರಲ್ಲಿ ಕೋಲ ಶಾಂತೇಶ ಶರಣರು ಗುರುಕಾರುಣ್ಯವನ್ನು ಸಂಪಾದಿ
ಸಿದ ಭಕ್ತನು ಶಿವನ ಕೃಪಾದೃಷ್ಟಿಯಲ್ಲಿ ಉತ್ತಮನು ಗಣ್ಯನು ಗಣ ಪದವಿ
ಯನ್ನು ಪಡೆದ ಯೋಗ್ಯನು ಎನಿಸುತ್ತಾನೆ ಎಂದು ಗುರು ಬಸವರಾಜರ
ಮಹಾತ್ಮೆಯನ್ನು ತಿಳಿಸಿ ಹೇಳಿದರು.

ಹುಚ್ಚ ಸಿದ್ಧೇಶ್ವರನು ಗುರುಕಾರುಣ್ಯದಿಂದ ಕೈಲಾಸಪದವಿ ಪಡೆದುಕೊಂಡದ್ದು

ಪುರಾತನ ಪುಣ್ಯಪುರುಷ ಚರಿತಾಗ್ರಣಿಗಳೆನಿಸಿದ ಶರಣ ಶ್ರೇಷ್ಠರಲ್ಲಿ ಅಗ್ರಸ್ಥಾನ ಪಡೆದ ಸಿದ್ಧರಾಮ ಶಿವಯೋಗಿ ಸಾಮ್ರಾಟನು ಸೊನ್ನಲಗಿ ಪುರದಲ್ಲಿ ವೀರಶೈವ ಧರ್ಮತತ್ವದ ತಿರುಳನ್ನು ಭಕ್ತಮಾಹೇಶ್ವರ ಹಳಗಡ ತಲೆಯಲ್ಲಿ ತುಂಬಿ, ಉನ್ನತ, ಉತ್ಕೃಷ್ಟ ಬೆಳೆಯನ್ನು ಬೆಳೆಯಿಸಿ ಅಚಲವಾಗಿ ಶಿವಾನುಭವ ಫಸಲು ಪಡೆದು, ಅಲ್ಲಮ, ಚನ್ನಬಸವಣ್ಣ, ಅಣ್ಣಬಸವಣ್ಣರ ಕರುಣೆಯ ಮಡುವಿನಲ್ಲಿ ಮಿಂದು, ಮಡಿಯಾಗಿ ನಿಜಾನಂದ ಸುಖ ಸಮೃದ್ಧವಾದ ಲಿಂಗಾಂಗ ಸ್ವಾಮರಸ್ಯ ಸುಖಪಡೆದು, ಸೊನ್ನಲಗಿ ಪುರದಿ ಶಿವಯೋಗಿ ಶಿದ್ಧರಾಮ ದೇವರಾಗಿ ನೆಲೆನಿಂತು, ಶಿವನಾಜ್ಞೆಯ ಕಾರ್ಯ ವನ್ನು ಕೈಕೊಂಡನಂದು.

ಅಂದಿನ ಆ ಆನಂದ ಮತ್ತಿಂದು ಮರುಕಳಿಸಿ ಬಂದಂತೆ ಶಿವನಪ್ಪಣೆಯ ಪ್ರಕಾರ ಗುರುಬಸವರಾಜನ ದರ್ಶನದ ಅಪೇಕ್ಷೆಯ ಭಿಕ್ಷಾಟನೆಯ ಕಾಯಕ ಕೈಕೊಂಡು, ಗಣಬಳಗದೊಡನೆ ಸಹಾಯ, ಸಹಕಾರ ಮೂರ್ತಿಯಾಗಿ ಒಂಟೆ ಎತ್ತು ಹೊಡೆದುಕೊಂಡು ಭಿಕ್ಷಾಟನೆಯ ಸಕಲ ಸಂಗ್ರಹವನ್ನು ಆ ಎತ್ತಿನ ಮೇಲೆ ಹೇರಿ ಗುರುನಾಮ ಸ್ಮರಣೆಯಲ್ಲಿ ಸಕಲ ಜೀವಿಗಳನ್ನು ಸಂತುಷ್ಟ ರೀತಿಯಿಂದ ಸಲಹುತ್ತ, ತನ್ನ ವೃತ್ತಿಗನುಗುಣವಾಗಿ ದಯ, ಧರ್ಮ, ನೀತಿ ಪಾಠದಲ್ಲಿ ಹುಚ್ಚನಂತೆ ನಟನೆಯ ಮೂರ್ತಿ ಅಂದಿನ

ಸಿದ್ಧರಾಮ ಇಂದಿನ ಹುಚ್ಚಸಿದ್ಧೇಶನಾಗಿ ಗುರುದರ್ಶನದ ಆಶೆಯಿಂದ ಹೊರಟುಬರುತ್ತಿದ್ದನು.

ದಯುವೇ ಅವನ ಮೂಲಮಂತ್ರ, ನೀತಿಯೇ ಅವನ ಧರ್ಮ, ಶಾಸ್ತ್ರ ಸದ್ಗುಣ ಸದಾಚಾರ ಸಂಪನ್ನತೆಯೇ ಅವನ ಬಾಳಗುರಿ ಎನ್ನುವಂತೆ ಕಲ್ಯಾಣದಣ್ಣ ಬಸವಣ್ಣ, ಜಗದಣ್ಣ ಬಸವಣ್ಣ ನಿಮ್ಮೊಚನ ಸಾರಿದಂತೆ ನನ್ನ ಬಾಳಿನ ನೀತಿಯಾಗಿರಲಿ ಎಂದು ಬಾರಿ ಬಾರಿಗೂ ಅಣ್ಣ ಬಸವಣ್ಣನ ವಚನ ಹಾಡುತ್ತಿದ್ದನು.

ದಯುವೇ ಧರ್ಮದ ಮೂಲವಯ್ಯಾ
ದಯಬೇಕು ಸಕಲ ಪ್ರಾಣಿಗಳಲ್ಲಿ
ದಯವಿಲ್ಲದ ಧರ್ಮ ಅದಾವುದಯ್ಯಾ

ಎಂಬ ನುಡಿಯನ್ನು ಎಡಬಿಡದೇ ಅನುಸರಿಸಿಕೊಂಡು ಕಂಥಲಿಯ ಎತ್ತು ಹಾಗು ಗಣಬಳಗದೊಡನೆ ಗುರುವೃಷಭೇಂದ್ರನ ಸನ್ನಿಧಿಗೆ ಹೊರಟು ಬರುತ್ತಿರುವಾಗ ಇದ್ದಕ್ಕಿದ್ದಂತೆ ಮಾಯಮರ್ದನನಾದ ಹುಚ್ಚ ಸಿದ್ಧೇಶ್ವರನ ಎತ್ತು ಸತ್ತಿತು.

ಆಗ ಸಿದ್ಧೇಶ್ವರನು ಅಳುಕಲಿಲ್ಲ, ಅಂಜಲಿಲ್ಲ. ವ್ಯಸನದ ಉಸಿರು ಬಿಡಲಿಲ್ಲ. ಎಲ್ಲವೂ ನಿನ್ನ ಕರುಣೆ, ವರಪ್ರಸಾದವೆಂದು ಅಭವಾ ಇನ್ನು ಈ ಭಿಕ್ಷಾಟನವನ್ನು ಬಿಡಿಸುವ ಕೃಪೆಯಾಗಲೆಂದು ಬೇಡಿಕೊಳ್ಳಲು, ಮನದ ಮಿಡಿತವದು ನಿರ್ಮಲ ವಿಕಾರದಲ್ಲಿ, ಧರ್ಮ ಜಾಗ್ರತಿಯಲ್ಲಿ, ಸಂಸ್ಕೃತಿಯ ಮಟ್ಟದಲ್ಲಿ ನೆಲೆನಿಂತು, ಒಳದನಿಯ ಕೂಗು ಸಾಕಿನ್ನು ಈ ಭಿಕ್ಷಾವೃತ್ತಿ ಬಹುಬೇಗ ಆ ಉಕ್ಷಪನಿಗೆ ಬಸವರಾಜ ಪಾದೋದಕ ಸಿಂಪಡಿಸುವಂತೆ ಪ್ರೇರೇಪಿಸಿದಂತಾಗಲು, ತನ್ನ ಜೀವನದ ಜೀವಾಳವೆನಿಸಿದ ಬಸವನಿಗೆ (ಎತ್ತಿಗೆ) ಗುರುಬಸವರಾಜರ ಪಾದೋದಕ ಸಿಂಪಡಿಸಿದನು.

ಆಗ ಪಾದೋದಕದ ಮಹಿಮೆಯಿಂದ ಎತ್ತು ಮಲಗಿ ನಿದ್ರಿಸುತ್ತಿದ್ದಂತೆ ಮೈಮುರಿದು ಆಕಳಿಸಿ, ಅರೆಗಣ್ಣು ಚೆಮ್ಮಿ ಆಕಾಶವನ್ನು ಅವಲೋಕಿಸುತ್ತ

ಏಳುವಂತೆ ಎದ್ದು, ಚಿನ್ನಾಟದ ಚಲುವ ಶಿರಿಯಿಂದ ಕೂಡಿದ ಜನಸಂದಣಿಯು ಅಚ್ಚರಿಗೊಳ್ಳುವಂತೆ ಮಾಡಿತು.

ಬಳಿಕ ಹುಚ್ಚ ಸಿದ್ಧೇಶ್ವರನು ಬಹುಬೇಗ ಎಲ್ಲವನ್ನು ಮರೆತು ತನ್ನಚ್ಛೆಯಲ್ಲಿ ಹುಚ್ಚನ ಉನ್ಮತ್ತ ವೇಗದಲ್ಲಿ ಗುರುಸನ್ನಿಧಿಗೆ ಬಂದನು. ಬಳಿಕ ಗುರುಮೂರ್ತಿಯನ್ನು ಕಂಡು—

ಕಂಡೆನೆನ್ನಾನಂದ ಸಾಂದ್ರ ವೃಷಭೇಂದ್ರನಂ
ಕಂಡೆ ಕಲ್ಪಿಸಿದ ಕಲ್ಪದೃಮನ ಶಿವಪ್ರೇಮಿಯಂ
ಕಂಡೆ ನಿತ್ಯನಿರ್ಮಲ ಗುರು ಬಸವರಾಜನಂ
ಕಂಡೆ ಕರುಣಾಮೂರ್ತಿ ಗುರಸಾರ್ವಭೌಮನಂ
ಕಂಡೆನಯಾ ಕಂಡೆಯನ್ನ ಮನದ ಗುರುಮೂರ್ತಿಯಂ

ಎಂದು ಬಹುಪರಿಯಾಗಿ ಹೊಗಳಿ ದಂಡವತ್ತ ಪ್ರಣಾಮಗೈದನು.

ಆಗ ಗುರು ಬಸವರಾಜನು ಹುಚ್ಚನೆನಿಸಿ, ಉನ್ಮತ್ತತನದ ಉದ್ವೇಗದಲ್ಲಿ ಬಂದ ಸಿದ್ಧೇಶ್ವರನನ್ನು ಅಪ್ಪಿಕೊಂಡು, ಆನಂದದಿಂದ ಮುದ್ದಾಡಿ, ಎನ್ನ ಸಂತೋಷ ಶರಧಿ ಬಾರಯ್ಯ ಎಂದು ಮಮತೆಯಿಂದ ಮಗ್ಗುಲಲ್ಲಿ ಕುಳ್ಳಿರಿಸಿ ಕೊಂಡನು.

ಬಳಿಕ ಗುರು ವೃಷಭರಾಜನು ಹುಚ್ಚನೆಂದು ತೋರುವ ಸಿದ್ಧೇಶ್ವರ ನನ್ನು ಮಾತನಾಡಿಸುತ್ತ, ಅಯ್ಯಾ ಪರಶಿವನಿಂದ ವರಪಡೆದು ಅಂದಿನ ಅವತಾರದಲ್ಲಿ ಸೊನ್ನಲಗಿ ಪುರವನ್ನು ಬೆಳಗುತ್ತ, ಇಂದಿಗೂ ಚಿರಸ್ಮರಣ ವಾಗುವಂತೆ ಉಳಿದುಕೊಂಡಿರುವಿ. ಇಂದಿನ ಕಾರ್ಯವಾದರೂ ಅದೇ ತೆರನಾಗಿ ಮುಂದುವರೆಯಲೆಂದು ಶಿವಶಂಕರ ಮಹಾದೇವನು ಭೂಲೋಕದಲ್ಲಿ ಅವತಾರಗೊಳಿಸಲು ಈ ಹುಚ್ಚನ ವೇಷದಲ್ಲಿ ನಿನ್ನನ್ನು ಕಳುಹಿದನಲ್ಲವೇ? ಅದಕ್ಕೆ ಕಾರಣಪುರುಷ ತಾನಾದರೂ ನಮ್ಮನ್ನು ಗುರುಕಾರುಣ್ಯದ ಜಲ ಸುರಿದು ನಿನ್ನಿಂದ ಕರ್ತವ್ಯಲೋಪ ಬಾರದಂತೆ ಬಾಳಿಸಲು ಶಿವನು ಹೂಡಿದ ಆಟವೆಂದು ಪ್ರತ್ಯಕ್ಷವಾಗಿ ಹೇಳಲು ಬಾರದಾದರೂ ಸಂದರ್ಭಕ್ಕನುಸಾರ

ನಾಗಿ ಹೇಳಲೇಬೇಕಾಯಿತು, ನೀನು ಬಂದಿರುವ ಕಾರ್ಯ ಶಿವನು ಇಚ್ಛೆಪಟ್ಟು ತೊಡಕಿಸಿದ್ದು ಎನ್ನುವದನ್ನು ಮರೆಯಬೇಡ. ಅವನ ಆಶೆ ಆಕಾಂಕ್ಷೆ ಭಕ್ತರ ಉದ್ಧಾರ, ಶಿವಗಣರೊಡೆಯನಾದ ತನ್ನ ನಿತ್ಯ ಕರ್ತವ್ಯದ ಬಹುಪಾಲು ತನ್ನ ಬಳಗದವರಿಗೆ ಬಿಟ್ಟುಕೊಡುವದೊಂದು ಆತನ ಯೋಜಿಸ ಆಟವೆಂದು ತಿಳಿಯಬೇಕು.

ಆಟವೆಂದು ತಿಳಿದು ನಮ್ಮ ಪಾಠ ಮರೆಯಬಾರದು. ಹೋಗು ಕಂದಾ ನಮ್ಮ ಪೂರ್ಣಾಶೀರ್ವಾದ ನಿನಗೆ ಬೆಂಗಾವಲಾಗಿದೆ ಎಂದು ತಿಳಿದು ಈಗ ನೀನು ಬಾಸೂರಿಗೆ ಹೋಗು ಎಂದು ಮೃದುವಚನಗಳಿಂದ ತಿಳುಹಿಸಿ, ಗುರವಿನ ಕರ್ತವ್ಯದಂತೆ ಆಶೀರ್ವದಿಸಿ ಲಿಂಗಾಂಗ ಸಾಮರಸ್ಯ ಬೋಧೆ, ಶಿವಾನುಭವದ ಸಕಲ ಸದ್ಗುಣಪೂರ್ಣ ವಿಷಯಗಳನ್ನು ತಿಳುಹಿಸಿ, ಲಿಂಗ ಪ್ರೇಮಿಯಾಗಿ, ಲಿಂಗವೇ ತಾನಾಗಿ, ತಾನೇ ಲಿಂಗಮಯನಾಗಿ ಬಾಳಿ ಅನಂತ ಪವಾಡಗಳಿಂದ ಭಕ್ತರನ್ನು ಅಚ್ಚರಿ ಪಡಿಸುವ ಪೂರ್ಣ ಶುಭದಾಶೀರ್ವಾದ ಗೈದರು.

ಪೂಜ್ಯ ಗುರು ಬಸವರಾಜರ ಪೂರ್ಣ ಆಶೀರ್ವಾದ ಪಡೆದು, ಬಾಸೂರಿಗೆ ಹೊರಟ ಹುಚ್ಚ ಶಿದ್ಧೇಶ್ವರನು ಅಂದವಾದ ಅನೇಕ ನುಡಿಗಳಿಂದ ಗುರುಸ್ತುತಿಗೈದು, ಮಣಿದು ವಂದಿಸಿ, ತಣಿದು ಹೊಗಳಿ ಮತ್ತೊಮ್ಮೆ ಇನ್ನೊಮ್ಮೆ ಗುರುಕಾರುಣ್ಯಕ್ಕಾಗಿ ಹಾತೊರೆದು ಪೊಡಮೊಟ್ಟು ಬಾಸೂರಿಗೆ ನಡೆದರು. ಗುರು ಬಸವರಾಜರ ಪ್ರೀತಿಯ ವಚನಗಳಿಂದ ಹರುಷಗೊಂಡು ಅವರ ಅಮರ ಆಶೀರ್ವಾದ ಬಲದಿಂದ ಪೂರ್ಣ ಮಾನವನಾಗಿ ಬಾಸೂರಿಗೆ ಬಂದ ಹುಚ್ಚ ಶಿದ್ಧೇಶ್ವರನು ತನ್ನ ಮನೋಮಂದಿರದಲ್ಲಿ ಸ್ಥಾಪಿತವಾದ ಗುರುವಿನ ಆಜ್ಞೆಯನ್ನು ಮರೆಯದೇ ಶಿರದಲ್ಲಿ ಹೊತ್ತುಕೊಂಡು ಬಾಸೂರಿನ ಭಕ್ತಮಾಹೇಶ್ವರ ಬಳಗದೊಡನೆ. ಪ್ರೀತಿ, ವಿಶ್ವಾಸ, ಶ್ರದ್ಧೆಗಳಿಂದ ನಡೆದು ಕೊಳ್ಳಹತ್ತಿದನಲ್ಲದೇ, ಗುರುವೃಷಭೇಂದ್ರನ ಆಶೀರ್ವಾದ ಬಲದಿಂದ ಮಾತನಾಡಿದ್ದೇ ಮಾನ್ಯ ಎನ್ನುವಂತಹ ಅನೇಕ ಪವಾಡಗಳು ಜರುಗ ಹತ್ತಿದವು.

ಗುರುಗಳ ಕರುಣೆಯಿಂದ ಬರು ಬರುತ್ತ ಹುಚ್ಚಶಿದ್ಧೇಶ್ವರನ ಪವಾಡ ಪ್ರಕರಣಗಳು ಜನತೆಯ ಭಯದೊಡನೆ ಭಕ್ತಿಯನ್ನು ಹುಟ್ಟಿಸಹತ್ತಿದವು.

ಆದರೆ ಅವುಗಳನ್ನು ಪರೀಕ್ಷಿಸಬೇಕೆಂದು ಪಣತೊಟ್ಟು ನಿಂತವರು ಅದಾವರೀತಿ ಪರೀಕ್ಷಿಸಬೇಕೋ ತಿಳಿಯದೇ ಒದ್ದಾಡಹತ್ತಿದರು.

ಆದರೂ ಒಂದು ದಿವಸ ಸತ್ತವನಂತೆ ಸೋಗುಹಾಕಿಸಿ, ಈತನನ್ನು ಬದುಕಿಸುವ ಕೃಪೆಯಾಗಬೇಕೆಂದು ಓರ್ವ ಠಕ್ಕನಿಗೆ ಸತ್ತವನ ರೀತಿ ಸಿದಗಿಯಲ್ಲಿ ಶೃಂಗರಿಸಿ ಕರೆದುಕೊಂಡು ಬಂದರು

ಆಗ ಶಿದ್ಧೇಂದ್ರನು ನಸುನಕ್ಕು, ಅಯ್ಯಾ ಜಗದ ಋಣ ಹರಿದ ಮೇಲೆ ಅದನ್ನು ತೇಪೆಹಚ್ಚಿ ಕೂಡಿಸಲು ಬರುವದಾದರೂ ಮೊದಲಿನಂತೆ ಪೂರ್ಣತ್ವ ಪಡೆಯಲಾರದು. ಅಲ್ಲದೆ ಆಸೆಪಟ್ಟು ಅಸುನೀಗಿದ ಈತನು ವೇಷಧಾರಿ ಠಕ್ಕ ಎನ್ನುವದು ಗುರು ವೃಷಭರಾಜನು ಅರಿಯದೇ ಇರುವನೆ. ಮುಂದೆ ಅವನೇ ಕರುಣೆದೋರಬೇಕು. ಅವನಲ್ಲಿ ಅನನ್ಯ ಭಕ್ತಿಭಾವದಲ್ಲಿ ವಿಶ್ವಾಸವಿಟ್ಟು ಕೇಡಬಯಸಿ ಪಡೆದ ಈತನನ್ನು ರಕ್ಷಿಸೆಂದು ಬಿನ್ನೈಸಿಕೊಳ್ಳಿರಿ, ಜೇಷ್ಟೆಗೆಂದು ನಟನೆಯ ಸೋಗುಹಾಕಿ ಸತ್ತವನಂತೆ ಮಲಗಿದ್ದ ಮೂಢನು ಈ ಜಗದಿಂದ ಆತ್ಮವನ್ನು ದೂರಗೊಳಿಸಿ, ಬರಿ ಒಣದೇಹದಲ್ಲಿ ಬಿದ್ದಿರುವದು ಅರಿಯದೇ ಅನುಯಾಯಿಗಳು ಅವನನ್ನು ಎಬ್ಬಿಸಲು ಪ್ರಯತ್ನಪಟ್ಟರು. ಆದರೆ ಅವನ ಪ್ರಾಣಪಕ್ಷಿಯು ದೇಹಪಂಜರದಿಂದ ದೂರಾಗಿ ಬಹಳ ಸಮಯವಾಗಿತ್ತು.

ಆಗ ಸಹಪಾಠಿಗಳಾಗಿ ಬಂಧ ಮೂಢರ ಮಂದಬುದ್ಧಿ ಮಂಕಾಗಿ ಮುಂದಿನ ಉಪಾಯ ತಿಳಿಯದೇ ನಾವೇನು ತಪ್ಪು ಮಾಡಿದ್ದೆವು, ಗುರು ಶಿದ್ಧೇಶರನನು ಹುಚ್ಚನೆಂದು ಹೀಯಾಳಿಸಿ, ಆತನನ್ನು ಪರೀಕ್ಷಿಸಲು ಬಂದು ಸುಣ್ಣ ತಿಂದ ಮಂಗನಂತಾದೆವು. ಕಾರಣ ಪುರುಷನಾಗಿ ಬಂದ ಗುರು ಬಸವರಾಜರ ವರಕರುಣ ಶ್ರೀ ಸಿದ್ಧೇಶ ಗುರುವರನಿಗೆ ಹುಚ್ಚನೆಂದು ನಿಜವಾದ ಹುಚ್ಚರಾದರು, ಅಷ್ಟೆಲ್ಲ ಈತನನ್ನು ಕೊಂದ ಅಪರಾಧಿಗಳಾಗಿ ನ್ಯಾಯ ಮಂದಿರದಲ್ಲಿ ನಿಲ್ಲಬೇಕಾಯಿತಲ್ಲಾ ಎಂದು ನಡುಗುತ್ತ ಮಾತುಗಳೇ ಬಾರದಾದವು.

ಅಷ್ಟರಲ್ಲಿ ಅವರಲ್ಲಿ ಹಿರಿಯನಾದ ಓರ್ವನು ಶಿದ್ಧೇಶ್ವರರ ಪಾದಗಳನ್ನು ಹಿಡಿದು ಗುರುದೇವಾ, ಮೂಢರ ತಪ್ಪನ್ನು ಮನ್ನಿಸಿ, ಪಾಪ ಸತ್ತವನ ಸೋಗು

ಹಾಕಿ ನಿಜವಾಗಿಯೂ ಸತ್ತು ಹೋಗಿರುವ ಈತನನ್ನು ಬದುಕಿಸಿ ನಮ್ಮೆಲ್ಲರಿಗೆ ಬರುವ ಅಪರಾಧವನ್ನು ತಪ್ಪಿಸಬೇಕೆಂದು ಪರಿಪರಿಯಿಂದ ಬೇಡಿಕೊಳ್ಳ ಹತ್ತಿದನು.

ಆಗ ಹುಚ್ಚಸಿದ್ಧೇಶ್ವರ ಯೋಗಿಗಳಿಗೆ ದಯಾ ಬುದ್ಧಿ ಜಾಗ್ರತವಾಗಿ ಧರ್ಮನೀತಿಯ ಬೆನ್ನು ಬಿದ್ದ ಗುರು ಬಸವರಾಜರನ್ನು ಸ್ಮರಿಸುತ್ತ ಅವರಿಂದ ಪಡೆದು ತಂದ ವಿಭೂತಿಯನ್ನು ಸತ್ತು ಮಲಗಿದವನ ಹಣೆಯಲ್ಲಿ ಬಳಿಯಲು ಹಾಗು ಗುರು ಬಸವರಾಜರ ಪಾದೋದಕ ಸಿಂಪಡಿಸಲು ಮಲಗಿದ ಆ ಮಾನವ ಪ್ರಾಣಿಯು ನಿದ್ರೆಯಿಂದ ಎಚ್ಚತ್ತವನಂತೆ ಎದ್ದು ಕುಳಿತು ಸಿದ್ಧೇಶ್ವರ ಸ್ವಾಮಿಗಳನ್ನು ಪರೀಕ್ಷಿಸ ಬಂದವರಲ್ಲಿ ತಾನೇ ಮೊದಲಿಗನಾಗಿ ಸೋತು ಶವವೆನಿಸಿ ಬದುಕಿದ್ದನ್ನು ಜ್ಞಾಪಿಸಿಕೊಳ್ಳುತ್ತ ನಾಚಿಕೆಯಿಂದ ಅವರ ಪಾದಗಳನ್ನು ಪಿಡಿದು ತನ್ನ ಅಪರಾಧವನ್ನು ಮನ್ನಿಸುವಂತೆ ಬೇಡಿಕೊಳ್ಳಹತ್ತಿದನು.

ಬಳಿಕ ಕರುಣಾಮೂರ್ತಿಯಾದ ಹುಚ್ಚಸಿದ್ಧೇಶ್ವರರು ಅವನನ್ನು ಮನ್ನಿಸಿದರು. ಬರು ಬರುತ್ತ ಅವರ ಪವಾಡ ಪರಿಚಯದಿಂದ ಭಕ್ತಬಳಗವು ಹೆಚ್ಚಾಗಿ ಬಾಸೂರ ಗ್ರಾಮವು ಭಕ್ತ ಮಾಹೇಶ್ವರ ಬಳಗದಿಂದ ತುಂಬಿ ಎಲ್ಲಿ ಕೇಳಿದರು ದಯೆ, ಧರ್ಮ, ನೀತಿ ತಾಂಡವವಾಡುವಂತಾಯಿತು.

ಗುರು ಸಿದ್ಧೇಶ್ವರ ಸ್ವಾಮಿಗಳ ಮೊದಲಿನ ಹೆಸರು ಸ್ಥಿರವಾಗಿರಲೆಂದು ಭಕ್ತರು ಹುಚ್ಚಸಿದ್ಧೇಶ್ವರ ಎಂಬ ನಾಮದಿಂದ ಭವ್ಯವಾದ ಮಠವನ್ನು ಕಟ್ಟಿಸಿ, ಕರ್ತೃ ಗದ್ದುಗೆಯೆಂದು ಗುರು ಬಸವರಾಜರ ಅಪ್ಪಣೆಯಂತೆ ಕೊಟ್ಟೂರೇಶ್ವರ ಬಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಅನಂತ ವೈಭವ ಪೂರ್ಣವಾದ ಯಾತ್ರೆ ನಡಿಸುವ ಪರಿಪಾಠವನ್ನು ಪ್ರಸಿದ್ಧಿಗೊಳಿಸಿದರು.

ಮುಂದೆ ಕೆಲವು ಕಾಲ ಹುಚ್ಚಸಿದ್ಧೇಶ್ವರರು ಆ ಮಠದ ಅಧಿಪತಿಗಳಾಗಿ ಬಾಸೂರ ಗ್ರಾಮದಲ್ಲಿ ಗುರು ಬಸವರಾಜರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಉತ್ತರಾಧಿಕಾರಿಗಳು ತಾವೇ ಆದರೂ ತಮ್ಮ ತರುವಾಯದ ಮಠಾಧಿಕಾರಿ ಎಂದು ಸುಜ್ಞಾನಿದೇವನನ್ನು ನೇಮಿಸಿ, ಅನಂತ ಪವಾಡಗಳಿಂದ ಭಕ್ತ ಮಾಹೇಶ್ವರರನ್ನು ಬೆರಗುಗೊಳಿಸಿ ಅವರ ಭಕ್ತಿ ವಿಶ್ವಾಸಗಳಿಗೆ ಪಾತ್ರರಾಗಿ

ತಮ್ಮ ಇಷ್ಟದಂತೆ ಗುರು ವೃಷಭೇಂದ್ರರ ಆಜ್ಞೆಯಂತೆ ಇಷ್ಟ ಲಿಂಗದಲ್ಲಿ ಸಮಾಧಿಯನ್ನು ಹೊಂದಿದರು.

ಹುಚ್ಚ ಸಿದ್ಧೇಶ್ವರನು ಶಿವಗಣ ಬಳಗದ ನೆಚ್ಚಿನ ನಾಯಕನಾಗಿ ಆಕಾಶ ದಿಂದ ಪುಷ್ಪವೃಷ್ಠಿಯಾಯಿತು. ದುಂದುಭಿ ಮೊಳಗಿತು. ಕೊಟ್ಟೂರಲ್ಲಿ ಶಿವಗಣವು ಗುರು ಬಸವರಾಜರ ಮಹಿಮೆಗೆ ಶರಣೆಂದು ಗುರುದೇವಾ, ಮಾನವ ಲೆಕ್ಕಾಚಾರಕ್ಕೆ ನಿಲುಕದ ಮಹಿಮ ನೀನಯ್ಯಾ, ಶರಣಾಗತ ರಕ್ಷಕಾ, ಶರಣೆಂದು ಬಂದವರಿಗೆ ಪರಲೋಕದ ಸಂಪತ್ತನ್ನು ಸುಲಭದಲ್ಲಿ ದೊರಕಿಸುವ ದೊಡ್ಡತನುವು ನಿಮ್ಮದಯ್ಯಾ, ಇಂದಿನ ಲೋಕ ಕಲ್ಯಾಣ, ಶರಣಗುಣ ಮಣಿಗಳ ಹೆಚ್ಚಳ ಕಂಡು ಬೆರಗಾದ ನಾವುಗಳೆಲ್ಲರೂ ಭಕ್ತ ಮಾಹೇಶ್ವರರೊಡನೆ ರೂಢಿಗಾಗಿಯಾದರೂ ಎರಡನೇ ಶಿವ (ದ್ವಿತಿಯ ಶಂಭು) ಎಂದು ತಿಳಿದು ಕೊಳ್ಳಲು ಸಾಕ್ಷಿಯಾದ ಪ್ರಸಂಗಗಳು ಎಣಿಕೆಗೆ ನಿಲುಕದಷ್ಟು ದೊರೆತವಲ್ಲಾ ಕೈಯಲ್ಲಿರುವ ಲಿಂಗಮೂರ್ತಿಯನ್ನು ದಿಟ್ಟಿಸುವದಕ್ಕೆ ಕನ್ನಡಿಯನ್ನರ ದೇಕೆ ಎಂದು ಹೆಮ್ಮೆಯಿಂದ ಗುರು ವೃಷಭರಾಜನನ್ನು ಕೊಂಡಾಡಿದರು. ಅಲ್ಲದೇ ಹುಚ್ಚ ಸಿದ್ಧೇಶ್ವರನು ಕೈಲಾಸ ಪದವಿಯನ್ನು ಪಡೆಯುವದಕ್ಕೆ ಗುರು ಬಸವರಾಜರಕಾರಣ್ಯಪೂರ್ಣ ಕೃಪಾಶೀವಾದವೇ ಕಾರಣವೆಂದರು.

—— —

ತಂದೆ ಮಗ ಈರ್ವರ ಭಕ್ತಿ ಪಾಶ

ಗುರು ಬಸವರಾಜರ ಭಕ್ತರಲ್ಲಿ ಅರಸೊತ್ತಿಗೆಯ ಸುಖ ವಿಲಾಸದಿಂದ ಬಾಳಿದ ಸಾಲೇಂದ್ರ ಭೈರವ ಎಂಬ ಅರಸನು ಅರಿಗಳನ್ನು ಕಂಡರೆ ಭಯಂಕರ ನಾಗಿಯೂ ಸಾಧು ಸಜ್ಜನ ಪೂಜ್ಯ ಸ್ನೇಹಿತರಲ್ಲಿ ಪೂಜ್ಯ ಭಾವನೆಯ ಸ್ನೇಹಿತ ನಾಗಿಯೂ, ಧರ್ಮ, ನೀತಿ, ನ್ಯಾಯದಿಂದ ದಾಸೋಹ ಧರ್ಮವನ್ನು ನೇಮ ಪೂರ್ಣವಾಗಿ ನಿರಂತರ ನಡೆಯಿಸಿಕೊಂಡು ಬಂದ ದಾಸೋಹ ಪ್ರೇಮಿ ಯಾಗಿಯೂ, ವೀರಸೈವ ಧರ್ಮದೇಳಿಗ್ಗೆಯಲ್ಲಿ ಶ್ರಮವಹಿಸಿ, ನಿಷ್ಠೆಯಿಂದ ಶೈವಾಚಾರ ಪದ್ಧತಿಯನ್ನು ಕಾಪಾಡಿದ ಧರ್ಮಿಷ್ಠನಾಗಿಯೂ, ಭಕ್ತಿಯನ್ನು ಕಾಪಾಟಕೊಂಡಿರುವ ಅರಸನ ಗುಣಧರ್ಮವನ್ನು ನೋಡಿದರೆ ಧನಲೋಭ

ದಿಂದ ಹಪಹಪಿಸುವ ಜಿಪುಣ ಸ್ವಭಾವದವನೆಂದು ಹೇಳುವಂತೆ ಭಕ್ತಿಯನ್ನು ಕಾಪಾಡಿಕೊಂಡಿದ್ದನು. ಅನ್ಯಮತವನ್ನು ರಕ್ಷಿಸುವ ಬಲಾಢ್ಯ, ಭಯಂಕರ ವೀರಶ್ರೀಯನ್ನು ಚಿಮ್ಮಿ ಪ್ರಜಾಪಾಲನೆಯ ಹೆಗ್ಗುರಿಯನ್ನು ನರನರಗಳಲ್ಲಿಯು ರೂಪಿಸಿಕೊಂಡು ಪ್ರಜರಿಗೆ ತಂದೆ, ಹಿತಬಂದು ಎಂದೆನಿಸಿ ಬಾಳಿಕೊಂಡಿದ್ದನು.

ಸಾಲೇಂದ್ರ ಸಿಂಹ (ಸಾಲೇಂದ್ರ ಭೈರವ)ನು ಒಂದೊಂದು ಗುಣಗಳಿಂದ ಇಂದ್ರ, ಚಂದ್ರ, ಸೂರ್ಯ, ಸುಕುಮಾರ, ಕುಬೇರ, ಮೇರು ಪರ್ವತ, ವಿಷ್ಣು, ಬ್ರಹ್ಮರನ್ನು ಹೋಲುತ್ತ ಶಿವಭಕ್ತಿಯ ಸಮೃದ್ಧ ಶಾಂತಿಯಿಂದ ಜಗ ಒಪ್ಪುವಂತೆ, ಶಿವಶಂಕರ ಮೆಚ್ಚುವಂತೆ, ಪೂಜ್ಯ ಗುರುಬಸವರಾಜರ ಕುರುಣೆಯ ಕಂದನಾಗಿ ನಿರ್ಮಲ ಭಕ್ತಿಯ ಆಳದಲ್ಲಿ ಸಿಲುಕಿ ನಿರ್ವಿಕಾರದಲ್ಲಿ ನಿರ್ವಂಚನೆ ಯಿಂದ ರಾಜ್ಯಭಾರ ಮಾಡುತ್ತಿದ್ದನು.

ನಗರ ಶೋಭೆಯಲ್ಲಿ ಕೂಡಾ ಶಿವಭಕ್ತಿ ಸಂಪತ್ತು ಲಾಸ್ಯವಾಡುತ್ತಿತ್ತು. ಪ್ರಜರ ಪ್ರತಿಯೊಂದು ಕಾರ್ಯ ಕ್ಷೇತ್ರವು ಧರ್ಮ ನೀತಿ ನ್ಯಾಯಯುಕ್ತವಾಗಿ ಸಾಗುವಂತೆ ವ್ಯವಸ್ಥೆ ಮಾಡಿದ್ದನು. ನಗರವಾಸಿಗಳೆಲ್ಲರೂ ಭಕ್ತಮಾಹೇಶ್ವರ ಬಳಗವೆಂದು ಅತೀ ಆನಂದದಿಂದ ಹೊಗಳಿ ಸಾಲೇಂದ್ರ ಭೈರವನ ಆಳಿಕೆ ಎಂದರೆ ಸಮೃದ್ಧ ಸಂಪತ್ತಿನ ಆಗರವೆಂದು ಪರರಾಜ್ಯ ಪ್ರಜರು ಅಭಿಮಾನ ದಿಂದಲೂ, ಹೆಮ್ಮೆಯಿಂದಲೂ ಮಾತನಾಡುತ್ತಿದ್ದರು.

ಇಂತಹ ಸದ್ಗುಣ ಸಂಪನ್ನ ಅರಸನ ಧರ್ಮಪತ್ನಿಯ ಹೊಟ್ಟೆಯಿಂದ ಅಯ್ಯಣಾರ್ಯ ಎಂಬ ಸುಕುಮಾರನು ತಂದೆಗೆ ತಕ್ಕ ಮಗ ಎನ್ನು ಹೆಸರು ಬಾಳುವಂತೆ ವಂಶ ಕೀರ್ತಿಯ ಮೂರ್ತಿಯಾಗಿ ಸುರೇಂದ್ರನಂ ಹೋಲುವಂತೆ ಪಾಪವನ್ನು ಒಡಿಪಟ್ಟಲು ಸೂರ್ಯನ ಪ್ರಖರ ಜ್ವಾಲಾನಲವೆನಿಸಿ ಕತ್ತಲೆಯ ಕಾಳ ಗರ್ಭವನ್ನು ಸೀಳಿ ಹಾಕುವಷ್ಟು ಸುಶೀಲ, ಸೌಜನ್ಯಶಾಲಿ ಶೌರ್ಯ, ಗಾಂಭೀರ್ಯಗಳಲ್ಲಿ ಬೆಳೆದು ಬಂದನು.

ಬರು ಬರುತ್ತ ತಂದೆಯ ಶಿವಭಕ್ತಿ, ಲಿಂಗನಿಷ್ಠೆಯ ಬಿರುದುಳಿಸುವ ಮಗನಾಗಿ ಇಷ್ಟಲಿಂಗ, ಭಾವ ಈ ತ್ರಯಲಿಂಗಗಳ ಆರಾಧನೆ ಪೂಜ್ಯ ಭಕ್ತಿಯಿಂದ ತಂದೆಯ ಮನಸ್ಸನ್ನು ಗೆದ್ದು ಅವ ಪ್ರೀತಿಗೆ ಪಾತ್ರನಾದನು.

ಬಳಿಕ ಸಾಲೇಂದ್ರ ಭೈರವನು ಮಗನ ಶಿವಭಕ್ತಿ ಸದ್ಗುಣ ಸದಾಚಾರ ಆಚಾರಗಳೆಲ್ಲವನ್ನು ಕಂಡು ಅತೀ ಪ್ರೀತಿ ವಾತ್ಸಲ್ಯಗಳಿಂದ ಹತ್ತಿರ ಕರೆದು ಮಮತೆಯಿಂದ ಮುದ್ದಾಡಿ ಆನಂದದಿಂದ ಕಂದಾ, ಕುಲಪುತ್ರ, ಮತಿವಂತನಾದ ನಿನ್ನಿಂದ ನನ್ನ ಕುಲಗೌರವದೊಡನೆ ನಮ್ಮ ವಂಶದ ಕೀರ್ತಿ ಪತಾಕೆ ಮೇಲೆತ್ತರಕ್ಕೆ ಹಾರುವದೆಂಬ ಭರವಸೆ ನನಗಿದೆ, ಸುಮತಿಯಾದ ನೀನು ಪರಮೋಕ್ಷದಾಯಕವಾದ ವೀರಶೈವಾಚಾರವನ್ನು ಶರಣ ಜನರಿಗೆ ಬೋಧಿಸುವ ಆತುರದಲ್ಲಿ ಕೈಲಾಸನಾಥನ ಸನ್ನಿಧಾನದಿಂದ ಬಂದು ಭೂಮಿಯಲ್ಲಿ ಅವತಾರಗೈದ ಮಹಾಪುರುಷೋತ್ತಮನ ಕರುಣೆಯಂ ಪಡೆದುಕೊಳ್ಳಬೇಕು. ಅಂದಾಗ ನಿನ್ನ ಜನ್ಮ ಸಾರ್ಥಕವೆಂದನು.

ತಂದೆಯ ಹಿತವಚನಗಳಿಂದ ಮಗ ಅಯ್ಯಣಾರ್ಯನು ಉಬ್ಬಿಹೋದನು. ಮೊದಲೇ ಶಿವಭಕ್ತಿ ಶೈವಾಚಾರಗಳ ಸಂಗಮದಲ್ಲಿ ಸಮರಸ ಜೀವನವೆಂದ ಮೇಲೆ ಕೇಳುವದೇನು. ಅಪ್ಪಾ ಮೊದಲು ಆ ಗುರುಮೂರ್ತಿಯನ್ನು ತೋರಿಸು, ಇಲ್ಲವೇ ಅವರನ್ನು ಕಾಣುವ ಬಗೆಯನ್ನರುಹಿ ನನ್ನ ಜೀವನ ಸಾಫಲ್ಯಗೊಳ್ಳುವಂತೆ ಮಾಡು, ಮತ್ತು ಅವರು ಯಾರು, ಎಲ್ಲಿ ಇರುತ್ತಾರೆ ಬೇಗ ತಿಳಿಸಪ್ಪಾ, ಅಂಥಹ ಪುಣ್ಯ ಜೀವಿಗಳ ದರ್ಶನ ಆಶೀರ್ವಾದಗಳ ಅಪೇಕ್ಷೆಯು ದೈವದತ್ತವಾಗಿ ನನ್ನ ಮನದಲ್ಲಿ ಹೆಚ್ಚುತೊಡಗಿದೆ ಎಂದು ತಂದೆ ಸಾಲೇಂದ್ರ ಭೈರವನ ಪಾದಗಳನ್ನು ಹಿಡಿದನು.

ಮಗನು ಗುರುದರ್ಶನಕ್ಕಾಗಿ ಅತೀ ಹವ್ಯಾಸ ಪಡುತ್ತಿರುವದನ್ನು ಕಂಡ ಅರಸನ ಆನಂದಕ್ಕೆ ಅಳತೆ ಇಲ್ಲದಾಯಿತು. ತಾನು ಇಲ್ಲಿಯವರೆಗೆ ಏನು ಸಾಧಿಸಬೇಕೆಂದು ಪ್ರಯತ್ನಮಾಡುತ್ತಿದ್ದನೋ ಅದು ಇಂದು ಮಗನಿಂದ ಸಫಲವಾಗುವದೆಂದು ಉಬ್ಬಿನಿಂದ ಕಂದಾ ನಾದಬಿಂದು ಕಲಾತ್ಮಕ ಕೇವಲ ತತ್ವ ಎನಿಸಿದ ನಂದೀಶ್ವರನೇ ಗುರುರೂಪದಿಂದ ಬಂದು ಕೊಟ್ಟೂರ ಪುರ ಪರಜ್ಯೋತಿಯಾಗಿ ಬೆಳಗುತ್ತಿರುವದನ್ನು ಕೇಳಿರಬೇಕಲ್ಲವೇ ? ಆತನಲ್ಲಿಗೆ ತಡಮಾಡದೇ ಹೋಗು ಎಂದು ಹೇಳಿದನಲ್ಲದೇ, ಅವನ ಕೃಪೆಯನ್ನು ಪೂರ್ಣಮಾನವನಾಗಿ ನಿನ್ನ ವಂಶಜರು ಶಿವಲೋಕದಲ್ಲಿ ನೆಲೆಯಾಗಿ ಉಳಿಯುವ ಯೋಗ್ಯತೆಯನ್ನು ಪಡೆಯುವಂತಾಗಲಿ ಎಂದು ಹೇಳಿದನು.

ತಂದೆಯ ಮಾತಿನಿಂದ ಗುರುಭಕ್ತಿ ಹಾಗು ಗುರುದರ್ಶನದಾಸೆ ಹೆಚ್ಚಾಗಿ ತಂದೆಯ ಪಾದಾರವಿಂದಗಳಿಗೆ ವಂದಿಸಿ, ಅವನ ಪೂರ್ಣ ಆಶೀರ್ವಾದ ಪಡೆದು ಅಯ್ಯಾಚಾರ್ಯನು ಗುರು ಬಸವರಾಜನ ಸನ್ನಿಧಾನಿಕ್ಕೆ ಹೊರಟನು.

ಗುರು ವೃಷಭೇಂದ್ರನ ಪಾದಗಳ ನೆನಹಿನಲ್ಲಿ ಸಾಗಿದ ಅಯ್ಯಾಚಾರ್ಯನು ಕೊಟ್ಟೂರನ್ನು ಸಮೀಪಿಸುತ್ತಿರಲು, ಭಕ್ತಿಯೆಂಬುದು ಉಕ್ಕೇರ ಹತ್ತಿತು. ಶಾಂತಿಯೆಂಬುದು ಹೃದಯ ವಾಸಗೈಯ್ಯಿತು. ಧರ್ಮ ಜಾಗ್ರತಿಯ ಹುಮ್ಮಸವು ಹುಟ್ಟಿ ಕೊಟ್ಟೂರನ್ನು ನೋಡಿ, ಭಕ್ತಿಯುತವರು, ಮುಕ್ತಿ ಸಾಧನ ಸಂಪತ್ತಿನ ಆಗರ, ಶರಣರಂ ಪೊರೆವ ಪುಣ್ಯಭೂಮಿ, ವೀರವಿರತಿ ವೈರಾಗ್ಯ ವೈಭವದಲ್ಲಿ ಮೆರೆದ ನಿರ್ಮಲ ವಸತಿಸ್ಥಾನ, ಮಾನವಂತರ ಆನಂದ ಸುಖದ ನಿಲಯ, ನಾನಿಚ್ಛಿಪಟ್ಟು, ತಂದೆಯ ಪವಿತ್ರ ಆಶೀರ್ವಾದ ಪೊತ್ತು, ನನ್ನ ಕುಲದೈವ ಪರಮ ಗುರು ಬಸವರಾಜ ನೆಲೆಯಾಗಿರುವ ಪವಿತ್ರಕ್ಷೇತ್ರ ಇದಲ್ಲವೇ ಎಂದು ಹಿಗ್ಗಿನಿಂದ ಕುಣಿದಾಡಿದನು.

ಹಿಗ್ಗಿನಿಂದ ಮುನ್ನುಗ್ಗಿ ಅಳತೆಮೀರಿದ ಆನಂದದಲ್ಲಿ ಕೊಟ್ಟೂರ ಪುರ ಪ್ರವೇಶಮಾಡುವ ಮೊದಲೇ ಆ ಪುಣ್ಯ ಭೂಮಿಯನ್ನು ನಮಸ್ಕರಿಸಿ, ಗುರು ಬಸವರಾಜನನ್ನು ಬಗೆಬಗೆಯ ರೀತಿಯಿಂದ ಸ್ತುತಿಸುತ್ತ ಪಟ್ಟಣವಲ್ಲಿ ಬಂದನು.

ಮುಂದಾಗಿ ಸಾಗಿ ಭಕ್ತಿಯ ಭಾರದಿಂದ ಮನತಣಿದು, ದೇಹ ತಾನೇ ತಾನಾಗಿ ಮಣಿದು ಗುರುಮಂದಿರದ ಹೊರವಲಯದಲ್ಲಿಯೇ ನಮಸ್ಕರಿಸಿ, ಭಯಭಕ್ತಿಯಿಂದ ಸಾವಕಾಶ ಸರಿದು ಶಿವಗಣ ಸಂಪತ್ತಿನಲ್ಲಿ ರತ್ನಖಚಿತ ವಾದ ಸಿಂಹಾಸನಾರೂಢನಾಗಿ ವಿರಾಜಿಸುತ್ತಿರುವ ಶಿವಪ್ರೇಮಿ ಗುರುಬಸವ ರಾಜನಂ ಕಂಡು, ಲಿಂಗಾನಂದದಲ್ಲಿ ಲೀನವಾಗಿರುವ ಗುರುದೇವನಡಿಗಳಿಗೆ ಎರಗಿ, ಮುತ್ತು, ಮಾಣಿಕ್ಯ, ರತ್ನ, ವಜ್ರ ವೈಢೂರ್ಯ ಸಂಪತ್ತನ್ನು ಕಾಣಿಕೆ, ಯಾಗಿ ಅರ್ಪಿಸಿ, ಕರಜೋಡಿಸಿ—

ಎನ್ನಯ್ಯ ಗುರುದೇವ ನಿತ್ಯ ಸತ್ಯಮೂರ್ತಿ
ಭಕ್ತಿಭಾಗ್ಯವ ಕರುಣಿಸೆಂಬೆ ಪರಾತ್ಪರ ಗುರುವೆ

ಜಯ ಜಯ ಮದ್ದುಗಿರು ಬಸವಲಿಂಗ
ಜಯ ಜಯ ಕೊಟ್ಟೂರ ಕರುಣಿ ಶ್ರೀಗುರುದೇವ

ಎಂದು ನಿರ್ಮಲಚಿತ್ತದಿಂದ ಪ್ರಾರ್ಥಿಸಿದ ಅಯ್ಯಣಾರ್ಯನ ಭಕ್ತಿ ಭಾವಕ್ಕೆ ಮೆಚ್ಚಿದ ಗುರುಬಸವೇಂದ್ರನು ಆನಂದದಿಂದ ಆಲಿಂಗಿಸುತ್ತ, ಸನ್ನಿಧಿಯಲ್ಲಿ ಕುಳ್ಳಿರಿಸಿಕೊಂಡು, ಪ್ರೀತಿ ವಾತ್ಸಲ್ಯಗಳಿಂದ ಬೆನ್ನು ಸವರಿ ಅಯ್ಯಾ ಅಯ್ಯಣಾರ್ಯನೇ ನಿನ್ನ ತಾತ ಮುತ್ತಾತ ಅಂದೂ ನಿನ್ನ ವಂಶಜರು ಮಹಿಮಾವಂತ ಗಣವರನ ವಂಶದಿಂದ ಹುಟ್ಟಿದವರು. ಸರ್ವ ಹಿರಿಯ ಬಳಗದವರು, ಲಿಂಗ ತ್ರಯಾಧಾರಕರು. ನಿನ್ನ ವಂಶಾವಳಿಯು ಸಾಮಾನ್ಯ ವಾದದ್ದಲ್ಲ. ಈಗ ನಿನ್ನ ತಂದೆಯು ನಿಮಿತ್ಯಮಾತ್ರ ನಮ್ಮ ಸೇವೆಗಾಗಿ ನಿನ್ನನ್ನು ಕಳುಹಿಸಿರುವನು, ಆದರೂ ಸಂತೋಷ, ಈಗ ನಿನ್ನ ಮನದಿಂಗಿತ ದೊಡನೆ ಅಭಿಲಾಷೆಯನ್ನು ವ್ಯಕ್ತಪಡಿಸು ಎಂದು ವಾತ್ಸಲ್ಯದಿಂದ ಕೇಳಿದನು.

ಬಳಿಕ ಅಯ್ಯಣಾರ್ಯನು ಗುರುದೇವನ ಅಡಿಗಳಲ್ಲಿ ಮತ್ತೊಮ್ಮೆ ನಮಸ್ಕರಿಸಿ, ಗುರುವೇ ಎನ್ನ ಪರಮ ಪುರುಷೋತ್ತಮ ಪರಶಿವಸ್ವರೂಪಿ ಗುರುವೇ ಬ್ರಹ್ಮ, ವಿಷ್ಣು, ರುದ್ರ ಈ ಮೂವರು ದೇವತೆಗಳ ಒಡೆಯನಾದ ಪರಶಿವ ಪರಮಾತ್ಮನಲ್ಲಿ ನನ್ನ ಮನದ ಭಕ್ತಿಯು ನಿರ್ಮಲವಾಗಿ ನೆಲೆಗೊಳ್ಳು ವಂತೆ ಅನುಗ್ರಹಿಸು. ನರ ನಾಗ ದಿವಿಜಾದಿ ಯಾವ ಲೋಕಗಳಲ್ಲಿಯೇ ಆಗಲಿ, ಅದೆಷ್ಟೋ ಜನ್ಮಗಳಲ್ಲಿ ಹುಟ್ಟಲಿ ಒಟ್ಟಾರೆ ನಿನ್ನ ಪಾದಭಕ್ತಿ ಅಛಲ ವಾಗಿ ಉಳಿಯುವಂತೆ ಸ್ಥಿರಮನಸ್ಸು, ನಿಶ್ಚಿತಭಾವ ಬೆಂಬತ್ತುವದಷ್ಟೇ ಬೇಡುವೆನು ಇನ್ನಾವ ಅಸ್ಥಿರ ಸುಖದಾಸೆಯ ಭೂತ ಬಡಿಯದಂತೆ ನಿನ್ನ ಆಶೀರ್ವಾದವಿರಲಿ ಎಂದು ಪಾದಪಿಡಿದು ಹಣೆಗೊತ್ತಿಕೊಂಡನು.

ಬಳಿಕ ಅಯ್ಯಣಾರ್ಯನ ಭಕ್ತಿ ಭಾವಕ್ಕೆ ಗುರು ಬಸವರಾಜರು ಅಯ್ಯಾ ಅರಸುಕುಮಾರಾ ಶಿವಭಕ್ತಿಯ ಸೌಭಾಗ್ಯವನ್ನೆ ಪಡೆದು ಬಂದಿರುವ ಶಿವಗಣರ ಹೊಟ್ಟೆಯಲ್ಲಿ ಜನಿಸಿದ ನಿನಗೆ ಭಕ್ತಿ ಆಳದೊಡನೆ ಶಿವಭಕ್ತಿಯ ಸೀಮೆ ನಿಸರ್ಗ ನಿಯಮದಲ್ಲಿ ದೊರೆಯುವದು. ಅದನ್ನು ನಾನಾಗಲಿ ಇನ್ನಿತರು ಯಾರೋ ಆಗಲಿ ಕೊಡಬೇಕು ಎಂಬ ಮಾತೇ ಇಲ್ಲ. ಆದರೂ ಕಲಿಬಲ, ಅರಿಬಲ ಉಳ್ಳ ಈ ಕಾಲ ಮಹಿಮೆ ಪ್ರಪಂಚದ ನೀಚ ತತ್ವ

ದರ್ಪಣದ ಕೋಣಕ್ಕೆ ಕೊಂಬು ಮೂಡಿ ಎದುರಾಗಿ ಬರಬಹುದು. ಆಗ ಅದನ್ನು ಮುರಿಯುತ್ತ ಮುನ್ನುಗ್ಗಿ ಮುಕ್ತಿ ಸಂಪದಕ್ಕೆ ಹೋಗುವ ಮಾರ್ಗ ವನ್ನು ವಿವರಿಸುವೆನೆಂದರು.

ಅಯ್ಯಾ ವೇದಾಗಮಗಳಿಂದ ಹೊಗಳಿಸಿಕೊಳ್ಳುವ ಹಾಗು ಸ್ತುತಿಗೈದು ವಂದಿಸುವ ಶಂಕರನ ಆಭರಣ ಮಾಲಿಕೆಯ ವಸ್ತುಗಳಾದ ರುದ್ರಾಕ್ಷಿ, ಭಸ್ಮ ಗಳನ್ನು ಧರಿಸಿ ನರಕೆಯಾತನೆಗೆ ಗುರಿಪಡಿಸುವ ಕಾರ್ಯವನ್ನು ಗುತ್ತಿಗೆ ಹಿಡಿದ ಯಮರಾಯನಿಗೆ ಆಶ್ಚರ್ಯವಾಗುವ ತೆರದಿ ಲಿಂಗಾರ್ಚನೆಯನ್ನು ಪೂರೈಸುತ್ತ ಶಿವಲಾಂಛನಧಾರಿಗಳನ್ನು ಕಂಡಾಗ ಮೃದುವಚನ ನಯ ವಿನಯ ಗುಣಗಳಿಂದ ಶರಣರ ಸಮಾರಾಧನೆ ಮಾಡಿ ಶಿವನ ಮೆಚ್ಚಿಗೆಗೆ ಪಾತ್ರನಾಗ, ವಂತೆ ಸಕಲ ಗುಣಗಳು ನಿಷ್ಠೆಯಲ್ಲಿರಬೇಕು. ಪರಮೇಶ್ವರನ ಅಂಗಗಳೆನಿಸಿದ ಅಷ್ಟಾವರಣಗಳಲ್ಲಿ ಮನಸ್ಸು ನಿರ್ಧಾರಗೊಂಡಿರಬೇಕು. ಈ ನಮ್ಮ ವೀರಶೈವ ಮತಕ್ಕೆ ಅದೇ ಜೀವನ್ಮುಕ್ತಿ ಸಂಪತ್ತು. ನಂಬಿ ನಡೆಯುವ ಭಕ್ತರ ಬೆಂಗಾವ ಲಾಗಿ ಶಿವನು ತಿರುಗುತ್ತಾನೆ. ಕುಟಿಲರೂ, ದುಷ್ಟ ಕಾಮುಕರೂ, ನೀಚರೂ, ಮದಾಂಧರೂ ಎನಿಸಿದವರ ನಾಶಕ್ಕಾಗಿ ಶಿವಧರ್ಮ ಸಿಂಹಾಸನ ಹತ್ತಿ, ಸತ್ಯ ಸದಾಚಾರ ಕೋಟೆಯನ್ನು ಭದ್ರಗೊಳಿಸಿ ಶಾಂತಿಯುತ ಖಡ್ಗವಂ ಪಿಡಿದು ಸದಾ ವಿಜಯಗಳಿಸಿ ಪರಲೋಕವನ್ನು ಸಾಧಿಸು ಎಂದರು.

ಬಳಿಕ ಅಯ್ಯಾ, ಅಯ್ಯಣಾರ್ಯ ವೀರವರನೇ ದಯೆಗಿಂತ ಹೆಚ್ಚಿನ ಧರ್ಮ ಕಾರ್ಯವೂ, ಸತ್ಯ ಸಂಸ್ಕೃತಿಗಿಂತಲೂ ಹೆಚ್ಚಿಗೆ ಸಾಧಿಸುವ ತಪಸ್ಸು, ಮೋಸ ವಂಚನೆಯ ಕಾರ್ಯಗೈದು ಸುಳ್ಳನಾಡುವದಕ್ಕಿಂತಲೂ ಹೆಚ್ಚಿನದು ಪಾಪ ಕಾರ್ಯವೂ, ಮದಾಂಧ ವೃತ್ತಿಯಲ್ಲಿ ಮದ, ಮತ್ಸರ, ಮೋಹಗಳಿ ಗಿಂತಲೂ ಹೆಚ್ಚಿನ ಯಮಶಾಸನವೂ ವಿಶ್ವಾಸಪೂರ್ಣ ಭಕ್ತಿಗಿಂತ ಹೆಚ್ಚಿನ ಮುಕ್ತಿಯೂ ಇಲ್ಲ.

ಜೀವನದ ಜಂಜಾಟವನ್ನು ಮುಂದೂಡಲು ಉಪಕಾರ ಕಾರ್ಯಗಳು, ಪರಹಿತಕ್ಕಾಗಿ ನಿನ್ನಿಂದ ನಿರ್ಮಿತವಾದರೆ ಅನಂತ ಕಾಲ ನಿನ್ನ ಹೆಸರು ಅಜರಾಮರ ಎಂದು ಸಕಲ ರೀತಿಯಿಂದ ಉಪದೇಶಿಸಿ ತಮ್ಮ ಕೈಯ್ಯಾರೆ ಭಸ್ಮಧಾರಣೆ ಮಾಡಿ ಆಶೀರ್ವದಿಸಿ ಸಂತಸದಿಂದ ಬೀಳ್ಕೊಟ್ಟರು.

ಆಗ ಅಯ್ಯಣಾರ್ಯನು ಸಾಷ್ಟಾಂಗ ವಂದನೆಗೈದು ಗುರುಬಸವರಾಜರ ಕರುಣೆಯಿಂದ ವೀರಶೈವಾಚಾರ ಧರ್ಮೋನ್ನತ ಕಾರ್ಯದ ಸಕಲಾಂಗಗಳನ್ನು ಅರಿತು ಹೊರಟನಲ್ಲದೇ ಗುರುದೇವಾ, ಜನ್ಮ ಜನ್ಮಾಂತರದಲ್ಲಿ ನಾ ಗೈದ ಪುಣ್ಯ ಫಲ ವಿಶೇಷದಿಂದ ತಮ್ಮ ಕರುಣೆಯನ್ನು ಪಡೆಯುವಂತಾಯಿತು. ನನ್ನಂಥಹ ಸುಕೃತಶಾಲಿಗಳು ಬೇರುಂಟೆ ಎಂದು ಗುರುಗಳ ಅಪ್ಪಣೆ ಪಡೆದು ಊರಿಗೆ ಬಂದನು.

ಬಳಿಕ ಮಗನಿಂದ ಸರ್ವ ವಿಷಯವನ್ನು ತಿಳಿದ ಸಾಲೇಂದ್ರ ಭೈರವನು ಅತೀ ಆನಂದಗೊಂಡವನಾಗಿ ಮಗನನ್ನು ಬಿಗಿದಪ್ಪಿ ನಾವೆಷ್ಟು ಪುಣ್ಯಶಾಲಿಗಳು, ಕೊಟ್ಟೂರ ಗುರುಬಸವರಾಜರ ಕರುಣೆಯನ್ನು ಸಂಪಾದಿಸಿ ಪಾವನ ಜೀವಿಗಳಾದೆವು. ಇನ್ನು ನಮ್ಮ ಇಚ್ಛಾಫಲಗಳು ದೊರೆಯುವಲ್ಲಿ ಸಂಶಯವಿಲ್ಲವೆಂದು ನಿತ್ಯ ಸುಖ ಸಂಪತ್ತಿನ ಬದುಕು ಕಂಡವರಾಗಿ ಶಿವಾನುಭವ ಸಾಮ್ರಾಜ್ಯದಲ್ಲಿ ಮುಳುಗಿ ಆನಂದ ಪಡುತ್ತಿದ್ದರು.

ಗುರು ಬಸವರಾಜರು ಸಜೀವ ಸಮಾಧಿಗೊಳಗಾದದ್ದು

ಒಂದು ದಿವಸ ಗುರುಬಸವರಾಜರ ಅಪ್ಪಣೆಯ ಪ್ರಕಾರ ಚನ್ನಂಜೇಶ್ವರಾಚಾರ್ಯನು ಸಿದ್ಧರಾಮೇಶನಿಗೆ ಚನ್ನಬಸವಣ್ಣನ ಕರುಣೆಯಿಂದ ಕಾರುಣ್ಯರಸ ಸಂಜೀವಿನಿಯಂತಹ ಅಗಾಧ ಆಗಮ್ಯವೆನಿಸಿದ ವೀರಶೈವ ತತ್ವಾಮೃತ ದೊರೆಯಿತೆಂದು ತನ್ನಷ್ಟಕ್ಕೆ ತಾನೇ ಒಳ್ಳೇ ಉಬ್ಬಿ ಹೇಳುತ್ತಿದ್ದನು.

ಆಗ ಶಿವಗಣಸಭೆಯ ಸಿಂಹಾಸನದಲ್ಲಿ ಕುಳಿತ ಗುರುಬಸವರಾಜರು ಮುಗುಳು ನಗೆನಕ್ಕು ಕೋಲಶಾಂತೇಶನತ್ತ ತಿರುಗಿ ಅಯ್ಯಾ ಶಿಷ್ಯೋತ್ತಮಾ ವಿರಕ್ತ ಸಮೂಹಕ್ಕೆ ಚನ್ನಂಜೇಶ್ವರನು ಮಂತ್ರಗೋಪ್ಯದ ಅರ್ಥ ಮಾಡುತ್ತ ಸಿದ್ಧರಾಮೇಶ್ವರನಿಗೆ ಚನ್ನಬಸವಣ್ಣನ ಕರುಣೆ ದೊರೆಯಿತೆಂದು ಒಳ್ಳೇ

ಉತ್ಸಾಹಭರಿತ ಭಾಷಣದ ರಗಳೆಯನ್ನು ವಿಸ್ತಾರಗೊಳಿಸಿದನಲ್ಲಾ, ಅವನು ವಿಸ್ತಾರಗೊಂಡ ಮಂತ್ರಗೋಪ್ಯದಿಂದ ಸಕಲ ವಿರಕ್ತ ಮಹಾಶಯರು ವಿಸ್ತಾರವಾದ ಅರ್ಥ ಸಿಕ್ಕು ಅದರಿಂದ ನಾವು ಕೃತಾರ್ಥರಾಗುತ್ತೇವೆ ಎಂದು ತಿಳಿದುಕೊಂಡಿದ್ದಾರೆ ಅಲ್ಲವೇ ಎಂದು ಕೇಳಿದನು.

ಅದಕ್ಕೆ ಅಲ್ಲಿ ಕುಳಿತ ಯಾವತ್ತು ಶಿವಗಣಸಮೂಹವು ತಬ್ಬಿಬ್ಬಾಗಿ ತಡವರಿಸಿದರೇ ವಿನಃ ಯಾರಿಂದಲೂ ಉತ್ತರ ಬಾರದಾಯಿತು.

ಬಳಿಕ ಗುರು ವೃಷಭೇಂದ್ರನು ನಸುನಗುತ್ತ, ಅಯ್ಯಾ ಮಹೇಶ್ವರ ಬಳಗವೇ ಶಿದ್ಧರಾಮಂಗೆ ಚನ್ನ ಬಸವನ ಕರುಣೆ ದೊರೆತರೆ ನಿಮಗೆ ದೊರೆತ ಲಾಭವೇನು ಹೇಳಿರಿ. ಇನೊಬ್ಬರಿಗೆ ಹೊನ್ನಿನ ರಾಶಿ ದೊರೆಯಿತಲ್ಲಾ ಎಂದು ಪರರೆನಿಸಿದ ನೀವುಗಳೆಲ್ಲ ಹಿಗ್ಗಿ ಸಂತಸಪಟ್ಟರೆ ಬಂದ ಲಾಭವೇನು ಹೇಳಿರಿ ಎಂದು ಮಾರ್ಮಿಕವಾದ ಪ್ರಶ್ನೆಯನ್ನು ಕೇಳಿದರು.

ಆಗ ಎಲ್ಲರೂ ಭಯಾಶ್ಚರ್ಯ ಉಳ್ಳವರಾಗಿ ಗುರು ಮುಖದಿಂದ ಮತ್ತಾವ ವಾಣಿ ಚಿಮ್ಮಿಬರುವದೋ ಎಂದು ತವಕಿಸಹತ್ತಿದರು. ಅಷ್ಟರಲ್ಲಿ ಜ್ಞಾನಸಿಂಧು ಎನಿಸಿದ ಶಾಂತಲಿಂಗೇಶನು ಕರಜೋಡಿಸಿ, ಗುರುವರಾ ಸ್ವಯಂ ಜ್ಯೋತಿ ಪ್ರಕಾಶಸ್ವರೂಪಾತ್ಮನೇ ಮೂಢರಾದ ನಮಗೆ ತಿಳಿಯುವ ಬಗೆಯಂತು ನಿಮ್ಮಡಿಯ ಹುಡಿಯಲ್ಲಿ ಮಡಿಯಾಗಲು ತವಕಿಸುವ ಅವಿವೇಕಿಗಳನ್ನು ಕರುಣೆಯಿಂದ ರಕ್ಷಣೆಮಾಡುವ ಕೃಪೆಯಾಗಬೇಕು. ಎಂದು ನಯವಿನಯ ಭಾವದಿಂದ ನುಡಿಯಲು, ನಿರ್ಮಲಚಿತ್ತ ಕರುಣಾಳುವಾದ ಗುರುವರನು ಚನ್ನಂಜೇಶ್ವರನನ್ನು ನೋಡುತ್ತ, ಅಯ್ಯಾ ನನ್ನ ಕಾಯವೇ ನೀನು, ಕೋಲಶಾಂತೇಶ್ವರನು ನನ್ನ ಜೀವಸಮಾನ. ಅಷ್ಟೇ ಏಕೆ ಆತನೇ ನನ್ನ ಜೀವ. ಉಳಿದ ಯಾವತ್ತು ಶರಣ ಸಮೂದಾಯವಿದು, ನನ್ನ ಅವಯವ ಗಳು. ನಿಮ್ಮ ನನ್ನಲ್ಲಿ ಭೇದವೆಂಬ ನುಡಿಯನ್ನೇ ಉಸುರಲಾರೆನು. ಇದೂ ಅಲ್ಲದೇ ಸತ್ ಚಿತ್ ಆನಂದಮಯವಾದ ಪರವಸ್ತು ಗುರು, ಲಿಂಗ, ಜಂಗಮ ರೂಪವನ್ನರಿತು ಬಂದ ರೀತಿಯ ವಿವರಣೆಯನ್ನು ಕೊಡುತ್ತ ಹೋದರೆ ಮುಗಿಯಲಾರದ ವಿಷಯವದು.

ಸದ್ರೂಪು ಬಸವಣ್ಣನೇ ಲಿಂಗ
ಆನಂದರೂಪು ಅಲ್ಲಮನೆ ಜಂಗಮ

ಅಂದಂತೆ ಉಳಿದ ಶರಣ ಬಳಗವೆಲ್ಲವೂ ಅವರೀರ್ವರ ಅಂತರಂಗ ಬಹಿರಂಗ ಕರಣಗಳಲ್ಲಿ ನೆಲೆಸಿರುವರು. ಅಂದ ಬಳಿಕ ಭಕ್ತರೆ ಹೆಚ್ಚಿನವರು ತನುವಿನಲ್ಲಿ ಜ್ಞಾನೋದಯವಾಗಲು ತನುಗುಣವಳಿದು ಘನಲಿಂಗವು ಹೃದಯದಲ್ಲಿ ನೆಲೆಯಿಸುವದು. ಮನನೇ ಜ್ಞಾನವು ಶರಣನೇ ನಿಜವಾದ ಲಿಂಗ ರೂಪ, ಆಗಮ ವೇದೋಕ್ತಿಗಳ ಪ್ರಮಾಣದಿಂದ ಶರಣಾಗ್ರೇಸರರಾದ ನೀವು ಪರಿಪೂರ್ಣರು. ನೀವು ನೆಲೆಸಿರುವ ಈ ಸುಕ್ಷೇತ್ರ ಶಿಖಾಪುರ (ಕೊಟ್ಟೂರ) ಮಹಿಮೆ ಹೊಗಳಲು ಅಸಾಧ್ಯವೆಂದರಿತು ಆಚರಿಸಿರಿ. ನನ್ನ ನಿತ್ಯ·ಕರ್ತವ್ಯ ದಂತೆ ನಿಮಗೆ ನಿತ್ಯ ಮೂರ್ತಿಯನ್ನು ತೋರಿಸಿ ಧನ್ಯರನ್ನಾಗಿಸುವದಾಗಿ ಭರವಸೆಕೊಟ್ಟು ಶಿವಸಮೂಹದೊಡೆಯ ಶಿವ, ಪಾರ್ವತಿ, ಗಣಪತಿ, ಷಣ್ಮುಖ, ನಂದಿ, ನಾಗ, ಬ್ರಹ್ಮ, ವಿಷ್ಣು, ಇಂದ್ರ ದಿಕ್ಪಾಲಕರು ಸಹ ಕುಟುಂಬ ಪರಿವಾರದೊಡನೆ ಮಹಾದೇವನ ಸೇವೆಯಲ್ಲಿರುವದನ್ನು ತೋರಿಸಿದರು. ಹರ ಹರ ಮಹಾದೇವ ಎಂಬ ಜಯ ಘೋಷಣೆಯಲ್ಲಿ ಹರಗಣ ಸಮೂಹವು ಆನಂದದಿಂದ ಕುಣಿಯುತ್ತಿರುವದನ್ನು ಕಂಡು ಆ ಪ್ರಭಾವ ಮೂರ್ತಿಯ ವೈಭವವನ್ನು ನೋಡಲು ಅಂಜಿ ಹಿಂಜರಿದು ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಗುರು ಬಸವರಾಜರು ಮೊದಲಿನ ಗುರು ರೂಪದಲ್ಲಿ ಶೋಭಿಸುತ್ತ ಕೋಲ ಶಾಂತೇಶನನ್ನು ಅಭಿಮಾನ ಆನಂದದಿಂದ ಕರೆದು ಅಪ್ಪಿ ಲಿಂಗತ್ರಯಾರಾಧಕರ ಹೃನ್ಮಂದಿರವೇ ನನ್ನ ವಾಸಸ್ಥಾನ. ಅಲ್ಲಿ ನಿಸ್ಸಂದೇಹವಾಗಿ ಇರುತ್ತೇವೆ ಎನ್ನು ವದರಲ್ಲಿ ಸಂದೇಹವಿಲ್ಲ ಶರಣರೇ ನನ್ನ ಪ್ರಾಣ ಅಂಥ ಗಣಾಧೀಶ್ವರರಲ್ಲಿ ಅವಿರಳ ಜ್ಯೋತಿ ಎನಿಸಿಕೊಂಡಿರುವೆನು ಎಂದು ನುಡಿದರು, ಅಲ್ಲದೇ ಲಿಂಗಾಂಗ ಸಮರಸವನ್ನು ಬೋಧಿಸಿ, ವಿಧಿಪೂರ್ವಕ ಸಮಾಧಿಯನ್ನು ಸ್ಥಿರ ಗೊಳಿಸಿ, ಅದರ ಮಹಿಮೆಯನ್ನು ತಿಳಿಸಿ, ತನ್ನಲಿಂಗ ಹೃತ್ಕಮಲ ಪೀಠ ದೊಳಗಿನ ಪಂಚ ಸಂಜ್ಞೆಯ ಕಳೆಯೊಳಗೆ ಬೆರೆತು ಏಕಮೇವಾದ್ವಿತೀಯ ಪರ ವಸ್ತು ತಾನಾಗಿ ಶೋಭಿಸಿದನು.

ಆಗ ಗಣಸಭೆಯೆಲ್ಲವೂ ಜಯ ಜಯ ಧ್ವನಿಗೈಯ್ಯಲು ಗುರುದುಂದುಭಿ ಗಳು ಮೊಳಗಿದವು. ಪುಷ್ಪವೃಷ್ಟಿಯೊಡನೆ ದೇವಗಣ ಸಮುದಾಯವು

ಜಯಘೋಷ ಮಾಡಲು, ಶಿವನು ಗುರು ವೃಷಭೇಂದ್ರನನ್ನು ತನ್ನ ಹೃದಯ ಕಮಲದಲ್ಲಿ ಬಚ್ಚಿಟ್ಟುಕೊಂಡನು. ಹಾಲಿನಲ್ಲಿ ಹಾಲು ಬೆರೆತಂತೆ ಗುರು ಬಸವರಾಜನು ಸಾರಪ್ರಕಾಶ ಚಿನ್ಮಯಮೂರ್ತಿ ಶಿವನಲ್ಲಿ ಬೆರೆತನು.

ಮಂಗಲಂ

ಶ್ರೀ ಗುರು ಕೊಟ್ಟೂರೇಶ್ವರ ಚರಿತೆಯನು
ಬಿಡದನವರತ ಓದಿ ಕೇಳಿ ಆಲಿಪ
ಮನುಜ ತಾ ಪುಣ್ಯಶಾಲಿ ಎನಿಪ
ನಲ್ಲದೇ ಸಕಲ ಸುಖ ಸಂಪದವ
ಪೊಂದಲಿದು ಸತ್ಯ ನಿತ್ಯ ಉಕ್ತಿ

ಶ್ರೀಗುರು ಕೊಟ್ಟೂರೇಶ್ವರ ಭಕ್ತ,
ವೀರಪ್ಪ ಸಾಗರ.

ಸಮಾಪ್ತ

ಚಂದ್ರಶೇಖರ್ ಪ್ರಿಂಟಿಂಗ್ ಪ್ರೆಸ್, ಗದಗ.

[ಬೆಲೆ : 6-00